

S.G. Baha

ಅ ೩

ಕುಮಾರಿ ಸುನೇತ್ರಾ

(ಆದರ್ಶ ಪ್ರೇಮದ ಕುರಿತಾದ ಕಿರುಕಾದಂಬರಿ)

ರಂಗರಾವ ತಲಚೇರಕರ, ಎಲ್ಎಲ್. ಬಿ.
ಬೆಳಗಾಂವ

[illegible]–೧೨–೦

ಸುಲಭ ಸಾಹಿತ್ಯ ಪ್ರಕಾಶನ
ಕುಮಟಾ

ನಿವೇದನೆ

"ರೂಪ ಯೌವನ ಸಂಪನ್ನಳಾದ ವೇಶ್ಯಾ ಬಾಲಿಕೆಯು ಐಹಿಕ ಸಂಪತ್ಸುಖದ ಉಷಃಕಾಲದಲ್ಲೇ ಪ್ರಾಣತ್ಯಾಗವನ್ನೇಕೆ ಮಾಡಿದಳು" ಇದೇ ಈ ಕಿರುಕಾದಂಬರಿಯ ಕಥಾ ವಸ್ತು. ಈ ಪುಟಗಳಲ್ಲಿ ವರ್ಣಿತವಾದಂತಹ ಘಟನೆಯೊಂದು ೧೫೯೫ ರಲ್ಲಿ ಚೈನಾದೇಶದಲ್ಲಿ ನಡೆಯಿತೆಂಬ ಪ್ರತೀತಿ ಇದ್ದು ಆ ಕತೆಯು "ಚಿಂಗ್ ಶಿ ಟುಂಗ್ ಯೆನ್" ಎಂಬ ಹಳೆಯ ಚೀನೀ ಗ್ರಂಥದಲ್ಲಿ ಹೇಳಲ್ಪಟ್ಟಿದೆ. ಅದರ ಮೇಲೆ ಆಧರಿಸಿ ಪ್ರಸಿದ್ಧ ಲೇಖಕ **ಲಿನ್ ಯುಟಾಂಗರು** ಇಂಗ್ರೇಜಿಯಲ್ಲಿ ಬರೆದ **ಮಿಸ್ ಟು** ಎಂಬ ನೀಳ್ಗತೆಯು ೧೯೫೦ ರಲ್ಲಿ ಪ್ರಕಟವಾಯಿತು.

ಪ್ರಸ್ತುತ ಕಾದಂಬರಿಯನ್ನು ಕನ್ನಡ ವಾತಾವರಣಕ್ಕೆ ಹೊಂದಿಕೊಂಡು ಬರೆದಿರುವದರಿಂದ, ಸಂದರ್ಭ ಹಾಗೂ ಸನ್ನಿವೇಶಗಳನ್ನು ಬೇರೆ ಮಾಡಬೇಕಾಗಿ ಬಂದರೂ ಮೂಲ ಕತೆಯ ತಿರುಳು ಮತ್ತು ಭಾವಗಳನ್ನು ಅವುಗಳ ಸೌಂದರ್ಯವು ಕೆಡದಂತೆ ಮೂಲ ಸ್ವರೂಪದಲ್ಲೇ ಉಳಿಸುವ ಪ್ರಯತ್ನಮಾಡಿರುತ್ತೇನೆ. "ಕುರಿತೋದದೆಯುಂ ಕಾವ್ಯಪರಿಣಿತಮತಿ"ಗಳಾದ ಕನ್ನಡಿಗರಿಗೆ ಈ ಕಾದಂಬರಿಯು ಮೆಚ್ಚಿಕೆಯಾದೀತೆಂಬ ನಂಬುಗೆಯಿಂದ ಅದನ್ನು ವಾಚಕರಿಗೆ ನೀಡುತ್ತೇನೆ.

ಇದನ್ನು ಬರೆಯಲು ಪ್ರೇರಣೆಕೊಟ್ಟ ಗೆಳೆಯ ಕಾಯಕಿಣಿ ಗೌರೀಶರಿಗೂ ಪ್ರಕಾಶನದ ಹೊಣೆ ಹೊತ್ತಿರುವ ಸುಲಭ ಸಾಹಿತ್ಯ ಪ್ರಕಾನಶದವರಿಗೂ ಆಭಾರಿ ಇದ್ದೇನೆ.

ಬೆಳಗಾವಿ
ಮಕರ ಸಂಕ್ರಾಂತಿಯು ದಿನ
೧೯೫೫

ರಂಗರಾವ ತಲಚೇರಕರ

ಮುದ್ರಣ:
ಉ. ಕ. ಜಿಲ್ಹಾ ಸಹಕಾರಿ ಮುದ್ರಣ ಸಂಘ, ನಿಯಮಿತ, ಕುಮಟಾ.

ಕುಮಾರಿ ಸುನೇತ್ರಾ

"ಕಾರವಾರದ ಸಮುದ್ರ ತೀರದ ಸೌಂದರ್ಯವೆಂದರೆ ಆ ಊರಿನ 'ಕರೇ ಇಶಾಡ' ಮಾವಿನ ಹಣ್ಣಿನಂತೆ ಸ್ವಯಂಸಿದ್ಧ. ಮಾವಿನ ಹಣ್ಣಿನ ಸವಿಯನ್ನು ಹೇಗೆ ತಿಂದೇ ತಿಳಿಯಬೇಕೋ, ಅದೇ ರೀತಿ ಕಾರವಾರದ ಸಮುದ್ರದ ಸೊಬಗಿನ ಸವಿಯನ್ನು ನೋಡಿಯೇ ಅನುಭವಿಸಬೇಕಲ್ಲದೆ ಬರೇ ವರ್ಣನೆಯಿಂದ ಗ್ರಹಿಸಲು ಸಾಧ್ಯವೇ ಇಲ್ಲ." ಎಂದು ನನ್ನ ಗೆಳೆಯ ಮಾಂಜರೇಕರರು ಯಾವಾಗಲೂ ಹೇಳುತ್ತಿದ್ದರು. ಅದನ್ನು ಕೇಳಿದಾಗಲೆಲ್ಲ ಕಾರವಾರವನ್ನು ಒಮ್ಮೆ ಸಂದರ್ಶಿಸಬೇಕೆಂಬ ಲವಲವಿಕೆಯು ಬೆಳೆಯುತ್ತಾ ಹೋಗುತ್ತಿತ್ತು. ಆದರೆ ಅವರು ಒಂದು ಎಚ್ಚರಿಕೆ ಕೊಟ್ಟಿದ್ದರು. "ನೋಡು, ಈಗಲೇ ಹೋಗಬೇಡ. ಪ್ರೇಮಾತುರನಾದ ನಿನ್ನಂತಹ ಯುವಕನಲ್ಲಿ ಅದು ನಿರಾಶೆಯ ಕಾತರತೆಯನ್ನು ಹುಟ್ಟಿಸೀತು. ಪಾಣಿಗ್ರಹಣವಾಗದೆ ಕಾರವಾರದ ದೃಶ್ಯದ ಸವಿಯನ್ನು ಪರಿಗ್ರಹಿಸಲು ಶಕ್ಯವಿಲ್ಲ."

ಸರೋಜಳ ಭೆಟ್ಟಿಯಾಗಿ ಮೊಳೆತ ಪರಿಚಯ ಬೆಳೆದು ಆದರವಾಗಿ ಗೆಳೆತನದಲ್ಲಿ ರೂಪಾಂತರ ಹೊಂದಿ ಪ್ರೇಮದಲ್ಲಿ ಪ್ರಫುಲ್ಲಿತವಾದ ಸಂದರ್ಭದಲ್ಲಿ ವಿವಾಹೋತ್ತರದ ಮಧುಚಂದ್ರವನ್ನು ಕಾರವಾರದಲ್ಲೇ ಕಳೆಯುವದೆಂದು ನಿರ್ಧರಿಸಿದೆವು. ತಾನು ಜಗತ್ತಿನ ಬೆಳಕನ್ನು ಮೊದಲು ಕಂಡದ್ದು ಕಾರವಾರದಲ್ಲಿ ಎಂದು ಅವಳು ಹೇಳಿದಾಗಲಂತೂ ನಮ್ಮ ನಿರ್ಧಾರವು ಇನ್ನೂ ದೃಢವಾಯಿತು. ಆದ್ದರಿಂದ, ಕಾರವಾರವು ಆಕೆಯ ಮತದಂತೆ ಬೃಹನ್ ಮಹಾರಾಷ್ಟ್ರದ ದಕ್ಷಿಣ ತುದಿಯೊ ಅಥವಾ ನನ್ನ ಅಭಿಪ್ರಾಯದಂತೆ ಸಂಯುಕ್ತ ಕರ್ನಾಟಕದ ಉತ್ತರ ಕೊನೆಯೊ ಎಂಬ ವಿವಾದವನ್ನು ಸದ್ಯ ಸ್ಥಗಿತಗೊಳಿಸಿ ಸಪ್ತಪದಿಯ ಏಳು ಸುತ್ತು ಬಂದು "ನಾತಿಚರಾಮಿ" ಎಂದು ಪ್ರತಿಜ್ಞೆ ಮಾಡಿದ ಮರುದಿನವೇ ಕಾರವಾರಕ್ಕೆ ಹೋಗುವ ಹಡಗನ್ನು ಹತ್ತಿದೆವು.

ಮುಂಬಯಿಯಿಂದ ಹೊರಟ ನಮ್ಮ ಹಡಗು ಸಂಜೆಯ ಹೊತ್ತಿಗೆ ಕಾರವಾರ ಬಂದರವನ್ನು ತಲ್ಪಿತು. ಬಂದರವನ್ನು ಸಮೀಪಿಸಿದಾಗ ನಮ್ಮ ಕಣ್ಣಿಗೆ ಬಿದ್ದ ದೃಶ್ಯವು ನನ್ನ ಗೆಳೆಯನು ಹೇಳಿದುದರಲ್ಲಿ ಏನೂ ಅತಿಶಯೋಕ್ತಿ ಇಲ್ಲ

ವೆಂಬುದನ್ನು ತೋರಿಸಿಕೊಟ್ಟಿತು.

ಕಾರವಾರದ ಸೊಬಗೆಂದರೆ ಹಳ್ಳಿಯ ನಿಸರ್ಗರಮ್ಯ ವಾತಾವರಣದಲ್ಲಿ ಬೆಳೆದ ಸುದೃಢ ನವಯುವತಿಯಂತೆ. ಎರಡಕ್ಕೂ ಬಾಹ್ಯ ಆಡಂಬರಗಳ ಅವಶ್ಯಕತೆ ಇಲ್ಲ. ದಕ್ಷಿಣದಲ್ಲಿ ಸಮುದ್ರದೊಳಗೆ ನೀಳವಾಗಿ ಚಾಚಿದ ಬೈತಖೋಲದ ಗುಡ್ಡ, ಉತ್ತರದಲ್ಲಿ ಸಮುದ್ರವನ್ನು ಸೇರುವ ಕಾಳೀ ನದಿಯ ಸಂಗಮ, ಬದಿಯಲ್ಲೇ ಸಮುದ್ರದೊಳಗೆ ಮುಂದೆ ಹೋಗಿರುವ ಸದಾಶಿವ ಗಡದ ಗುಡ್ಡ. ಗಿಡಮರಗಳ ಹಸುರಿನಿಂದ ಆಚ್ಛಾದಿತವಾದ ಈ ಗುಡ್ಡಗಳ ದೃಶ್ಯವು ಸೃಷ್ಟಿದೇವಿಯು ಹಸುರು ಸೀರೆಯನ್ನುಟ್ಟು ತನ್ನ ಪ್ರಿಯಕರನಿಗೆ ಸ್ವಾಗತದ ಆಲಿಂಗನವನ್ನೀಯಲು ಎರಡೂ ಕೈಗಳನ್ನು ಚಾಚಿರುವಳೋ ಎಂಬ ಭಾವನೆಯನ್ನು ಮನಸ್ಸಿನಲ್ಲಿ ಉಂಟುಮಾಡುತ್ತಿತ್ತು. ಈ ಎರಡು ಗುಡ್ಡಗಳ ನಡುವೆ ಸಮುದ್ರವು ಅರ್ಧಚಂದ್ರಾಕೃತಿಯಲ್ಲಿ ತನ್ನ ನೀಲವಾದ ಜಲರಾಶಿಯನ್ನು ಪಸರಿಸಿತ್ತು.

ಬೈತಖೋಲ ಗುಡ್ಡದ ಬಳಿಯಲ್ಲೇ ಹಡಗು ನಿಲ್ಲುವ ಸ್ಥಳ. ಅಲ್ಲಿಗೆ ತಲ್ಪಿದೊಡನೆ ತನ್ನ ಆಗಮನವನ್ನು ಕಾರವಾರದ ನಾಗರಿಕರಿಗೆ ತಿಳಿಸಲು ಹೊಗೆ ಬಿಡುವ ಭೂತಾಕಾರದ ತನ್ನ ಕೊಳವೆಯಿಂದ ಭೂಂಕಾರ ಮಾಡಿತು. ಬೈತಖೋಲದ ಗುಡ್ಡವೂ ಪ್ರತಿಧ್ವನಿಯ ರೂಪದಲ್ಲಿ ನಮಗೆ ಸ್ವಾಗತವನ್ನು ನೀಡಿತು.

ಮರುದಿನ ಕಡಲ ದಂಡೆಯಲ್ಲಿ ಅಡ್ಡಾಡಿ ಎದುರಿಗೆ ಚೆಲ್ಲಿದ ಸೌಂದರ್ಯ ರಾಶಿಯನ್ನು ಕಣ್ಣು ತುಂಬ ನೋಡಿ ಮನತುಂಬ ಆನಂದಿಸಿದೆವು.

ರವಿ ಕಿರಣಗಳಿಂದ ಪ್ರಕಾಶಮಾನವಾದ ನಯನಮನೋಹರ ನೀಲ ವರ್ಣದ ಪ್ರಶಾಂತ ಸಮುದ್ರ, ಅದರಲ್ಲಿ ತೇಲುತ್ತಿದ್ದ ಮಚವೆ (ಹಾಯಿಹಡಗ)ಗಳ ಶುಭ್ರ ಬಿಳಿ ಇಲ್ಲವೆ ಕೆಂಪು ಹಾಯಿಗಳು, ದೂರದಲ್ಲಿ ತೋರುವ ಜಯಗಡ ದ್ವೀಪದ ದೀಪಸ್ತಂಭ, ತುಸು ಸಮೀಪದಲ್ಲಿ ಬೃಹದಾಕಾರದ ಆನೆಯು ಮಲಗಿದಂತೆ ಭಾಸವಾಗುತ್ತಿರುವ ಹಾಗೂ ಅದಕ್ಕನುರೂಪವಾದ ಹೆಸರಿನಿಂದಲೇ ಕರೆಯಲ್ಪಡುತ್ತಿರುವ ಕೂರ್ಮಗಡ ದ್ವೀಪ, ಇವುಗಳೆಲ್ಲದರ ಸಮ್ಮಿಳಿತ ದೃಶ್ಯವು ಎಂತಹ ಅರಸಿಕನ ಮನಸ್ಸನ್ನೂ ಸೆಳೆಯುವಂತಿತ್ತು.

ಕಾರವಾರದಲ್ಲಿ ಸಮುದ್ರವು ಶಾಂತವಾಗಿದ್ದುದರಿಂದ ದೊಡ್ಡ ದೊಡ್ಡ ತೆರೆಗಳು ಭೋರ್ಗರೆವ ಭೀಕರತೆ ಇರಲಿಲ್ಲ. ಸಾವಕಾಶವಾಗಿ ಬೀಳುತ್ತಲೇಳುತ್ತಲಿರುವ ಸಣ್ಣ ಸಣ್ಣ ತೆರೆಗಳ ಸೌಮ್ಯ ನಿನಾದದ ಜೊತೆಯಲ್ಲಿ ತೀರದಲ್ಲಿರುವ ಚಬುಕಿನ ಗಿಡಗಳ ಸೂಜಿಯಾಕಾರದ ಎಲೆಗಳು, ಮಂದವಾಗಿ ಬೀಸುವ ಗಾಳಿಗೆ ಸುಂಯಿಗುಟ್ಟುತ್ತಿರುವಾಗ ಇನಿಯನಾದ ಸಮುದ್ರದೇವನ ಗಾನಕ್ಕೆ ಸೃಷ್ಟಿ ದೇವಿಯು ತನ್ನ ಕೋಮಲ ಕಂಠದಿಂದ ದನಿಗೂಡಿಸುವಂತೆ ಭಾಸವಾಗುತ್ತಿತ್ತು.

ಗಾಳಿಯ ಬೀಸುವಿಕೆಯು ತುಸು ಜೋರಾದೊಡನೆ, ನೇರವಾಗಿ ಒಂದೇ ಸಾಲಿನಲ್ಲಿ ಬೆಳೆದಿದ್ದ ಆ ಗಿಡಗಳು ಡೋಲಾಯಮಾನವಾಗಿ ಬಾಗುವಾಗ ಸಮುದ್ರದೇವನಿಗೆ ಸಾಂಘಿಕವಾಗಿ ಶಿರಬಾಗಿ ನಮಿಸುವಂತೆ ತೋರುತ್ತಿತ್ತು.

ಈ ಸೌಂದರ್ಯ ಸುಧೆಯನ್ನು ಪಾನಮಾಡುತ್ತ ಬಂದರದ ಉತ್ತರ ದಿಕ್ಕಿನಲ್ಲಿರುವ "ಸೂರಿ ಪಾರ್ಕಿ"ಗೆ (ಚಬುಕಿನ ಗಿಡಗಳ ವನ) ಹೋದೆವು. ಸೂರಿ ಪಾರ್ಕಿನೊಳಗೆ ಕುಳಿತರೆ ಅದ್ವಿತೀಯವಾದ ಒಂದು ರೀತಿಯ ಹೊಸ ಸೌಂದರ್ಯಾನುಭವವಾಗುವದು. ಗಿಡಗಳು ದಟ್ಟವಾಗಿ ಬೆಳೆದಲ್ಲಿ ಶೀತಲ ನೆರಳು ತನುಮನಗಳಿಗೆ ತಂಪನ್ನೀಯುವದು. ಗಿಡಗಳು ವಿರಳವಿದ್ದಲ್ಲಿ ಬೀಸುವ ಗಾಳಿಗೆ ಅವುಗಳ ತುದಿಗಳು ಅಲ್ಲಾಡುವಾಗ, ನೆರಳು ಕ್ಷಣಕಾಲ ಮಾಯವಾಗಿ ತುದಿಗಳು ನೆಟ್ಟಗಾಗುವಾಗ, ಪುನಃ ಬರುವ ಛಾಯಾಪ್ರಕಾಶದ ಕಣ್ಣುಮುಚ್ಚಾಲೆಯಾಟವು ಮನಸ್ಸಿಗೆ ಆನಂದೋತ್ಸಾಹದ ಹುರುಪನ್ನು ಕೊಡುವದು.

ಸೂರಿ ಪಾರ್ಕಿನಲ್ಲಿ ಕೊಂಚ ಕಾಲ ಕುಳಿತ ಬಳಿಕ ಪುನಃ ಅಡ್ಡಾಡುವ ಹುರುಪು ಉಂಟಾಗಿ ಮುಂದಕ್ಕೆ ನಡೆದು ಕಾಳೀ ನದಿಯು ಸಮುದ್ರವನ್ನು ಕೂಡುವ ಸಂಗಮವು ಕಾಣುವೆಡೆಗೆ ಹೋಗಿ ತೀರದಲ್ಲಿ ಹರಡಿದ್ದ ನಯವಾದ ಶುಭ್ರ ಬಿಳಿ ಹೊಯ್ಗೆಯ ಮೇಲೆ ಕುಳಿತೆವು. ಅಲ್ಲಿ ಕುಳಿತಾಗ, "ಸಾಂತದ ಮೂಲಕ ಅನಂತವನ್ನು ತಿಳಿದುಕೊಳ್ಳುವದನ್ನು ನನಗೆ ಕಾರವಾರದ ಕಡಲು ಕಲಿಸಿತು." ಎಂಬ ರವೀಂದ್ರನಾಥ ಟಾಗೋರರ ಮಾತುಗಳು ನೆನಪಿಗೆ ಬಂದು ಅವುಗಳ ಮನನದಲ್ಲಿ ತುಸು ಹೊತ್ತು ಮೌನದಲ್ಲಿ ಕಳೆದೆನು. ಸರೋಜಳ

ಮನಸ್ಸಿನಲ್ಲಿ ಈ ದೃಶ್ಯದ ಪ್ರತಿಕ್ರಿಯೆ ಸ್ವಲ್ಪ ಬೇರೆ ರೀತಿಯದಾಯಿತು. "ನದಿಯು ಸಮುದ್ರಕ್ಕೆ ಸೇರುವದನ್ನು ಪ್ರೇಯಸಿ- ಪ್ರಿಯಕರರ ಮಿಲನಕ್ಕೆ ಹೋಲಿಸುತ್ತಾರೆ ಕವಿಗಳು, ಗೊತ್ತಿದೆಯೋ ನಿಮಗೆ?" ಎಂದು ನನ್ನ ಹೆಗಲ ಮೇಲೆ ಕೈಯಾಡಿಸುತ್ತ ಅಂದಳು.

ನಾನು ಏನೂ ಉತ್ತರ ಕೊಡದಿದ್ದುದನ್ನು ನೋಡಿ, "ಏನು, ಕಲ್ಪನೆ ರುಚಿಸುವದಿಲ್ಲವೇ ನಿಮಗೆ?" ಎಂದಳು.

"ಹೇಗಿದ್ದರೂ ಇದು ಉಚ್ಚ ಕಲ್ಪನೆಯಲ್ಲ. ಕವಿ ರವೀಂದ್ರರು ಇದೇ ಕಾಳೀ ನದಿಯ ಸಂಗಮವನ್ನು ಸಾಂತವು ಅನಂತದೆಡೆಗೆ ಕೈಚಾಚುವದಕ್ಕೆ ಹೋಲಿಸಿದ್ದಾರೆ. ಎಂತಹ ಅಮರ ಕಲ್ಪನೆ! ಪ್ರೇಯಸಿ–ಪ್ರಿಯಕರರ ಮಿಲನದ ಕಲ್ಪನೆಯಂತಲ್ಲ." ಎಂದೆ.

"ಅದೇಕೆ ? ಪ್ರೇಮವು ಅಮರವಲ್ಲವೇ?"

"ಅಮರವೆಂಬುದು ಬರೇ ಭ್ರಮೆ. ಪ್ರೇಮಿಗಳು ಅಮರರಲ್ಲದಿರುವಾಗ, ಅವರ ಹೃದಯದ ಭಾವನೆಯು ಎಷ್ಟೇ ಉಚ್ಚತಮವಿದ್ದರೂ ಅದು ಅಮರವಾಗುವದು ಹೇಗೆ?"

"ಜಡವಾದಿಗಳಂತೆ ಮಾತಾಡಬೇಡಿರಿ. ಈ ಭೌತಿಕ ದೇಹಕ್ಕೆ ಅಂತ್ಯವಿದ್ದರೂ ಆತ್ಮವು ಅಮರವಲ್ಲವೇ ? ಮಾನವನ ಮನಸ್ಸಿನ ಭಾವನೆಯು ಬರೇ ಈ ದೇಹಕ್ಕಷ್ಟೇ ಸಂಬಂಧಿಸಿದ್ದಲ್ಲ. ಆತ್ಮದಂತೆ ಅದೂ ಅಮರವಾಗಬಲ್ಲುದು. ಪ್ರಣಯ ಪ್ರೇಮವು ಕೂಡಾ ಅಂತಹದೇ. ಜನ್ಮಜನ್ಮಾಂತರಗಳಲ್ಲಿ ಪತಿ-ಪತ್ನಿಗಳಾಗಿದ್ದವರಲ್ಲೇ ಪ್ರೇಮ ಅಂಕುರಿಸುವದಂತೆ. ನೀವೇ ಸುಂದರವೆಂದು ಮೆಚ್ಚಿದ ಭಾವಗೀತೆಯಲ್ಲೇ ಹೇಳಿದೆಯಲ್ಲಾ—

ಕ್ಷಣಭರಿಂ ಭೇಟ ಆಮುಚೀ ಝಾಲಿ
ಯುಗ ಯುಗಾಂಚಿ ಓಳಖ ಪಟಲಿ

(ಕ್ಷಣಕಾಲ ಮಾತ್ರ ನಮ್ಮ ಭೆಟ್ಟಿಯಾಯಿತು. ಆದರೆ ಯುಗ ಯುಗಾಂತರಗಳ ನಮ್ಮಿಬ್ಬರ ಗುರುತು ಹತ್ತಿತು.)"

"ಏನೋ, ಇವೆಲ್ಲಾ ಕವಿಗಳ ಫಲವತ್ತಾದ ಮನೋಭೂಮಿಯಲ್ಲಿ ಹುಟ್ಟುವ ಕಲ್ಪನಾ ಕುಸುಮಗಳು. ಹಿಂದಿನ ಜನ್ಮಗಳ ವಿಷಯ ತಿಳಿದವ

ರ್ತ್ಯಳು?"

"ನಿಮ್ಮದು ಯಾವಾಗಲೂ ವಕ್ರದೃಷ್ಟಿ. ದಿವ್ಯವಾದುದು ಯಾವಾಗಲೂ ಅಮರವೇ. ಪ್ರೇಮವು ದಿವ್ಯ ಭಾವನೆ. ಅದು ಮಾನವನನ್ನು ಸಂಪೂರ್ಣ ಸ್ವಾರ್ಥತ್ಯಾಗದ ಉಚ್ಚ ಮಟ್ಟಕ್ಕೆ ಏರಿಸಬಲ್ಲುದು. ನೀವು ಪುರುಷರು ಸ್ವಾರ್ಥಿಗಳು; ಸ್ತ್ರೀಯರು ಹಾಗಲ್ಲ. ಸ್ತ್ರೀಯು ಪ್ರೇಮಕ್ಕಾಗಿ, ತನ್ನ ಪ್ರಿಯಕರನಿಗಾಗಿ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧಳಿರುತ್ತಾಳೆ. ಹೆಚ್ಚೇಕೆ, ತನ್ನ ಜೀವವನ್ನು ಕೂಡಾ ಕೊಡಲು ಹಿಂಜರಿಯುವದಿಲ್ಲ. ಒಬ್ಬ ಇಂಗ್ಲೀಷ ಲೇಖಕನು ಹೇಳಿದಂತೆ "ಪ್ರೇಮವು ಪುರುಷರ ಜೀವನದಲ್ಲಿ ಒಂದು ಘಟನೆ ಮಾತ್ರ. ಆದರೆ ಸ್ತ್ರೀಗೆ ಅದು ತನ್ನ ಜೀವನದ ಸಂಪೂರ್ಣ ಇತಿವೃತ್ತ." ಇದೇ ನೋಡಿರಲ್ಲಾ, ಕಾಳೀ ನದಿಯು ತನ್ನ ಸರ್ವಸ್ವವನ್ನೂ ಸಮುದ್ರಕ್ಕೆ ಅರ್ಪಿಸಿ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡಿದ್ದಾಳೆ."

"ಇದೆಲ್ಲಾ ಹಳೇ ಕಾಲದ ಆರ್ಯ ಸ್ತ್ರೀಯ ಧ್ಯೇಯ. ನಿಮ್ಮ ಏಕಚ ಪ್ಯಾಲಾ ನಾಟಕದ ಸಿಂಧುವಿನಂಥವರದು. ಈ ಧ್ಯೇಯವು ಯೋಗ್ಯವೆಂದು ನಾನು ನಿಶ್ಚಿತವಾಗಿ ಹೇಳಲಾರೆ. ಆಧುನಿಕ ಕಾಲದ ವಿದ್ಯಾವಂತ ಸ್ತ್ರೀಯರು ಈ ಧ್ಯೇಯವನ್ನು ಖಂಡಿತವಾಗಿಯೂ ಒಪ್ಪಲಿಕ್ಕಿಲ್ಲ."

"ಇದೊಂದು ನಿಮ್ಮಂತಹ ಹೊಸ ತರುಣರ ಹುಚ್ಚು ಕಲ್ಪನೆ. ಆಧುನಿಕ ವಿದ್ಯಾವಂತ ಸ್ತ್ರೀಯರ ನಾಡಿಗಳಲ್ಲೂ ಆರ್ಯ ಸಂಸ್ಕೃತಿಯ ರಕ್ತವೇ ಹರಿಯುತ್ತದೆ. ಬಾಹ್ಯ ವರ್ತನೆ, ವೇಷಭೂಷ ಬದಲಾದ ಮಾತ್ರಕ್ಕೆ ಅವರು ಧ್ಯೇಯಶೂನ್ಯರಾಗಿರುವರೆಂದು ಗ್ರಹಿಸಬೇಡಿರಿ. ವಿದ್ಯಾವಂತ ಸ್ತ್ರೀ ಅಷ್ಟೇ ಅಲ್ಲ, ಸಾಮಾನ್ಯ ವೇಶ್ಯೆಯು ಕೂಡ ದಿವ್ಯಪ್ರೇಮದಿಂದ ಪ್ರೇರಿತಳಾದರೆ, ಎಂತಹ ಬಲಿದಾನಕ್ಕೂ ಸಿದ್ಧಳಿರುತ್ತಾಳೆ."

"ಕತೆ, ಕಾದಂಬರಿಗಳಲ್ಲಷ್ಟೇ ಇಂತಹ ಸ್ತ್ರೀಯರು ಕಾಣಸಿಗುತ್ತಾರೆ. ಅಂಥವರನ್ನು ಇಲ್ಲವೆ ಅಂಥವರ ಬಲಿದಾನ ಪ್ರತ್ಯಕ್ಷ ನಡೆದುದನ್ನು ನಾನು ಈ ವರೆಗೆ ಕೇಳಲಿಲ್ಲ."

"ನೀವು ಕೇಳದಿದ್ದ ಮಾತ್ರಕ್ಕೆ ಅಂತಹ ಸಂಗತಿಗಳು ಸಂಭವಿಸಿಯೇ ಇಲ್ಲವೆನ್ನಬೇಡಿರಿ. ಸ್ತ್ರೀಯ ಜೀವನವು ಬಹುತೇಕ ಮನೆಯ ನಾಲ್ಕು ಗೋಡೆ

ಗಳ ಒಳಗೆನೇ ಸಾಗುವದರಿಂದ ಅವರು ಸ್ವಾರ್ಥತ್ಯಾಗ ಹಾಗೂ ನಿಸ್ಸೀಮ ಸೇವೆಯಿಂದ ಜೀವವನ್ನೇ ಸವೆಯಿಸಿದರೂ ಅದು ನೆರೆಹೊರೆಯಲ್ಲಲ್ಲದೆ ಇತರ ರಿಗೆ ತಿಳಿಯುವ ಸಂಭವ ತೀರಾ ಕಡಿಮೆ. ಬಹಿರಂಗವಾಗಿ ಯಾವದೇ ಘಟನೆ ನಡೆದರೆ ಮಾತ್ರವೇ ಅದರ ಹಿನ್ನೆಲೆಯಲ್ಲಿನ ಜೀವನದ ವೃತ್ತಾಂತವು ಬೆಳಕಿಗೆ ಬರುವದು.''

ಇದೇ ವಿಚಾರಗಳಲ್ಲಿ ನಾವು ಮಗ್ನರಾಗಿದ್ದಾಗ, ಸರೋಜಳು ನಾವು ಕೂತಲ್ಲಿಂದ ಸ್ವಲ್ಪ ದೂರದಲ್ಲಿ ಜನರ ಗುಂಪೊಂದು ಕೂಡಿರುವದನ್ನು ನೋಡಿ ''ಆ ಕಡೆ ನೋಡಿರಿ. ಅಲ್ಲಿ ಏನೋ ಘಟನೆ ನಡೆದಿರಬೇಕು ಅನಿ ಸುತ್ತದೆ'' ಎಂದಳು. ''ಏನು ನಡೆಯುವದು. ಯಾರಾದರೂ ಸ್ತ್ರೀಯೊಬ್ಬಳು ತನ್ನ ಪ್ರಿಯಕರನಿಗಾಗಿ ನೀರಿನಲ್ಲಿ ಹಾರಿ ಸೀನು ಹೇಳುವಂತೆ ತನ್ನ ಜೀವ ನದ ವೃತ್ತಾಂತವನ್ನು ಬೆಳಕಿಗೆ ತಂದಿರಬಹುದು.'' ತುಸು ಅವಳನ್ನು ಅಣಕಿ ಸುವ ದನಿಯಲ್ಲಿ ನಾನು ಉತ್ತರವಿತ್ತೆನು.

''ನಿಮ್ಮ ಪರಿಹಾಸ್ಯ ಸಾಕು. ಸರಿಯಾಗಿ ಕಣ್ಣು ಬಿಟ್ಟು ನೋಡಿರಿ. ಸಂದರ್ಭವಿಲ್ಲದ ಸಮಯದಲ್ಲಿ ವಿನೋದಕ್ಕೆ ಅರ್ಥವಿಲ್ಲ'' ಎಂದಳು ಕೊಂಚ ಸಿಟ್ಟಿನಿಂದ.

ನಾನೂ ಆ ಕಡೆಗೆ ನೋಡಿದೆ. ಹತ್ತು ಹದಿನೈದು ಮಂದಿ ಅಲ್ಲಿ ಕೂಡಿದ್ದರು. ಅವರ ಪೈಕಿ ಒಬ್ಬನು ಸಮುದ್ರದತ್ತ ಕೈ ತೋರಿಸಿ ಅತ್ಯಂತ ಆವೇಗದಿಂದ ಏನನ್ನೋ ವರ್ಣಿಸುತ್ತಿದ್ದನು. ಶ್ರೋತೃಗಳು ಏಕಾಗ್ರತೆಯಿಂದ ಕೇಳುತ್ತಿದ್ದುದನ್ನೂ ಅವರ ಆಶ್ಚರ್ಯ ಚಕಿತ ಮುಖ ಮುದ್ರೆಯನ್ನೂ ಕಾಣು ವಾಗ ಆವನು ಕಥಿಸುತ್ತಿದ್ದ ಸಂಗತಿಯು ಬಹಳೇ ಕುತೂಹಲಕಾರಕವಿರಬೇ ಕೆಂದು ಅನಿಸುತ್ತಿತ್ತು. ಪ್ರೇಮದ ಮೀಮಾಂಸೆಯ ಮಾತುಗಳನ್ನು ಅಲ್ಲಿಗೆನೇ ನಿಲ್ಲಿಸಿ ಅವನು ಹೇಳುತ್ತಿದ್ದ ಸಂಗತಿ ಏನೆಂದು ತಿಳಿಯಲು ನಾವು ಅಲ್ಲಿಗೆ ಹೋದೆವು.

ಒಂದು ವಾರದ ಹಿಂದೆ ನಡೆದ ಒಂದು ದುರಂತ ಘಟನೆಯನ್ನು ಅವನು ಅಲ್ಲಿ ನೆರೆದ ಇತರರಿಗೆ ವರ್ಣಿಸುತ್ತಿದ್ದನು. ಅವನು ಸಮುದ್ರದಲ್ಲಿ ತೋರಿಸಿದ ಸ್ಥಳದಲ್ಲಿ ಆ ದಿನ ಮುಂಬಯಿಯ ಒಬ್ಬ ಪ್ರಸಿದ್ಧ ವೇಶ್ಯೆಯು

ಸೀರಿನಲ್ಲಿ ದುಮುಕಿ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಿದ್ದಳು. ಆವಳು ಆಗ ತಾನೇ ಹಡಗದಿಂದ ಇಳಿದಿದ್ದಳು. ಅವಳೂ ಅವಳ ಪ್ರಿಯ ಕರನೂ ಅವನ ಸ್ವಗ್ರಾಮವಾದ ಸದಾಶಿವಗಡಕ್ಕೆ ಡೋಣಿಗಳಲ್ಲಿ ಹೊರಟಿದ್ದರು. ಅವನು ಆಗರ್ಭ ಶ್ರೀಮಂತನು. ಅಂದೇ ಗೋಧೂಳಿ ಮುಹೂರ್ತದಲ್ಲಿ ಅತ್ಯಂತ ವಿಜೃಂಭಣೆಯಿಂದ ಅವಳ ಗೃಹಪ್ರವೇಶ ನೆರವೇರುವದಿತ್ತು. ಅವಳನ್ನು ಆ ಹಡಗದಿಂದ ಇಳಿದೊಡನೆ ಸ್ವಾಗತಿಸಿ ಸದಾಶಿವಗಡಕ್ಕೆ ಕರೆದೊಯ್ಯಲು ತರಲಾಗಿದ್ದ ಡೋಣಿಯನ್ನು ಅತ್ಯಂತ ಸಂಭ್ರಮದಿಂದ ಸಿಂಗರಿಸಿದ್ದರು. ಅಂತಹದೇ ಬೇರೊಂದು ಡೋಣಿಯಲ್ಲಿ ಅವಳ ಭಾವೀ ಯಜಮಾನನು ಕುಳಿತಿದ್ದನು.

ಈ ಅಪೂರ್ವ ದೃಶ್ಯವನ್ನು ನೋಡಲು ಜನರು ಕಿಕ್ಕಿರಿದು ನೆರೆದಿದ್ದರು. ಪ್ರಾತಃಕಾಲದ ಶುಭ್ರಬಾನಿನಲ್ಲಿ ಬೆಳಗುತ್ತಿದ್ದ ಬಾಲ ರವಿಯ ಹೊಂಬಣ್ಣದ ಕಿರಣಗಳಿಂದ ನಿಸರ್ಗವು ವಿಶೇಷ ಶೋಭೆಯನ್ನು ತಳೆದಿತ್ತು. ಸಿಂಗರಿಸಲ್ಪಟ್ಟ ಡೋಣಿಗಳ ಸುಂದರ ಹಾಯಿಗಳು ನಿಡಾನವಾಗಿ ಬೀಸುತ್ತಿದ್ದ ಮಂದ ಮಾರುತದಿಂದ ಮೆಲ್ಲಗೆ ನೂಕಲ್ಪಟ್ಟು ದೋಣಿಗಳನ್ನು ಸಾವಕಾಶವಾಗಿ ಮುಂದೆ ಸಾಗುವಂತೆ ಮಾಡುತ್ತಿದ್ದವು.

ಎಲ್ಲರ ಲಕ್ಷ್ಯವು ನಡುವಿನ ದೋಣಿಯ ಮಧ್ಯ ಭಾಗದಲ್ಲಿ ಒಂದು ಎತ್ತರವಾದ ಆಸನದ ಮೇಲೆ ನಿಂತು ನೆರೆದವರೆಲ್ಲರಿಗೂ ವಿನಯದಿಂದ ಕೈಮುಗಿಯುತ್ತಿದ್ದ ಆ ನವಯುವತಿಯ ಮೇಲೆಯೇ ಇತ್ತು. ಅವಳ ವಯಸ್ಸು ಹದಿನೆಂಟಕ್ಕೆ ಮೀರಿರಲಿಲ್ಲ. ಅವಳ ಮೈಮೇಲಿನ ರತ್ನಖಚಿತ ಆಭರಣಗಳು ಸೂರ್ಯಪ್ರಕಾಶದಲ್ಲಿ ಮಿನುಗಿ ರವಿ ಕಿರಣಗಳಿಗಿಂತಲೂ ಅಧಿಕ ಶೋಭಾಯಮಾನವಾಗಿ ಅವಳ ಸೌಂದರ್ಯದ ಹಾಗೂ ಸೌಕುಮಾರ್ಯದ ಶೋಭೆಯನ್ನು ಇನ್ನೂ ಹೆಚ್ಚಾಗಿ ಬೆಳಗಿಸುತ್ತಿದ್ದವು. ಅವಳು ಉಟ್ಟಿದ್ದ ಕೆಂಪು ರೇಶ್ಮೆ ಸೀರೆಯ ಮೇಲೆ ಬಿದ್ದ ರವಿ ರಶ್ಮಿಗಳು ಅದರಿಂದ ಚಿಮ್ಮುತ್ತಿದ್ದ ಪ್ರಕಾಶವನ್ನು ಒಳಗೊಂಡು ಅವಳ ಮೋರೆಯನ್ನು ಮೃದುವಾಗಿ ಸ್ಪರ್ಶಿಸುವಾಗ, ಅವಳ ಮುಂಗುರುಳಿನೊಡನೆ ಮುದ್ದಾಟವಾಡುವದರಲ್ಲಿ ತಿಳಿಯಾಗಿ ಬೀಸುತ್ತಲಿದ್ದ ಮಂದಮಾರುತದೊಡನೆ ಸ್ಪರ್ಧಿಸುತ್ತವೊ ಎಂಬಂತೆ ಭಾಸವಾಗುತ್ತಿತ್ತು.

ಎರಡೂ ಏಕಕಾಲದಲ್ಲಿ ಅವಳ ಮೇಲೆ ಬೀಳುವಾಗ ಅವಳ ಮೋರೆಯ ಶುಭ್ರ ಪ್ರಕಾಶಮಯ ಕಾಂತಿಯು ಸೂರ್ಯನನ್ನೇ ನಾಚಿಸುತ್ತಿತ್ತು. ನಿಜವಾಗಿಯೂ ಜಗತ್ತನ್ನೇ ಜಯಿಸಲು ನಿರ್ಮಿತವಾದ ಸೌಂದರ್ಯವದು.

ಎಲ್ಲರೂ ನೋಡುತ್ತಲಿದ್ದಾಗಲೇ ಯಾರೂ ಎಣಿಸದ ದುರಂತ ಘಟನೆ ನಡೆದುಹೋಯಿತು. ದೋಣಿಗಳು ಸಂಗಮವನ್ನು ಸಮೀಪಿಸುವದರೊಳಗೆ ಆ ನವ ಯುವತಿಯು ತನ್ನ ಆಭರಣಗಳನ್ನು ಒಮ್ಮಿಗೆಲೆ ಕಳಚಿ ನೀರಿನಲ್ಲಿ ಬಿಸಾಡಿದಳು. ಹಾಗೂ ಇದೇನೆಂದು ಜನರ ಲಕ್ಷ್ಯಕ್ಕೆ ಬರುವ ಮೊದಲೇ ತಾನೂ ನೀರಿನಲ್ಲಿ ಹಾರಿದಳು. ಅವಳು ಹಾರಿದ ಸ್ಥಳದಲ್ಲಿ ನೀರಿನ ಪ್ರವಾಹ ಬಲವಾಗಿದ್ದುದರಿಂದಲೂ ಹಾಗೂ ಈ ಘಟನೆಯು ತೀರಾ ಅನಪೇಕ್ಷಿತವಾದುದರಿಂದಲೂ ನಡೆದ ಸಂಗತಿ ಇತರರ ಗೋಚರಕ್ಕೆ ಬರುವ ಮೊದಲೇ ನೀರಿನ ಹೊಯಿಲು ಅವಳನ್ನು ಬಹು ದೂರಕ್ಕೆ ಕೊಂಡುಹೋಯಿತು. ಹಾಗಾಗಿ ಅವಳನ್ನು ಬದುಕಿಸುವದು ಯಾರಿಂದಲೂ ಸಾಧ್ಯವಾಗಲಿಲ್ಲ.

ತರಂಗ ೨

ಈ ದುರಂತವು ಸಂಭವಿಸಿದ ಬಳಿಕ ಎಷ್ಟೋ ದಿನಗಳವರೆಗೆ ಕಾರವಾರದಲ್ಲಿ ಎಲ್ಲರ ಬಾಯಿಯಲ್ಲೂ ಇದೇ ಸಂಭಾಷಣೆಯು ಹಾಗೂ ಚರ್ಚೆಯು ವಿಷಯವಾಗಿತ್ತು. ಚಹಾದಂಗಡಿಗಳಲ್ಲಿ, ಬಸ್-ಸ್ಟ್ಯಾಂಡಿನಲ್ಲಿ, ಮೀನು ಮಾರ್ಕೆಟನಲ್ಲಿ, ವಕೀಲರ ಬಾರ್-ರೂಮಿನಲ್ಲಿ, ಮಿತ್ರ ಸಮಾಜದಲ್ಲಿ, ಮುನಿಸಿಪಾಲಿಟಿಯಲ್ಲಿ, ಹೆಚ್ಚೇಕೆ, ಜೈಲಿನಲ್ಲಿ ಕೂಡಾ ಈ ವೇಶ್ಯಾಯುವತಿಯು ಆತ್ಮಹತ್ಯೆಯ ಕುರಿತಾದ ಮಾತುಕತೆ, ಹರಟೆ, ಊಹಾಪೋಹಗಳೇ ಕೇಳಿ ಬರುತ್ತಿದ್ದುವು. ಆದರೆ, ಅವಳ ಆತ್ಮಹತ್ಯೆಯ ಪ್ರತ್ಯಕ್ಷ ಸಾಕ್ಷಿಗಳು ಹಲವರಿದ್ದರೂ, ಅವಳು ಯಾರು, ಹಾಗೂ ಸುಖಸಂಪತ್ತಿನ ಜೀವನದ ಉದಯದಲ್ಲೇ ಅವಳು ಜೀವ ತಕ್ಕೊಳ್ಳಲು ಕಾರಣವೇನು ಎಂಬುದು ಯಾರಿಗೂ ಗೊತ್ತಿರಲಿಲ್ಲ. ಹೇಳುವವರ ಕಲ್ಪನಾಚಾತುರ್ಯವನ್ನನುಸರಿಸಿ ಅವಳ ವಿಷಯದಲ್ಲಿ ನಾನಾರೀತಿಯ ಕಲ್ಪಿತ ಕಥೆಗಳಿಂದ ಕಾರವಾರದ ವಾತಾವರಣವು

ತುಂಬಿಹೋಗಿತ್ತು.

ಅವಳ ಆತ್ಮಹತ್ಯೆಯ ವೃತ್ತಾಂತವನ್ನು ಕೇಳಿದಂದಿನಿಂದ ಅವಳ ಜೀವನದ ಯಾವತ್ತೂ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂಬ ಬಲವಾದ ಇಚ್ಛೆಯು ನನ್ನಲ್ಲಿ ಉಂಟಾಗಿತ್ತು. ಆದರೆ, ಎಷ್ಟೋ ಮಂದಿಯನ್ನು ಕೇಳಿ ನೋಡಿದರೂ, ಮೇಲಿನ ಪರಿಸ್ಥಿತಿಯಲ್ಲಿ ಸತ್ಯದ ಶೋಧವು ಅಸಾಧ್ಯವೇ ಆಯಿತು. ದಿನ ಹೋದಂತೆ ನನ್ನ ಉತ್ಸುಕತೆಯು ಅಧಿಕವಾಗುತ್ತಾ ಹೋಗಿ ತಿಳಿಯಲಾರದ ನಿರಾಶೆಯಿಂದ ಮನಸ್ಸು ಅಸ್ವಸ್ಥವಾಯಿತು.

ನಾಲ್ಕೈದು ದಿನಗಳ ಬಳಿಕ ನಾನೂ ನನ್ನ ಗೆಳೆಯ ಮಾಂಜರೇಕರನೂ ಪೆದ್ರು ಸೋಜರ ಗ್ರಾಂಡ ಹೊಟೆಲಿನಲ್ಲಿ ಒಮಲೆಟನಮೇಲೆ ಸವಾರಿ ಮಾಡುತ್ತ ಕುಳಿತಿದ್ದಾಗ, ಒಬ್ಬ ಇಳಿವಯಸ್ಸಿನ ಮುಸಲ್ಮಾನನು ಹೊಟೆಲನ್ನು ಪ್ರವೇಶಿಸಿ ಮೂಲೆಯ ಒಂದು ಮೇಜಿನ ಬಳಿ ಕುಳಿತು ಹೊಟೆಲಿನ ಸೇವಕನಿಗೆ ಚಹಾ ಹಾಗೂ ಬ್ರೆಡ್ ತರುವಂತೆ ಹೇಳಿದನು. ನನ್ನ ಮಿತ್ರನು ಅವನನ್ನು ತೋರಿಸಿ "ಅದೊ ನೋಡು, ಆ ಮನುಷ್ಯನು ನೀರಿನಲ್ಲಿ ಹಾರಿದ ಯುವತಿಯ ಪರಿಚಯದವನಿರಬೇಕು. ನೀನು ತಿಳಿಯಲು ಹಾತೊರೆಯುತ್ತಿರುವ ವಿಷಯದಲ್ಲಿ ಅವನಿಗೆ ಮಾಹಿತಿ ಇರಬೇಕು" ಎಂದನು.

"ಏನು, ಪರಿಹಾಸ್ಯ ಮಾಡುತ್ತೀಯೇನು? ಈ ಮುಸಲಮಾನಯಾರೊ ಅವಳು ಯಾರೊ? ಅವನೊಡನೆ ಏನಾದರೂ ಕೇಳಿ ಅವನು ಕೋಪದಿಂದ ನನ್ನ ಕೆನ್ನೆಗೆ ಏರಿಸುವದನ್ನು ನೋಡಿ ನಗಬೇಕೆಂದಿದ್ದಿ ಕಾಣಿಸುತ್ತದೆ" ನಾನು ಅಂದೆನು.

"ಅಲ್ಲೋ ಹುಚ್ಚ ಬರೇ, ನಿನ್ನ ಕೆನ್ನೆಗೆ ಏರಿಸಲು ಆ ಅಪರಿಚಿತ ಮುಸಲ್ಮಾನನ ಸಹಾಯವೇಕೆ ಬೇಕು? ಅಂದು ಅವನು ಹಾಜರಿದ್ದನು. ಹಾಗೂ ಹಡಗದಿಂದ ಇಳಿದು ದೋಣಿಯಲ್ಲಿ ಕೂತಾಗ ಆ ಯುವತಿಯು ಅವನಿಗೆ ನಮಸ್ಕಾರ ಮಾಡಿ, ಹೋಗಿ ಬರುತ್ತೇನೆ ಸಾಹೇಬರೇ ಎಂದಿದ್ದಳು. ಆದ್ದರಿಂದ ಅವನಿಗೆ ಅವಳ ಪರಿಚಯವಿರಬೇಕು ಎಂದು ಹೇಳಿದೆ" ಎಂದನು ನನ್ನ ಗೆಳೆಯ.

"ಅವನು ಯಾರು?" ನಾನು ಕುತೂಹಲದಿಂದ ಕೇಳಿದೆ. "ಯಾರೆಂದು

ನನಗೆ ಗೊತ್ತಿಲ್ಲ. ಅವನು ಈ ಊರಿನವನಲ್ಲ. ಯಾರಾದರೇನು? ಮಾತ ನಾಡಿಸಲು ಅಂಜಿಕೆ ಏನು?"

ಅಪರಿಚಿತರೊಡನೆ ಒಮ್ಮೆಗೆಲೆ ಗೂಢವಿಷಯವನ್ನೆತ್ತಿ ಮಾತಾಡುವದು ಶಿಷ್ಟಾಚಾರಕ್ಕೆ ಸಮ್ಮತವಲ್ಲದಿದ್ದರೂ ಆ ಯುವತಿಯ ಸಮಾಚಾರ ತಿಳಿಯುವ ಆತುರದಲ್ಲಿ ಶಿಷ್ಟತನದ ರೀತಿಗೆ ಎಡೆ ಇಲ್ಲದ್ದರಿಂದ ನಾನು ಅವನ ಬಳಿಗೆ ಹೋಗಿ ಒಂದು ಕುರ್ಚಿಯನ್ನೆಳೆದು ಕುಳಿತೆನು. ಅವನು ಆಗಲೇ ಬ್ರೆಡ್ ತಿನ್ನುವದನ್ನು ಮುಗಿಸಿ ಚಹಾ ಕುಡಿಯಲು ಪ್ರಾರಂಭಿಸಿದ್ದನು. ನಾನು ಹತ್ತಿರ ಹೋದವನೇ ಅವನಿಗೆ ಸಲಾಂ ಮಾಡಿ "ಮೊನ್ನೆ ಆತ್ಮಹತ್ಯೆ ಮಾಡಿ ಕೊಂಡ ಯುವತಿಯನ್ನು ತಾವು ಬಲ್ಲಿರೆಂದು ಕೇಳಿದೆ. ಆ ವಿಷಯದಲ್ಲಿ ನಿಮ್ಮೊಡನೆ ಸ್ವಲ್ಪ ಮಾತಾಡುವದಿದೆ." ಅವನು ಏನೆಂದು ಭಾವಿಸುವನೋ ಎಂದು ಅನುಮಾನಿಸುತ್ತ ಈ ಮಾತುಗಳನ್ನು ಹೇಳಿದೆನು. ಇದನ್ನು ಕೇಳಿ ಅವನು ಕೋಪಿಸಿಕೊಳ್ಳಲಿಲ್ಲ. ಅದರ ಬದಲು ದುಃಖದ ಛಾಯೆಯು ಅವನ ಮೋರೆಯನ್ನು ಆವರಿಸಿತು. ಕಣ್ಣುಗಳು ಅಶ್ರುಪೂರಿತವಾದುವು. ಆತ್ಮೀಯತೆಯ ಸ್ವರದಲ್ಲಿ ಅವನು "ಯಾರು, ಸುನೇತ್ರಾ ದೇವಿಯವರೇ? ಅವರು ಒಂದು ಮಹಾನ್ ವ್ಯಕ್ತಿ. ಅಲ್ಲಾಕೀ ಪ್ಯಾರೀ." ಅಂದನು. ಅಷ್ಟು ಹೇಳಿ ಅವನು ಅರ್ಧ ಖಾಲಿಯಾದ ಚಹಾದ ಕಪ್ಪನ್ನು ನೋಡುತ್ತಾ ಕುಳಿತನು. ಮುಂದೆ ಅವನ ಬಾಯಿಯಿಂದ ಶಬ್ದಗಳು ಹೊರಡಲಿಲ್ಲ.

ನಾನು "ಚಹಾ ಪೂರಾ ಕುಡಿಯಿರಿ, ಸಾಹೇಬರೇ. ನಿಮಗೆ ಬೇಜಾರ ವಾಗುತ್ತಿದ್ದರೆ ಆ ವಿಷಯ ಈಗ ಬೇಡ." ಎಂದೆನು. "ಬೇಜಾರವೇನಿಲ್ಲ, ರಾಯರೇ." ಎಂದು ಹೇಳಿ ಅವನು ಮೆಲ್ಲನೆ ಕಪ್ಪಿನೊಳಗಿನ ಚಹಾ ಮುಗಿ ಸಿದನು. ಹಾಗೂ ತನ್ನ ಬೆರಳಿಗಿದ್ದ ಹಸುರು ಹರಳಿನ ಉಂಗುರದ ಕಡೆಗೆ ನೋಡಹತ್ತಿದನು. ನನ್ನ ಲಕ್ಷ್ಯವೂ ಅದರ ಕಡೆಗೆ ಎಳೆಯಲ್ಪಟ್ಟದ್ದನ್ನು ನೋಡಿ "ಸುನೇತ್ರಾ ದೇವಿಯವರು ಸಾಯುವ ಮೊದಲು ತನ್ನ ನೆನಪಿಗಾಗಿ ಎಂದು ಇದನ್ನು ನನಗೆ ಕೊಟ್ಟರು" ಎಂದನು. ಅವನೊಡನೆ ಅವಳ ವಿಷಯದಲ್ಲಿ ಹೆಚ್ಚಿಗೆ ಕೇಳಬಹುದೆಂಬ ಧೈರ್ಯವು ನನ್ನಲ್ಲಿ ಈ ಮಾತುಗಳಿಂದ ಉಂಟಾಗಿ ನಾನು "ಅವಳನ್ನು ನೀವು ಚನ್ನಾಗಿ ಬಲ್ಲಿರಾ? ಅವಳ ಜೀವನದ ಯಾವತ್ತೂ

ವಿಷಯ ತಿಳಿಯಲು ನಾನು ಇಲ್ಲಿಗೆ ಬಂದಂದಿನಿಂದ ಪ್ರಯತ್ನಿಸುತ್ತಿದ್ದೇನೆ. ಆದರೆ, ಅವಳ ಆತ್ಮಹತ್ಯೆಯು ಜನರಲ್ಲಿ ವಿಸ್ಮಯವನ್ನು ಹುಟ್ಟಿಸಿದೆಯಲ್ಲದೆ ಅದರ ಕಾರಣ ತಿಳಿದವರು ಯಾರೂ ಇಲ್ಲ" ಎಂದೆನು.

"ಅದು ಆತ್ಮಹತ್ಯೆಯಲ್ಲ, ರಾಯರೇ. ಬಲಿದಾನ; ಪ್ರೇಮಕ್ಕಾಗಿ ಬಲಿದಾನ. ಅವಳ ವಿಷಯದಲ್ಲಿ ನನಗೆ ತಿಳಿದಿರುವ ಸಂಗತಿಗಳು ಸ್ವಲ್ಪವೇ. ಆದರೆ, ನಮ್ಮ ಶ್ರೀಧರರಾಯರ ಗೆಳೆಯ ಅರವಿಂದ ಕಸಬೇಕರರು ಒಂದೆರಡು ದಿವಸಗಳಲ್ಲಿ ಇಲ್ಲಿಗೆ ಬರುವವರಿದ್ದಾರೆ. ಅವರ ಗುರುತು ಮಾಡಿಕೊಡುತ್ತೇನೆ. ಅವರಿಂದ ಹೆಚ್ಚಿನ ಸಂಗತಿ ತಿಳಿಯಬಹುದು" ಎಂದನು.

"ಶ್ರೀಧರರಾಯರೆಂದರೆ ಯಾರು?"

"ಅವರು ನಮ್ಮ ಧನಿ ರಾಮಚಂದ್ರ ಹೆಗಡೆಯವರ ಮಗ. ರಾಮಚಂದ್ರ ಹೆಗಡೆಯರು ನಿವೃತ್ತ ನ್ಯಾಯಾಧೀಶರು. ಅವರು ಹೊನ್ನಾವರದಲ್ಲಿ ಮುನಸೋಫರಿದ್ದಾಗ ನಾನು ಅವರ ಕೈಕೆಳಗೆ ಜೇಲೀಫನಿದ್ದೆನು. ಈಗ ನಾನು ಅವರ ವ್ಯವಹಾರಗಳನ್ನು ನೋಡುವ ಕಾರಭಾರಿ. ಸುನೇತ್ರಾ ದೇವಿಯವರ ಬಳಿದಾನದ ದಿನದಿಂದ ಶ್ರೀಧರ ರಾಯರು ಕಣ್ಮರೆಯಾಗಿದ್ದಾರೆ. ವೃದ್ಧ ರಾಮಚಂದ್ರ ಹೆಗಡೆಯರೂ ಅವರ ಹೆಂಡತಿಯೂ ಪುತ್ರ ಶೋಕದಿಂದ ವಿಹ್ವಲರಾಗಿದ್ದಾರೆ. ಅವರಿಗೆ ಬೇರೆ ಮಕ್ಕಳಿಲ್ಲ." ಇಷ್ಟು ಹೇಳಿ ಅವನು ಕೆಲವು ನಿಮಿಷಗಳ ವರೆಗೆ ಸಣ್ಣ ಮಗುವಿನಂತೆ ಕಣ್ಣೀರು ಸುರಿಸಿ ಅತ್ತನು.

ನಾಲ್ಕೈದು ನಿಮಿಷಗಳ ಬಳಿಕ ಅವನು ಮೆಲ್ಲನೆ ಮುಂದುವರಿಸಿದನು "ಎಲ್ಲಿದ್ದರೂ ಶ್ರೀಧರರಾಯರನ್ನು ಹುಡುಕಿ ತರಲೇಬೇಕೆಂದು ಬಾಯಿಸಾಹೇಬರ ಆಜ್ಞೆಯಾಗಿದೆ. ಆದರೆ ಅವರನ್ನು ಹುಡುಕುವದು ಎಲ್ಲಿ?"

"ಅದರ ಸಲುವಾಗಿಯೇ ಕಾರವಾರಕ್ಕೆ ಬಂದಿರೇನು?"

"ಅದರ ಸಲುವಾಗಿಯೇ ಎಂದಲ್ಲ. ಅವರ ಗೆಳೆಯ ಅರವಿಂದ ಇಲ್ಲಿಗೆ ಬರುವವರಿದ್ದಾರೆಂದು ಹೇಳಿದೆನಲ್ಲಾ. ಅವರಿಂದ ಏನಾದರೂ ಸುದ್ದಿ ತಿಳಿಯಬಹುದೋ ಎಂದು ತಿಳಿಯಲು ಬಂದಿದ್ದೇನೆ. ಆದರೆ, ಅವರು ಬರಲು ಇನ್ನೆರಡು ದಿನ ತಡವಿದೆಯಂತೆ."

ಅವನ ಈ ವರೆಗಿನ ಉದ್ಗಾರಗಳಿಂದ ಸುನೇತ್ರಾ ದೇವಿಯ ವಿಷಯ

ದಲ್ಲಿ ಅವಳ ಹೆಸರಲ್ಲದೆ ಬೇರೆ ಯಾವದೇ ಮಾಹಿತಿ ತಿಳಿಯದಿದ್ದರೂ ಅವಳ ಆತ್ಮಹತ್ಯೆಗೂ ಅವನ ಚಿಕ್ಕ ಧನಿ ಶ್ರೀಧರರಾಯರ ಕಣ್ಮರೆಗೂ ಯಾವದೇ ರೀತಿಯ ಸಂಬಂಧವಿರಬೇಕೆಂಬುದು ಸ್ಪಷ್ಟವಾಗುತ್ತಿತ್ತು. ಅವನ ಆಗಿನ ಮನಃಸ್ಥಿತಿಯಲ್ಲಿ ಅವನೊಡನೆ ಹೆಚ್ಚಿನ ವಿವರಗಳನ್ನು ಕೇಳುವದು ನನಗೆ ಸರಿ ಎನಿಸಲಿಲ್ಲ. ಅವನ ಪ್ರಯತ್ನದಲ್ಲಿ ನನಗೂ ಸಹಾನುಭೂತಿ ತೋರಿ ನಾನು "ನನ್ನ ಹೆಂಡತಿಯ ಸೋದರ ಮಾವ ಇಲ್ಲಿ ಜಿಲ್ಹಾ ಕಲೆಕ್ಟರರ ಸ್ವಂತ ಸಹಾಯಕ (Personal Assistant) ರಿದ್ದಾರೆ. ನಿಮ್ಮ ಶ್ರೀಧರರಾಯರ ಶೋಧದಲ್ಲಿ ಸರಕಾರದ ಯಾವದೇ ಖಾತೆಗಳಿಂದ ಸಹಾಯವಾಗುವಂತಿದ್ದರೆ ಅವರ ಹತ್ತಿರ ಹೇಳಿ ಮಾಡಿಸುವೆ", ಎಂದೆನು.

"ಸರಕಾರದ ಯಾವ ಖಾತೆಯಿಂದಲೂ ಉಪಯೋಗವಾಗುವಂತಿಲ್ಲ, ರಾಯರೇ. ಆದರೆ, ನಿಮ್ಮ ಆಪ್ತರಿಂದ ಒಂದು ವಿಷಯದಲ್ಲಿ ಸಹಾಯವಾಗಬಹುದು. ನಮ್ಮ ಧನಿಯವರು ಇಲ್ಲಿಯೇ ಕಡಲ ತೀರದಲ್ಲಿ, ಸುನೇತ್ರಾ ದೇವಿಯವರ ಆತ್ಮಕ್ಕೆ ಶಾಂತಿಯನ್ನೀಯಲು ಒಂದು ಸ್ಮಾರಕ ಮಂದಿರವನ್ನು ರಚಿಸಬೇಕೆಂದಿದ್ದಾರೆ. ಅದಕ್ಕೆ ಒಂದು ಯೋಗ್ಯ ಸ್ಥಳ ಕೊಡಲು ಕಲೆಕ್ಟರ ಸಾಹೇಬರಿಗೆ ಶಿಫಾರಸು ಮಾಡುವಂತೆ ಅವರಿಗೆ ಹೇಳಿರಿ"

ಅಷ್ಟನ್ನು ಅವಶ್ಯವಾಗಿ ಮಾಡಿಸುವೆನೆಂದು ಆಶ್ವಾಸನ ಕೊಟ್ಟೆ.

"ಆಭಾರಿ ಇದ್ದೇನೆ, ರಾಯರೇ. ನನ್ನ ಒಂದು ಹೊಣೆಯು ಹಗುರವಾಯಿತು. ಇನ್ನು ಸುನೇತ್ರಾ ದೇವಿಯವರ ಭಾವಚಿತ್ರ ಮಾಡಿಸುವ ವ್ಯವಸ್ಥೆ ಮಾಡಬೇಕು" ಎಂದು ಹೇಳಿ ಕುಳಿತಲ್ಲಿಂದ ಎದ್ದನು. ಹಾಗೂ "ತುಂಬಾ ಉಪಕಾರವಾಯಿತು, ರಾಯರೇ. ಅರವಿಂದರಾಯರು ಬಂದಕೂಡಲೇ ನಿಮಗೆ ತಿಳಿಸುತ್ತೇನೆ," ಹೊರಡುವಾಗ ಇಷ್ಟನ್ನು ಹೇಳಿ ನನ್ನ ಕಾರವಾರದ ವಿಳಾಸ ತಗೊಂಡು ಸಲಾಂ ಮಾಡಿ ಹೊಟೆಲಿನಿಂದ ಹೊರಬಿದ್ದನು.

ಸುನೇತ್ರಾ ದೇವಿಯ ವೃತ್ತಾಂತವನ್ನು ತಿಳಿದುಕೊಳ್ಳುವ ದಾರಿ ಕಂಡಂತಾಯಿತು. ಆದರೆ ಅದನ್ನು ತಿಳಿಯುವ ತನಕ ಚಿತ್ತ ಶಾಂತತೆ ಇದ್ದಿಲ್ಲ, ಹಾಗಾಗಿ ಅರವಿಂದ ಬರುವ ದಾರಿ ನೋಡುತ್ತಾ ಎರಡು ದಿನಗಳನ್ನು ಹೇಗೂ ಅಸ್ವಸ್ಥ ಮನಸ್ಸಿನಿಂದ ಕಳೆದೆನು. ಮೂರನೇ ದಿನ, ಪ್ರಾತಃಕಾಲದಲ್ಲಿನ

ಸಮುದ್ರ ತೀರದ ಪ್ರಶಾಂತ ವಾತಾವರಣದಲ್ಲಿ ಮನಸ್ಸಿಗೆ ಪ್ರಸನ್ನತೆ ದೊರೆಯ ಬಹುದೇನೋ ಎಂದು ಆಶಿಸಿ ಎದ್ದವನೇ ಅಲ್ಲಿಗೆ ಹೋಗಿ ದಂಡೆಯ ಮೇಲೆ ಅಡ್ಡಾಡುತ್ತಿರುವಾಗ, ಗ್ರೆಂಡ್ ಹೊಟೆಲಿನಲ್ಲಿ ಭೆಟ್ಟಿಯಾದ ಆ ಮುಸಲ್ಮಾನನು ದೂರದಿಂದ ನನ್ನನ್ನು ಕರೆದನು. ಅವನ ಜೊತೆಯಲ್ಲಿ ಕಾಲೇಜ ವಿದ್ಯಾರ್ಥಿಯಂತೆ ತೋರುವ ಒಬ್ಬ ಬುಶ್-ಕೋಟಧಾರಿ ಯುವಕನಿದ್ದನು. ಅವನೇ ಶ್ರೀಧರನ ಗೆಳೆಯ ಅರವಿಂದ ಕಸಬೇಕರನೆಂದು ನನಗೆ ಗುರುತುಮಾಡಿ ಕೊಟ್ಟು ಅವನ ಕೂಡ "ಇವರು ನಿಮ್ಮ ಜಿಲ್ಹಾ ಕಲೆಕ್ಟರರ ಸ್ವಂತ ಸಹಾಯಕರ ಆಪ್ತರು. ಸುನೇತ್ರಾ ದೇವಿಯವರ ಸ್ಮಾರಕಕ್ಕಾಗಿ ಸ್ಥಳ ದೊರಕಿಸುವದರಲ್ಲಿ ಸಹಾಯ ಮಾಡುವದಾಗಿ ಆಶ್ವಾಸನ ಕೊಟ್ಟಿದ್ದಾರೆ" ಎಂದು ನನ್ನ ಪರಿಚಯ ಮಾಡಿ ಕೊಟ್ಟು "ಸುನೇತ್ರಾ ದೇವಿಯವರ ಸಂಪೂರ್ಣ ಜೀವನ ವೃತ್ತಾಂತ ತಿಳಿಯಲು ಉತ್ಸುಕರಿದ್ದಾರೆ" ಅಂದನು.

ಈ ಕಡೇ ವಾಕ್ಯದ ಅರ್ಥವನ್ನು ಅರವಿಂದನು ಯಾವ ರೀತಿಯಲ್ಲಿ ಮಾಡುವನು ಎಂದು ನನಗೆ ತುಸು ಸಂಶಯವೆನಿಸಿತು. ಅವನು ಏನಾದರೂ ತಪ್ಪು ಗ್ರಹಿಕೆ ಮಾಡಿಕೊಳ್ಳದಂತೆ ನಾನು "ಅರವಿಂದರಾಯರೇ, ನನ್ನ ಕುತೂಹಲವು ಮರಾಠಿಯಲ್ಲಿ ಹೇಳುವಂತೆ ಬರೇ ಚಾಂಭಾರ ಚೌಕಶಿಯಲ್ಲ, ನಮ್ಮದು ಈಗ ಪ್ರೇಮದ ಕನಸು ಕಾಣುವ ವಯಸ್ಸು; ಅದರ ಸ್ವಲ್ಪಮಟ್ಟಿನ ಸ್ವಾನುಭವವೂ ಇದೆ. ಆದರೆ, ಬಲಿದಾನಕ್ಕೂ ಸಿದ್ಧವಾದ ಸುನೇತ್ರೆಯ ಪ್ರೇಮ ಅದ್ವಿತೀಯವಾದುದು. ಅಂತಹ ದಿವ್ಯ ಪ್ರೇಮದ ಕಥೆಗಳನ್ನಷ್ಟೇ ಈ ವರೆಗೆ ಕೇಳಿದ್ದೆನು. ಅದರ ಪ್ರತ್ಯಕ್ಷ ದರ್ಶನವಾಗಲಿ ಅಥವಾ ಅದನ್ನು ಪ್ರತ್ಯಕ್ಷ ಕಂಡವರಿಂದ ತಿಳಿದುಕೊಳ್ಳುವದಾಗಲಿ ನನಗೆ ಈ ವರೆಗೆ ಲಭಿಸಿದ್ದಿಲ್ಲ. ಈ ಕಾರಣದಿಂದಲೇ ಅವಳ ಜೀವನದ ವಿವರಗಳನ್ನು ತಿಳಿಯಲು ಆತುರನಿದ್ದೇನೆ. ಅನ್ಯಥಾ ತಿಳಿಯಬೇಡಿರಿ" ಎಂದೆನು.

ನನ್ನ ಮಾತುಗಳು ಅವನ ಹೃದಯವನ್ನು ಮುಟ್ಟಿರಬೇಕು. ದಿವ್ಯ ಪ್ರೇಮವು ಪ್ರೇಮಿಗಳನ್ನು ಒಂದುಗೂಡಿಸುವದಷ್ಟೇ ಅಲ್ಲ, ಅದರಲ್ಲಿ ಜಗತ್ತನ್ನೇ ಒಂದುಗೂಡಿಸುವ ಶಕ್ತಿ ಇದೆ. ಅರವಿಂದನೂ ನಾನೂ ತೀರಾ ಅಪರಿಚಿತರಾದರೂ ಸುನೇತ್ರೆಯ ಉಚ್ಚತಮ ಪ್ರೇಮದ ಬರೇ ದರ್ಶನಾನುಭವದಿಂದ

ನಮ್ಮೊಳಗೆ ಕ್ಷಣಮಾತ್ರದಲ್ಲಿ ಆತ್ಮೀಯತೆಯು ಉದ್ಭವಿಸಿತು.

ನನ್ನ ಹೆಗಲಮೇಲೆ ಕೈಹಾಕಿ "ಎಲ್ಲವನ್ನೂ ಸಾದ್ಯಂತವಾಗಿ ಹೇಳು ತ್ತೇನೆ. ಆದರೆ ಈಗ ಬೇಡ. ಅಂತಹ ರೋಮಾಂಚಕಾರಿ ಜೀವನವನ್ನು ಕಥಿಸಲು ಇದು ಸಮಯವೂ ಅಲ್ಲ, ಸ್ಥಳವೂ ಅಲ್ಲ. ನಾಳೆ ಮುಂಜಾನೆ ಬನ್ನಿರಿ. ಸೂರಿ ಪಾರ್ಕಿಗೆ ಹೋಗಿ ಅಲ್ಲಿ ಅಗತ್ಯ ಬಿದ್ದರೆ ಸಂಜೆಯ ತನಕ ಕೂಡೋಣ. ಅಲ್ಲಿ ಎಲ್ಲವನ್ನೂ ಹೇಳುವೆ" ಎಂದು ಹೇಳಿ ನನ್ನ ಕೈ ಕುಲುಕಿ ನನ್ನನ್ನು ಬೀಳ್ಕೊಟ್ಟನು.

ಸುನೇತ್ರಾ ದೇವಿಯ ಜೀವನ ಕಥೆಯನ್ನು ಅದನ್ನು ಅರಿತವರಿಂದಲೇ ಕೇಳುವ ಸುಯೋಗವು ಅನಾಯಾಸವಾಗಿ ಲಭಿಸಿದ್ದರಿಂದ ನನ್ನ ಆನಂದಕ್ಕೆ ಮೇರೆಯೇ ಇರಲಿಲ್ಲ. ಉತ್ಸಾಹದ ಅತಿರೇಕದಿಂದ ಆ ರಾತ್ರೆ ನಿದ್ದೆಯೇ ಹತ್ತ ಲಿಲ್ಲ. ಯಾವಾಗ ಎದ್ದು ನೋಡಿದರೂ ಚಂದ್ರನು ಅಂತರಿಕ್ಷದಲ್ಲೇ ಇದ್ದು ದನ್ನು ಕಂಡು ನನ್ನನ್ನು ಅಣಕಿಸಲು ಅವನು ಬೈತೇ ಸಂಪು ಹೂಡಿದ್ದಾನೊ ಅನಿಸಿತು.

ಹೇಗೂ ಕೊನೆಗೆ ಕತ್ತಲೆ ಸರಿದು ಅರುಣೋದಯ ಮೂಡಿತು. ಬೇಗನೇ ಎದ್ದು ಪ್ರಾತರ್ವಿಧಿ ತೀರಿಸಿ ಅರವಿಂದನೆಡೆಗೆ ಹೋದೆನು. ಅಲ್ಲಿಂದ ನಾವಿಬ್ಬರೂ ಹೊರಟು ಸೂರಿ ಪಾರ್ಕಿಗೆ ಹೋದೆವು. ಅಲ್ಲಿ ಬೀಸುವ ಗಾಳಿಗೆ ಚಬುಕಿನ ಗಿಡಗಳು ಸುಂಯ್ಯುಗುಟ್ಟುವ ಹಿಮ್ಮೇಳದ ಪಾರ್ಶ್ವಭೂಮಿಯಲ್ಲಿ ಅರವಿಂದನು ಸುನೇತ್ರೆಯ ಹೃದಯಸ್ಪರ್ಶಿ ಜೀವನ ಕಥೆಯನ್ನು ವರ್ಣಿಸಿದನು.

ಅರವಿಂದನು ಕಥಿಸಿದ ಆ ಜೀವನ ವೃತ್ತಾಂತವು ಮಾನವನ ಭಾವನೆ ಗಳನ್ನು ಕ್ಷುದ್ರ ವಿಚಾರಗಳಿಂದ ಹೊರಪಡಿಸಿ ಉಚ್ಚತಮ ಮಟ್ಟಕ್ಕೆ ಏರಿಸುವಂತಹದಿತ್ತು. ಅಲ್ಲದೆ, ಅವನು ತಾನು ಪ್ರತ್ಯಕ್ಷವಾಗಿ ಕಂಡು ಅನುಭವಿಸಿದ ಸಂಗತಿಗಳನ್ನು ಹೇಳಿದ್ದರಿಂದ, ಯಾವದೇ ಆಡಂಬರವಿಲ್ಲದೆ ನೇರವಾಗಿ ಹೃದಯದಿಂದಲೇ ಬಂದ ಅವನ ಮಾತುಗಳು ಕೇಳುವವರ ಹೃದಯವನ್ನೇ ನೇರವಾಗಿ ಮುಟ್ಟುವಂತಹವಿದ್ದುವು. ಅವನು ಹೇಳುತ್ತಿರುವಾಗಲೇ ಅಥವಾ ಅವುಗಳ ನೆನಪು ಸ್ವಚ್ಛವಾಗಿರುವಾಗಲೇ ಅವನು ಹೇಳಿದ ಸಂಗತಿಗಳನ್ನು ಬರೆದಿಟ್ಟಿದ್ದರೆ ಕಾಲ್ಪನಿಕ ಕಾದಂಬರಿಗಳಿಗಿಂತ ಎಷ್ಟೋ ಶ್ರೇಷ್ಠವಾದ ಕೃತಿಯಾಗುತ್ತಿತ್ತು.

ಆ ವಿಚಾರ ಅಂದು ನನ್ನ ಮನಸ್ಸಿನಲ್ಲಿ ಮೂಡದೆ ಇದ್ದುದಕ್ಕಾಗಿ ಈಗ ವಿಷಾದವೆನಿಸುತ್ತದೆ.

ಹತ್ತು ವರ್ಷಗಳ ನಂತರ ಕಾರವಾರಕ್ಕೆ ಮರಳಿಬಂದಾಗ ಕಿವಿಗೆ ಬಿದ್ದ ಒಂದು ಘಟನೆಯಿಂದ ಅರವಿಂದನು ಹೇಳಿದ ಆ ದಿವ್ಯ ಕಥೆಯ ಸ್ಮೃತಿ ಚಿತ್ರವು ಪುನಃ ಮನಸ್ಸಿನ ಪಡದೆಯ ಮೇಲೆ ಮೂಡಿತು. ಅದು ಮಾಯವಾಗುವ ಮೊದಲೇ ಆ ಭಾವನೆಗಳನ್ನು ಅಕ್ಷರಗಳ ಚೌಕಟ್ಟಿನಲ್ಲಿ ಕೂಡಿಸುವ ಪ್ರಯತ್ನ ಮಾಡಿದ್ದೇನೆ. ಆದರೆ, ಲೇಖಕನೂ ಸಾಹಿತಿಯೂ ಅಲ್ಲದ ನನ್ನಂತಹ ಸಾಮಾನ್ಯ ಮನುಷ್ಯನ ಈ ದಿಶೆಯ ಪ್ರಯತ್ನ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೆಂಬದನ್ನು ನಾನು ಹೇಳಲಾರೆ:—

ತರಂಗ ೨

ಅರವಿಂದನು ಹೇಳಿದ ವೃತ್ತಾಂತ:-

ಸುಮಾರು ಎರಡು ವರ್ಷಗಳ ಕೆಳಗೆ ಶರದೃತುವಿನೊಳಗಿನ ಒಂದು ಹುಣ್ಣಿಮೆಯ ದಿವಸ ಪ್ರಣಯಿಗಳು ಮೊದಲಿಗೆ ಭೆಟ್ಟಿಯಾದದ್ದು. ಅದೇ ವರ್ಷದ ಜೂನ ತಿಂಗಳಲ್ಲಿ ಶ್ರೀಧರನು ಬಿ. ಎಸ್‌ಸಿ. ಮುಗಿಸಿ ಸ್ನಾತಕೋತ್ತರ ಅಭ್ಯಾಸಕ್ಕಾಗಿ ಮುಂಬಯಿಗೆ ಬಂದಿದ್ದನು. ನಾನು ಆಗ ಎಮ್. ಎಸ್‌ಸಿ. ಮುಗಿಸಿ ಪಿಎಚ್. ಡಿ. ಯ ಸಲುವಾಗಿ ಸಂಶೋಧನ ಕಾರ್ಯದಲ್ಲಿ ತೊಡಗಿದ್ದೆನು. ಶ್ರೀಧರನ ಊರು ಶಿರಸಿ. ನಮ್ಮ ಕಾರವಾರದ ಕೊಂಕಣಿ ಮತ್ಸ್ಯ ಸಂಸ್ಕೃತಿಯು ಶಿರಸಿಯ ಕನ್ನಡ ಅಡಿಕೆ ಸಂಸ್ಕೃತಿಗಿಂತ ಭಿನ್ನವಾದರೂ ಆಡಳಿತ ದೃಷ್ಟಿಯಿಂದ ಕಾರವಾರ ಹಾಗೂ ಶಿರಸಿ ಊರುಗಳು ಒಂದೇ ಜಿಲ್ಲೆಯ ಭಾಗಗಳಿರುವದರಿಂದ ನಮ್ಮಿಬ್ಬರ ಪರಿಚಯವು ಬೇಗನೇ ಆಗಿ ಅದು ಸಹಜವಾಗಿ ಪ್ರೇಮದಲ್ಲಿ ಪರಿಣಮಿಸಿತು.

ಅವನ ಸ್ವಭಾವ ತುಂಬಾ ಲಜ್ಜೆಯದು. ನಾಚಿಕೆ ಮುಳ್ಳಿನ ಗಿಡದಂತೆ ಮುಟ್ಟಿದೊಡನೆ ಮುಚ್ಚಿಕೊಳ್ಳುವ ರೀತಿಯದು. ತಾನೊಬ್ಬನೇ ಎಲ್ಲಿಗಾದರೂ ಹೋಗಲು ಅವನು ಹಿಂಜರಿಯುತ್ತಿದ್ದನು. ಅವನಾಗಿ ಉಪಹಾರ ಗೃಹಕ್ಕಾ

ಗಲಿ ವಾಕ್ಪಟ ನೋಡಲಿಕ್ಕಾಗಲಿ ಹೋದವನಲ್ಲ.

ನಾವಿರುತ್ತಿದ್ದ ವಸತಿಗೃಹದಲ್ಲಿ ನಮ್ಮ ಜಿಲ್ಹೆಯವರು ನಮ್ಮ ಹೊರತು ಬೇರೆ ಯಾರೂ ಇರಲಿಲ್ಲ. ಹಾಗಾಗಿ ನಮ್ಮ ಪರಿಚಯವು ಬೇಗನೇ ಆಯಿತೆಂದು ಈ ಮೊದಲೇ ಹೇಳಿದೆನಷ್ಟೆ. ಮೇಲೆ ವರ್ಣಿಸಿದ ಅವನ ಸ್ವಭಾವದಿಂದಾಗಿ ನಮ್ಮ ಪರಿಚಯವಾದಂದಿನಿಂದಲೇ ಅವನು ಲತೆಯು ಮರವನ್ನು ಸುತ್ತಿಕೊಳ್ಳುವಂತೆ ನನ್ನನ್ನು ಅಂಟಿಕೊಂಡನು.

ಅವನ ತಂದೆ ನಿವೃತ್ತ ನ್ಯಾಯಾಧೀಶರು. ಶ್ರೀಮಂತರು ಹಾಗೂ ಅಡಿಕೆ ತೋಟ, ಭತ್ತದಗದ್ದೆ ಇತ್ಯಾದಿ ತುಂಬಾ ಸ್ಥಾವರ ಆಸ್ತಿ ಇದ್ದವರು. ಶ್ರೀಧರನು ಅವರ ಒಬ್ಬನೇ ಮಗನಾದುದರಿಂದ, ಅವನನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ಆದರೆ, ನ್ಯಾಯಾಧೀಶರಾಗಿದ್ದುದರಿಂದ ಜನತೆಯ ದುರ್ಗುಣಗಳ ಅನುಭವವೇ ಅಧಿಕವಾಗಿದ್ದ ಅವರು ಬಾಹ್ಯಜಗತ್ತಿನ ಸಂಪರ್ಕವು ಹುಡುಗರ ಮಾನಸಿಕ ಬೆಳವಣಿಗೆಗೆ ಹಾನಿಕಾರಕವೆಂಬ ಅಭಿಪ್ರಾಯದವರಾಗಿದ್ದರು. ಹಾಗಾಗಿ ತನ್ನ ಒಬ್ಬನೇ ಮಗನನ್ನು ಅವರು ಶಾಲೆ, ಮನೆ ಇವೆರಡನ್ನು ಬಿಟ್ಟು ಮೂರನೇ ಸ್ಥಳಕ್ಕೆ ಹೋಗಗೊಡುತ್ತಿರಲಿಲ್ಲ. ಅವನು ಸ್ವಾಭಾವಿಕವಾಗಿ ಚುರುಕುಬುದ್ಧಿಯವನಾದರೂ ಈ ರೀತಿಯ ಸಂಕುಚಿತ ವಾತಾವರಣದಲ್ಲಿ ಬೆಳೆದುದರಿಂದ ಅವನ ಸ್ವಭಾವವು ಬಾಹ್ಯ ಜಗತ್ತಿನ ಜಂಜಾಟಕ್ಕೆ ಹೊಂದಿಕೊಳ್ಳಲಾರದ ಕೋಮಲ ಪುಷ್ಪದಂತಾಯಿತು. ಇದೇ ಮುಂದೆ ಅವನ ಜೀವನದ ದುರಂತಕ್ಕೆ ಕಾರಣವಾಯಿತು.

ಮುಂಬಯಿಗೆ ಬಂದ ಮೊದಲಿನಲ್ಲಿ ಅವನು ಗಿರಗಾವಿನಲ್ಲಿ ಯಾರೊ ಸಂಬಂಧಿಕರ ಮನೆಯಲ್ಲಿದ್ದನು. ಆದರೆ, ಅಲ್ಲಿನ ಗದ್ದಲ, ಕೋಲಾಹಲಗಳಿಂದ ಅಭ್ಯಾಸವು ಅಸಾಧ್ಯವಾಗಿ ಒಂದೆರಡು ತಿಂಗಳ ನಂತರ ಅವನು ಅಪ್ಪನನ್ನು ಒತ್ತಾಯಪಡಿಸಿ ವಸತಿಗೃಹವನ್ನು ಸೇರಿದನು.

ಅಭ್ಯಾಸದಲ್ಲಿ ಅವನು ನನಗಿಂತ ಎಷ್ಟೋಪಾಲಿಗೆ ಮಿಗಿಲಾದ ವಿದ್ಯಾರ್ಥಿ. ಆದರೆ, ಒಂದು ರೀತಿಯ ಸ್ವಪ್ನಜೀವಿ. ವಿದ್ಯಾರ್ಥಿಗಳ ಜೀವನದಲ್ಲಿ ಸಹಜವಾದ ಮನರಂಜನೆಯ ಕಾರ್ಯಕ್ರಮಗಳಲ್ಲಿ ಅವನಿಗೆ ಆಸಕ್ತಿ ಇರಲಿಲ್ಲ. ಉಪಹಾರ ಗೃಹಗಳಿಗೆ ಅವನು ಸಹಸಾ ಹೋಗುತ್ತಿರಲಿಲ್ಲ. ಸಿನೇಮಾಕ್ಕೆ

ಹೋಗುತ್ತಿದ್ದುದು ತೀರಾ ಅಪರೂಪದಲ್ಲಿ. ಹೆಚ್ಚಿನ ಸಮಯವನ್ನು ಓದಿನಲ್ಲೇ ಕಳೆಯುತ್ತಿದ್ದನು. ಆದರೆ, ವಿದ್ಯಾರ್ಥಿಗಳಿಗೆ ಪ್ರಿಯವಾದ ಪ್ರೇಮಕತೆ ಹಾಗೂ ಅಂತಹ ಕಾದಂಬರಿಗಳನ್ನು ಅವನು ಎಂದೂ ಓದುತ್ತಿರಲಿಲ್ಲ.

ನಮ್ಮ ಕಾಲೇಜಿನಲ್ಲಿ ಐವತ್ತಕ್ಕೆ ಮೇಲ್ಪಟ್ಟ ವಿದ್ಯಾರ್ಥಿನಿಯರಿದ್ದರು. ಅವರು ಕಾಲೇಜಿಗೆ ಬರುವಾಗ, ಹೋಗುವಾಗ ಅವರ ಮೋರೆ ಅಥವಾ ನಡಿಗೆಯನ್ನು ಎವೆ ಇಕ್ಕದೆ ನೋಡುವದು, ಅವರು ಎಂದು, ಯಾವ ವರ್ಣದ ಸೀರೆ ಉಟ್ಟಿದ್ದಾರೆಂಬುದನ್ನು ಮನಸ್ಸಿನಲ್ಲೇ ನಮೂದ ಮಾಡಿಕೊಳ್ಳುವದು, ಇತ್ಯಾದಿ ವಿಷಯಗಳು ವಿದ್ಯಾರ್ಥಿಗಳ ದೈನಂದಿನ ಕಾರ್ಯಕ್ರಮವಾಗಿದ್ದವು. ಶ್ರೀಧರನು ಮಾತ್ರ ಇವುಗಳಲ್ಲಿ ಭಾಗ ವಹಿಸುವದು ಒತ್ತಟ್ಟಿಗಿರಲಿ, ಯಾವದೇ ಸ್ತ್ರೀಯ ಮುಖವನ್ನು ಕೂಡಾ ಕಣ್ಣೆತ್ತಿ ನೋಡಿದವನಲ್ಲ. ಆದರೆ ಅವನ ಮುಖದಲ್ಲಿ ಹೊರಸೂಸುತ್ತಿದ್ದ ಕೋಮಲತೆ, ನಿಷ್ಪಾಪ ಸೌಂದರ್ಯ ಇವುಗಳಲ್ಲಿ ಯುವತಿಯರನ್ನು ಆಕರ್ಷಿಸುವ ಅವರ್ಣನೀಯ ಶಕ್ತಿ ಇತ್ತು.

ಸದಾ ಅಭ್ಯಾಸದಲ್ಲೇ ಮಗ್ನನಾಗಿರುತ್ತಿದ್ದ ಶ್ರೀಧರನಿಗೆ ಇದರ ಅರಿವು ಕೂಡಾ ಇರಲಿಲ್ಲ. ಸುನೇತ್ರೆಯ ಪ್ರೇಮದ ಚಕ್ರವ್ಯೂಹದಲ್ಲಿ ಸಿಲುಕದಿದ್ದರೆ, ತನ್ನ ಬುದ್ಧಿಶಕ್ತಿ, ಹಾಗೂ ಅಭ್ಯಾಸ ಬಲದಿಂದ ಅತ್ಯಂತ ಮೇಧಾವಿಯಾದ ಮಹಾನ್ ವ್ಯಕ್ತಿಯಾಗುತ್ತಿದ್ದನು.

ಕ್ರಿಸ್‌ಮಸದ ರಜೆ ಸುರುವಾಗಲು ಕೆಲವು ದಿನಗಳು ಮಾತ್ರವೇ ಉಳಿದಿದ್ದವು. ಒಂದು ವಾರದ ತನಕ ಯಾವದೋ ಒಂದು ವಿಷಯದ ಮೇಲೆ ಹಗಲಿರುಳು ಅಭ್ಯಾಸ ಮಾಡಿ, ಶ್ರೀಧರನಿಗೆ ಬಹಳೇ ಆಯಾಸವಾಗಿತ್ತು. ಎಲ್ಲಿಗಾದರೂ ಒಂದು ದಿನದ ಮಟ್ಟಿಗೆ ವಿಹಾರಕ್ಕೆ ಹೋಗೋಣವೆಂದು ನಾನು ಸೂಚಿಸಿದೆನು.

ಎಲ್ಲಿಯಾದರೂ ಜನಸಂದಣಿಯಿಂದ ದೂರವಿರುವ ಸ್ಥಳಕ್ಕೆ ಹೋಗೋಣವೆಂದು ಅವನು ಹೇಳಿದಾಗ ನಾನೇ ಕಾನ್ಹೇರಿಯ ಬೌದ್ಧ ಚೈತ್ಯಾಲಯದ ಗುಹೆಗಳನ್ನು ಸೂಚಿಸಿದೆನು. ಈ ಗುಹೆಗಳು ಮುಂಬಯಿಯಿಂದ ತುಸು ದೂರದಲ್ಲಿರುವದರಿಂದಲೂ ಆ ದಿನವು ರಜಾದಿನವಲ್ಲದ್ದರಿಂದಲೂ ಅಲ್ಲಿ ಅಂದು ಹೆಚ್ಚು ಪ್ರೇಕ್ಷಕರಿರುವ ಸಂಭವವಿರಲಿಲ್ಲ.

ಬೋರವಲಿಯ ರೇಲ್ವೇ ನಿಲ್ದಾಣದಲ್ಲಿ ಇಳಿದು ನಾವು ಎರಡು ಸೈಕಲ್ಲು ಗಳನ್ನು ಭಾಡಿಗೆಗೆ ತಕ್ಕೊಂಡು ಕಾನ್ಹೇರಿ ಗುಹೆಗಳ ಆವಾರಕ್ಕೆ ತಲಪಿ ಸೈಕಲ್ಲು ಗಳನ್ನು ಉದ್ಯಾನದ ಕಾವಲುಗಾರನ ವಶಕ್ಕೆ ಕೊಟ್ಟು ಒಳಗೆ ಹೋದೆವು. ಅಲ್ಲಿನ ಪ್ರಶಾಂತ ವಾತಾವರಣದಿಂದ ಶ್ರೀಧರನಿಗೆ ಒಳಿತೆನಿಸಿತು. ಆ ಉದ್ಯಾನದಲ್ಲಿ ಮನಸೋಕ್ತ ಅಡ್ಡಾಡಿದೆವು. ಉದ್ದಕ್ಕೆ ಚಾಚಿರುವ ಎತ್ತರದ ಬಂಡೆಕಲ್ಲಿನಲ್ಲಿ ಎರಡು ಅಂತಸ್ತುಗಳಾಗಿ ಕೊರೆಯಲ್ಪಟ್ಟದ್ದ ಎರಡು ಮಾಳಿಗೆ ಗಳ ವಸತಿಗೃಹದಂತಿದ್ದ ಸುಂದರ ಗುಹೆಗಳನ್ನು ಒಂದೊಂದಾಗಿ ನೋಡಿ ದೆವು. ಹಲವು ಶತಮಾನಗಳ ಹಿಂದೆ ಬೌದ್ಧ ಭಿಕ್ಷುಗಳು ಈ ಗುಹೆಗಳನ್ನು ಸ್ವತಃ ಕೊರೆದರೋ ಅಥವಾ ಇತರರಿಂದ ಕೊರೆಯಿಸಿಯೋ ಅಲ್ಲಿನ ನಿರ್ಜನ ವಾತಾವರಣದಲ್ಲಿ ಬಾಹ್ಯಜಗತ್ತನ್ನು ಮರೆತು ನಿಸರ್ಗದೊಡನೆ ಏಕರೂಪವಾಗಿ ನಿರ್ವಾಣವನ್ನು ಸಾಧಿಸಿದ ದಿವ್ಯ ಚಿತ್ರವು ನಮ್ಮ ಕಣ್ಣಮುಂದೆ ಬಂದಿತು. ಆ ಗುಹೆಗಳನ್ನು ಪ್ರವೇಶಿಸುವಾಗ ಒಂದು ರೀತಿಯ ಗಂಭೀರ ಭಾವನೆಯು ಮನಸ್ಸನ್ನು ಆವರಿಸಿ ಅಂದು ಉಚ್ಚರಿಸಲ್ಪಡುತ್ತಿದ್ದ "ಬುದ್ಧಂ ಶರಣಂ ಗಚ್ಛಾಮಿ, ಧರ್ಮಂ ಶರಣಂ ಗಚ್ಛಾಮಿ, ಸಂಗಂ ಶರಣಂ ಗಚ್ಛಾಮಿ" ಈ ಘೋಷಗಳು ಈವತ್ತಿಗೂ ಪ್ರತಿಧ್ವನಿಸುತ್ತವೆಯೋ ಎಂಬಂತೆ ಭಾಸವಾಗುತ್ತಿತ್ತು.

ಆ ಗುಹೆಗಳಲ್ಲಿನ ದೊಡ್ಡ ಚೈತ್ಯಾಲಯವನ್ನು ಮುಟ್ಟಿದಾಗ, ಸೂರ್ಯನು ಪಶ್ಚಿಮಾಚಲದ ಕಡೆಗೆ ತಿರುಗುತ್ತಿದ್ದನು. ಈಗ ಹಾಳುಬಿದ್ದಿದ್ದರೂ ಒಂದುಕಾಲದಲ್ಲಿ ಸುಂದರವಾಗಿದ್ದ ಚೈತ್ಯಾಲಯದೊಳಗಿನ ಸ್ತೂಪವನ್ನು ನೋಡುತ್ತಿದ್ದಂತೆ ಭಾರತದ ಇತಿಹಾಸದ ಹಾಳೆಗಳು ಚಲಚ್ಚಿತ್ರಗಳಂತೆ ನಮ್ಮ ಕಣ್ಣಮುಂದೆ ಸರಿದವು. ಭಾರತದಲ್ಲಿ ಬೌದ್ಧಧರ್ಮವು ಘನತೆಗೇರಿ ರಾಷ್ಟ್ರ ಧರ್ಮವಾಗಿದ್ದ ಆ ಮಹತ್ಕಾಲ, ಕ್ರಮೇಣ ಆ ಧರ್ಮವು ಅವನತಿಗಿಳಿದು ಅದರ ಜನ್ಮಭೂಮಿಯಿಂದಲೇ ಮಾಯವಾದುದು, ಆ ಧರ್ಮದ ಪ್ರತೀಕವಾದ ಈ ಗುಹೆಗಳು ನಿರ್ಜನವಾಗಿ, ನೋಡುವವರಿಲ್ಲದಸ್ಥಿತಿಗೆಬಂದು ಪೋರ್ತುಗೀಸರ ದಹಶತವಾದಕ್ಕೆ ಬಲಿಯಾಗಿ ಹಾಳುಬಿದ್ದುದು ಇದನ್ನು ಮನನ ಮಾಡುತ್ತ ಆ ಚೈತ್ಯಾಲಯದಲ್ಲಿ ಬಹಳ ಹೊತ್ತು ಕಳೆದೆವು.

ಚೈತ್ಯಾಲಯದ ಪ್ರವೇಶದ್ವಾರದ ಪಕ್ಕದಿಂದ ಕೇಳಬರುತ್ತಿದ್ದ ಕೊಳಲ

ಧ್ವನಿಯು ನಮ್ಮನ್ನು ಭಾವ ಸಮಾಧಿಯಿಂದ ಎಬ್ಬಿಸಿತು. ಕೊಳಲ ಧ್ವನಿಯೊಂದಿಗೆ ಇಂಪಾಗಿ ಹಾಡುವ ಹುಡುಗಿಯ ಮಧುರಸ್ವರವೂ ಕೇಳಿಸಿತು. ನಾವು ನಮ್ಮ ಕಿವಿಗಳನ್ನೇ ನಂಬದಾದೆವು. ಯಾಕೆಂದರೆ, ನಮಗೆ ಅಷ್ಟರವರೆಗೆ ಯಾರೂ ಪ್ರೇಕ್ಷಕರು ದೃಷ್ಟಿಗೆ ಬಿದ್ದಿರಲಿಲ್ಲ. ಆ ಗಾನದಿಂದ ಆಕರ್ಷಿತರಾಗಿ ನಾವು ಎದ್ದು ಚೈತ್ಯಾಲಯದ ದ್ವಾರದೆಡೆಗೆ ಬಂದೆವು. ಆದರೆ, ನಾವು ಅಲ್ಲಿಗೆ ತಲ್ಪುವಷ್ಟರಲ್ಲಿ ಹಾಡು ನಿಂತಿತ್ತು. ಹಾಗೂ ಹಾಡುವವರೂ ಕಾಣಲಿಲ್ಲ. ನಾವು ತುಸು ಮುಂದರಿದಾಗ, ಬಲಗಡೆಯಲ್ಲಿದ್ದ ಒಂದು ಪೊದರಿನ ಹಿಂದೆ ಒಬ್ಬ ಬಾಲಿಕೆಯು ಕುಳಿತಿದ್ದನ್ನು ಕಂಡೆವು. ಆಕೆಯೂ ನಮ್ಮನ್ನು ಕಂಡಿರಬೇಕು. ಅಂತೆಯೇ ನಾವು ಹತ್ತಿರಕ್ಕೆ ಬರುವಷ್ಟರಲ್ಲಿ ಹಾಡನ್ನು ನಿಲ್ಲಿಸಿದಳು.

ನಾವು ಅವಳನ್ನು ಕೇವಲ ಕ್ಷಣಕಾಲವಷ್ಟೇ ನೋಡಿದ್ದೆವು. ಆದರೆ, ಆ ಕ್ಷಣಕಾಲದ ದರ್ಶನವು ಶ್ರೀಧರನ ಭಾವೀ ಜೀವನವನ್ನೇ ಬದಲುಮಾಡಿತು. ಚೈತ್ಯಾಲಯದ ಹೊರಗೆ ಬಂದಾಗ, ಗಾನವಾಗಲಿ ಗಾಯಕಿಯಾಗಲಿ ಇಬ್ಬರೂ ಕಾಣದಿದ್ದುದರಿಂದ ನಾವು ಮುಂದೆ ಹೊರಟೆವು. ನಾಲ್ಕಾರು ಮಾರು ಹೋಗುವಷ್ಟರಲ್ಲಿ ಪುನಃ ಅದೇ ಮಂಜುಳಸ್ವರ ಅದೇ ಸ್ಥಳದಿಂದ ಕೇಳಿಸಿತು. ಅದನ್ನು ಕೇಳಿದೊಡನೆ ಶ್ರೀಧರನು ಫಕ್ಕನೆ ಹಿಂದಿರುಗಿ ಅಲ್ಲಿಗೆ ಹೋಗಲುದ್ಯುಕ್ತನಾದನು. ಅಪರಿಚಿತ ಬಾಲಿಕೆಯ ಹತ್ತಿರ ಹೋಗುವದು ಸರಿಯಲ್ಲವೆಂದು ನಾನು ಅವನನ್ನು ತಡೆದೆನು. ಆದರೂ, ಅವನು ಕೇಳದೆ ನನ್ನ ಕೈ ಹಿಡಿದೆಳೆದು ನನ್ನನ್ನು ಕೂಡಾ ಅಲ್ಲಿಗೆ ಎಳೆದುಕೊಂಡು ಹೋದನು. ನಾವು ಅವಳು ಕುಳಿತಿದ್ದ ಪೊದರನ್ನು ಸಮೀಪಿಸಿದಾಗ, ಅವಳು ಕೊಳಲನೂದುತ್ತಾ ನಮ್ಮ ಕಡೆಗೇನೇ ದೃಷ್ಟಿ ಬೀರಿ ಕುಳಿತಿದ್ದಳು. ನಮ್ಮ ಪರಸ್ಪರ ದೃಷ್ಟಿಮಿಲನವಾಗುತ್ತದೆಂಬುವಾಗ ಅವಳು ಫಕ್ಕನೆ ತನ್ನ ಕತ್ತನ್ನು ತಿರುಗಿಸಿದಳು. ನಾವೂ ಸಹ ಬೇರೆ ಕಡೆಗೆ ನೋಡುತ್ತಿರುವವರಂತೆ ನಟಿಸಿದೆವು. ಈ ರೀತಿಯಲ್ಲಿ ನಾವು ಒಬ್ಬರನ್ನೊಬ್ಬರು ನೋಡುತ್ತಿದ್ದಿಲ್ಲವೆಂದು ನಟಿಸಿದರೂ ಇದು ಕೇವಲ ಆಭಾಸ. ನೈಜಸ್ಥಿತಿ ಬೇರೆಯೇ ಇದೆಯೆಂದು ನಮಗೂ ಗೊತ್ತಿತ್ತು. ಅವಳೂ ತಿಳಿದಿದ್ದಳು. ಕದ್ದು ನೋಡುವ ನಮ್ಮ ದೃಷ್ಟಿಯು

ಒರೆಗಣ್ಣಿನ ಅವಳ ನೋಟಕ್ಕೆ ನಾಲ್ಕೈದು ಸಾರೆ ಮಿಲನವಾಯಿತು.

ಈ ಕಣ್ಣುಮುಚ್ಚಾಲೆಯಾಟವು ಹೀಗೆಯೇ ಕೆಲಹೊತ್ತು ನಡೆದ ಬಳಿಕ ಒಮ್ಮಿಗೆಲೇ ಅವಳು ತನ್ನ ಕೊಳಲನ್ನು ಕೆಳಗಿಟ್ಟು ಒಂದೇಸವನೆ ಗಹಗಹಿಸಿ ನಗಹತ್ತಿದಳು. ಎಂಥ ಹಾರ್ದಿಕ ತುಂಟ ನಗು ಅದು! ಆ ನಗುವಿನಲ್ಲಿಯೂ ಮನಸ್ಸನ್ನೇ ಸೂರೆಗೊಳ್ಳುವ ಮಾಧುರ್ಯವಿತ್ತು. ಆ ನಗುವಿನ ಶಬ್ದ ಕೇಳಿ ನಾವು ನಮ್ಮ ಓರೆನೋಟವನ್ನು ನಿಲ್ಲಿಸಿ ಅವಳ ಕಡೆಗೆ ನೇರವಾಗಿ ನೋಡ ತೊಡಗಿದೆವು. ತುಂಟತನದ ಪ್ರಕಾಶದಿಂದ ಅವಳ ಕಣ್ಣುಗಳು ಕುಣಿಯುತ್ತಿದ್ದುವು. ನಗುವನ್ನು ತಡೆಯುಲಾರದೆ ಅದು ಹೊರಗೆ ಬಾರದಂತೆ ಅವಳು ತನ್ನ ಕೈಗಳಿಂದ ಬಾಯಿಯನ್ನು ಮುಚ್ಚಿದ್ದರೂ, ಅದು ಆ ತಡೆಯಿಂದ ಹೊರ ಚೆಲ್ಲಿ ಹೊರಗಿನ ವಾತಾವರಣವನ್ನು ಭೇದಿಸುತ್ತಿತ್ತು.

ಅವಳ ನಗುವಿಗೆ ನಮ್ಮ ವರ್ತನೆಯೇ ಕಾರಣವೆಂದು ಅವಳ ಮುಖ ಭಾವವು ಸ್ಪಷ್ಟವಾಗಿ ಸೂಚಿಸುತ್ತಿತ್ತು. ಆದರೆ ನಾವೇನೂ ಅಂತಹ ಹಾಸ್ಯಾಸ್ಪದ ರೀತಿಯಲ್ಲಿ ವರ್ತಿಸಿರಲಿಲ್ಲ. ಆದ್ದರಿಂದ, ಹೀಗೆ ನಗಲು ಕಾರಣವೇನೆಂದು ಕೇಳೋಣವೆಂದು ನನಗೆ ಅನಿಸಿತು. ಆದರೆ ಆ ರೀತಿ ಪ್ರಶ್ನೆ ಕೇಳಿ ಅಪರಿಚಿತ ಯುವತಿಯೊಡನೆ ವಾದಕ್ಕಿಳಿಯುವದು ಶಿಷ್ಟಾಚಾರದ ಲಕ್ಷಣವಲ್ಲವೆಂದು ನಾನು ಸುಮ್ಮನಿದ್ದೆನು. ಶ್ರೀಧರನು ಮಾತ್ರ ಸಿಟ್ಟಿನಿಂದ “ ನಗಲಿಕ್ಕೆ ಏನಿದೆ ಇಲ್ಲಿ ? ” ಎಂದು ಗಟ್ಟಿಯಾಗಿ ಒದರಿದನು.

ಶ್ರೀಧರನು ಹೀಗೆ ದುಡುಕಿದ್ದನ್ನು ನೋಡಿ ನನಗೆ ಸಾಹಜಿಕವಾಗಿ ಆಶ್ಚರ್ಯವಾಯಿತು. ಹಾಗೂ ಇದರಿಂದ ಅವಳೊಡನೆ ವಿನಾಕಾರಣ ಮಾತಿಗೆ ಮಾತು ಹತ್ತುವದೋ ಎಂಬ ಅಂಜಿಕೆಯೂ ಆಯಿತು. ಆದರೆ ಸುದೈವದಿಂದ ಆ ತರುಣಿಯೇ ಅದಕ್ಕೆ ಎಡೆ ಕೊಡಲಿಲ್ಲ. ನಗುತ್ತಲೇ ಅವಳು “ ಕ್ಷಮಿಸಿರಿ, ನನಗೆ ನಗೆ ತಡೆಯುಲಾಗಲಿಲ್ಲ ” ಎಂದಳು.

“ No mention please” (ಹೇಳುವ ಅಗತ್ಯವಿಲ್ಲ.) ನಾವಿಬ್ಬರೂ ಆಂಗ್ಲ ಶಿಷ್ಟಾಚಾರದ ಕಾಲೇಜ ರೂಢಿಯ ಉತ್ತರವಿತ್ತೆವು. ಅಷ್ಟು ಹೇಳಿ ನಾನು “ ನಾವು ಇಲ್ಲಿಗೆ ಇದೇ ಮೊದಲ ಬಾರಿ ಬಂದದ್ದು. ಹಾಗಾಗಿ ದಾರಿ ಸರಿಯಾಗಿ ತಿಳಿಯದೆ ಮುಂದೆ ಹೋದವರು ಹಿಂದಿರುಗಿದೆವು. ” ಎಂದು

ಹೇಳಿ ನಾವು ಮರಳಿ ಅವಳಿದ್ದೆಡೆಗೆ ಬಂದದಕ್ಕೆ ಕಾರಣವನ್ನು ಹೇಳುವ ಪ್ರಯತ್ನ ಮಾಡಿದೆನು.

"ದಾರಿ ತಿಳಿಯುವದು ಏನೂ ಕಠಿಣವಲ್ಲ," ಅವಳು ಅತೀಸಲಿಗೆಯ ಸ್ವರದಲ್ಲಿ ಉತ್ತರಿಸಿದಳು "ಆದರೆ, ಎಲ್ಲಿಗೆ ಹೋಗಬೇಕೆಂಬುದು ಮಾತ್ರ ನಿಶ್ಚಿತವಿರಬೇಕು.' ಇದನ್ನು ಹೇಳಿ ಪುನಃ ಆದೇ ತುಂಟ ನಗು.

ಅವಳ ನಿರ್ಭೀತ ಸರಳತೆಯು ನನ್ನಲ್ಲಿಯೂ ಸಲಿಗೆಯ ಸ್ಫೂರ್ತಿಯನ್ನು ಹುಟ್ಟಿಸಿತು. ಆದರೂ, ಮಾತುಗಳನ್ನು ಬೇರೆ ದಿಶೆಗೆ ತಿರುಗಿಸುವದೇ ಒಳಿತೆಂದು ನಾನು "ಎಂತಹ ಶಾಂತ ವಾತಾವರಣ! ಇನ್ನೆರಡು ದಿನಗಳಲ್ಲಿ ಬಂದರೆ ಇಲ್ಲಿ ಜನರ ಗದ್ದಲವೇ ಗದ್ದಲವಿರಬಹುದು" ಎಂದೆನು.

ಸಮ್ಮತಿಸೂಚಕವಾಗಿ ಅವಳು ತಲೆಯನ್ನು ತುಸು ಬಗ್ಗಿಸಿ "ನಿಮಗೂ ಅದು ಗೊತ್ತಿದೆ" ಎಂದು ಪುನಃ ಕೆಣಕುವ ಮಾತನ್ನಾಡಿ ತಿರುಗೊಮ್ಮೆ ಅದೇ ತುಂಟತನದ ನಗುವನ್ನು ನಕ್ಕಳು.

ಇವಳು ಯಾರಾಗಿರಬಹುದು? ಎಂದು ನನ್ನನ್ನು ನಾನೇ ಕೇಳಿಕೊಂಡೆನು. ಕುಲೀನ ಕುಟುಂಬದ ಯುವತಿಯರು ಈ ರೀತಿ ಅಪರಿಚಿತರೊಡನೆ ವರ್ತಿಸುವದು ತೀರಾ ಅಸಂಭವ. ವೇಶ್ಯೆಯಾಗಿರಬಹುದೆನ್ನಲು ಸುಸಂಸ್ಕೃತಳಂತೆ ಕಾಣಿಸುತ್ತಿದ್ದಳು. ಶ್ರೀಮಂತನೊಬ್ಬನನ್ನು ಆಶ್ರಯಿಸಿಕೊಂಡಿರುವ ಅವರುದ್ಧ ಸ್ತ್ರೀ ಇರಬಹುದೆನ್ನಲು ಅಂಥವರಿಗೆ ಸಹಜವಾದ ಆಡಂಬರದ ಉಡುಪಾಗಲಿ ಆಭರಣವಾಗಲಿ ಮೈಮೇಲೆ ಇರಲಿಲ್ಲ. ನೀಲಿ ಬಣ್ಣದ ಸಾದಾ ಸೀರೆಯನ್ನುಟ್ಟು, ನೇರಳೆ ಬಣ್ಣದ ಜೊರ್ಜೆಟಿನ ರವಿಕೆಯನ್ನು ತೊಟ್ಟಿದ್ದಳು. ಕೊರಳಲ್ಲಿ ಹಸ್ತಿದಂತದ ಮಣಿಗಳ ಒಂದು ಸರ ಹಾಗೂ ಕೈಯಲ್ಲಿ ಅದೇ ನೇರಳೆ ಬಣ್ಣದ ಗಾಜಿನ ಬಳೆಗಳು ಇವಲ್ಲದೆ ಬೇರೆ ಯಾವದೇ ಆಭರಣಗಳಿರಲ್ಲ.

ಈ ಆಡಂಬರರಹಿತ ಸಾದಾ ಉಡುಪಿನಲ್ಲೂ ಅವಳ ಸೌಂದರ್ಯವು ಒಡೆದು ಕಾಣುತ್ತಿತ್ತು. ಚಂದ್ರಪ್ರಕಾಶದಿಂದ ಬೆಳಗುವ ಕೆನೆಹಾಲಿನಂತಿದ್ದ ಅವಳ ಮುಖದ ಕಾಂತಿಗೆ ಅವಳು ಉಟ್ಟಿದ್ದ ನೀಲವರ್ಣದ ಸೀರೆಯು ಇನ್ನಷ್ಟು ಕಳೆಯನ್ನು ಕೊಟ್ಟಿತ್ತು. ಅವಳ ನೀಳವಾದ ಕೇಶರಾಶಿಯು ಅವಳ ಮೋರೆಯ ಮೋಹಕತೆಯನ್ನು ಹೆಚ್ಚಿಸುವವರಲ್ಲಿ ತಾನು ಹಿಂದಿಲ್ಲವೆಂಬು

ದನ್ನು ತನ್ನದೇ ಆದ ಸೊಬಗಿನಿಂದ ತೋರಿಸುತ್ತಿತ್ತು. ಅವಳ ಕೆನ್ನೆಗಳ ಗುಲಾಬಿ ವರ್ಣವನ್ನು ಕಂಡಾಗ ಉದ್ಯಾನದಲ್ಲಿ ಗುಲಾಬಿ ಹೂಗಳು ಅವಳ ರೂಪದಿಂದ ಆಕರ್ಷಿತವಾಗಿ ಕಮಲ ಪುಷ್ಪವನ್ನು ಮುಡಿದಿದ್ದ ಅವಳ ಜಡೆಯಲ್ಲಿ ಜಾಗ ಸಿಗದೆ ಇದ್ದುದರಿಂದ ಅವಳ ಕೆನ್ನೆಯನ್ನು ಸೇರಿವೆಯೋ ಅನಿಸುತ್ತಿತ್ತು.

ದಾರಿ ತಿಳಿಯದೆ ನಾವು ಮರಳಿದ್ದೆಂಬುದು ನಿಜವಲ್ಲವೆಂದು ಅವಳು ವ್ಯಂಗೋಕ್ತಿಯಿಂದ ಹೇಳಿದ್ದನ್ನು ಕೇಳಿ ಅವಳೊಡನೆ ಸಂಭಾಷಣೆ ಬೆಳೆಸಲು ನಾನು ಅಧೀರನಾಗಿದ್ದೆನು. ಹಾಗೂ ಹೆಚ್ಚಿನ ಪರಿಹಾಸ್ಯಕ್ಕೆ ಎಡೆಗೊಡಬಾರದೆಂದು ''ನೀವು ಏಕಾಂತದಲ್ಲಿ ಕೆಲಕಾಲ ಕಳೆಯಬೇಕೆಂದು ಇಲ್ಲಿಗೆ ಬಂದಿರಬೇಕು. ನಿಮ್ಮ ಉದ್ದೇಶವನ್ನು ಭಂಗಗೊಳಿಸಿದ್ದಕ್ಕಾಗಿ ನಮಗೆ ಕೆಡಕೆನಿಸುತ್ತದೆ. ಕ್ಷಮಿಸಿರಿ." ಎಂದೆನು ಇಷ್ಟು ಹೇಳಿ ಹೋಗಿ ಬರುತ್ತೇವೆಂಬುದರ ಸೂಚಕವಾದ ನಮಸ್ಕಾರ ಮಾಡಿ ಅಲ್ಲಿಂದ ಹೋಗಲುದ್ಯುಕ್ತನಾದೆನು.

ಇದೆಲ್ಲಾ ನಡೆಯುವಾಗ, ಶ್ರೀಧರನು ಬಾಯಿಯಿಂದ ಪಿಟ್ಟೆನ್ನದೆ ಅವಳನ್ನು ಎವೆಯಿಕ್ಕದೆ ನೋಡುತ್ತಾ ಕಲ್ಲಿನ ಗೊಂಬೆಯಂತೆ ನಿಂತಿದ್ದನು.

ಅವನು ಕದಲದೆ ನಿಂತುದನ್ನು ನೋಡಿ ನಾನು ಅವನ ಬೆನ್ನನ್ನು ಬಲವಾಗಿ ತಟ್ಟಿ, "ಶ್ರೀಧರ, ಏನಾಗಿದೆ ನಿನಗೆ ? ಹೋಗೋಣ ಇನ್ನು" ಎಂದು ಹೇಳಿ ಅವನನ್ನು ಭಾವ ಸಮಾಧಿಯಿಂದ ವಾಸ್ತವ ಜಗತ್ತಿಗೆ ನೂಕಿದೆನು.

ಇನ್ನೂ ಸಂಪೂರ್ಣವಾಗಿ ಎಚ್ಚರವಾಗದವನಂತೆ ಅವನು ಏನೂ ಮಾತಾಡದೆ ಹತ್ತು ಹದಿನೈದು ಹೆಜ್ಜೆ ನನ್ನೊಡನೆ ಬಂದನು. ಆ ಬಳಿಕ ಕನಸಿನಿಂದ ಎದ್ದವನಂತೆ ಕಣ್ಣುಗಳನ್ನು ಸವರುತ್ತ "ಅವಳು ಯಾರು?" ಎಂದು ಕೇಳಿದನು.

"ನನಗೇನು ಗೊತ್ತು? ಅವಳು ನೋಡುತ್ತಿದ್ದುದೇ ನಿನ್ನನ್ನು" ನನ್ನನ್ನಲ್ಲ." "ಹೌದೇನು? ನಿಜವೇ?" ಈ ಮಾತಿನಲ್ಲಿ ಇಷ್ಟಪ್ರಾಪ್ತಿಯ ಆನಂದವಿತ್ತು. ''ಸುಮ್ಮನೆ ಉದ್ವೇಗದಿಂದ ಹಾರ್‍ಯಾಡಬೇಡ. ನಿನ್ನ ಆತ್ಮವನ್ನು ಮದನನು ಕಿತ್ತುಕೊಂಡು ಹೋದಂತೆ ವರ್ತಿಸುತ್ತೀಯಲ್ಲಾ!''

ಶ್ರೀಧರನು ಇದಕ್ಕೆ ಉತ್ತರ ಕೊಡಲಿಲ್ಲ. ನಾನೂ ಅವನೊಡನೆ ಯಾವ ಮಾತನ್ನೂ ಆಡದೆ ಅವನನ್ನು ಅವನ ವಿಚಾರಗಳಲ್ಲೇ ಬಿಟ್ಟೆನು. ಹಾಗೆ

ನಾವು ಮೌನದಲ್ಲಿಯೇ ಐದಾರು ನಿಮಿಷಗಳ ವರೆಗೆ ನಡೆದೆವು. ಆ ಮೇಲೆ ತಾನಾಗಿಯೇ ಅವನು.—

"ನಾನು ಮೂರ್ಖನಂತೆ ವರ್ತಿಸಿದೆ, ಅಲ್ಲವೇ?" ಅಂದನು.

"ಹೌದು, ಹಾಗೆಯೇ ವರ್ತಿಸಿದಿ. ತರುಣಿಯರನ್ನು ನೋಡಿದಾಗ ಹಾಗೆ ಮಾಡಬೇಡ, ನಗಿಸಿಕೊಳ್ಳುವೆ." ಎಂದು ಹೇಳಿದೆ.

ನಾವು ಇನ್ನು ಸ್ವಲ್ಪ ದೂರ ಹೋಗುವಷ್ಟರಲ್ಲಿ ಹಿಂದಿನಿಂದ ಯಾರೋ ಬರುವ ಸಪ್ಪಳ ಕೇಳಿಸಿತು. ತಿರುಗಿ ನೋಡಿದೆವು, ಅದೇ ತರುಣಿ. ನಮಗಿಂತ ಸುಮಾರು ನೂರು ಹೆಜ್ಜೆ ಹಿಂದಿನಿಂದ ಬರುತ್ತಿದ್ದಳು. ಅವಳು ನಮ್ಮನ್ನು ಹಿಂಬಾಲಿಸಿದ್ದನ್ನು ನೋಡಿ ನಮಗೆ ಅವಳ ವಿಷಯದಲ್ಲಿ ಉತ್ಪನ್ನವಾಗಿದ್ದ ಶಂಕೆ ಅಂದರೆ ಅವಳು ಅರ್ಧತೆರೆದ ಬಾಗಿಲಿರಬೇಕೆಂಬುದು ಸರಿಯಾದ್ದೆಂದು ಅನಿಸಿತು. ಅರ್ಧ ತೆರೆದ ಬಾಗಿಲೆಂದರೆ ನಮ್ಮ ಆಗಿನ ಕಾಲೇಜ ವಿದ್ಯಾರ್ಥಿಗಳ ಭಾಷೆಯಲ್ಲಿ ತಾನು ಮೆಚ್ಚಿದವರನ್ನು ಮಾತ್ರ ಸ್ವೀಕರಿಸುವ ಉಚ್ಚ ವರ್ಗದ ವೇಶ್ಯೆ. ಆಕೆ ಒಬ್ಬಳೇ ಅಲ್ಲಿಗೆ ಬಂದುದನ್ನೂ ಅಪರಿಚಿತರಾದ ನಮ್ಮೊಡನೆ ಸಲಿಗೆಯಿಂದ ವರ್ತಿಸಿದ್ದನ್ನೂ ನೋಡಿದಾಗ ಅವಳು ಅಂತಹವಳಿರಬಹುದೆಂದು ಊಹಿಸಿದ್ದೆನು.

ಆದರೆ, ಊಹಿಸಲು ಬಲವಾದ ಕಾರಣಗಳಿದ್ದರೂ ಅದು ನಿಜವೆನ್ನಲು ನಿಸ್ಸಂಶಯವಾದ ಆಧಾರಗಳೇನೂ ಇರಲಿಲ್ಲ. ನಮ್ಮಂತೆಯೇ ಅವಳಿಗೂ ಕಾನ್ಹೇರಿ ಗುಹೆಗಳಿಗೆ ಬರುವ ಅಥವಾ ಅಲ್ಲಿಂದ ಬೇಕಾದಾಗ ಹೊರಡುವ ಸಾತಂತ್ರ್ಯವಿಲ್ಲವೇ? ಅದೂ ಅಲ್ಲದೆ ಅವಳು ಅಲ್ಲಿಗೆ ಬಂದ ದಿವಸವೆಂದರೆ ಸಾಧಾರಣವಾಗಿ ಅಲ್ಲಿ ಯಾರೂ ಬಾರದಿರುವ ದಿನ. ಶಾಂತ ವಾತಾವರಣದಲ್ಲಿ ಏಕಾಂಗಿಯಾಗಿ ಬಂದು ಹೊತ್ತು ಕಳೆಯಲು ಅ ಲ್ಲಿಗೆ ಬಂದಿರಬೇಕು. ನಾವೂ ಅದೇ ಉದ್ದೇಶದಿಂದ ಅಂದು ಬಂದಿರುವಾಗ ಅವಳು ಬಂದದ್ದಕ್ಕೆ ವಿಪರೀತ ಅರ್ಥವನ್ನು ಕಲ್ಪಿಸುವದು ಸರಿಯಾಗಲಾರದು. ದಿಟ್ಟತನದಿಂದ ನಮ್ಮೊಡನೆ ಮಾತಾಡಿದ ಮಾತ್ರಕ್ಕೆ ಅವಳ ಮೇಲೆ ನೈತಿಕ ಶಿಥಿಲತೆಯ ಆರೋಪ ಹೊರಿಸುವದು ಸಮಂಜಸವಾಗಲಾರದು.

ಈ ಪರಸ್ಪರ ವಿರೋಧಿ ವಿಚಾರಗಳಲ್ಲಿ ಮಗ್ನನಾಗಿದ್ದರೂ ಅವಳು

ಸಮೀಪ ಬಂದರೆ ಅವಳೊಡನೆ ಪುನಃ ಸಂಭಾಷಣೆ ಪ್ರಾರಂಭಿಸಲು ಶ್ರೀಧರ ನಷ್ಟೇ ನಾನೂ ಉತ್ಸುಕನಿದ್ದೆನು. ಅವಳು ನಮ್ಮ ಬಳಿ ತಡವಿಲ್ಲದೆ ತಲಪ ಬೇಕೆಂಬ ಉದ್ದೇಶದಿಂದ ನಾವು ನಮ್ಮ ನಡಿಗೆಯನ್ನು ನಿಧಾನಿಸಿದೆವು. ಆದರೆ, ಅದನ್ನು ನೋಡಿ ಅವಳೂ ತನ್ನ ನಡಿಗೆಯನ್ನು ಅಷ್ಟೇ ನಿಧಾನಿಸಿದಳು. ನಾವು ಎಷ್ಟೇ ಮೆಲ್ಲನೆ ಹೆಜ್ಜೆ ಹಾಕಿದರೂ ಅವಳು ನಮ್ಮಿಂದ ನೂರು ಹೆಜ್ಜೆ ಯಷ್ಟೇ ಹಿಂದೆ ಇರುತ್ತಿದ್ದಳು.

ನಾವು ಕಾನ್ಹೇರಿ ಗುಹೆಗಳ ಉದ್ಯಾನದ ಹೊರಗೆ ಬಂದು ಹಿಂತಿರುಗಿ ನೋಡಿದಾಗ ಅವಳು ಕಾಣಿಸಲಿಲ್ಲ. ಉದ್ಯಾನದ ಬಾಗಿಲಲ್ಲಿ ಹಣ್ಣಿನ ಬುಟ್ಟಿ ಯನ್ನು ಹಿಡಿದುಕೊಂಡು ಒಬ್ಬ ಚಿಕ್ಕ ಹುಡುಗಿಯು ಉದ್ಯಾನದೊಳಗೆ ಯಾ ರನ್ನೋ ಹುಡುಕುತ್ತಿರುವಂತೆ ನೋಡುತ್ತಾ ನಿಂತಿದ್ದಳು. ಆ ತರುಣಿಯನ್ನೇ ಅವಳು ಹುಡುಕುತ್ತಿರಬೇಕೆಂದು ನಮಗೆ ಗ್ರಹಿಕೆಯಾಗಿ ನಾವು "ಉದ್ಯಾನ ದೊಳಗೆ ಇದ್ದ ತರುಣಿ ಯಾರೆಂದು ಗೊತ್ತೆ?" ಎಂದು ಅವಳನ್ನು ಕೇಳಿದೆವು. "ಅವಳು ನಮ್ಮ ಯಜಮಾನಿ." ಎಂದಿಷ್ಟೇ ಹೇಳಿ ಆ ಹುಡುಗಿಯು ಉದ್ಯಾನ ದೊಳಗೆ ಓಡಿದಳು.

ನಾವು ಬರುವಾಗ ತಂದಿದ್ದ ತಿಂಡಿಯಲ್ಲಿ ಸ್ವಲ್ಪ ಉಳಿದಿತ್ತು. ಆ ತರು ಣಿಯನ್ನು ನೋಡಿದ ಸಂಭ್ರಮದಲ್ಲಿ ನಾವು ಅದನ್ನು ಪೂರ್ಣ ಮರೆತೇ ಬಿಟ್ಟಿ ದ್ದೆವು. ಹೊರಗೆ ಬಂದ ಬಳಿಕ ಅವಳನ್ನು ಪುನಃ ಕಾಣುವ, ಮಾತ್ರವಲ್ಲದೆ ಅವಳು ಯಾರೆಂದು ತಿಳಿಯುವ ಸಂಧಿಯು ಸಹ ದೂರ ಸರಿದ ಮೇಲೆ ಆ ತಿಂಡಿಯ ನೆನಪಾಗಿ ಅದನ್ನು ತಿಂದು ತೀರಿಸಲು ತಿರುಗೊಮ್ಮೆ ಉದ್ಯಾನ ದೊಳಗೆ ಹೋದೆವು. ಆ ಕೆಲಸವನ್ನು ಮುಗಿಸಿ ಪುನಃ ಹೊರಗೆ ಬಂದಾಗ ಉದ್ಯಾನದ ಪ್ರವೇಶದ್ವಾರದ ಬಳಿ ಒಂದು ಕಡು ನೀಲಿವರ್ಣದ ಸುಂದರ ವಾದ ಮೋಟಾರ ನಿಂತಿತ್ತು. ನಾವು ನೋಡಿದ ಆ ತರುಣಿ, ಇನ್ನೊಬ್ಬ ಮ ಧ್ಯಮ ವಯಸ್ಸನ್ನು ದಾಟಿದ ಸ್ತ್ರೀ ಹಾಗೂ ಹಣ್ಣಿನ ಬುಟ್ಟಿಯನ್ನು ಹಿಡ ಕೊಂಡಿದ್ದ ಹುಡುಗಿ, ಈ ಮೂವರೂ ಆ ಮೋಟಾರಿನ ಹತ್ತಿರ ನಿಂತಿದ್ದರು. ಆ ತರುಣಿಯ ಅಸಮಾಧಾನದ ಉದ್ಗಾರಗಳಿಂದ ಡ್ರೈವರನು ಎಲ್ಲಿಗೋ ಹೋಗಿದ್ದಿರಬೇಕೆಂಬುದು ಗೊತ್ತಾಗುತ್ತಿತ್ತು.

ಆ ಹಿರೇ ಪ್ರಾಯದ ಹೆಂಗಸು ಅವಳನ್ನು ಸಮಾಧಾನಪಡಿಸುತ್ತಿದ್ದಳು. "ನಾವು ಬರಲು ಇನ್ನೂ ವಿಳಂಬವಿದೆಯೆಂದು ಗ್ರಹಿಸಿ ಎಲ್ಲಿಯಾದರೂ ಬೀಡಿ ಸೇದಲಿಕ್ಕೆ ಹೋಗಿರಬಹುದು. ಬಂದಾನು ಈಗಾಗಲೇ."

ನಮಗೆ ಅದು ತೀರಾ ಸಂಕೋಚದ ಕ್ಷಣವಾಗಿತ್ತು. ನಾವು ಆ ತರುಣಿಯ ಹತ್ತಿರವೇ ನಿಂತಿದ್ದೆವು. ಹಾಗಿರುವಾಗ, ಉದ್ಯಾನದೊಳಗೆ ಮಾತಾಡಿ ಪರಿಚಯವಾಗಿರುವಾಗ, ಇಲ್ಲಿ ಬಾಯಿ ತೆರೆಯದೆ ಅವಳ ಕಡೆಗೆ ಸಂಪೂರ್ಣ ದುರ್ಲಕ್ಷ ಮಾಡುವದು ಶಿಷ್ಟಾಚಾರವಾಗಿರಲಿಲ್ಲ. ಆದರೆ, ಅವಳ ಜೊತೆಯಲ್ಲಿ ವಯಸ್ಸಾದ ಇನ್ನೊಬ್ಬ ಹೆಂಗಸಿರುವಾಗ, ನಾವಾಗಿ ಮಾತಾಡಿಸುವದು ಯೋಗ್ಯವಾಗಿರಲಿಲ್ಲ. ಹಾಗಾಗಿ ಏನು ಮಾಡಬೇಕೆಂದು ಹೊಳೆಯದೆ ಅನಿಶ್ಚಿತ ಮನಃಸ್ಥಿತಿಯಲ್ಲಿದ್ದೆವು.

ನಮ್ಮ ಸಮಸ್ಯೆಯನ್ನು ಅವಳೇ ಬಗೆಹರಿಸಿದಳು. "ನೀವು ಕಾಲೇಜ ವಿದ್ಯಾರ್ಥಿಗಳೇನು?" ಎಂದು ಅವಳೇ ಮಾತನ್ನು ಪ್ರಾರಂಭಿಸಿದಳು.

ಶ್ರೀಧರನ ಮೋರೆಯು ಲಜ್ಜೆಯಿಂದ ಗುಲಾಬಿಯಾಯಿತು. "ಹೌದು, ಬಾಯಿಯವರೇ" ಎಂದು ಒಡನೆಯೇ ಉತ್ತರಿಸಿದನು.

"ನಾವು ಕಾಲೇಜ ವಿದ್ಯಾರ್ಥಿಗಳೆಂದು ನಿಮಗೆ ಹೇಗೆ ಗೊತ್ತಾಯಿತು?" ಸಾಶಂಕವಾಗಿ ನಾನೆಂದೆ.

"ನಿಮ್ಮ ಬುಶ್-ಕೋಟು ಕಾಣಿಸುವದಿಲ್ಲವೇ ನನಗೆ?" ಮೊದಲಿನ ಆ ಮೋಹಕ ನಗುವಿನೊಡನೆ ಈ ಉತ್ತರ ಬಂತು. (ಬುಶ್-ಕೋಟು ಆ ಕಾಲದಲ್ಲಿ ಕಾಲೇಜ ವಿದ್ಯಾರ್ಥಿಗಳ ದ್ಯೋತಕವಾಗಿತ್ತು) ಅಷ್ಟರಲ್ಲಿ ಡ್ರೈವರನು ಎಲ್ಲಿಂದಲೊ ಓಡ್ಯೋಡಿ ಬಂದು ಮೋಟಾರಿನ ಬಾಗಿಲು ತೆರೆದನು. ಆ ತರುಣಿಯೂ ಉಳಿದ ಇಬ್ಬರು ಹೆಂಗಸರೂ ಹತ್ತಿ ಒಳಗೆ ಕೂತರು. ಮೋಟಾರ ಹೊರಡಲಣಿಯಾಗಿ ಎಂಜಿನದ ಶಬ್ದ ಸುರುವಾದಾಗ ಅವಳು ನಮ್ಮ ಕಡೆಗೆ ನೋಡಿ ತಿರುಗೊಮ್ಮೆ ಆ ಆಕರ್ಷಕ ನಗುವಿನ ಔತಣವನ್ನು ನಮಗೆ ಉಣ್ಣಿಸಿದಳು.

ಮೋಟಾರ ಮುಂದೆ ಸಾಗಿತು. ಅದು ಹಾರಿಸಿದ ಧೂಳನ್ನು ನೋಡುತ್ತಾ ನಮ್ಮ ಅಂಜುಬುರುಕತನಕ್ಕೆ ನಾವೇ ನಮ್ಮನ್ನು ಮನಸ್ಸಿನಲ್ಲಿ ಹಳಿದು

ಕೊಂಡೆವು. ಯಾಕಂದರೆ, ಈ ಅರ್ಧತಾಸಿನ ಸಹವಾಸದಲ್ಲಿ ಅವಳು ನಮ್ಮ ಮೇಲೆ ಅಚ್ಚಳಿಯದ ಪರಿಣಾಮವನ್ನುಂಟುಮಾಡಿದ್ದರೂ ನಾವು ಅವಳೊಡನೆ ಅವಳ ಹೆಸರನ್ನು ಸಹ ಕೇಳಿದ್ದಿಲ್ಲ. ನಮ್ಮ ಪರಿಚಯುವನ್ನೂ ಕೊಟ್ಟಿರಲಿಲ್ಲ. ಅವಳ ವಿಷಯ ನಮಗೆ ತಿಳಿದದ್ದೆಂದರೆ, ಅವಳು ಕಡುನೀಲಿ ವರ್ಣದ ಕಾರಿನಲ್ಲಿ ಅಡ್ಡಾಡುವವಳೆಂಬುದು ಮಾತ್ರ. ಅನಪೇಕ್ಷಿತ ನವ ಅನುಭವದ ಗಡಿಬಿಡಿ ಯಲ್ಲಿ ನಾವು ಆ ಕಾರಿನ ನಂಬರವನ್ನೂ ಕೂಡ ನೋಡಿ ನೆನಪಿನಲ್ಲಿಡಲಿಲ್ಲ.

ಆ ಡ್ರೈವರನು ಇನ್ನೈದು ನಿಮಿಷ ತಡಮಾಡಿ ಬರಬಾರದಿತ್ತೇ? ಆದರೆ ನಮಗೆ ಆ ಐದು ನಿಮಿಷಗಳು ಎಷ್ಟು ಮಹತ್ವದವಿದ್ದುವೆಂದು ಆ ಅರಸಿಕ ನಿಗೇನು ಗೊತ್ತು?

ಉದ್ಯಾನದ ಕಾವಲುಗಾರನ ಕಡೆ ಹೋಗಿ ನಾವು ಒಳಗೆ ಹೋಗು ವಾಗ ಅವನ ವಶಕ್ಕೆ ಕೊಟ್ಟ ಸೈಕಲುಗಳನ್ನು ಮರಳಿ ಪಡೆಯುವಾಗ ನಾನು ಅವನೊಡನೆ ಕೇಳಿದೆ "ಈಗ ಕಾರಿನಲ್ಲಿ ಹೋದ ತರುಣಿ ಯಾರು? ಮುಂಬ ಯಿಯ ಯಾವದಾದರೂ ಪ್ರಸಿದ್ಧ ಮನೆತನದವಳಿರಬೇಕು."

ಕಾವಲುಗಾರನು ನಕ್ಕನು. "ಪ್ರಸಿದ್ಧ ಮನೆತನ! ಗೊತ್ತೇ ಇಲ್ಲೇನು ನಿಮಗೆ? ಅವಳು ಕುಮಾರಿ ಸುನೇತ್ರಾದೇವಿ. ಅಪ್ಸರಾ ಮಂದಿರದ ನಂಬರ ೨. ಆ ಹಿರೇ ವಯಸ್ಸಿನವಳು ಮಾತೆ."

"ಅಪ್ಸರಾ ಮಂದಿರ ಹಾಗೂ ಸುನೇತ್ರಾದೇವಿಯ ಹೆಸರು ಕೇಳಿದ್ದೇನೆ. ಆದರೆ ಆ ಮಂದಿರವನ್ನು ಕಂಡಿಲ್ಲ. ಸುನೇತ್ರಾದೇವಿಯನ್ನು ನೋಡುವ ಸು ಯೋಗವೂ ಈ ವರೆಗೆ ಲಭಿಸಿರಲಿಲ್ಲ. ಸುನೇತ್ರಾದೇವಿಯ ತಾಯಿಯೂ ಅದೇ ಮಂದಿರದಲ್ಲಿದ್ದಾಳೆಂಬುದೂ ಗೊತ್ತಿರಲಿಲ್ಲ."

ಕಾವಲುಗಾರನು ಪುನಃ ಜೋರಿನಿಂದ ನಕ್ಕನು. "ತಾಯಿಯೆಂದರೆ ಅವಳನ್ನು ಹೊಟ್ಟೆಯಲ್ಲಿ ಒಂಬತ್ತು ತಿಂಗಳು ಹೊತ್ತು ಹೆತ್ತ ತಾಯಿಯಲ್ಲ. ಅವಳು ಅಪ್ಸರಾ ಮಂದಿರವನ್ನು ನಡೆಸುವ ಚಾಲಕಳು. ಅಲ್ಲಿರುವ ತರುಣಿ ಯರೆಲ್ಲರೂ ಅವಳನ್ನು ಮಾತೆಯೆಂದೇ ಸಂಬೋಧಿಸುತ್ತಾರೆ."

ಅವನ ಮಾತುಗಳಿಂದ ಹಾಗೂ ಮುಖಭಾವದಿಂದ ಸುನೇತ್ರಾದೇ ವಿಯ ಬಗ್ಗೆ ಅವನಿಗೆ ಆದರವಿದ್ದಂತೆ ತೋರಿತು. ಅವನು ಮುಂದೆ ಹೇಳಿದನು

"ಸುನೇತ್ರಾ ದೇವಿಯವರು ಇತರ ಕಸಬಿಣಿಯವರಂತೆ ಅಲ್ಲ. ಒಳ್ಳೇ ರಸಿಕರು. ಇಲ್ಲಿ ವರ್ಷಕ್ಕೆ ಐದಾರು ಸಾರೆಯಾದರೂ ಬರುತ್ತಾರೆ. ಯಾವಾಗಲೂ ಬರುವದು ಪ್ರೇಕ್ಷಕರು ಬಾರದಿರುವ ದಿನ ನೋಡಿ. ಅಪ್ಸರಾ ಮಂದಿರದ ಜೀವನದ ಬೇಸರವಾದಾಗ ಅವಳಿಗೆ ಪ್ರಶಾಂತ ಸ್ಥಳದಲ್ಲಿ ಏಕಾಂತದ ವಿಶ್ರಾಂತಿಯ ಆಸೆಯಾಗುತ್ತಿರಬೇಕು. ಅಂತೆಯೇ ಇಲ್ಲಿಗೆ ಇವತ್ತಿನಂತಹ ಪ್ರೇಕ್ಷಕರಿಲ್ಲದ ದಿನಗಳಲ್ಲಿ ಬರುತ್ತಾರೆ."

ನಾವು ಅವನಿಗೆ ಕೊನೆಯದಾಗಿ ಚಹಾದ ಸಲುವಾಗಿ ಬಕ್ಷೀಸು ಕೊಡುವಾಗ ಅವನು "ನಿಮ್ಮ ಕಾಲೇಜ ಹುಡುಗರದು ಮೋಜು ಎನಿಸುತ್ತದೆ. ಅವಳೊಡನೆ ಸಲಿಗೆಯಿಂದ ಮಾತಾಡುತ್ತಿದ್ದಿರಿ." ಆದರೂ ಪರಿಚಯ ಮಾಡಿಕೊಳ್ಳಲಿಲ್ಲ. ಅವಳು ಯಾರೆಂದು ನನ್ನೊಡನೆ ಕೇಳುತ್ತೀರಿ? ಆಗಲಿ, ಚಿಂತೆ ಇಲ್ಲ. ಇನ್ನೊಮ್ಮೆ ಬನ್ನಿರಿ. ದೇವರು ಮನಸ್ಸು ಮಾಡಿದರೆ ಪುನಃ ಅವಳನ್ನು ಕಾಣುವಿರಂತೆ." ಎಂದು ಹೇಳಿ ಸಲಾಂ ಮಾಡಿದನು.

ತರಂಗ ೪

ಈ ಎರಡು ಪ್ರಣಯಿಗಳ ಪ್ರಥಮ ಮಿಲನವನ್ನು ಆ ಐತಿಹಾಸಿಕ ಅವಶೇಷಗಳ ಪಾರ್ಶ್ವಭೂಮಿಯ ಮುಂದೆ ಮಾಡಿಸುವದರಲ್ಲಿ ಹಾಗೂ ನನ್ನನ್ನು ಅದರ ಸಾಕ್ಷಿಯಾಗಿ ಇಡುವದರಲ್ಲಿ ವಿಧಿಯ ವೈಚಿತ್ರ್ಯ ಏನಿತ್ತೋ? ಯಾರ ದುರ್ವಿಧಿಯು ನಮ್ಮನ್ನು ಆ ದಿನ ಅವಳು ಬರುವ ವೇಳೆಯಲ್ಲೇ ಅಲ್ಲಿಗೆ ಕರೆದೊಯ್ದಿತು? ಈ ಅದೃಷ್ಟದ ಒಗಟನ್ನು ಬಿಡಿಸಲು ನಾನು ಸಮರ್ಥನಲ್ಲ. ಆ ರೀತಿಯಲ್ಲಿ ಅವರ ಮಿಲನವಾಗಿ ಅವರು ಒಬ್ಬರನ್ನೊಬ್ಬರು ಪ್ರೇಮಿಸಬೇಕೆಂಬುದು ದೈವ ಸಂಕಲ್ಪವಾಗಿದ್ದರೆ ಅಂಥ ದೈವೀ ಪ್ರೇಮವು ಯಾಕೆ ಇಂಥ ದುಃಖ ದುರಂತದಲ್ಲಿ ಕೊನೆಗೊಳ್ಳಬೇಕು? ಕುಮಾರಿ ಸುನೇತ್ರಾ ದೇವಿಯ ಶೋಚನೀಯ ಅಂತ್ಯದ ಸುದ್ದಿ ಕೇಳಿದಂದಿನಿಂದ ನನ್ನ ಮನಸ್ಸಿನಲ್ಲಿ ಇದೇ ವಿಚಾರಗಳು ಮೇಲಿಂದ ಮೇಲೆ ಬರುತ್ತಿರುವವು. ತರುಣ-ತರುಣಿಯರೊಳಗಿನ ಪ್ರೇಮವು ದಂಡನೆಗೆ ಅರ್ಹವಾದ ಪಾಪ ಕೃತ್ಯವೇ? ಅಥವಾ

ಅಗಾಧ ಪ್ರೇಮ ಮಾಡುವವರು ಯಾವಾಗಲೂ ಶೋಕದಲ್ಲಿ ಮುಳುಗಿರ ಬೇಕೇ? ದುರಂತ ಮಾತ್ರವೇ ಅಗಾಧ ಪ್ರೇಮದ ಅಮರತ್ವವನ್ನು ಎತ್ತಿ ತೋರಿಸುವದೇ? ಅಥವಾ ದುರಂತವನ್ನು ಎದುರಿಸುವ ಧೈರ್ಯವನ್ನು ಅಗಾಧ ಪ್ರೇಮ ಮಾತ್ರ ಕೊಡಬಲ್ಲುದೇ? ನಾವು ಮಾನವರೆಲ್ಲರೂ ಜಗನ್ನಿಯಾಮಕ ಶಕ್ತಿಯು ಬೇಕಾದಂತೆ ಕುಣಿಸಬಹುದಾದ ಸೂತ್ರದ ಗೊಂಬೆಗಳೇ? ಅಥವಾ ಸುನೇತ್ರಾದೇವಿಯು ಗತಜನ್ಮಗಳಲ್ಲಿ ಮಾಡಿದ ಪಾಪಕರ್ಮಗಳಿಗಾಗಿ ಈ ಜನ್ಮದಲ್ಲಿ ದುರಂತವನ್ನು ಸಹಿಸಬೇಕಾಯಿತೇ?

ಸುನೇತ್ರಾದೇವಿಯು ಶ್ರೀಧರನಲ್ಲಿ ಇಟ್ಟಿದ್ದ ಪ್ರೇಮವು ಅಷ್ಟು ಅಗಾಧವಲ್ಲದಿದ್ದರೆ ಅವಳು ಸಾವನ್ನು ಆಶ್ರಯಿಸಬೇಕಾಗಿ ಬರುತ್ತಿರಲಿಲ್ಲ. ಬಟ್ಟೆಗಳನ್ನು ಬದಲಿಸುವಂತೆ ಪ್ರಿಯಕರರನ್ನು ಬದಲಿಸುವದು, ಒಬ್ಬನನ್ನು ತ್ಯಜಿಸಿ ಇನ್ನೊಬ್ಬನನ್ನು ಸ್ವೀಕರಿಸುವದು ವೇಶ್ಯೆಯರ ಜೀವನದ ದೈನಂದಿನ ಅನುಭವ. ಸುನೇತ್ರಾದೇವಿಯು ಈ ಜಗತ್ತಿನಲ್ಲಿ ಇನ್ನೂ ಕೆಲವು ವರ್ಷಗಳನ್ನು ಕಳೆದ ಮೇಲೆ ಶ್ರೀಧರನ ಭೆಟ್ಟಿಯಾಗಿದ್ದರೆ ಆಕೆಯ ಪ್ರೇಮವು ಇಂಥ ಎಲ್ಲವನ್ನು ಮರೆಯುವ ಸರ್ವವ್ಯಾಪಿಸ್ವರೂಪಕ್ಕೆ ತಲಪುತ್ತಿರಲಿಲ್ಲ. ಮೊದಲು ಒಂದೆರಡು ಸಾರೆಯ ಸಂದರ್ಶನಗಳ ನಂತರ ಅವರು ಕಾರಣಾಂತರಗಳಿಂದ ಒಬ್ಬರನ್ನೊಬ್ಬರು ಸಂಪೂರ್ಣವಾಗಿ ಅಗಲಿದ್ದರೂ ಈ ದುರಂತವು ತಪ್ಪುತ್ತಿತ್ತು. ಶ್ರೀಧರನನ್ನು ಪ್ರೀತಿಸುವಾಗ ಅವಳು ತನ್ನದೆಂದಿದ್ದ ಎಲ್ಲವನ್ನು ಅವನಿಗೆ ಅರ್ಪಿಸಿದಳು. ಹಾಗೂ ತನ್ನ ಭಾವೀ ಜೀವನದ ಸ್ವಪ್ನ ಸಾಮ್ರಾಜ್ಯವನ್ನು ಅವನ ಸುತ್ತಲೇ ಕಲ್ಪಿಸಿದಳು. ಆ ಕನಸಿನ ಮನೆ ಕುಸಿದು ಬಿದ್ದಾಗ ಅವಳ ಜೀವನದ ಉಸಿರೇ ಹೋದಂತಾಯಿತು. ಬಲಿದಾನವಲ್ಲದೇ ಅವಳಿಗೆ ಬೇರೆ ದಾರಿ ಉಳಿಯಲಿಲ್ಲ.

ಉದ್ಯಾನದ ಕಾವಲುಗಾರನು ನಮ್ಮೊಡನೆ ಮಾತನಾಡಿದ ತರುಣಿಯು ಅಪ್ಸರಾ ಮಂದಿರದ ಸುನೇತ್ರಾದೇವಿ ಎಂದು ಹೇಳಿದಾಗ ನನಗೆ ಅತಿ ಆಶ್ಚರ್ಯವಾಯಿತು. ಅವಳನ್ನು ಕಂಡದ್ದು ಹಾಗೂ ಅವಳೊಡನೆ ಒಂದೆರಡು ಮಾತುಗಳನ್ನಾಡಿದ್ದು ನಮ್ಮ ವಿದ್ಯಾರ್ಥಿ ಜೀವನದ ಒಂದು ವಿಶೇಷ ಅನುಭವವಾಗಿತ್ತು. ಅದರಿಂದ ನಾವು ನಿಜವಾಗಿಯೂ ರೋಮಾಂಚಗೊಂಡೆವು.

ಶ್ರೀಧರನು ಏಕಾಗ್ರತೆಯಿಂದ ಅವಳ ಮೋಟಾರು ಹೋದಕಡೆಗೆನೇ ನೋಡುತ್ತ ನಿಂತುದನ್ನು ಕಂಡು ನಾನು "ಶ್ರೀಧರ, ಸುನೇತ್ರೆ ಎಂದರೆ ಅಪ್ಸರೆ. ನಮ್ಮಂತಹ ಮಾನವರ ಕೈಗೆ ಎಟಕುವವಳಲ್ಲ" ಎಂದು ಹೇಳಿದೆನು. "ಏನು ಅನ್ನುತ್ತೀ?" ಎಂದಷ್ಟೇ ಶ್ರೀಧರನು ಉತ್ತರಿಸಿದನು. ಆದರೆ ದೃಷ್ಟಿಯನ್ನು ತಿರುಗಿಸಲಿಲ್ಲ. "ಅಹ್ಲೋ, ಅವಳು ಅಪ್ಸರಾ ಮಂದಿರದ ಪ್ರಖ್ಯಾತ ತಾರೆ. ನಮ್ಮಂಥವರಿಗೆ ಅವಳ ಸಂದರ್ಶನ ಸಹ ದುರ್ಲಭ.'' ಎಂದೆನು. ಶ್ರೀಧರನು ಏನೂ ಮಾತಾಡಲಿಲ್ಲ.

ನಿಜವಾಗಿಯೂ ಅಂತಹ ಪ್ರಖ್ಯಾತ ವೇಶ್ಯೆಯೊಡನೆ ಸಂಪರ್ಕಕ್ಕಾಗಿ ಹಾತೊರೆಯುವದೆಂದರೆ ಮೂರ್ಖತನದ ಪರಮಾವಧಿಯಾಗಿತ್ತು. ಮುಂಬಯಿಯ ಉಚ್ಚ ಶ್ರೇಣಿಯ ಐದಾರು ವೇಶ್ಯೆಯರಲ್ಲಿ ಅವಳು ಪರಿಗಣಿಸಲ್ಪಡುತ್ತಿದ್ದಳು. ಅಪ್ಸರಾ ಮಂದಿರದ ತಾರೆಯಲ್ಲಿ ಆಕೆಗೇನೇ ಪ್ರಥಮ ಸ್ಥಾನವಿತ್ತು. ಮುಂದೆ ಅವಳ ಪರಿಚಯವಾದ ಬಳಿಕ ಅವಳ ಜೀವನದ ಎಲ್ಲಾ ಸಂಗತಿಗಳೂ ನಮಗೆ ತಿಳಿದು ಬಂದವು. ಆಕೆಯು ತಂದೆ-ತಾಯಿಗಳನ್ನು ಚಿಕ್ಕಂದಿನಲ್ಲಿಯೇ ಕಳೆದುಕೊಂಡಿದ್ದಳು. ಹನ್ನೆರಡು ವರ್ಷದವಳಿರುವಾಗ ಆಕೆಯ ಅತ್ತಿಗೆಯು ಆಕೆಯನ್ನು ವೇಶ್ಯಾಗೃಹಕ್ಕೆ ವಿಕ್ರಯಿಸಿದ್ದಳು. ಬೇರೆ ಗತಿ ಕಾಣದೆ ಆಕೆ ಅಲ್ಲಿಯೇ ಇರಬೇಕಾಯಿತು. ಅಲ್ಲಿ ಗಾಯನವನ್ನೂ ನರ್ತನವನ್ನೂ ಕಲಿತಳು. ಅವಳ ಸೌಂದರ್ಯ, ಕಂಠಮಾಧುರ್ಯ, ಗಾಯನ ಹಾಗೂ ನಟನಾಚಾತುರ್ಯ ಇವುಗಳಿಂದ ಅವಳು ಅತ್ಯಂತ ಜನಪ್ರಿಯಳಾದಳು. ಪ್ರಾಪ್ತೇ ಷೋಡಶೇ ವರ್ಷೇ, ಅವಳು ಅಪ್ಸರಾಮಂದಿರಕ್ಕೆ ಬರುವ ಶ್ರೀಮಂತ ಗಿರಾಕಿಗಳ ಉಪಭೋಗದ ವಸ್ತುವಾದಳು. ಶ್ರೀಧರನ ಪರಿಚಯವಾಗುವಾಗ ಅವಳಿಗೆ ಬೇರೆ ಬೇರೆ ವರ್ಗಗಳ ನಾನಾ ವಿಧದ ಪುರುಷರ ಅನುಭವವಾಗಿತ್ತು. ಒಬ್ಬ ಉಚ್ಚ ಸರಕಾರಿ ಅಧಿಕಾರಿಯು ಆಕೆಯನ್ನು ತನ್ನ ಅವರುದ್ಧ ಸ್ತ್ರೀಯಾಗಿ ಇಟ್ಟುಕೊಳ್ಳಲು ಬೇಡಿಕೆಯನ್ನು ಮಾಡಿದ್ದನು. ಆದರೆ ಅವಳು ಆ ಬೇಡಿಕೆಯನ್ನು ತಿರಸ್ಕರಿಸಿದ್ದಳು. ಮುಂಬಯಿಯ ಒಬ್ಬ ಪ್ರಖ್ಯಾತ ಕವಿಯು ಅವಳ ರೂಪಕ್ಕೂ ಗಾಯನಕ್ಕೂ ಮರುಳಾಗಿ ಅವಳ ಕುರಿತು ಕೆಲವು ಸುಂದರ ಕವಿತೆಗಳನ್ನು ಬರೆದಿದ್ದನು. ಎಲ್ಲರ

ಬಾಯಲ್ಲಿಯೂ ನಲಿಯುತ್ತಿರುವ ಆ ಕವಿತೆಗಳಿಂದ ಅವಳ ಹೆಸರು ಎಲ್ಲ ಕಡೆಗಳಲ್ಲಿಯೂ ಹಬ್ಬಿತು. ಅವಳ ಬರಿಯ ಪರಿಚಯ ಮಾಡಿಕೊಳ್ಳಲಿಕ್ಕಾಗಿ ಮಂದಿ ಹಾತೊರೆಯಲಾರಂಭಿಸಿದರು. ಅವಳ ಬರಿಯ ದರ್ಶನಕ್ಕಾಗಿ ಜನರು ಹಣ ಸುರಿಯಲು ಸಿದ್ಧರಾದರು. ಮಹಾರಾಜರಿಗೆ ಅಥವಾ ಇತರ ದೊಡ್ಡ ವ್ಯಕ್ತಿಗಳಿಗೆ ಕೊಡುವ ಮೇಜವಾನಿಗಳಲ್ಲಿಯೂ ಶ್ರೀಮಂತ ಮದುವೆ-ಮುಂಜಿಗಳಲ್ಲಿಯೂ ಅವಳ ಗಾಯನದ ಕಾರ್ಯಕ್ರಮವು ರೂಢಿಯಾಗಿಬಿಟ್ಟಿತ್ತು. ನಿತ್ಯವೂ ಅಪ್ಸರಾಮಂದಿರದ ಬಾಗಿಲಿನಲ್ಲಿ ಅವಳ ಸಂದರ್ಶನಕ್ಕಾಗಿ ಬಂದಿದ್ದ ಶ್ರೀಮಂತರ ಮೋಟಾರು ವಾಹನಗಳ ಸಾಲಿಗೆ ಸಾಲೇ ಇರುತ್ತಿತ್ತು. ಇವಳಿಂದಾಗಿ ಅಪ್ಸರಾಮಂದಿರದ ಚಾಲಕಳು ಹೇರಳ ಹಣ ಗಳಿಸಿದಳು.

ಆದರೆ ಇದರಿಂದ ಸುನೇತ್ರಾದೇವಿಗೆ ಶಾಂತಿಯೇ ದುರ್ಲಭವಾಯಿತು. ಗಿರಾಕಿಗಳ ಸಂಖ್ಯೆ ಬೆಳೆದಂತೆ ಅವರೆಲ್ಲರನ್ನು ತೃಪ್ತಿಗೊಳಿಸುವ ಕಾರ್ಯದಲ್ಲಿ ಆಕೆ ಸೋತು ಸುಣ್ಣವಾದಳು. ಇದರ ಪರಿಣಾಮವಾಗಿ ಆಕೆ ತನ್ನ ವೃತ್ತಿಗೆ ಅವಶ್ಯವಾದ ವಿನಯವನ್ನು ಆಗಾಗ ಮರೆಯಹತ್ತಿದಳು. ಕೆಲವು ಗಿರಾಕಿಗಳನ್ನೂ ತಿರಸ್ಕರಿಸತೊಡಗಿದಳು. ಇದರಿಂದ ಆಕೆ ಗರ್ವಿಷ್ಠಳೆಂದೂ ಸುಲಭದಲ್ಲಿ ಯಾರಿಗೂ ಒಲಿಯುವವಳಲ್ಲವೆಂದೂ ಪ್ರತೀತಿ ಹಬ್ಬಿತು. ಆದರೆ ಜನರ ವಿಚಿತ್ರ ಪ್ರವೃತ್ತಿ ಎಂದರೆ ಅವಳ ವರ್ಚಸ್ಸು ಬೆಳೆಯಿತಲ್ಲದೆ ಕುಗ್ಗಲಿಲ್ಲ.

ಅಪ್ಸರಾ ಮಂದಿರವು ಇಡೀ ಮುಂಬಯಿ ಶಹರದಲ್ಲಿ ಹೆಸರುವಾಸಿಯಾದ ಉಚ್ಚಶ್ರೇಣಿಯ ವೇಶ್ಯಾಗೃಹವಾಗಿತ್ತು. ಅಲ್ಲಿ ಇರುತ್ತಿದ್ದ ತಾರೆಗಳಲ್ಲಿ ಯಾರೂ ನಮ್ಮಂಥಹ ಕಾಲೇಜ ವಿದ್ಯಾರ್ಥಿಗಳಿಗೆ ಲಭಿಸುವ ವಸ್ತುಗಳಲ್ಲವಾದರೂ ಅವರೆಲ್ಲರ ಹೆಸರುಗಳು ನಮಗೆ ಪಾಠವಾಗಿದ್ದವು. ಅವರ ಪೈಕಿ ಯಾರೊಬ್ಬಳನ್ನು ದೊರಕಿಸಿಕೊಳ್ಳುವಷ್ಟು ರೊಕ್ಕ ಸುರಿಯಲು ನಮಗೆ ಯಾರಿಗೂ ಶಕ್ತಿ ಇರಲಿಲ್ಲ. ಆದರೂ ಒಬ್ಬಿಬ್ಬರು ವಿದ್ಯಾರ್ಥಿಗಳು ಅಲ್ಲಿ ಮುಕ್ತದ್ವಾರವಿರುವ ಕೆಲವು ಶ್ರೀಮಂತರ ಗೆಳೆತನದಿಂದಾಗಿ ಅಲ್ಲಿಯ ವರೆಗೆ ಹೋದದ್ದೂ ಇತ್ತು. ಆದರೆ, ಅಲ್ಲಿ ಬರೇ ಚಹಾಪಾನ ಅಥವಾ ಒಂದೆರಡು ಹಾಡು, ಹೆಚ್ಚೆಂದರೆ ಬೀಳ್ಕೊಳ್ಳುವಾಗ ಆ ತಾರೆಯ ಮಂದಸ್ಮಿತ, ಇವುಗಳಿಂದಲೇ ತೃಪ್ತಿಗೊಳ್ಳಬೇಕಾಗಿತ್ತು.

ಈ ಪರಿಸ್ಥಿತಿಯಲ್ಲಿ ನಮಗೆ ಸುನೇತ್ರಾದೇವಿಯೊಡನೆ ಪ್ರತ್ಯಕ್ಷ ಮಾತಾಡುವ ಹಾಗು ನಗೆಯಾಡುವ ಸಂಧಿಯು ದೊರೆತದ್ದಕ್ಕಾಗಿ ನಾವು ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಅಭಿನಂದನೆಗೆ ಪಾತ್ರರಾಗಿದ್ದೆವು. ನಾವು ಅವಳನ್ನು ಕಂಡ ಹಾಗೂ ಅವಳೊಡನೆ ಮಾತಾಡಿದ ಸುದ್ದಿಯು ವಿದ್ಯಾರ್ಥಿಗಳಲ್ಲಿ ಹಬ್ಬಿದ್ದರೆ ನಾವು ವಿಜಯ ಸಂಪಾದಿಸಿದ ವೀರರಂತೆ ನಮ್ಮ ಸಹಪಾಠಿಗಳಿಂದ ಗೌರವಿಸಿಕೊಳ್ಳಬಹುದಾಗಿತ್ತು. ಮೇಲೆ ಹೇಳಿದ ಸುದ್ದಿಯನ್ನು ಬಹಿರಂಗಪಡಿಸಬೇಕೆಂಬ ಆತುರವು ನನ್ನಲ್ಲಿ ಬಲವಾಗಿದ್ದರೂಳ ನಮ್ಮ ಕಾನ್ಹೇರಿಯ ಭೆಟ್ಟಿಯು ಶ್ರೀಧರನ ಮೇಲೆ ವಿಚಿತ್ರ ಪರಿಣಾಮವನ್ನುಂಟುಮಾಡಿದ್ದರಿಂದ ನಾನು ಈ ಸಂಗತಿಯನ್ನು ಯಾರೊಡನೆಯೂ ಹೇಳಲಿಲ್ಲ.

ಸುನೇತ್ರಾದೇವಿಯು ಆ ದಿನ ಮೋಟಾರ ಹತ್ತುವ ಕಾಲದಲ್ಲಿ ಬೀರಿದ ಸಂದೇಶಸೂಚಕ ನಗೆಯು ಶ್ರೀಧರನ ಭಾವೀ ಜೀವನದ ದಿಶೆಯನ್ನು ಪೂರ್ಣವಾಗಿ ತಿರುಗಿಸಿ ಬಿಟ್ಟಿತ್ತು. ಅಂದಿನಿಂದ ಅವನನ್ನು ಒಂದುತರಹದ ಉನ್ಮಾದವು ಆವರಿಸಿತು. ಅವನಿಗೆ ಆಹಾರ ರುಚಿಸುತ್ತಿದ್ದಿಲ್ಲ. ನಿದ್ದೆ ಹತ್ತುತ್ತಿದ್ದಿಲ್ಲ. ದಿನಕ್ಕೆ ನಾಲ್ಕೈದುಸಾರೆ "ಅವಳ ಸಂದರ್ಶನ ಪುನಃ ಆದೀತೇನು?" ಎಂದು ನನ್ನನ್ನು ಒಂದೇ ಸವನೆ ಕೇಳುತ್ತಿದ್ದನು.

ಅವನ್ನನ್ನು ಈ ಉನ್ಮಾದದಿಂದ ಹೊರಗೆ ತರಲು ಅವನಿಗೆ "ಅವಳ ಸಂದರ್ಶನವಾಗುವದು ಅಸಾಧ್ಯವಲ್ಲ, ಆದರೆ ಅವಳ ಸಂದರ್ಶನದಿಂದ ನಿನಗೆ ಸಿಗುವದಾದರೂ ಏನು? ಅವಳನ್ನು ದೊರಕಿಸಿಕೊಳ್ಳಲಿಕ್ಕೆ ಎಷ್ಟು ರೊಕ್ಕ ಸುರಿಯಬೇಕಾಗುವದು ಗೊತ್ತೇ? ಒಂದು ವೇಳೆ ನಿನ್ನ ಬಳಿ ಇದ್ದ ಹಣವನ್ನೆಲ್ಲ ವೆಚ್ಚಮಾಡಿ ಅವಳನ್ನು ದೊರಕಿಸಿಕೊಂಡಿ ಅನ್ನೋಣ. ಹೇಳಿ ಕೇಳಿ ಅವಳು ವೇಶ್ಯೆ. ಅವಳೆಷ್ಟು ದಿನ ನಿನ್ನೊಬ್ಬನ ಸಹವಾಸದಲ್ಲೇ ಇದ್ದಾಳು? ಕೈಗೂಡಿಸಲು ಅಸಾಧ್ಯವಾದ ಆಸೆಯನ್ನು ಬೆಳೆಸುವದಕ್ಕಿಂತ ಈಗಲೇ ಅದನ್ನು ಮನಸ್ಸಿನಿಂದ ಕಿತ್ತೊಗೆಯುವದೇ ಒಳ್ಳೆಯದು" ಎಂದು ಅವನಿಗೆ ಎಚ್ಚರ ಕೊಡಹತ್ತಿದೆನು.

ಅರವಿಂದನು ಮುಂದರಿಸಿದನು "ಈ ರೀತಿ ಶ್ರೀಧರನಿಗೆ ಹಿತವಚನ ಹೇಳಿದ್ದರಿಂದ ನಾನು ಅವನಿಗಿಂತ ಬುದ್ಧಿವಂತನು ಅಥವಾ ವ್ಯವಹಾರ ಕುಶ

ಲನು ಎಂದು ನಾನು ತಿಳಿದುಕೊಂಡಿದ್ದೆನೆಂದು ಗ್ರಹಿಸಬೇಡಿರಿ. ಯಾಕೆಂದರೆ ಈ ವಿಷಯದಲ್ಲಿ ಅತ್ಯಂತ ಮೂರ್ಖತನದ ಕೆಲಸವನ್ನು ಮುಂಪೆ ನಾನೇ ಮಾಡಿದೆ. ಹಾಗೂ ಶ್ರೀಧರ-ಸುನೇತ್ರೆಯರ ಜೀವನದ ದುರಂತಕ್ಕೆ ಕೆಲಮಟ್ಟಿಗೆ ನಾನೇ ಕಾರಣನಾದೆನು. ಅದನ್ನೆಲ್ಲ ಮುಂದೆ ಹೇಳುವೆ.

ಶ್ರೀಧರನು ಸುನೇತ್ರಾದೇವಿಯನ್ನು ಕಂಡ ದಿನದಿಂದ ಉನ್ಮಾದಾವಸ್ಥೆಯಲ್ಲಿದ್ದನೆಂದು ಮೊದಲೇ ಹೇಳಿದೆನಷ್ಟೇ. ಅವನ ಸ್ವಭಾವದಲ್ಲಿ ಅನೇಗವು ವ್ಯವಹಾರಜ್ಞಾನದಿಂದ ನಿಯಂತ್ರಿತವಾಗಿದ್ದಿಲ್ಲ. ಪ್ರೇಮಪೀಡಿತ ಮನುಷ್ಯನೊಡನೆ ವಾದಮಾಡಿ ಅವನನ್ನು ಪ್ರೇಮದಿಂದ ಪರಾವೃತ್ತಮಾಡುವದು ಅಸಾಧ್ಯವಾದ ಮಾತು. ಮದನನ ತೀಕ್ಷ್ಣಬಾಣವು ಅವನ ಹೃದಯಕ್ಕೆ ಬಲವಾಗಿ ನಾಟಿತ್ತು. ಅದರ ಪರಿಣಾಮದಿಂದ ಅವನನ್ನು ರಕ್ಷಿಸುವದು ಶಕ್ಯತೆಗೆ ಮೀರಿದ ವಿಷಯವಾಗಿತ್ತು. ಶ್ರೀಧರನಿಗೆ ಈಗ ಸುನೇತ್ರೆಯನ್ನು ಬಿಟ್ಟು ಅನ್ಯಜೀವನವಿರಲಿಲ್ಲ. ಅವಳೇ ಅವನ ಜೀವನದ ಉಸಿರು. ಅವನ ಅಸ್ತಿತ್ವದ ಅರ್ಥ. ಅವನದು ನಿಜವಾದ ದಿವ್ಯ ಪ್ರೇಮವಾಗಿತ್ತು. ಅಂತಹ ಪ್ರೇಮಜೀವಿಗಳ ಪಾಲಿಗೆ ಬರುವ ನಿರಾಶೆ-ದುಃಖಗಳು ಆ ಪ್ರೇಮದ ಆನಂದಪರವಶತೆಯ ಸಲುವಾಗಿ ಅವರು ವಿಧಿಯ ಬಾಜಾರದಲ್ಲಿ ತೆರಬೇಕಾದ ಬೆಲೆಯೋ ಎಂದು ನನಗೆ ಆಗಾಗ ಅನಿಸುತ್ತದೆ. ಅಂತಹ ಜೀವನವನ್ನು ನಾನು ಪ್ರತ್ಯಕ್ಷ ಅನುಭವಿಸಿದವನಲ್ಲ. ಆದರೆ ಅತಿ ಸಮೀಪದಲ್ಲಿದ್ದು ಪ್ರೇಮೋದ್ರೇಕದ ಪಾತ್ರೆಯಲ್ಲಿನ ಅಮೃತ-ವಿಷಮಿಶ್ರಿತ ಪಾನೀಯದ ಕೊನೆಯ ಹನಿಯ ತನಕ ಶ್ರೀಧರನು ಕುಡಿದದ್ದನ್ನು ಹಾಗೂ ಅದರ ಸಿಹಿ-ಕಹಿಯನ್ನು ಅನುಭವಿಸಿದ್ದನ್ನು ಆದಿಯಿಂದ ಅಂತ್ಯದ ವರೆಗೆ ಕಂಡಿದ್ದೇನೆ. ಬಲವತ್ತರವಾದ ಪ್ರೇಮೋದ್ರೇಕಕ್ಕೆ ಬಲಿಯಾದ ಆ ನಿಷ್ಪಾಪ ಜೀವಿಯ ಚಿತ್ರವು ನನ್ನ ಕಣ್ಣಮುಂದೆ ಆಗಾಗ ಬರುತ್ತದೆ. ಅವನು ಈಗ ಎಲ್ಲಿರುವನೋ ನನಗೆ ಎಳ್ಳಷ್ಟೂ ಮಾಹಿತಿ ಇಲ್ಲ. ಅವನು ಜೀವದಿಂದ ಇರುವನಾದರೆ ಎಂತಹ ಪಶ್ಚಾತ್ತಾಪ ಹಾಗೂ ಶೋಕದಲ್ಲಿ ಅವನು ತನ್ನ ಮುಂದಿನ ಆಯುಷ್ಯವನ್ನು ಕಳೆಯಬೇಕಾಗುವದು!" ಇಷ್ಟನ್ನು ಹೇಳುವಾಗ ಅರವಿಂದನ ಕಣ್ಣುಗಳು ತುಂಬಿ ಬಂದವು. ಕಣ್ಣೀರು ಧಾರಾಕಾರವಾಗಿ ಹರಿಯಿತು. ತುಸುಹೊತ್ತು ಮೌನವನ್ನು ತಾಳಿ ಕಣ್ಣೀರನ್ನು

ಒರಿಸಿಕೊಳ್ಳುತ್ತ ಅವನು ಕತೆಯನ್ನು ಮುಂದರಿಸಿದನು.

ಸುನೇತ್ರಾದೇವಿಯ ಭೆಟ್ಟಿಮಾಡಿಸುವದು ತೀರ ಅಸಾಧ್ಯವೇನೂ ಇರಲಿಲ್ಲ. ಅವಳ ಪರಿಚಯವಿದ್ದವರ ಸಹಾಯದಿಂದ ಅಷ್ಟನ್ನು ಮಾಡಿಸುವದು ಸಾಧ್ಯವಿತ್ತು. ಶ್ರೀಧರನ ಶೋಚನೀಯ ಸ್ಥಿತಿಯನ್ನು ಕಂಡು ಅವಳನ್ನು ಅವನು ಅಪ್ಸರಾಮಂದಿರದ ವಾತಾವರಣದಲ್ಲಿ ಕಂಡರೆ ಅಲ್ಲಿನ ಅವಳ ವೇಶ್ಯಾಜೀವನದ ಪ್ರತ್ಯಕ್ಷ ಅನುಭವವು ಅವನನ್ನು ಪ್ರೇಮದ ಉನ್ಮಾದದಿಂದ ಇಳಿಸಬಹುದೆಂದು ಯೋಚಿಸಿ ನಾನು ಅಂತಹ ಭೆಟ್ಟಿಯನ್ನು ಏರ್ಪಡಿಸಲು ಪ್ರಯತ್ನಿಸಿದೆನು. ಅವಳಿಗೆ ಕೊಳಲನ್ನು ಕಲಿಸಿದ ಗಾಯನ ಶಿಕ್ಷಕನ ಮೂಲಕ ಅದು ಕೈಗೂಡಿತು. ನಮ್ಮ ವಿನಂತಿಗೆ ಉತ್ತೇಜಕ ಉತ್ತರ ಬಂತು. ಮುಂದಿನ ಮಂಗಳವಾರ ಮಧ್ಯಾಹ್ನ ಮೂರು ಘಂಟೆಗೆ ಅಪ್ಸರಾಮಂದಿರದಲ್ಲಿನ ಅವಳ ಖಾಸಗಿ ಖೋಲಿಗೆ ಬರಲು ಅವಳು ನಮಗೆ ಆಮಂತ್ರಣವಿತ್ತಿದ್ದಳು. ಆ ಸಂದರ್ಶನದಿಂದ ತೀರಾ ಅನಪೇಕ್ಷಿತ ಪರಿಣಾಮವಾಗಬಹುದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ. ನಡೆದ ಸಂಗತಿಗಳೆಲ್ಲಾ ಒಂದೊಂದಾಗಿ ಈಗ ಮನಸ್ಸಿನಲ್ಲಿ ಮೂಡಿದಾಗ ನಾನು ಆ ಸಂದರ್ಶನವನ್ನು ಏರ್ಪಡಿಸಿದ್ದರಲ್ಲಿ ಎಂತಹ ಪ್ರಮಾದವನ್ನು ಮಾಡಿದೆ ಎಂದು ಈಗ ನನಗೆ ವ್ಯಥೆಯಾಗುತ್ತದೆ. ಸದುದ್ದೇಶದಿಂದ ಮಾಡಿದ ಮನಃಪೂರ್ವಕ ಪ್ರಯತ್ನಗಳು ಮುಂದೆ ಆಗಲಿರುವ ದುರಂತಕ್ಕೆ ಸಹಾಯಕವಾಗುವವೆಂದು ಯಾರು ತಾನೇ ಬಗೆದಿದ್ದರು?

ನಿಶ್ಚಯಿಸಿದ ದಿನ ಮತ್ತು ವೇಳೆಯಲ್ಲಿ ನಾವು ಅಪ್ಸರಾಮಂದಿರಕ್ಕೆ ಹೋದೆವು. ಪರಿಚಾರಿಕೆಯೊಬ್ಬಳು ನಮ್ಮನ್ನು ಸುನೇತ್ರಾದೇವಿಯ ಕೋಣೆಗೆ ಕರೆದೊಯ್ದಳು. ಆ ಕೋಣೆಯ ಭವ್ಯತೆಯು ಬಂದವರ ಕಣ್ಣು ಕುಕ್ಕಿಸುವಂತಿತ್ತು. ಎಳೇ ಹಸಿರು ಬಣ್ಣದ ಗೋಡೆಗಳ ಮೇಲೆ ಅಲ್ಲಲ್ಲಿ ಮನಮೋಹಕ ಹೂ-ಬಳ್ಳಿಗಳನ್ನೂ ಆಕರ್ಷಕ ಹಣ್ಣು-ಹಂಪಲಗಳನ್ನೂ ಚಿತ್ರಿಸಿದ್ದರು: ಕೆಲವೆಡೆ ನಿಸರ್ಗದ ಸುಂದರ ದೃಶ್ಯಗಳ ಚಿತ್ರಗಳನ್ನು ತೂಗ ಹಾಕಿದ್ದರು. ತಿಳಿನೀಲಿಬಣ್ಣ ಬಳಿದ ಸೀಲಿಂಗು ಅದರಲ್ಲಿ ಬಿಡಿಸಿದ ಶುಭ್ರ ಮೋಡಗಳ ಕಲಾಕೃತಿಯಿಂದ ನಿಜವಾದ ಆಕಾಶದಂತೆ ಭಾಸವಾಗುತ್ತಿತ್ತು. ನೆಲದ ಮೇಲೆ ಅಮೂಲ್ಯವಾದ ಕಾಶ್ಮೀರಿ ಜಮಖಾನೆಯನ್ನು ಹಾಸಿದ್ದರು. ಈ ದೃಶ್ಯವು

ಕಣ್ಣುಗಳಿಗೆ ಹಬ್ಬವಾದಂತೆ ಕೋಣೆಯಲ್ಲಿ ಚಿಮುಕಿಸಿದ್ದ ಗುಲಾಬೀ, ಮಲ್ಲಿಗೆ ಗಳ ಅತ್ತರದ ಸುವಾಸನೆಯು ನಮ್ಮ ಮೂಗನ್ನು ತೃಪ್ತಿಪಡಿಸಿತು. ನಾವು ಕೋಣೆಯನ್ನು ಪ್ರವೇಶಿಸಿದಾಗ ಗೋಡೆಗಳ ಬಣ್ಣಕ್ಕೆ ಸರಿಹೊಂದುವ ಹಸರು ಬಣ್ಣದ ಮಂಚದ ಮೇಲೆ ಸುನೇತ್ರಾದೇವಿಯು ಕಸೂತಿಯ ಸುಂದರ ಚಿತ್ರ ಗಳಿದ್ದ ಚಾದರವನ್ನು ಹೊದ್ದುಕೊಂಡು ಓರೆಯಾಗಿ ಒರಗಿದ್ದಳು. ಅವಳ ಮಂಚದ ಪಕ್ಕದಲ್ಲಿ ಹಸ್ತಿದಂತದ ಕೆತ್ತನೆಯ ಕೆಲಸವಿದ್ದ ಗಂಧದ ಮರದ ಒಂದು ಸುಂದರ ಮೇಜನ್ನು ಇಟ್ಟಿದ್ದರು. ವಿವಿಧ ಬಣ್ಣದ ಚಿತ್ರಗಳಿಂದ ಶೋಭಿಸುತ್ತಿದ್ದ ಒಂದು ಹೂಜೆಯು ಅದರ ನಡುವೆ ಇಡೋಣಾಗಿತ್ತು. ಆ ಹೂಜೆಯಲ್ಲಿ ಸೂರ್ಯಕಾಂತಿ ಹಾಗೂ ಕಮಲಪುಷ್ಪಗಳ ಅಂದವಾದ ಗುಚ್ಛವಿತ್ತು.

ಅವಳು ವಿರಮಿಸಿದ್ದ ಮಂಚದ ಎದುರಿಗೆನೇ ಇದ್ದ ಹೂದೋಟದಿಂದ ಬೀಸುತ್ತಿದ್ದ ಮಂದಮಾರುತನೊಡನೆ ಕೋಣೆಯೊಳಗೆ ಬರುತ್ತಿದ್ದ ಹೂದೋಟದ ಪುಷ್ಪಗಳ ಸುವಾಸನೆಯು ಕೋಣೆಯಲ್ಲಿ ಚಿಮುಕಿಸಿದ್ದ ಪರಿಮಳ ದ್ರವ್ಯಗಳ ಸುವಾಸನೆಯೊಂದಿಗೆ ಸಮ್ಮಿಳಿತವಾಗಿ ಮನಸ್ಸಿಗೆ ಸಂತೋಷದ ಔತಣವನ್ನು ಒದಗಿಸುತ್ತಿತ್ತು.

ನಾವು ಒಳಗೆ ಬಂದುದನ್ನು ನೋಡಿ ಸುನೇತ್ರಾದೇವಿಯು ಒರಗಿದ್ದ ಲ್ಲಿಂದಲೇ ಅಂದು ಕಾನ್ಹೇರಿಯಲ್ಲಿ ಶ್ರೀಧರನನ್ನು ಮುಗ್ಧಗೊಳಿಸಿದ ಮಂದಸ್ಮಿತ ದಿಂದ ಸ್ವಾಗತಿಸಿದಳು.

ವೇಳೆಯನ್ನು ಗೊತ್ತುಮಾಡಿಕೊಂಡೇ ನಾವು ಬಂದಿದ್ದರೂ ಅವಳು ಮಂಚದ ಮೇಲೆ ಒರಗಿಕೊಂಡೇ ಇದ್ದುದು, ನಮ್ಮನ್ನು ಕಂಡಾಗಲೂ ಅಲ್ಲಿಂದ ಏಳದೇ ಮಲಗಿದಲ್ಲಿಂದಲೇ ನಮ್ಮನ್ನು ಸ್ವಾಗತಿಸಿದುದು ನನ್ನ ಮನಸ್ಸಿನಲ್ಲಿ ಅವಳ ವಿಷಯಕ್ಕೆ ವಿಪರೀತ ಕಲ್ಪನೆಗಳನ್ನು ಹುಟ್ಟಿಸಿತು. ಆದರೆ ಅವಳೇ ನನ್ನ ಅನುಮಾನಗಳನ್ನು ದೂರಮಾಡಿದಳು.

“ನನಗೆ ಮೈಯಲ್ಲಿ ಎರಡು ದಿನಗಳಿಂದ ನೆಟ್ಟಗಿಲ್ಲ. ಅದು ಅಲ್ಲದೆ ನಿನ್ನೆಯ ಕುಣಿತದ ಕಾರ್ಯಕ್ರಮಗಳಿಂದ ಬಹಳ ಆಯಾಸವೂ ಆಗಿದೆ” ಎಂದು ಅದೇ ನಗುವನ್ನು ಬೀರುತ್ತ ಹೇಳಿದಳು. ಹಾಗೂ ನಾವು ಉತ್ತರ ಕೊಡುವ

ಮೊದಲೇ "ನಾನು ಈ ಮಧ್ಯಾಹ್ನದ ಹೊತ್ತಿಗೆ ಬರಹೇಳಿದ್ದರ ಕಾರಣವೇ ನಂದರೆ, ನನಗೆ ಬೇಕಾದ ರೀತಿಯಲ್ಲಿ ಹೊತ್ತು ಕಳೆಯಲು ಸ್ವಾತಂತ್ರ್ಯವಿರುವ ಸಮಯವೆಂದರೆ ಇದು ಮಾತ್ರ. ಇನ್ನೆರಡು ತಾಸುಗಳಲ್ಲಿ ಸುರುವಾಗುತ್ತದೆ ಹುಚ್ಚರ ಹಾರ್ರ್ಯಾಟ!"

ಶ್ರೀಧರನು ಅವಳನ್ನು ಎವೆಯಿಕ್ಕದೆ ನೋಡುವದರಲ್ಲೇ ಮೈಮರೆತಿ ದ್ದನು. ವೇಶ್ಯಾಗೃಹವನ್ನು ಪ್ರವೇಶಿಸುವ ಮೊದಲ ಅನುಭವವಾದುದರಿಂದ ಅವಳ ಉದ್ಗಾರಗಳಿಗೆ ಏನು ಉತ್ತರ ಕೊಡಬೇಕೆಂಬುದು ತಿಳಿಯದೆ ನಾನೂ ಮೌನವಾಗಿದ್ದೆನು. ಆದರೆ ಅಪ್ಸರಾಮಂದಿರವನ್ನು ಪ್ರವೇಶಿಸುವಾಗ ಮನಸ್ಸಿ ನಲ್ಲಿದ್ದ ಭೀತಿ ವಿಸ್ಮಯಗಳು ಅವಳ ಈ ಮಾತುಗಳಿಂದ ದೂರವಾಗಿ ಅವು ಗಳ ಬದಲಿಗೆ ಅವಳ ವಿಷಯದಲ್ಲಿ ಅನುಕಂಪ ಹುಟ್ಟಿತು.

ಕ್ಷಣಕಾಲದ ಪರಸ್ಪರ ಮೂಕಪ್ರಶಂಸೆಯ ನಂತರ ಅವಳೇ ಪುನಃ ಸಂಭಾಷಣೆಯನ್ನು ಪ್ರಾರಂಭಿಸಿದಳು "ನೀವು ಬಂದದ್ದಕ್ಕಾಗಿ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಆದರೆ ನಿಮ್ಮ ಹೆಸರು ಏನೆಂದು ನನಗೆ ಈವರೆಗೆ ತಿಳಿ ದಿಲ್ಲ" ಎಂದು ಶ್ರೀಧರನ ಕಡೆಗೆ ದೃಷ್ಟಿಯನ್ನು ಹೊರಳಿಸಿ ಕೇಳಿದಳು. ಶ್ರೀಧರ ನನ್ನು ಪ್ರೇಮ, ಲಜ್ಜೆ ಎರಡೂ ಮೂಕನನ್ನಾಗಿ ಮಾಡಿತು. ಆದ್ದರಿಂದ ನಮ್ಮಿ ಬ್ಬರ ಹೆಸರು, ಹಿರಿಯರ ಹೆಸರು, ನಮ್ಮ ಊರು, ಮುಂಬಯಿಯಲ್ಲಿ ಆಗ ಮಾಡುತ್ತಿರುವ ಅಭ್ಯಾಸ ಎಲ್ಲವನ್ನೂ ಸಾದ್ಯಂತವಾಗಿ ನಾನೇ ಹೇಳಿದೆನು.

"ನಿಮ್ಮನ್ನು ಕಾನ್ಹೇರಿಯಲ್ಲಿ ನೋಡಿ ನನಗೆ ಬಹಳೇ ಆನಂದವಾಯಿತು. ನೀವು ನನ್ನಂತೆಯೇ ನಿಸರ್ಗದ ಏಕಾಂತವನ್ನು ಮೆಚ್ಚುವಂತೆ ತೋರುತ್ತದೆ." ಅಂದಳು. "ನಮಗೇನೂ ಅಂತಹ ಕವಿಹೃದಯವಿಲ್ಲ." ನಾನೆಂದೆ. "ಏನೋ ಎಲ್ಲಿಯಾದರೂ ವಿಹಾರಕ್ಕೆ ಹೋಗೋಣವೆನಿಸಿತು. ಅಲ್ಲಿಗೆ ಹೋದೆವು ಇಷ್ಟೇ. ನಿಮ್ಮ ಏಕಾಂತವನ್ನು ಕೆಡಿಸಿದ್ದಕ್ಕಾಗಿ ಕ್ಷಮೆ ಬೇಡುತ್ತೇವೆ." "ಕ್ಷಮೆ ಯಾತ ರದು? ನಿಮ್ಮ ಭೆಟ್ಟಿಯಿಂದಲೇ ನನಗೆ ಆನಂದವಾಯಿತು." ಎಂದು ಹೇಳಿ ಸುನೇತ್ರೆಯು ಆ ದಿನದ ಘಟನೆಗಳ ನೆನಪಾಗಿ ಅಂದು ನಕ್ಕಂತೆಯೇ ಘಟ್ಟಿ ಯಾಗಿ ನಕ್ಕಳು.

ಶ್ರೀಧರನು ದೇವಿಯ ಮುಂದೆ ನಿಂತ ಭಕ್ತನಂತೆ ಭೀತಿಮಿಶ್ರಿತ ಗೌರವ

ದಿಂದ ನಡುಗಹತ್ತಿದನು.

ಸುನೇತ್ರೆಯು ತನ್ನ ಚಾದರವನ್ನು ಬದಿಗೆಳೆದು ಎದ್ದು ಕುಳಿತಳು. ಹಾಗೂ ಶ್ರೀಧರನನ್ನು ಉದ್ದೇಶಿಸಿ "ಶ್ರೀಧರ, ನೀವು ಮುಂಬಯಿಗೆ ಹೊಸ ಬರಂತೆ. ಈ ನಗರ ನಿಮಗೆ ಹೇಗೆನಿಸುತ್ತದೆ?" ಎಂದಳು. ಈ ವರೆಗೆ ಮೂಕ ನಂತೆ ಕುಳಿತಿದ್ದ ಶ್ರೀಧರನಿಗೆ ಈಗ ಮಾತು ಹುಟ್ಟಿತು. "ನನಗೆ ಹರ್ಷೋ ದ್ರೇಕವಾಗಿದೆ. ಮುಂಬಯಿಯಲ್ಲಿ ನಿಮ್ಮಂಥವರ ಭೆಟ್ಟಿಯಾಗಬಹುದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ." ಎಂದು ಅದೇ ಉದ್ರೇಕದಿಂದ ಕಂಪಿಸುತ್ತ ಹೇಳಿದನು. "ನಿಜ ಹೇಳುವದಾದರೆ ಆ ದಿನ ಕಾನ್ಹೇರಿ ಉದ್ಯಾನದಲ್ಲಿ ನಿಮ್ಮನ್ನು ನೋಡಿದಂದಿನಿಂದ ಅವನ ಚೈತನ್ಯವು ಅವನ ದೇಹವನ್ನೇ ಬಿಟ್ಟು ಹೋದಂತಾಗಿದೆ. ಅವನಿಗೆ ಊಟ ನಿದ್ರೆ ಕೂಡ ಬೇಡವಾಗಿದೆ. ನಿಮ್ಮನ್ನು ಕಾಣ ಬೇಕೆಂಬುದೊಂದೇ ಅವನ ಹಗಲಿರುಳಿನ ಹಂಬಲವಾಗಿತ್ತು. ಅದಕ್ಕಾಗಿ ನನ್ನ ನ್ನು ಒಂದೇ ಸವನೆ ಕಾಡುತ್ತಲಿದ್ದನು. ಆದರೆ ಈಗ ಪ್ರತ್ಯಕ್ಷ ನಿಮ್ಮ ಭೆಟ್ಟಿ ಯಾದಾಗ ಮೂಕನಂತೆ ಮಾತಾಡದೆ ಕುಳಿತಿದ್ದಾನೆ" ಎಂದೆನು. ಸುನೇತ್ರಾ ದೇವಿಯು ನನ್ನ ಕಡೆಗೆ ಸಾಂಕೇತಿಕ ದೃಷ್ಟಿಯನ್ನು ಚೆಲ್ಲಿ ಶ್ರೀಧರನನ್ನೇ ನೋಡ ಹತ್ತಿದಳು. ಆ ಮೇಲೆ ವಿದ್ಯಾರ್ಥಿ ಜೀವನದ ಕುರಿತು ಹಲವು ಪ್ರಶ್ನೆಗಳನ್ನು ಕೇಳಿದಳು. ಪ್ರಥಮ ಸಂದರ್ಶನದಲ್ಲೇ ಬಹಳ ವೇಳೆ ಕಳೆದು ಅವಳು ಕೊಟ್ಟ ಸವಲತ್ತಿನ ದುರುಪಯೋಗ ಮಾಡಿಕೊಳ್ಳುವದು ಸರಿಯಲ್ಲವೆಂದು ನಾನು ಕೆಲ ಹೊತ್ತಿನಮೇಲೆ ಎದ್ದು "ಇನ್ನು ನಾವು ಬರುತ್ತೇವೆ" ಎಂದು ಹೇಳಿ ಅವಳಿಗೆ ನಮಸ್ಕರಿಸಿದೆನು. ಏಳುವ ಇಚ್ಛೆ ಇಲ್ಲದಿದ್ದರೂ ನಿರುಪಾಯನಾಗಿ ಶ್ರೀಧರನು ನನ್ನನ್ನು ಅನುಸರಿಸಿದನು. ನಗುಮೊಗದಿಂದ ಅವಳು ನಮ್ಮನ್ನು ಬೀಳ್ಕೊಂ ಡಳು. ಹಾಗೂ ನಾವು ಹೊರಡುವಾಗ "ಈ ಸ್ಥಳವು ನಿಮ್ಮ ಆಗಮನಕ್ಕೆ ಅಯೋಗ್ಯವೆನಿಸದಿದ್ದರೆ ಇನ್ನೊಮ್ಮೆ ಬನ್ನಿರಿ. ನನಗೆ ವಿದ್ಯಾರ್ಥಿಗಳ ಸಹವಾ ಸದ ಲಾಭವು ಸಿಗುವದೇ ಇಲ್ಲ. ಎಷ್ಟೋ ಸಾರೆ, ಇಲ್ಲಿಗೆ ಬಂದು ನಮ್ಮಿಂದ ಆದರಾತಿಥ್ಯವನ್ನು ಪಡೆದು ಗದ್ದಲ ಹಾಕುವ ಪಾಷಂಡರಿಗಿಂತ ಬೇರೆ ತರದ ಗಂಡಸರು ಜಗತ್ತಿನಲ್ಲಿ ಇದ್ದಾರೆಯೇ ಎಂಬ ಸಂಶಯು ಕೂಡ ಬರುತ್ತದೆ. ಇನ್ನೊಮ್ಮೆ ಇದೇ ಹೊತ್ತಿಗೆ ಬನ್ನಿರಿ. ತಣ್ಣಗೆ ಆರಾಮಾಗಿ ಕೂತು ಒಂದಿಷ್ಟು

ಹರಟೆ ಹೊಡೆಯೋಣ" ಎಂದಳು. "ಇಲ್ಲಿಗೆ ಬರುವದೆಂದರೆ ಅದು ಅಪೂರ್ವ ಸಂಧಿ ಹಾಗೂ ಬಹುದೊಡ್ಡ ಬಹುಮಾನ." ಅತಿರೇಕವಾಗಿ ಹೊರಚೆಲ್ಲಿದ ಆನಂದದಿಂದ ಶ್ರೀಧರನು ಹೇಳಿದನು. ಅವಳನ್ನು ಪುನಃ ವಂದಿಸಿ ನಾವು ಹೊರಗೆ ಬಂದೆವು.

ಅಂದಿನಿಂದ ಶ್ರೀಧರನು ಮೊದಲಿನ ಶ್ರೀಧರನಿರಲಿಲ್ಲ. ದೈವವು ಅವನಿಗೆ ಅನುಕೂಲವಾಯಿತು. ಅವನ ಉತ್ಸಾಹ, ಆನಂದ ಮತ್ತು ಆತ್ಮವಿಶ್ವಾಸ ಇವು ಇಮ್ಮಡಿಯಾದವು. ಜೀವನವನ್ನು ಬೆಳಗಿಸುವ ಹಾಗೂ ತನ್ನನ್ನು ಕಾರ್ಯ ಪ್ರವೃತ್ತ ಮಾಡುವ ನೂತನ ಶಕ್ತಿಯನ್ನು ಅವನು ಕಂಡುಕೊಂಡಂತಾಗಿತ್ತು. ಯಾವಾಗಲೂ ಅವನು ಆನಂದದ ಹಿಗ್ಗಿನಲ್ಲಿಯೇ ಇರಹತ್ತಿದನು. ಆ ದಿನದ ಬಳಿಕ ಒಂದೆರಡು ಸಾರೆ ನಾವಿಬ್ಬರು ಕೂಡಿಯೇ ಸುನೇತ್ರಾದೇವಿಯ ಸಂದರ್ಶನಕ್ಕೆ ಹೋಗಿದ್ದರೂ ಆಮೇಲೆ ಅವನೊಬ್ಬನೇ ಹೋಗಲು ಸುರು ಮಾಡಿದನು. ಅವಳಲ್ಲಿಗೆ ಹೋದ ಸಂಗತಿಯನ್ನು ನನ್ನಿಂದ ಮುಚ್ಚಿಟ್ಟರೂ ಅವನ ಮುಖ ಭಾವದಿಂದ ಅದು ಮಾತಿಗಿಂತಲೂ ಹೆಚ್ಚು ಸ್ಪಷ್ಟವಾಗುತ್ತಿತ್ತು.

ತರಂಗ ೫

ಶ್ರೀಧರ-ಸುನೇತ್ರೆ ಇವರ ಪ್ರಣಯವು ನನಗೆ ತುಸು ಆಶ್ಚರ್ಯವನ್ನೇ ಉಂಟುಮಾಡಿತು. ಅವಳ ಮನಸ್ಸಿನ ಇಂಗಿತವನ್ನು ತಿಳಿಯುವದು ಮೊದಲಿಗೆ ಕಠಿಣವೆನಿಸಿದರೂ ಅವಳ ಪೂರ್ಣ ಪರಿಚಯವಾದ ಬಳಿಕ ಅವಳ ವರ್ತನೆಯಲ್ಲಿ ಯಾವದೇ ಕೃತಕತೆ ಇರಲಿಲ್ಲವೆಂಬುದರಲ್ಲಿ ಸಂಶಯಕ್ಕೆ ಎಡೆ ಉಳಿಯಲಿಲ್ಲ. ಆಕೆಯು ಉತ್ತಮ ನಡತೆಯ ಹಾಗೂ ಸಂಪೂರ್ಣ ವಿಶ್ವಾಸಕ್ಕೆ ಪಾತ್ರನಾದ ಯುವಕನನ್ನು ಹುಡುಕುತ್ತಿದ್ದಳು. ವೇಶ್ಯೆಯರಲ್ಲಿ ಹಲವರು ಅಂತರ್ಯದಲ್ಲಿ ಒಬ್ಬನನ್ನೇ ಆಶ್ರಯಿಸಿರಲು ಆಶಿಸುತ್ತಾರೆ. ಅಪ್ಸರಾಮಂದಿರದ ಹಿಂದಿನ ತಾರೆಯರಲ್ಲಿ ಕೆಲವರು ಈ ರೀತಿ ಶ್ರೀಮಂತ ಜಮೀನದಾರ ಇಲ್ಲವೇ ವರ್ತಕರ ಅವರುದ್ಧ ಸ್ತ್ರೀಯರಾಗಿ ಮಂದಿರದಿಂದ ಹೊರಬಿದ್ದುದನ್ನು ಆಕೆ ಕಂಡಿದ್ದಳು. ಆದರೆ ಅವರುದ್ಧ ಸ್ತ್ರೀಯಾಗಿ ಕೇವಲ ದ್ವಿತೀಯಸ್ಥಾನದಲ್ಲಿದ್ದು ತನ್ನ ಪ್ರಿಯಕರನ ಪ್ರೇಮವನ್ನು ಇನ್ನೊರ್ವ ಸ್ತ್ರೀಯೊಡನೆ ಹಂಚಿಕೊಳ್ಳಲು ಅವಳು

ಸಿದ್ಧಳಿರಲಿಲ್ಲ. ವೈದಿಕ ವಿವಾಹವನ್ನೇ ಮಾಡಿಕೊಂಡು ತನ್ನ ಪತಿಯ ಪ್ರೇಮ ಸರ್ವಸ್ವವು ತಾನೊಬ್ಬಳೇ ಆಗಬೇಕೆಂಬುದು ಅವಳ ಧ್ಯೇಯವಿದ್ದಿತು. ಆ ಧ್ಯೇಯವು ಸುಲಭವಾಗಿ ಕೈಗೂಡುವಂತಹದಲ್ಲವಾದರೂ ಅವಳಂತಹ ರೂಪ ಯೌವನ ಸಂಪನ್ನಳಿಗೆ ಅದು ಅಸಾಧ್ಯವಾಗಿರಲಿಲ್ಲ. ಏನಿದ್ದರೂ ಅಪ್ಸರಾಮಂದಿರದ ಸುವರ್ಣ ಪಂಜರದಿಂದ ಇಂದಿಲ್ಲ ನಾಳೆ ಹೊರಗೆ ಬರಲೇಬೇಕೆಂದು ಅವಳು ನಿರ್ಧರಿಸಿದ್ದಳು.

ಮೊದಲಿನಿಂದಲೂ ಶ್ರೀಧರನ ಮೇಲೆಯೇ ಅವಳ ಅನುಗ್ರಹವಿತ್ತು. ಇದು ನನಗೆ ಅಭಿಮಾನಾಸ್ಪದ ಸಂಗತಿ ಇರಲಿಲ್ಲ. ಅವಳ ದೃಷ್ಟಿಯಲ್ಲಿ ನಾನು ಅವಳ ಅನುಭವಪಥದಲ್ಲಿ ಹಾದು ಹೋಗಿರುವ ಇತರ ಸಾಮಾನ್ಯ ಜನರಂತೆಯೇ ಒಬ್ಬನಾಗಿದ್ದೆನು. ಇದರಿಂದ ನಾನು ಕೆಡಕೆನಿಸಿಕೊಳ್ಳಬೇಕಾದ ಕಾರಣವಿರಲಿಲ್ಲ. ಯಾಕಂದರೆ ಅವಳ ಪ್ರೇಮಪಿಪಾಸೆಯಿಂದ ಶ್ರೀಧರನಂತೆ ನಾನು ಎಂದೂ ಪೀಡಿತನಾಗಿರಲಿಲ್ಲ.

ಶ್ರೀಧರನು ಅವಳನ್ನು ಆಕರ್ಷಿಸಿದ್ದರಲ್ಲಿ ಅಸ್ವಾಭಾವಿಕವೇನೂ ಇರಲಿಲ್ಲ. ಅವನು ನಿಜವಾಗಿಯೂ ಸ್ಫುರದ್ರೂಪಿಯಾಗಿದ್ದನು. ಅವನ ನಿಷ್ಪಾಪ ಕೋಮಲ ಮುಖಮುದ್ರೆಯು ಯಾವ ತರುಣಿಯ ಮನಸ್ಸನ್ನೂ ಸೆಳೆಯುವಂತಿತ್ತು. ಇದು ಹಾಗೂ ಅವನ ಮೋರೆಯಲ್ಲಿ ತೋರಿಬರುತ್ತಿದ್ದ ಲಜ್ಜೆ ಹಾಗೂ ಅವನ ಲೋಕಾನುಭವದ ಅಭಾವ ಇವು ಅವಳನ್ನು ಅವನ ಕಡೆಗೆ ಆಕರ್ಷಿಸಿರಬೇಕು. ತನ್ನ ಸಂಪರ್ಕಸುಖಕ್ಕಾಗಿ ನಿತ್ಯವೂ ಬರುವ ಜನಗಳ ಬಾಯಿಯಿಂದ ತನ್ನ ಒಣ ಪ್ರಶಂಸೆಯನ್ನು ಕೇಳಿ ಕೇಳಿ ಬೇಸತ್ತ ಅವಳಿಗೆ ಶ್ರೀಧರನ ಕಣ್ಣುಗಳಲ್ಲಿ ವ್ಯಕ್ತವಾಗುವ ನಿಷ್ಕಳಂಕ ಪ್ರೇಮಾದರಗಳು ಅವರ ಸಾವಿರ ಮಾತುಗಳಿಗಿಂತ ಹೆಚ್ಚು ಅರ್ಥಪೂರ್ಣವಾಗಿದ್ದವು.

ಅತ್ಯಂತ ಜನಪ್ರಿಯ ವೇಶ್ಯೆಯು ಸಹ ಜೀವನದ ಅಂತರ್ಯದಲ್ಲಿ ಒಂಟಿಯಾಗಿ ಇರುತ್ತಾಳೆ. ಕಾಮ ವಿಕ್ರಯದ ಅವಳ ದೈನಂದಿನ ವ್ಯಾಪಾರದಲ್ಲಿ ಅವಳೊಡನೆ ಜನರು ಪ್ರೇಮದ ನಾಟಕವನ್ನು ಆಡುತ್ತಾರೆ, ಪ್ರಶಂಸೆಯ ಮಾತುಗಳನ್ನು ಹೇಳುತ್ತಾರೆ. ಅವಳ ಜತೆಯಲ್ಲಿ ಹಾಡುತ್ತಾರೆ. ಕುಣಿಯುತ್ತಾರೆ. ಆದರೆ ಇದೆಲ್ಲ ಒಂದು ಹೊತ್ತಿನ ಆಟ. ಅದು ಮುಕ್ತಾಯವಾದೊ

ಡನೆ ಆಕೆಯನ್ನು ಶೂನ್ಯತೆಯ ಹಾಗೂ ನಿರಾಶೆಯ ಅನುಭವವು ಆವರಿಸು ತ್ತದೆ. ಅಂತಹ ಒಣ ಹೊಗಳುಭಟ್ಟರಾದ ನೂರಾರು ವಿಟರಿಗಿಂತ ತನ್ನನ್ನು ನಿಜವಾಗಿ ಪ್ರೀತಿಸುವ ಹಾಗೂ ತನ್ನಲ್ಲಿ ಮನಃಪೂರ್ವಕ ಆಸಕ್ತಿಯಿರುವ ಒಬ್ಬ ನಿಗಾಗಿ ಅವಳು ಆಶೆಪಡುತ್ತಾಳೆ. ಶ್ರೀಧರನು ಸುನೇತ್ರೆಯಲ್ಲಿ ಇಟ್ಟಿದ್ದ ಪ್ರೇ ಮವು ಸ್ವೀಕೃತವಾಗಿತ್ತಷ್ಟೇ ಅಲ್ಲ, ಅವನ ಪ್ರೇಮಕ್ಕಿಂತಲೂ ಎಷ್ಟೋ ಅಗಾಧ ವಾದ ಪ್ರೇಮವನ್ನು ಅವಳು ಅವನಲ್ಲಿ ಇಟ್ಟಿದ್ದಾಳೆಂಬುದು ನನಗೆ ನಿಸ್ಸಂದೇಹ ವಾಗಿ ನಿಶ್ಚಯವಾಯಿತು. ತನ್ನ ತಂದೆ–ತಾಯಿಗಳನ್ನು ಚಿಕ್ಕಂದಿನಲ್ಲೇ ಕಳೆ ದುಕೊಂಡದ್ದರಿಂದ ಎಳೇ ಪ್ರಾಯದಿಂದಲೇ ಅವಳಲ್ಲಿ ಸ್ವತಂತ್ರ ಮನೋ ವೃತ್ತಿಯು ಬೆಳೆದಿತ್ತು. ವೇಶ್ಯಾ ಬಾಲಿಕೆಯರು ಶ್ರೀಮಂತ ಮನೆತನದ ಹುಡು ಗಿಯರಂತೆ ಅಲ್ಲ. ಅವರು ತಮ್ಮ ಸಂಪತ್ತನ್ನು ತಾನೇ ಗಳಿಸುವವರಾದುದರಿಂದ ಅವರಲ್ಲಿ ಸ್ವಾತಂತ್ರ್ಯ ಭಾವನೆ ಹಾಗೂ ಧೈರ್ಯ ಸಹಜವಾಗಿಯೇ ಇರುತ್ತದೆ. ಆದರೂ ಅವರು ವಿವಾಹಬದ್ಧರಾಗಲು ಹಾತೊರೆಯುತ್ತಾರೆ. ಯಾಕಂದರೆ ಸ್ವಾತಂತ್ರ್ಯದ ಕಲ್ಪನೆಗಳು ತಲೆಯಲ್ಲಿ ಎಷ್ಟೇ ತುಂಬಿದ್ದರೂ ಸ್ತ್ರೀಯು ಲತೆ ಯಂತೆ. ಅವರು ಅಪೇಕ್ಷಿಸುವದು ತನ್ನನ್ನು ಪ್ರೀತಿಸುವ ಹಾಗೂ ತನ್ನ ರಕ್ಷಣೆ ಮಾಡುವ ಒಬ್ಬ ಗಂಡಸು. ಅಲ್ಲದೆ ಸ್ತ್ರೀಯರನ್ನು ಕೇವಲ ಉಪಭೋಗದ ವಸ್ತುಗಳಂತೆ ಕಾಣುವ ಹಾಗೂ ಕ್ಷಣಿಕ ಸುಖವನ್ನಷ್ಟೇ ಕೊಡುವ ಮತ್ತು ಬಯಸುವ ವಿಷಯಲಂಪಟ ಪುರುಷವರ್ಗವನ್ನಲ್ಲ.

ಇಲ್ಲಿ ಅರವಿಂದನು ತುಸುಹೊತ್ತು ತಾನು ಕಥಿಸುವದನ್ನು ನಿಲ್ಲಿಸಿ ತನ್ನ ಪೆಟ್ಟಿಗೆಯೊಳಗಿನಿಂದ ರೇಶ್ಮೆಯ ಅರಿವೆಯ ಹೊದಿಕೆಇದ್ದ ಒಂದು ಚಿಕ್ಕ ಹೊತ್ತಿ ಗೆಯನ್ನು ಹೊರಗೆ ತೆಗೆದು ನನ್ನ ಕೈಯಲ್ಲಿ ಇಟ್ಟನು. "ನೋಡಿರಿ, ಶ್ರೀಧರನ ಮೇಲೆ ಅವಳು ಇಟ್ಟಿದ್ದ ಪ್ರೇಮವು ಎಷ್ಟು ಬಲವತ್ತರವಾಗಿತ್ತೆಂಬುದು ನನ್ನ ಮಾತುಗಳಿಗಿಂತಲೂ ಈ ಪುಸ್ತಕದಿಂದ ನಿಮಗೆ ಚೆನ್ನಾಗಿ ಮನವರಿಕೆಯಾಗು ವದು" ಎಂದು ಅಂದನು.

ನಾನು ಪುಸ್ತಕದ ಪುಟಗಳನ್ನು ತಿರುವಿದೆನು. ಸಣ್ಣ ಸುಂದರ ಅಕ್ಷರ ದಲ್ಲಿ ಬರೆದ ಕೆಲವು ಕವಿತೆಗಳು ಅದರಲ್ಲಿ ಇದ್ದವು. "ಇದು ಸುನೇತ್ರೆಯ ಅಕ್ಷರ ವೇನು?" ನಾನು ಕೇಳಿದೆ. "ಅಲ್ಲ, ಶ್ರೀಧರನದು." ಅರವಿಂದನು ಉತ್ತರವಿತ್ತನು.

ಆ ಕವಿತೆಗಳ ನಂತರದ ಪುಟಗಳಲ್ಲಿ ಸುನೇತ್ರೆಯು ಶ್ರೀಧರನಿಗೆ ಬರೆದದ್ದೆಂಬಂತೆ ತೋರುವ ಪತ್ರಗಳಿದ್ದವು. ''ಈ ಪತ್ರಗಳು ಸುನೇತ್ರಾದೇವಿಯು ಶ್ರೀಧರನಿಗೆ ಬರೆದವು. ಹಾಗಿರುವಾಗ ಆವು ಅವನ ಹಸ್ತಾಕ್ಷರದಲ್ಲಿ ಇರುವದು ಹೇಗೆ?" ನಾನೆಂದೆನು. "ಇವು ಮೂಲ ಪ್ರತಿಯಲ್ಲ, ದ್ವಿಪ್ರತಿ.'' "ಪತ್ರಗಳ ದ್ವಿಪ್ರತಿಯನ್ನು ಶ್ರೀಧರನು ಏಕೆ ಮಾಡಿದ?" ನಾನು ಕೇಳಿದೆ.

"ಎಲ್ಲಾ ಓದಿರಿ, ಆಗ ತಿಳಿಯುವದು."

ಮರಾಠಿಯಲ್ಲಿ ಇದ್ದ ಈ ಕವಿತೆಗಳ ಕೆಳಗೆ ಶ್ರೀಧರನು ಇಂಗ್ರೇಜಿಯಲ್ಲಿ ಚಿಕ್ಕ ಟಿಪ್ಪಣೆಯನ್ನು ಬರೆದಿದ್ದನು. ಆದರ ನಂತರ ಪತ್ರಗಳ ದ್ವಿಪ್ರತಿಗಳು ನಾಲ್ಕೈದು ಇದ್ದವು. ಕೆಲವು ಆರೇಳು ಪಂಕ್ತಿಗಳಷ್ಟೇಯಾದರೆ ಕೊನೆಯದು ಮೂರು ಪಾನಿನಷ್ಟು ಉದ್ದವಿತ್ತು. ಕಡೆಯ ಪಾನಿನಲ್ಲಿ ಬೇರೆಯೇ ಹಸ್ತಾಕ್ಷರದಲ್ಲಿ ಬರೆದ ಒಂದು ಹಾಳೆಯನ್ನು ಹಚ್ಚಲಾಗಿತ್ತು. "ಅದು ಸುನೇತ್ರಾದೇವಿಯ ಹಸ್ತಾಕ್ಷರ" ಎಂದು ಅರವಿಂದನು ಹೇಳಿದನು.

"ಅವಳು ಶ್ರೀಧರನಿಗೆ ಕೊಟ್ಟದ್ದ ಒಂದು ಔಷಧದ ಬಾಟಲಿಗೆ ಅದನ್ನು ಸುತ್ತಿದ್ದಳು. ಬಾಟಲಿಯ ಬೂಚನ್ನು ತೆಗೆಯುವಾಗ ಅವನು ಅದನ್ನು ಬೀಸಾಡಿದ್ದನು. ಸಹಜ ಕೂತೂಹಲದಿಂದ ಹೆಕ್ಕಿ ಓದಿದಾಗ ಅದು ಒಂದು ಕವಿತೆಯ ಕರಡು ಪ್ರತಿಯಿದ್ದುದು ಗೊತ್ತಾಯಿತು. ಅಲ್ಲಲ್ಲಿ ತಿದ್ದಿದ್ದರೂ ಅದರಲ್ಲಿ ವ್ಯಕ್ತವಾಗಿದ್ದ ಭಾವನೆಗಳು ಅಸಾಮಾನ್ಯವಿದ್ದವು. ಹೀಗಾಗಿ ಅದನ್ನು ನಾನು ಇಟ್ಟುಕೊಂಡೆನು.

ಆ ಪುಸ್ತಕದಲ್ಲಿನ ಕವಿತೆಗಳನ್ನು ಸಾದ್ಯಂತವಾಗಿ ಓದಿದಾಗ ಶ್ರೀಧರನು ಅವುಗಳ ದ್ವಿಪ್ರತಿಯನ್ನು ಪುಸ್ತಕದಲ್ಲಿ ಬರೆದಿಟ್ಟದ್ದು ಯಾಕೆ ಎಂದು ಮನವರಿಕೆಯಾಯಿತು. ಆ ಕವಿತೆಗಳ ಕೆಳಗೆ ಟಿಪ್ಪಣೆಯನ್ನು ಮಾತ್ರವೇ ಅಲ್ಲ, ಶ್ರೀಧರನು ಅವುಗಳಿಗೆ ಒಂದು ಮುನ್ನುಡಿಯನ್ನೂ ಬರೆದಿದ್ದನು. ತಮ್ಮ ಪ್ರಣಯ ಕತೆಯ ಸವಿ ನೆನಪೆಂದು ಅವುಗಳನ್ನು ಪ್ರಕಾಶಿಸುವ ವಿಚಾರ ಅವನಲ್ಲಿ ಇತ್ತೋ ಏನೋ. ಯಾವದೇ ರೀತಿಯ ಕೃತಕವಿಲ್ಲದೆ ಹೃದಯದಿಂದ ನೇರವಾಗಿ ಹೊರಟ ಈ ಕವಿತೆಗಳು ನಿಜವಾಗಿಯೂ ಯಾವ ಕಲ್ಲೆದೆಯನ್ನೂ ಕರಗಿಸುವಂಥವಿದ್ದವು. ಪ್ರಣಯ ಜೀವನದಲ್ಲಿ ಅವರು ಎದುರಿಸಬೇಕಾಗಿ ಬಂದ ವಿಷ

ಯೆಗಳನ್ನೂ ಪರಿಸ್ಥಿತಿಯು ಕೂಡ ಅವರ ಹೋರಾಟವನ್ನೂ ಸುನೇತ್ರಾದೇವಿಯು ಪತ್ರಗಳು ಹೃದಯಂಗಮವಾಗಿ ವರ್ಣಿಸಿದ್ದವು. ಈ ಪುಸ್ತಕ“ನಿಮ್ಮ ಕೈಗೆ ಹೇಗೆ ಬಂತು? ಶ್ರೀಧರನು ನಿಮಗಾಗಿಯೂ ಒಂದು ಪ್ರತಿಯನ್ನು ಮಾಡಿಟ್ಟನೇ?” ನಾನು ಅರವಿಂದನನ್ನು ಕೇಳಿದೆ. “ಇಲ್ಲ, ಇದನ್ನು ತನಗಾಗಿಯೇ ಬರೆದಿಟ್ಟಿದ್ದನು. ಅವನಿಗೆ ಸುನೇತ್ರೆಯು ಕಳಿಸಿದ ಪ್ರತಿಯೊಂದು ಪತ್ರವನ್ನೂ ಕವಿತೆಯನ್ನೂ ಅವನು ನನಗೆ ನೋಡಲು ಕೊಡುತ್ತಿದ್ದನು. ಕಳೆದ ಮಳೆಗಾಲದಲ್ಲಿ ಅವನು ಅವುಗಳ ದ್ವಿಪ್ರತಿಯನ್ನು ತೆಗೆದು ಇಟ್ಟಿದ್ದನು. ಆ ಕಾಲದಲ್ಲಿ ಅವನು ತನ್ನ ತಂದೆ-ತಾಯಿಗಳೊಡನೆ ಸುನೇತ್ರಾದೇವಿಯ ವಿಷಯದಲ್ಲಿ ಉಂಟಾದ ಮತಭೇದದಿಂದ ತೊಂದರೆಯಲ್ಲಿ ಬಿದ್ದಿದ್ದನು. ಅದು ಹೇಗೆ ಕೊನೆಗೊಂಡೀತೆಂಬುದನ್ನು ಊಹಿಸುವದು ಕೂಡ ದುಃಖದಾಯಕವಾಗಿತ್ತು. ಮೊದಲ ಕೆಲವು ತಿಂಗಳನ್ನು ಬಿಟ್ಟರೆ ಸುನೇತ್ರಾ-ಶ್ರೀಧರರ ಪ್ರೇಮವು ಅವರನ್ನು ಯಾವಾಗಲೂ ಸಂಕಷ್ಟದಲ್ಲೇ ಸಿಲುಕಿಸುತ್ತಿತ್ತು. ಆರಂಭದಲ್ಲಿ ಅಪ್ಸರಾ ಭವನದ ಚಾಲಕಳೊಡನೆ, ನಂತರದಲ್ಲಿ ಶ್ರೀಧರನ ಹೆತ್ತವರೊಡನೆ ಅಂತೂ ಅವರಿಗೆ ಸಂಕಷ್ಟ ತೊಂದರೆ ತಪ್ಪಿದ್ದಿಲ್ಲ. ಅದರಿಂದಾಗಿಯೇ ಈ ಕವಿತೆಗಳು, ಪತ್ರಗಳು, ಅಷ್ಟು ಹೃದಯಸ್ಪರ್ಶಿಯಾಗಿವೆ. ಅವು ಹೃದಯಾನುಭವದ ನೈಜ ಆವಿಷ್ಕರಣವಲ್ಲದೆ ಅವುಗಳಲ್ಲಿ ಯಾವ ಅಸತ್ಯವಾಗಲಿ, ಅತಿರೇಕವಾಗಲಿ ಇಲ್ಲದಿದ್ದುದರಿಂದ, ಯಾವ ಕವಿಕೃತಿಯೂ ಅದನ್ನು ಸರಿಗಟ್ಟಲಾರದು. ಅವುಗಳನ್ನು ಓದಿದ ಹಾಗೆಲ್ಲ ಪುನಃ ಪುನಃ ಓದೋಣವೆನಿಸಿತು. ಒಂದುದಿನ ನಾನು ಶ್ರೀಧರನಿಗೆ ಅಂದೆ “ಇವುಗಳಿಂದ ಹೊರಡುವ ಭಾವಗಳು ನಿಜವಾಗಿಯೂ ಹೃದಯದಿಂದ ಬಂದಂಥವು. ಒಡಕಲು ಕವಿಗಳ ಕಾಲ್ಪನಿಕ ಪ್ರೇಮದ ಶಬ್ದಜಾಲಕ್ಕಿಂತ ಈ ಕೃತಿಗಳು ಎಷ್ಟೋ ಶ್ರೇಷ್ಠವಾದವು. ನನಗೆ ಅವುಗಳನ್ನು ಆಗಿಂದಾಗ ಓದೋಣವೆನಿಸುತ್ತದೆ.” “ಹಾಗಿದ್ದರೆ ಆ ಪ್ರತಿ ನೀನೇ ಇಟ್ಟುಕೋ” ಎಂದು ಶ್ರೀಧರನು ಹೇಳಿದನು. ಹಾಗಾಗಿ ಈ ಪ್ರತಿ ನನ್ನಕಡೆಗೆನೇ ಉಳಿಯಿತು. ಅದಕ್ಕೆ ನಾನು ಮೇಲೆ ಹೇಳಿದಂತೆ ಅವಳ ಹಸ್ತಾಕ್ಷರದಲ್ಲೇ ಇದ್ದ ಅರ್ಧಬರೆದ ಕವಿತೆಯನ್ನು ಹಚ್ಚಿದೆನು.

“ಇದರ ಮೂಲಪ್ರತಿ ಎಲ್ಲಿದೆ?” ನಾನು ಆತುರದಿಂದ ಕೇಳಿದೆ.

"ಅವು ಅವನೊಡನೆಯೇ ಇದ್ದವು." ಅರವಿಂದನು ಅಂದನು.

ಈ ಪ್ರೇಮಜೀವಿಗಳು ತಮ್ಮ ಭವಿತವ್ಯದ ಬಗ್ಗೆ ಎಂದೂ ನಿಶ್ಚಿಂತರಾಗಿದ್ದಿಲ್ಲವೆಂಬಂತೆ ತೋರುತ್ತದೆ. ಬಹುತರ ಎಲ್ಲ ಕವಿತೆಗಳಲ್ಲೂ ಗತವಿದ್ಯಮಾನಗಳ ವರ್ಣನೆ ಹಾಗೂ ಮುಂದೆ ಬರುವ ಜನಗಳ ಕುರಿತಾದ ಆಶೆ, ಆಕಾಂಕ್ಷೆಗಳ ಜೊತೆಯಲ್ಲಿ ಮನಸೀಳುವ ಸಂಶಯ ಹಾಗೂ ಅನುತಾಪಗಳ ಪಲ್ಲವಿಯು ಕಾಣಬರುತ್ತಿತ್ತು. ಎಲ್ಲ ಕವಿತೆಗಳು ಅವಳು ಅಪ್ಸರಾಮಂದಿರದಲ್ಲಿ ಹಾಡಲು ಕಲಿತಿದ್ದ ಗೀತೆಗಳ ಭಾಷೆ ಮತ್ತು ಧಾಟಿಯಲ್ಲಿಯೇ ಬರೆದವಿದ್ದವು .ಆದರೆ ಎಲ್ಲವುಗಳಲ್ಲೂ ಭಾವಗಳು ಯಾವದೇ ಅಲಂಕಾರವಿಲ್ಲದೆ ನೇರವಾಗಿ ಹೃದಯವನ್ನು ಮುಟ್ಟುವಷ್ಟು ಸರಳವಾಗಿದ್ದವು. ಭಾಷೆಯು ನಿರಾಡಂಬರವಾಗಿ ಸುಲಭವೂ ಸ್ಪಷ್ಟವೂ ಆಗಿತ್ತು. ವಿದ್ವಾಂಸರಿಗೆ ಅವುಗಳ ಶೈಲಿಯು ಸುಸಂಸ್ಕೃತವಲ್ಲವೆಂದು ಅನಿಸಬಹುದು. ವೈಯಾಕರಣಿಗಳಿಗೆ ಅವುಗಳಲ್ಲಿ ವ್ಯಾಕರಣ ದೋಷಗಳು ಕಂಡುಬರಬಹುದು. ಆದರೆ ಅವುಗಳಲ್ಲಿ ಗರ್ಭಿತವಾದ ಭಾವನೆಗಳ ಆಳ ಹಾಗೂ ಮಾಧುರ್ಯವು ಅಂತಹ ಯಾವತ್ತೂ ದೋಷವನ್ನು ಮುಚ್ಚುವದು.

ನಡು ರಾತ್ರಿಯಲ್ಲಿ ನಾನೆಷ್ಟು ಸಾರೆ ಎದ್ದೆನು.
ಲೋಭಾನವು ಪೂರಾ ಸುಟ್ಟಿತು. ಕಾಫಿಯು
ತಣಿಯಿತು.
ಕೋಣೆಯು ಮಂಜು ಗಡ್ಡೆಯಂತಾಗಿದೆ
ಗಾಳಿಗೆ ಹಾರ್‍ಯಾಡುವ ತರಗೆಲೆಗಳು ಬಾಗಿಲಿಗೆ
ತಟ್ಟಿದವು
ನೀನೇ ಬಂದೆಯೆಂದು ನಾನು ಭಾವಿಸಿದೆ.

ಇದು ಒಂದು ಗೀತದ ಅನುವಾದ ನೋಡಿರಿ. ಇದು ಬೇರೊಂದು ಟಿಪ್ಪಣಿಯಲ್ಲಿ ಹೇಳಿದಂತೆ ಅವಳು ಅಸ್ವಸ್ಥದಿಂದ ಗುಣಹೊಂದುತ್ತಿರುವ ದಿವಸಗಳಲಿ ಬರೆದುದು.

ಪ್ರೇಮದ ಹಾರೈಕೆಯ ಋಣವು ಎಂದಿಗೂ
ತಿರುಗಿ ಬಾರದು
ಸೂಜಿಯ ಪ್ರತಿಯೊಂದು ಹೊಲಿಗೆಯೂ

ಹೃದಯ ವೀಣೆಯ ತಂತಿಯನ್ನು ಮು
ರಿಯುವಂತೆ ಭಾಸವಾಗುತ್ತದೆ.
ಇಂದಿನಿಂದ ಎಲ್ಲ ರಾತ್ರಿಗಳು ಅತೀ ಉದ್ದವಾಗುವವು
ಹಾಗೂ ಬೇಸರ ಹುಟ್ಟಿಸುವವು
ನಾನು ಒಂದೆರಡು ಕವಿತೆ ಬರೆದೆ.
ನಾನು ಒಂದೆರಡು ಗೀತ ಹಾಡುವೆ
ನಾನು ಕೆಲವೊಂದು ಕನಸು ಕಾಣುವೆ.
ನಾನು ತುಸು ಸ್ವಪ್ನ ಜೀವನವನ್ನು
ಜೀವಿಸುವೆ

ಇದರಿಂದ ಪ್ರೇಮದ ಋಣ ತಿರುಗಿ
ಬಂದೀತೇ?
ಈ ಕೆಳಗಿನದು ಶಾಶ್ವತ ಪ್ರತಿಜ್ಞೆಯ ಕುರಿತು
ದೀಪದ ಶುಭ್ರ ಬೆಳಕಿನಲ್ಲಿ ನಾವು
ಒಬ್ಬರಿಗೊಬ್ಬರು ವಚನ ಕೊಟ್ಟೆವು
ನಮ್ಮ ಪ್ರೇಮ ಅಮರವೆಂದು.
ಆ ಕ್ಷಣದಲ್ಲಿ ಪುಷ್ಪವು ತನ್ನ ಸ್ವಾಮಿಯನ್ನು ಸೇರಿತು
ನದಿಯು ತನ್ನ ವಿರಾಮಸ್ಥಾನವನ್ನು ಮುಟ್ಟಿತು.
ನಾವು ನಮ್ಮ ಪ್ರತಿಜ್ಞೆಯನ್ನು ಕರೀ ಶಾಹಿಯಿಂದ
ಬರೆದೆವು
ಆದರೆ, ನಮ್ಮ ಹೃದಯ ರಕ್ತದಿಂದ ಅದಕ್ಕೆ ಸಹಿ
ಹಾಕಿದೆವು
ನೀನು ಬಡ ವಿದ್ಯಾರ್ಥಿಯೆಂದು ನಾನು ದೂರೀಕರಿಸಲಿಲ್ಲ.
ನಾನು ಬೀದಿಯ ಬದಿಯಲ್ಲಿ ಬಿದ್ದ ಹೂವೆಂದು ನೀನು
ತಿರಸ್ಕರಿಸಲಿಲ್ಲ.
ಪ್ರೇಮದ ಭ್ರಾಂತಿ ಗೃಹದ ಮೊದಲ ಸದಸ್ಯ ನೀನು.
ಅದರ ದ್ವಿತೀಯ ಸದಸ್ಯಳು ನಾನು

ಅವಳು ಅಸ್ವಸ್ಥದಿಂದ ಹಾಸಿಗೆ ಹಿಡಿದಾಗ ಬರೆದ ಈ ಕೆಳಗಿನ ಸಾಲುಗಳಲ್ಲಿ ಮನದೊಳಗಿನ ರೋಷವೂ ಅದರೊಂದಿಗೆ ಅವಳ ಅಚಲ ನಿರ್ಧಾರವೂ ಕಾಣುತ್ತವೆ.

ಕೊಳಲನ್ನು ಕೈಲಿ ಹಿಡಿದು ನಾನು ಪ್ರೇಮಿಗಳ ಪ್ರಲಾಪ
ವನ್ನು ಹಾಡುತ್ತೇನೆ.
ಹೃದಯದ ಗುಪ್ತ ಭೀತಿಯನ್ನು ಯಾರಲ್ಲಿ ಉಸುರಲಿ?
ಯೋಗ್ಯವಾಗಲಿ, ಅಯೋಗ್ಯವಾಗಲಿ, ಆತ್ಮಸಾಕ್ಷಿ
ಯಾಗಿ ನಿನ್ನ ಕೈ ಹಿಡಿದ ವಧು
ಪರರು ಬೇಕಾದ್ದನ್ನು ಹೇಳಲಿ, ನನಗೇಕದರ
ಚಿಂತೆ
ನಮ್ಮ ಲಗ್ನದ ಧಾರ್ಮಿಕ ವಿಧಿಗೆ ಇನ್ನೂ ವಿಳಂ
ಬವೇಕೆ?
ಇಲ್ಲಿಯವರೆಗೆ ನಿನ್ನೊಡನೆ ನಡೆದು ಬಂದೆ
ಇಲ್ಲಿ ದಾರಿ ಕವಲೊಡೆಯುತ್ತದೆ. ಯಾವದಾರಿ
ಹಿಡಿಯಲಿ
ನನ್ನದಾದುದನ್ನು ನನಗೆ ಕೊಡಲು ಹಿಂಜರಿ
ಯುವೆ ಏಕೆ!
ವಿವಾಹದ ವೈಭವವನ್ನು ನಾವು ಸವಿಯಲಿಲ್ಲ.
ಮದುವೆಯ ಮೆರವಣಿಗೆಯ ಸಂಭ್ರಮವನ್ನು
ಅನುಭವಿಸಲಿಲ್ಲ.
ಆದರೆ ರಾತ್ರಿಯ ಏಕಾಂತದಲ್ಲಿ ಹೃದಯ
ಸಾಕ್ಷಿಯಾಗಿ
ನಮ್ಮ ದೇಹಗಳು ಕೂಡಿವೆ. ಆತ್ಮಗಳು
ಒಂದಾಗಿವೆ.
ಪ್ರೇಮದ ಅಗ್ನಿ ಜ್ವಾಲೆಯು ಅನಿಶ್ಚಿತತೆಯ
ಕಣ್ಣೀರಿನಿಂದ ಆರಿಹೋಗಿದೆ
ಮುಡಿದಿದ್ದ ಹೂವಿನ ಎಸಳುಗಳು ಬಾಡಿ ಬಿದ್ದಿವೆ.
ಕೈಯಲ್ಲಿದ್ದ ಕೊಳಲು ಹೋಳಾಗಿದೆ

ಪ್ರಿಯಕರಾ, ಈ ಪರಿಸ್ಥಿತಿಯಲ್ಲಿ ನಾನು ಗುಣಹೊಂದಿ ಏಳುವದು ಹೇಗೆ ಸಾಧ್ಯ?

ಬೇಸಿಗೆಯ ರಜೆಯ ದೀರ್ಘ ಅವಧಿಯಲ್ಲಿ ಶ್ರೀಧರನಿಂದ ಪತ್ರಗಳೇ ಬಾರದಿದ್ದಾಗ ಬರೆದ ಕವಿತೆಯನ್ನೋದಿರಿ.

ಕರಾಳ ವಾಸ್ತವಿಕತೆಯು ಪ್ರೇಮ ಜೀವಿಗಳನ್ನು
ದೂರಕ್ಕೆ ಎಸೆದಿದೆ.
ಪ್ರೇಮದ ಉದ್ಯಾನವು ಮಿಲನದ ನೀರಿಲ್ಲದೆ ಮರು
ಭೂಮಿಯಂತಾಗಿದೆ.
ಅವನು ದೂರದಿಂದ ನನ್ನನ್ನೇ ಚಿಂತಿಸುತ್ತಾನೆಂಬು
ದನ್ನು ಅರಿಯನೇ?
ಮಾನಸಿಕವಾಗಿ ನಾವೆಂದೂ ಒಂದುಗೂಡಿ ಬಿಟ್ಟಿದ್ದೇವೆ
ಆದರೆ, ಈ ಭೌತಿಕ ವಿರಹವನ್ನೇಕೆ ಸಹಿಸಬೇಕು?
ಬೆಳದಿಂಗಳು ಬಿಸಿಯೆನಿಸುತ್ತದೆ ಮಂದಮಾರು
ತವು ಬಿರುಗಾಳಿಯಂತೆ ಭಾಸವಾಗುತ್ತದೆ.
ಮನದ ಬೇಗೆಯು ತಣಿಯುವದೆಂತು?

ಅವಳ ಪ್ರೇಮದ ಆಳವನ್ನು ಈ ಕೆಳಗಿನ ವಾಕ್ಯಗಳಲ್ಲಿ ನೋಡಿರಿ.

"ಅವನ ಅಗಾಧ ಪ್ರೇಮದ ಋಣವನ್ನು ತೀರಿಸಲು ಅಶ್ರುಧಾರೆಯು ಲ್ಲದೆ ನನ್ನಲ್ಲಿ ಬೇರೆ ಏನಿದೆ? ಅವನು ಈಗ ನನ್ನನ್ನು ತೊರೆದು ದೂರ ಹೋದರೂ, ನಾವು ಪ್ರೇಮಸಾಗರದಲ್ಲಿ ಒಂದಾಗಿ ಈಜಾಡಿದ ಸುಖಕ್ಕಾಗಿ ಪ್ರೇಮ ಪಾತ್ರೆಯಿಂದ ಪ್ರೇಮಾಮೃತವನ್ನು ಕೂಡಿಯೇ ಕುಡಿದ ಆನಂದಕ್ಕಾಗಿ ನಾನು ಜಗತ್ತನ್ನೇ ತೊರೆಯಲು ಸಿದ್ಧಳಾಗಿರುವೆ."

ಯಾರೋ ಆಂಗ್ಲಕವಿ ಅಂದಿರುವನಲ್ಲಾ "ನೈಜ ಪ್ರೇಮದ ಹಾದಿಯು ಎಂದೂ ಸುಗಮವಲ್ಲ" ಎಂದು. ಸುನೇತ್ರಾ – ಶ್ರೀಧರರ ಸಂಗತಿಯಲ್ಲೂ ಹಾಗೆಯೇ ಆಗುವ ಲಕ್ಷಣಗಳು ಕಂಡುಬರಹತ್ತಿದವು. ಆದರೆ ಅವನ ಅಂದಿನ ಮನಃಸ್ಥಿತಿಯಲ್ಲಿ ವಾಸ್ತವಿಕತೆಗೆ ಸ್ಥಳವಿರಲಿಲ್ಲ. ಸುನೇತ್ರೆಯಲ್ಲಿ ಅವನಿಟ್ಟಿದ್ದ ನಿಸ್ಸೀಮ ಪ್ರೇಮಕ್ಕೆ ಪ್ರತಿಯಾಗಿ ಅವಳು ಅವನಲ್ಲಿ ಇಮ್ಮಡಿ ಪ್ರೇಮವನ್ನಿಟ್ಟಿದ್ದಳು. ಅವನಿಗೆ ಅದೇ ಸಾಕಾಯಿತು. ಅದೇ ಅವನ ಸರ್ವಸ್ವವಾಯಿತು. ಅವನು ವಾಸ್ತವಿಕತೆಯ ನೆಲವನ್ನು ಬಿಟ್ಟು, ಭಾವನೆಯ ಅಂತರಿಕ್ಷದಲ್ಲಿ ಪ್ರೇಮದ ರೆಕ್ಕೆಗಳಿಂದ ಹಾರ್ರ್ಯಾಡಹತ್ತಿದ್ದನು. ಮೊದಮೊದಲು ಅವನಿಗೆ ಈ ಸುನೇತ್ರೆಯ ಸಂಬಂಧದಿಂದ ಏನೂ ಧನವ್ಯಯವನ್ನು ಎದುರಿಸಬೇಕಾಗಿ ಬರಲಿಲ್ಲ. ಸುನೇತ್ರಾ ದೇವಿಯೇ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದಳು. ಆದರೆ

ಅಪ್ಸರಾಮಂದಿರದಲ್ಲಿ ಅದರ ಚಾಲಕರ ಮುಂದೆ ಅವನು ತನ್ನ ವರ್ಚಸ್ಸನ್ನು ಉಳಿಸಿಕೊಳ್ಳಬೇಕಾಯಿತು. ಹಾಗಾಗಿ ಮೇಜವಾನಿಗಳಿಗೂ ಅಪ್ಸರಾಮಂದಿರದ ಇತರ ಕಾರ್ಯಕ್ರಮಗಳಿಗೂ ಹಣ ಸುರಿಯಬೇಕಾಗಿ ಬಂದಿತು. ಅವನು ತನ್ನ ವರ್ಚಸ್ಸನ್ನು ಈ ರೀತಿ ಉಳಿಸಿಕೊಳ್ಳದಿದ್ದರೆ ಸುನೇತ್ರೆಯ ಸ್ಥಾನಕ್ಕೂ ಧಕ್ಕೆ ಹತ್ತುವ ಸಂಭವವಿದ್ದುದರಿಂದ ಅವಳು ಅವನಿಗೆ ಅವನು ಸಹಿಸಿಕೊಳ್ಳುವಷ್ಟೇ ದ್ರವ್ಯ ವ್ಯಯಿಸಲು ಅನುಮತಿ ಕೊಟ್ಟಳು. ಅವನ ತಂದೆಯು ಶ್ರೀಮಂತನೆಂದು ಅವಳಿಗೆ ಮೊದಲೇ ಗೊತ್ತಿತ್ತು. ಅವನಿಗೆ ತಂದೆಯಿಂದ ಎಷ್ಟು ಹಣ ಬರುತ್ತದೆಂಬ ವಿಷಯದಲ್ಲಿ ಅವಳಿಗೆ ಏನು ಹೇಳಿದ್ದನೊ ಗೊತ್ತಿಲ್ಲ. ಒಂದು ವರ್ಷದ ವೇತನವನ್ನು ಅವನ ಹೆಸರಿನಲ್ಲಿ ಬ್ಯಾಂಕಿನಲ್ಲಿಡುವದು ಅವನ ತಂದೆಯ ಪರಿಪಾಠವಾಗಿತ್ತು. ಶ್ರೀಧರನು ಬ್ಯಾಂಕಿನಿಂದ ಒಂದೇ ಸವನೆ ಹಣ ತೆಗೆಯ ಹತ್ತಿದನು. ತನಗಾಗಿ ಬೆಲೆ ಬಾಳುವ ಉಡುಪನ್ನೂ ಸುನೇತ್ರೆಗಾಗಿ ಆಭರಣಗಳನ್ನೂ ಖರೀದಿ ಮಾಡಿದನು. ಇದರಿಂದ ಅಪ್ಸರಾಮಂದಿರದಲ್ಲಿ ಅವನ ವರ್ಚಸ್ಸು ಬೆಳೆದು ಅವನು ಅಲ್ಲಿಗೆ ಬೇಕೆನಿಸಿದಾಗ ಹೋಗಿ ಬರುವದು ಸುಗಮವಾಯಿತು. ಆದರೆ ವರ್ಷಾಂತ್ಯದಲ್ಲಿ ಅವನ ತಂದೆಯು ವರ್ಷದ ಆರಂಭದಲ್ಲಿ ಅವನಿಗಾಗಿ ಬ್ಯಾಂಕಿನಲ್ಲಿಟ್ಟ ಪೂರಾ ಹಣವು ಖರ್ಚಾಯಿತಲ್ಲದೆ ಬ್ಯಾಂಕಿಗೆ ಅವನೇ ಇನ್ನೂರು ರೂಪಾಯಿ ಕೊಡಬೇಕಾಗಿ ಬಂತು. ಆ ಬ್ಯಾಂಕಿನಲ್ಲಿ ನನ್ನ ಮಿತ್ರನೊಬ್ಬನಿದ್ದುದರಿಂದಲೂ ಶ್ರೀಧರನ ತಂದೆಯ ಸಾಂಪತ್ತಿಕ ಸ್ಥಿತಿ ಬ್ಯಾಂಕಿನವರಿಗೆ ತಿಳಿದಿದ್ದರಿಂದಲೂ ಅವರು ತತ್ಕಾಲಕ್ಕೆ ಸುಮ್ಮನಾದರು.

ಶ್ರೀಧರನ ಹೆತ್ತವರಿಗೆ ಅವನ ಈ ಪ್ರಣಯ ಕತೆ ಗೊತ್ತಿರಲಿಲ್ಲ. ಅವನು ಆರೋಗ್ಯವಂತನಾಗಿ ನಗುಮುಖದಿಂದ ಊರಿಗೆ ಮರಳಿದ್ದನ್ನು ನೋಡಿ ಅವರೂ ಸಂತೋಷಪಟ್ಟರು. ಅಲ್ಲದೆ ಪರೀಕ್ಷೆಯಲ್ಲೂ ಅವನಿಗೆ ಮೇಲಿನ ಸ್ಥಾನ ದೊರಕಿತ್ತು. ಅವನನ್ನು ಅತಿಯಾಗಿ ಪ್ರೀತಿಸುತ್ತಿದ್ದುದರಿಂದ, ಒಬ್ಬನೇ ಮಗನಾದ ಅವನು ಕೇಳಿದಷ್ಟು ಹಣ ಕೊಡಲು ಅವರು ಹಿಂದೆಮುಂದೆ ನೋಡುತ್ತಿರಲಿಲ್ಲ. ಅಷ್ಟು ಹಣ ಯಾಕೆಂದು ಅವರು ಕೇಳುವವರೂ ಆಗಿರಲಿಲ್ಲ. ತಮ್ಮ ಮಗನು ಆರೋಗ್ಯದಲ್ಲಿದ್ದಾನೆ. ಸುಖವಾಗಿದ್ದಾನೆ. ಪರೀಕ್ಷೆಯಲ್ಲಿ ಮೇಲಿನ ಸ್ಥಾನ ಪಡೆದಿದ್ದಾನೆ. ಇದರಿಂದ ಅವರು ತೃಪ್ತರಾಗಿದ್ದರು. ಅಂತಹ ಪರಿಸ್ಥಿತಿ

ಯಲ್ಲಿ ಹಣದ ನೋರೆ ಅವರು ನೋಡುತ್ತಿದ್ದಿಲ್ಲ.

ರಜೆ ಮುಗಿದು ಅವನು ಎರಡನೇ ವರ್ಷದ ವ್ಯಾಸಂಗಕ್ಕಾಗಿ ಬರುವಾಗ ಅವನ ತಂದೆ ಅವನಿಗಾಗಿ ಬ್ಯಾಂಕಿನಲ್ಲಿ ಮೂರು ಸಾವಿರ ರೂಪಾಯಿ ಕಟ್ಟಿದ್ದನು. ಅಗತ್ಯ ಬಿದ್ದರೆ, ಇನ್ನೂ ಐನೂರು ಕಳಿಸುವ ಆಶ್ವಾಸನೆಯನ್ನೂ ಕೊಟ್ಟಿದ್ದನು. ಹಾಗಾಗಿ ಹಣದ ಕೊರತೆಯನ್ನು ಎದುರಿಸಬೇಕಾದ ಪ್ರಸಂಗವು ಅವನಿಗೆ ಬರಲಿಲ್ಲ.

ತರಂಗ ೬

ಶುಭ್ರವಾದ ಪ್ರೇಮಾಕಾಶದಲ್ಲಿ ಎರಡನೇ ವರ್ಷದ ಕೆಲವು ತಿಂಗಳು ಶ್ರೀಧರ ಸುನೇತ್ರೆಯರಿಬ್ಬರೂ ಸ್ವಚ್ಛಂದದಿಂದ ಹಾರ್‍ಯಾಡಿದರು. ಆದರೆ ನೆಲ್ಲನೆ ಅವರಲ್ಲಿ ಮತ್ಸರದ ಕಾರ್ಮೋಡಗಳು ಕವಿಯಲಾರಂಭಿಸಿದವು.

ಇಂತಹ ಒಂದು ಸನ್ನಿವೇಶವು ನನ್ನೆದುರಿನಲ್ಲೇ ನಡೆಯಿತು. ಒಂದು ದಿನ ಸಂಜೆ ಶ್ರೀಧರನು ಅವಳನ್ನು ವಿಹಾರಕ್ಕೆ ಕರೆದೊಯ್ಯಬೇಕೆಂದಿದ್ದನು. ಅವಳು ಅಪ್ಸರಾಮಂದಿರದ ಬೇರೊಬ್ಬ ಪೋಷಕನೊಡನೆ ಅಂದಿನ ಸಂಜೆಯನ್ನು ಕಳೆಯಬೇಕೆಂದು ಮೊದಲೇ ಗೊತ್ತಾಗಿತ್ತು. ಹಾಗಾಗಿ ಅವಳು ಶ್ರೀಧರನೊಡನೆ ಬರಲು ನಿರಾಕರಿಸಿದಳು.

ಶ್ರೀಧರನು ಕೋಪಾತಿರೇಕದಿಂದ ಏನೇನೋ ಬಡಬಡಿಸಹತ್ತಿದನು.

"ನಾನು ಏನು ಮಾಡಬೇಕೆನ್ನುತ್ತೀ? ಅಪ್ಸರಾಮಂದಿರದಿಂದ ನನ್ನ ಹೆಸರನ್ನು ತೆಗೆದು ನಾನು ಇಲ್ಲಿಂದ ಹೊರಗೆ ಬರಲೇ?" ಸುನೇತ್ರೆಯು ಕೇಳಿದಳು.

"ಅಷ್ಟೆಲ್ಲಾ ಮಾತು ಯಾಕೆ? ಅವನೊಡನೆ ಸಂಜೆಯನ್ನು ಕಳೆಯಲು ಇಷ್ಟವಿಲ್ಲದಿದ್ದರೆ ನಿನ್ನನ್ನು ಬಲವಂತಪಡಿಸುತ್ತಾರೆಯೇನು?" ಎಂದನು ಶ್ರೀಧರ.

"ಮಾತೆ (ಅಂದರೆ ಅಪ್ಸರಾಮಂದಿರದ ಚಾಲಕಳು) ಏನಂದಾಳು, ನಾನು ಹಾಗೆ ಮಾಡಿದರೆ? ಈಗಾಗಲೇ ಅವಳು ನಾನು ನಿನಗಾಗಿ ನನ್ನ ಹೆಚ್ಚಿನ ವೇಳೆಯನ್ನು ಕಳೆಯುತ್ತೇನೆಂದೂ ಇತರ ಗಿರಾಕಿಗಳನ್ನು ದುರ್ಲಕ್ಷಿಸುತ್ತೇನೆಂದೂ ಆರೋಪಿಸುತ್ತಾಳೆ. ನಾನು ನಮ್ಮ ಪೋಷಕರನ್ನು ದುರ್ಲಕ್ಷಿಸಿದರೆ ನಮ್ಮ ಮಂದಿರದ ಖರ್ಚು ಹೇಗೆ ನಡೆಯಬೇಕು? ಮಂದಿರದಲ್ಲಿ ಏನು

ಬಾನಿನಿಂದ ಹಣ ಬೀಳುತ್ತದೆಯೆಂದು ಭಾವಿಸಿದ್ದಿಯೇನು? ಸ್ವಲ್ಪ ಸೈರಿಸಿಕೊ ಶ್ರೀಧರ.”

“ಆದರೆ ಅವರ್‍ಯಾರಿಗೂ ತಾನು ಕವಡಿಯಷ್ಟು ಕಿಮ್ಮತ್ತು ಕೊಡುವದಿಲ್ಲವೆಂದು ನೀನೇ ಅನ್ನುತ್ತಿದ್ದಿಯಲ್ಲಾ” ಶ್ರೀಧರನು ತನ್ನ ಅರ್ಥವಿಲ್ಲದ ಹಟವನ್ನು ಬಿಡದೆ ಅನ್ನಹತ್ತಿದನು. “ನಿನ್ನನ್ನು ಈ ಮೂರ್ಖರು ಸುತ್ತುಗಟ್ಟಿ ಮುದ್ದಾಡುವದನ್ನು ನಾನು ಸಹಿಸಲಾರೆ.”

“ನನಗೇನು ಅವರ ಒಡನಾಟದಿಂದ ಆನಂದವಾಗುತ್ತದೆಯೇ? ಎಂದಿಗೂ ಇಲ್ಲ. ನಾನು ಅವರನ್ನು ಮನಸಾ ತಿರಸ್ಕರಿಸುತ್ತೇನೆ. ಆದರೆ ಮಾಡುವದೇನು?” ಇಷ್ಟು ಹೇಳಿ ಸುನೇತ್ರೆಯು ನನ್ನ ಕಡೆಗೆ ಹೊರಳಿ “ನೀವು ಶ್ರೀಧರನಿಗೆ ಬುದ್ಧಿ ಹೇಳಬೇಕು. ನಾನು ಅವನನ್ನು ಎಷ್ಟು ಪ್ರೀತಿಸುತ್ತೇನೆಂದು ಅವನಿಗೆ ಗೊತ್ತಿದೆ. ವೃಥಾ ಏನೂ ಅರಿಯದವನಂತೆ ಹಟ ಹಿಡಿಯುತ್ತಾನೆ” ಅಂದಳು.

ಶ್ರೀಧರನು ತುಸು ಶಾಂತನಾದನು. ಆದರೆ ಮನೆಗೆ ಬಂದ ಮೇಲೆ ಪುನಃ ಕಾಡಹತ್ತಿದನು. ಅವನ ಪ್ರೇಮಜ್ವಾಲೆಯೇ ಅವನನ್ನು ಈಗ ಸುಡಹತ್ತಿತ್ತು.

ಅಪ್ಸರಾಮಂದಿರದ ಮಾತೆಯು ಸುನೇತ್ರೆಯ ಒಲವಿಗೆ ಅಡ್ಡಬರುತ್ತಿರಲಿಲ್ಲ. ಆದರೆ ಸಂಸ್ಕೃತ ಸುಭಾಷಿತದಂತೆ “ಕನ್ಯಾ ವರಯತೇ ರೂಪಂ ಮಾತಾ ವಿತ್ತಂ” ಯಾರಿಗಾಗಿ ಸುನೇತ್ರೆಯು ತನ್ನ ನಿತ್ಯದ ಕಾರ್ಯಕ್ರಮದಲ್ಲಿ ಹೆಚ್ಚಿನ ವೇಳೆ ಕಳೆಯುತ್ತಿದ್ದಳೊ ಅವನಿಂದ ಅಪ್ಸರಾಮಂದಿರಕ್ಕೆ ಆರ್ಥಿಕ ಸಹಾಯವಾಗದಿದ್ದರೆ ಮಾತೆಯಾದರೂ ಎಷ್ಟು ದಿನ ಸಹಿಸ್ಯಾಳು? ಶ್ರೀಧರನಿಗೆ ಈ ಸೂಚನೆಯನ್ನು ಮಾತೆಯು ಪರೋಕ್ಷವಾಗಿಯೂ ಕೊನೆಗೆ ಪ್ರತ್ಯಕ್ಷವಾಗಿಯೂ ಕೊಟ್ಟಿರಬೇಕು. ಅಂತೂ ಆ ವರ್ಷದ ದಿವಾಳಿ ಹಬ್ಬದ ಕಾಲದಲ್ಲಿ ಶ್ರೀಧರನು ಕುಬೇರನ ಅವತಾರವೇ ಆದನು. ಬ್ಯಾಂಕಿನಿಂದ ಎರಡು ಸಾವಿರ ರೂಪಾಯಿ ತೆಗೆದು ಅಪ್ಸರಾಮಂದಿರದಲ್ಲಿ ಆ ಹಬ್ಬದ ದಿನಗಳಲ್ಲಿ ನಡೆಯುವ ಮೇಜವಾನಿ ಹಾಗೂ ಇತರ ಸಮಾರಂಭಗಳ ಸಂಪೂರ್ಣ ವೆಚ್ಚವನ್ನು ತಾನೇ ವಹಿಸಿದನು.

ಸುನೇತ್ರೆಯೂ ಅವನೂ ವಿವಾಹಬದ್ಧರಾಗಲು ಪ್ರತಿಜ್ಞೆ ಗೈದದ್ದು ಇದೇ ಸುಮಾರಿಗೆ. ದಿವಾಳಿ ಹಬ್ಬದ ಉತ್ಸವಗಳು ಕೊನೆಗೊಂಡ ಎಂಟು ದಿನ

ಗಳ ಬಳಿಕ ಒಮ್ಮೆ ಶ್ರೀಧರನು ಅವಳಲ್ಲಿಂದ ಬಂದವನೇ ನನ್ನನ್ನು ಕರೆದು ಉತ್ಸಾಹದಿಂದ ಹೇಳಿದನು.

"ಅರವಿಂದ, ನಾನೂ ಸುನೇತ್ರೆಯೂ ಮದುವೆಯಾಗುವ ವಾಗ್ದಾನ ಮಾಡಿದ್ದೇವೆ."

"ಎಂದು, ಎಲ್ಲಿ?" ಎಂದು ನಾನು ಕೇಳಿದೆನು.

"ನಿನ್ನೆಯೇ ಮಧ್ಯರಾತ್ರಿಯಲ್ಲಿ ನಾವಿಬ್ಬರೂ ಉದ್ಯಾನಕ್ಕೆ ಹೋದೆವು. ಅಲ್ಲಿ ಧ್ರುವತಾರೆಗೂ ಸಪ್ತರ್ಷಿ ಮಂಡಲಕ್ಕೂ ವಂದಿಸಿ ಅವರ ಸಾಕ್ಷಿಯಾಗಿ ಒಬ್ಬರಿಗೊಬ್ಬರು ಪತಿ-ಪತ್ನಿಯಾಗುವ ವಾಗ್ದಾನ ಮಾಡಿದೆವು."

"ಮಾತೆಗೆ ಗೊತ್ತಿದೆಯೇನು?"

"ಇಲ್ಲ, ಇದು ನಮ್ಮ ಗುಪ್ತ ಪ್ರತಿಜ್ಞೆ. ಯಾರಿಗೂ ಬಹಿರಂಗಪಡಿಸುವಂಥದಲ್ಲ."

"ಶ್ರೀಧರ, ನಿಜವಾಗಿಯೂ ನೀನು ಅವಳನ್ನು ಮದುವೆಯಾಗುವಿಯಾ?"

"ಅವಳನ್ನು ಬಿಟ್ಟು ಬೇರೆ ಯಾರನ್ನೂ ಮದುವೆಯಾಗುವದಿಲ್ಲ."

"ಹಾಗಾದರೆ ಇದನ್ನು ನಿನ್ನ ಹಿರಿಯರಿಗೆ ತಿಳಿಯಪಡಿಸಬೇಕಲ್ಲ"

"ಅವರಿಗೆ ಹೇಗೆ ಹೇಳಲಿ? ಅವರು ಸರ್ವಥಾ ಒಪ್ಪಲಿಕ್ಕಿಲ್ಲ."

"ಹಾಗಾದರೆ ಅವಳನ್ನು ಮದುವೆಯಾಗುವದಾದರೆ, ಮದುವೆಯ ಹಾಗೂ ಮುಂದಿನ ಆರ್ಥಿಕ ಏರ್ಪಾಡು?"

"ಅದು ನನಗೆ ಗೊತ್ತಿಲ್ಲ."

ಹಿಂದಿನ ರಾತ್ರಿಯ ಸ್ಮರಣೆಯ ಆನಂದ ಸಾಗರದಲ್ಲಿ ಮುಳುಗಿದ್ದ ಅವನ ತಲೆಯಲ್ಲಿ ಈ ವಿಚಾರವೇ ಹೊಳೆದಿರಲಿಲ್ಲ.

"ನಿನಗೆ ಇದೆಲ್ಲಾ ಹೇಳಲಿಕ್ಕೆ ಕೆಟ್ಟದೆನಿಸುತ್ತದೆ. ಆದರೆ ವಿಚಾರ ಮಾಡು. ಸುನೇತ್ರಾದೇವಿಯು ನಿನ್ನೊಡನೆ ವಿವಾಹವನ್ನು ಬಯಸುವ ನವ ವಧುವಷ್ಟೇ ಅಲ್ಲ; ಅವಳು ಅಪ್ಸರಾಮಂದಿರದ ಪ್ರಥಮತಾರೆ. ಅವಳಿಂದ ಆ ಮಂದಿರಕ್ಕೆ ಎಷ್ಟು ಉತ್ಪನ್ನವಿದೆ, ನೋಡು. ಕಡಿಮೆಯೆಂದರೆ ೧೫೦೦೦ ರೂ. ಗಳನ್ನಾದರೂ ನೀನು ಕೊಡದಿದ್ದರೆ ಆ ಮಂದಿರದ ಮಾತೆಯು ಅವಳನ್ನು ವಿಮೋಚನೆಗೊಳಿಸುವಳೇ? ಒಬ್ಬ ಶ್ರೀಮಂತ ಅಧಿಕಾರಿಯು ಎಂಟು ಸಾವಿರ

ದ ತನಕ ಕೊಡಲು ತಯಾರಾಗಿದ್ದನಂತೆ. ಅದನ್ನು ಕೂಡ ಅವಳು ತಿರಸ್ಕರಿಸಿದ್ದಾಳೆ."

"ನಾನು ದಾರಿ ಕಂಡು ಹಿಡಿಯುವೆ."

"ಯಾವ ದಾರಿ? ನಿನ್ನಪ್ಪ ಹತ್ತು ಸಾವಿರ ಕೊಡಬೇಕು. ಇಲ್ಲವೇ ಯಾರಿಗೂ ಹೇಳದೆ ಕೇಳದೆ ನೀವಿಬ್ಬರೂ ಪಲಾಯನ ಮಾಡಬೇಕು, ಎಲ್ಲಿಗಾದರೂ ದೂರ."

"ನಾನು ವೇಶ್ಯೆಯನ್ನು ಮದುವೆಯಾಗುವೆನೆಂದು ನನ್ನ ತಂದೆಗೆ ಹೇಗೆ ಹೇಳಲಿ? ಪಲಾಯನ ಸೂತ್ರ ನಾಚಿಕೆಗೇಡಿತನದ ಕೆಲಸ. ಅದನ್ನು ನಾನು ಎಂದೂ ಮರೆ ಹೊಗಲಿಕ್ಕಿಲ್ಲ."

"ಅಂದಬಳಿಕ, ಯಾವ ದಾರಿಯಪ್ಪಾ ನೀನು ಕಂಡು ಹಿಡಿಯುವದು?"

ಶ್ರೀಧರ ನಿರುತ್ತರನಾದನು. ಆದರ್ಶದ ಅಂತರಿಕ್ಷದಲ್ಲಿ ಹಾರಾಡುತ್ತಿದ್ದ ಅವನಿಗೆ ವಾಸ್ತವಿಕತೆಯ ಭೂಮಿಯ ದರ್ಶನ ತುಸುವಾಗಿ ಆಗಹತ್ತಿತು. ಆದರೆ ಆ ದರ್ಶನವು ಕ್ಷಣಿಕವಿತ್ತು. ತನ್ನ ಆದರ್ಶವನ್ನು ಸಾಧ್ಯಮಾಡಿಕೊಳ್ಳುವ ಯೋಚನೆಯನ್ನು ಅಲ್ಲೇ ಬಿಟ್ಟು ಅದೇ ಅಂತರಿಕ್ಷದಲ್ಲಿ ಅವನು ಪುನಃ ಹಾರಾಡತೊಡಗಿದನು.

ಇದಾದ ಕೆಲವು ದಿನಗಳ ತರುವಾಯ ಶ್ರೀಧರನ ಆಗ್ರಹದಿಂದ ನಾನು ಅವನೊಡನೆ ಅಪ್ಸರಾಮಂದಿರಕ್ಕೆ ಹೋದೆನು. ನಮ್ಮಿಬ್ಬರಿಗೂ ಅಲ್ಲಿ ಸಂಭ್ರಮದ ಚಹಾಪಾನವಾಯಿತು. ಚಹಾ ಕುಡಿಯುತ್ತಿರುವಾಗ ಸುನೇತ್ರೆಯು ನನ್ನೊಡನೆ "ನೀವು ಅಭಿನಂದನೆ ಕೊಡುವದಿಲ್ಲೇನು ನನಗೆ? ಶ್ರೀಧರನು ಹೇಳಿರಬೇಕಲ್ಲ ನಿಮಗೆ ಸುದ್ದಿ?" ಅಂದಳು. ಅವಳು ನಿತ್ಯದ ಆ ನಗೆಯನ್ನು ಬೀರಿ ಅವರಿಬ್ಬರು ಪರಸ್ಪರ ಸಹವಾಸದಲ್ಲಿ ಆನಂದಪರವಶರಾದುದನ್ನು ನೋಡಿ ನಾನು ಇನ್ನೂ ಅಲ್ಲಿದ್ದರೆ ಅವರಿಗೆ ಅನ್ಯಾಯ ಮಾಡಿದಂತೆ ಆಗುವದು ಎಂದು ನನಗೆ ಅನಿಸಿತು. ತುಸು ಪಶ್ಚಾತ್ತಾಪ ಭಾವನೆಯಿಂದ ನಾನೆಂದೆ "ಸುನೇತ್ರಾದೇವಿಯವರೇ, ನಾನು ಇಂದು ಬಂದುದೇ ಮುಖ್ಯವಾಗಿ ನಿಮ್ಮನ್ನು ಅಭಿನಂದಿಸಲು. ನಿಜವಾದ ಪ್ರೇಮ ಜೀವಿಗಳನ್ನು ನಿಸರ್ಗವೇ ಒತ್ತಟ್ಟಿಗೆ ತರುತ್ತದೆ. ಅದಕ್ಕೆ ಮನುಷ್ಯ ಪ್ರಯತ್ನದ ಅಗತ್ಯವಿಲ್ಲ. ನಿಮ್ಮಿಬ್ಬರಿಗಾಗಿ ನಾನು

ಆನಂದಿಸುವೆ. ನನ್ನಿಂದ ನಿಮ್ಮಿಬ್ಬರಿಗೆ ಏನಾದರೂ ಸಹಾಯವಾಗುವದಿದ್ದರೆ ನಾನು ಅದನ್ನು ಮಾಡಲು ಯಾವಾಗಲೂ ಸಿದ್ಧನೆ. ಇಲ್ಲಿಗೆ ಬಂದು ನಿಮ್ಮೊಡನೆ ವಸ್ತುಸ್ಥಿತಿಯ ವಿಚಾರ ಮಾಡಿದರೆ ಒಳಿತೆಂದು ಶ್ರೀಧರನೇ ಸೂಚಿಸಿದನು. ಏನಿದ್ದರೂ ವಿವಾಹವೆಂದರೆ ಒಂದು ವ್ಯವಹಾರವೇ ಅಲ್ಲವೇ?''

"ನೀವು ಬಂದದ್ದು ಬಹಳ ಚೆನ್ನಾಯಿತು. ಅರವಿಂದ, ನಾನೂ ಆ ವಿಷಯದಲ್ಲಿ ನಿಮ್ಮೊಡನೆ ವಿಚಾರ ವಿನಿಮಯ ಮಾಡಬೇಕೆಂದಿದ್ದೆ. ನೀವು ಶ್ರೀಧರನ ಪರಮ ಮಿತ್ರರು. ನನಗೂ ನಿಮಗೂ ಭಾಷಾಬಾಂಧವ್ಯವಾದರೂ ಇದೆಯಲ್ಲವೇ? ನೋಡಿರಿ, ಶ್ರೀಧರನು ತನ್ನ ತಂದೆಗೆ ಅತಿಯಾಗಿ ಅಂಜುತ್ತಾನೆ. ಅವರು ಅಂತಹ ಕಠಿಣ ಹೃದಯದವರೇನು? ಅವರಿಗೆ ಎಲ್ಲಾ" ಸಂಗತಿಯನ್ನೂ ಹೇಳಿ ಅವರ ಮನ ಒಲಿಸುವ ಸಾಧನವೇನೂ ಇಲ್ಲವೇ?

ಏನು ಹೇಳುವದೆಂದು ನನಗೆ ಉತ್ತರವೇ ಹೊಳೆಯಲಿಲ್ಲ. ನನ್ನ ಮೌನವನ್ನು ನೋಡಿ ಅವಳು ಮುಂದರಿಸಿದಳು. ''ಅವನ ತಂದೆಯೂ ಒಬ್ಬ ವೇಶ್ಯೆಯನ್ನು ಇಟ್ಟುಕೊಂಡಿರುವರಂತೆ. ಅವಳೂ ನನ್ನಂತೆಯೇ ಗೋವೆಯವಳಂತೆ. ನನ್ನನ್ನು ಬಿಟ್ಟು ತಾನು ಬದುಕಲಾರೆ ಎಂದು ಶ್ರೀಧರನು ನನಗೆ ಹೇಳುತ್ತಾ ಇದ್ದಾನೆ. ಅದನ್ನೇ ಅವನ ತಂದೆಗೆ ನಂಬುವ ಹಾಗೆ ಹೇಳಿದರೆ ಮಗನ ಮೇಲಿನ ಪ್ರೀತಿಯಿಂದ ಅವರು ನಮ್ಮಿಬ್ಬರ ಮದುವೆಗೆ ಒಪ್ಪಿಗೆ ಕೊಡಲಿಕ್ಕಿಲ್ಲವೇ?"

ಶ್ರೀಧರನ ತಂದೆಯು ಒಪ್ಪಿಗೆ ಕೊಡುವನೆಂಬ ಕಲ್ಪನೆಯು ಅವಳ ಮುಖವನ್ನು ಬೆಳಗಿಸಿತು. ಅವಳು ಮೃದುವಾಗಿ ನಕ್ಕಳು. ಅವಳ ಆಸಕ್ತಿ, ವೇಶ್ಯೆಯಾದರೂ ಕುಲೀನ ಸ್ತ್ರೀಯರನ್ನೂ ಮೀರುವ ಆಕೆಯ ಶ್ರೀಧರನಲ್ಲಿಟ್ಟಿರುವ ನಿಷ್ಕಳಂಕ ಪ್ರೇಮ, ಆಕೆಯ ಸುಸಂಸ್ಕೃತ ಮನಸ್ಸು, ಅವಳ ಅಸದೃಶ ಸೌಂದರ್ಯ, ಮನಮೋಹಕ ಮಂದಸ್ಮಿತ ಇವುಗಳನ್ನೆಲ್ಲಾ ನೋಡಿ ನಿವೃತ್ತ ನ್ಯಾಯಾಧೀಶ ರಾಮಚಂದ್ರ ಹೆಗಡೆಯವರು ಒಪ್ಪಿಗೆ ಕೊಡಬಹುದೇನೋ ಎಂದು ಕ್ಷಣಕಾಲ ನನಗೂ ಅನಿಸಿತು. ಆದರೆ ಶಿರಸಿಯ ಹವ್ಯಕ ಸಮಾಜದ ಪುರಾಣಮತವಾದಿ ಧೋರಣೆ, ಆ ಸಮಾಜದಲ್ಲಿ ಅವರಿಗಿರುವ ಸ್ಥಾನಮಾನ ಇವುಗಳನ್ನು ನೋಡುವಾಗ, ಅದು ಎಂದಿಗೂ ಸಾಧ್ಯವಿಲ್ಲವೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿತ್ತು.

‘‘ಸುನೇತ್ರಾದೇವಿಯವರೇ, ವ್ಯವಹಾರ್ಯವಲ್ಲದ ವಿಚಾರಗಳಿಂದ ತಲೆ ತುಂಬಿಸಿಕೊಳ್ಳುವದರಲ್ಲಿ ಏನೂ ಉಪಯೋಗವಿಲ್ಲ. ರಖೇಲಿಯ ಮಾತು ಬೇರೆ. ಆದರೆ, ಬ್ರಾಹ್ಮಣ ಸಮಾಜದ ನಾಯಕರಲ್ಲಿ ಒಬ್ಬರಾದ ಆ ನಿವೃತ್ತ ನ್ಯಾಯಾಧೀಶರು ವೇಶ್ಯಾ ಬಾಲಿಕೆಯನ್ನು ಸೊಸೆಯಾಗಿ ಎಂದೆಂದಿಗೂ ಸ್ವೀಕರಿಸುವವರಲ್ಲ. ಇದರಲ್ಲಿ ನಿಮಗೆ ತಿಲಮಾತ್ರವೂ ಸಂಶಯ ಬೇಡ” ಎಂದು ನನ್ನ ನಿಜಾಭಿಪ್ರಾಯವನ್ನು ನಿಸ್ಸಂಕೋಚವಾಗಿ ತಿಳಿಸಿದೆನು.

“ನಿಜ!” ಇಷ್ಟನ್ನು ಹೇಳಿ ಸುನೇತ್ರೆಯು ತನ್ನ ಶಿರವನ್ನು ಬಾಗಿಸಿದಳು. ಆ ಕೃತಿಯಲ್ಲಿ ವಿನಯ ತುಂಬಿತ್ತು. ಒಂದೆರಡು ನಿಮಿಷದ ನಂತರ ಮುಖವನ್ನು ಮೇಲಕ್ಕೆತ್ತಿ “ನಾನು ಸಾರ್ವಜನಿಕ ಸ್ಥಳದಲ್ಲಿ ಬೆಳೆದಿರುವ ಕಾಡಿನ ಹೂವು. ಒಬ್ಬರೇ ಯಜಮಾನರ ಉದ್ಯಾನದಲ್ಲಿ ಬೆಳೆದ ಪುಷ್ಪವಲ್ಲ.”

ನನಗೊಂದು ವಿಚಾರ ಮೂಡಿತು. “ತಪ್ಪು ತಿಳಿಯಬೇಡಿರಿ. ಶ್ರೀಧರನನ್ನು ಕುಲೀನ ಹುಡುಗಿಯೊಡನೆ ಮದುವೆಯಾಗಲು ಬಿಟ್ಟು ಆ ಬಳಿಕ ಅವನ ರಖೇಲಿಯಾಗಿ ಇರಲು ನಿಮ್ಮ ಒಪ್ಪಿಗೆ ಇದ್ದೀತೇ? ನನಗೆ ಇದೊಂದೇದಾರಿ ತೋರುತ್ತದೆ.’’

‘‘ರಖೇಲಿಯಾಗಿರುವದು ನನ್ನ ಗುರಿಯಾಗಿದ್ದರೆ ಸಮಸ್ಯೆಯೇ ಉತ್ಪನ್ನವಾಗುತ್ತಿದ್ದಿಲ್ಲವಲ್ಲ.’’ ಸುನೇತ್ರೆಯು ಯಾವದೇ ಉದ್ದೇಶವಿಲ್ಲದೆ ಹೇಳಿದಳು.

‘‘ಅದು ಲೋಕರೂಢಿ.” ನಾನೆಂದೆ.

‘‘ಸುಡಿರಿ, ಅಂತಹ ಲೋಕ ರೂಢಿಯನ್ನು!” ಶ್ರೀಧರನು ಆವೇಶದಿಂದ ನುಡಿದನು. ‘‘ತಾವು ಪ್ರೀತಿಸುವವರನ್ನು ವಿವಾಹವಾಗಲು ಈ ಹಾಳು ಸಮಾಜವೇಕೆ ಅಡ್ಡಬರಬೇಕು? ಸುನೇತ್ರೆಯಲ್ಲದೆ ಬೇರೆ ಸ್ತ್ರೀಯರನ್ನು ನಾನು ಕಣ್ಣೆತ್ತಿ ಸಹ ನೋಡಲಿಕ್ಕಿಲ್ಲ.’’

‘‘ಹಾಗಿದ್ದರೆ ಬೇರೆ ಹುಡುಗಿಯನ್ನು ಮದುವೆಯಾಗು ಎಂದು ನಾನು ಸರ್ವಥಾ ಹೇಳಲಿಕ್ಕಿಲ್ಲ. ಅದು ಅವಳಿಗೂ ದ್ರೋಹ ಮಾಡಿದಂತಾಗುವದು” ನಾನೆಂದೆ.

ಇವೆಲ್ಲಾ ಮಾತುಗಳು ನಡೆಯುವಾಗ ಸುನೇತ್ರೆಯು ಅತ್ಯಂತ ಶಾಂತ ಚಿತ್ತಳಾಗಿ ಎಲ್ಲವನ್ನೂ ಕೇಳುತ್ತಿದ್ದಳು.

"ಆಯಿತು ಹಾಗಿದ್ದರೆ, ಆ ಸುದಿನದ ಹಾದಿ ನೋಡುತ್ತಲಿರುತ್ತೇನೆ. ಆದರೆ, ಈಗಿನ ಜೀವನದಿಂದ ಆದಷ್ಟು ಬೇಗನೇ ಬಿಡುಗಡೆಯಾದರೆ ಒಳಿತಾಗುತ್ತಿತ್ತು. ಮುಂದೆ ಎಂದಾದರೂ ಒಂದು ದಿನ ನನ್ನನ್ನು ಮುಕ್ತಗೊಳಿಸಲು ಬೇಕಾಗುವ ದ್ರವ್ಯವನ್ನು ಶ್ರೀಧರನು ದೊರಕಿಸಿದಾಗ ನಾವು ಮದುವೆಯಾಗಿ ಅವನ ಹೆತ್ತವರನ್ನು ಸಮಾಧಾನಗೊಳಿಸುವ ಸಾಧನವನ್ನು ಶೋಧಿಸುವೆವು. ನಾನೆಂದೂ ಅವನ ಹಾಗೆ ಅವನ ಹೆತ್ತವರ ನಡುವೆ ಬರಲು ಇಚ್ಛಿಸುವದಿಲ್ಲ. ಆದರೆ ಈಗ ನಾನು ನಡೆಸುವ ಜೀವನವು ಹೆಚ್ಚು ದಿನ ಸಾಗಲಾರದು. ಈ ಜೀವನವೆಂದರೆ ಮೇಣಬತ್ತಿಯನ್ನು ಎರಡೂ ಕಡೆ ಉರಿಸಿದಂತೆ. ವರ್ಷದ ಮುನ್ನೂರಾ ಅರವತ್ತೈದು ದಿನಗಳಲ್ಲಿಯೂ ಪ್ರತಿರಾತ್ರಿ ಕುಡಿತ, ಕುಣಿತ, ಗಾನ, ನಗೆ. ಯಾರನ್ನು ಒದ್ದು ಹೊರಗೆ ಹಾಕೋಣವಿರುತ್ತದೊ ಅಂತಹ ಕೊಬ್ಬಿದ ಕತ್ತೆಮಕ್ಕಳನ್ನು, ಕೇವಲ ಅವರಿಂದ ರೊಕ್ಕ ಪಡೆಯಲಿಕ್ಕೆ ಬೇಕಾಗಿ ಅವರನ್ನು ಸಂತೋಷದಿಂದಿರಿಸಲು ಅವರೊಡನೆ ನಗಬೇಕು. ಅವರನ್ನು ಬಾಯಿತುಂಬ ಹೊಗಳಿ ಅಟ್ಟಕ್ಕೇರಿಸಬೇಕು. ತುಚ್ಛ ಕುನ್ನಿಮಕ್ಕಳ ಆಲಿಂಗನ ಚುಂಬನಗಳಿಂದ ಹೃದಯ ಕುಗ್ಗಿ ಹೊಟ್ಟೆಯಲ್ಲಿನ ಹಿಟ್ಟು ಬಾಯೊಳಗೆ ಬಂದರೂ, ಆ ವಾಂತಿಯನ್ನೂ ಅವರಿಸಿಕೊಂಡು ನಾವು ಹೊರಗೆ ಸಂತೋಷದ ಸೋಗನ್ನು ಧರಿಸಬೇಕು. ಅವರಿಗಾಗಿ ದೇಹವನ್ನು ವಿರಾಮವಿಲ್ಲದೆ ಸವೆಯಿಸಬೇಕು. ಇಂತಹ ಮನಸ್ಸಿಗೆ ಒಗ್ಗದ ಕೃತಕ ಜೀವನದಿಂದ ಮನಸ್ಸು ಕುಗ್ಗಿ ಹೋಗಿ ಸರಳ, ನೈಜ ಸುಖವನ್ನು ಅನುಭವಿಸಲು ನಾವು ಅಸಮರ್ಥರಾಗುವೆವಷ್ಟೇ ಅಲ್ಲ, ಈ ರೀತಿ ಬಿಡುವಿಲ್ಲದೆ ದೇಹವನ್ನು ಸವೆಯಿಸುವದರಿಂದ ಅದರ ಒತ್ತಡದಿಂದ ಯೌವನವು ಎರಡೇ ದಿನದ ಮಾತಾಗಿ ಮೈ ತುಂಬುವಾಗಲೇ ಮುಪ್ಪು ಬರುವದು.

ಅವಳ ಈ ಉದ್ಗಾರಗಳ ಸ್ಫೋಟವನ್ನು ಕೇಳಿ ನನಗೆ ನಗೆ ನಿಗ್ರಹಿಸಲಾಗಲಿಲ್ಲ. ಆದರೆ ತಡೆಯಲಾರದ ಹೃದಯದಿಂದ ಉಕ್ಕಿಬಂದ ವಿಚಾರಗಳವು. ಸುನೇತ್ರಾ ಮುಂದುವರಿಸಿದಳು.

"ನಾನು ನೋಡುತ್ತೇನೆ. ಜಗತ್ತಿನಲ್ಲಿ ಉಬ್ಬಿದ ಮೈಯ ಡೊಳ್ಳು ಹೊಟ್ಟೆಯ ಶ್ರೀಮಂತ ಕುನ್ನಿಮಕ್ಕಳಿಗೆ ಏನೂ ಕೊರತೆ ಇಲ್ಲ. ಅದು ಯಾಕೆ

ಹೀಗೆಂದು ನಾನು ಹಲವು ಸಾರೆ ಯೋಚಿಸಿದ್ದೇನೆ. ಒಳ್ಳೆಯದೆಲ್ಲವೂ ಒಂದೇ ಕಡೆ ಇರುವದಿಲ್ಲ. ದೈವವು ಐಶ್ವರ್ಯವನ್ನು ಹೆಚ್ಚಾಗಿ ಮೂರ್ಖರಿಗೆ. ಕುರೂಪಿಗಳಿಗೆ ಕೊಡುತ್ತದೆ.

ಸ್ಫುರದ್ರೂಪ ಹಾಗೂ ತೀಕ್ಷ್ಣ ಬುದ್ಧಿ ದಯಪಾಲಿಸುವಾಗ ಅದರ ಜೊತೆಯಲ್ಲೇ ಯಾವಾಗಲೂ ದಾರಿದ್ರ್ಯವಿದ್ದೇ ಇರುತ್ತದೆ.

ಈ ರೀತಿ ಒಳಿತು, ಕೆಡಕುಗಳ ಹಂಚುವಿಕೆಯು ನಿಸರ್ಗದ ನ್ಯಾಯಪದ್ಧತಿಯೋ ಏನೊ! ಲಕ್ಷ್ಮಿ-ಸರಸ್ವತಿಯರು ಒತ್ತಟ್ಟಿಗೆ ಎಂದೂ ಇರುವದಿಲ್ಲವಂತಲ್ಲ.

ಈ ಮಾತುಗಳಿಗೆ ನಾವು ನಗುವಾಗ, ಸುನೇತ್ರೆಯು "ನಗುತ್ತೀರಿ, ಯಾಕೆ? ನಿಜವಲ್ಲವೇನು ನಾನು ಹೇಳಿದ್ದು? ಶ್ರೀಧರನು ನನಗೆ ಲಭಿಸಿದ್ದಕ್ಕಾಗಿ ದೇವರಿಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದ್ದೇನೆ, ಗೊತ್ತೆ? ಎಷ್ಟು ಒಳ್ಳೆಯ ಹುಡುಗ. ಎಂತಹ ನಿರ್ಮಲ ಅಂತಃಕರಣ ಅವನದು. ನಾವು ಜಗತ್ತಿನ ಯಾವ ಮೂಲೆಗೆ ಹೋದರೂ ಎಂತಹ ಬಡತನ ಬಂದರೂ ನಾವಿಬ್ಬರು ಸುಖದಿಂದಲೇ ಇರುವೆವು." ಎಂದು ಹೇಳಿ ಶ್ರೀಧರನ ಕೈ ಹಿಡಿದು ತನ್ನ ಮುಖದೆಡೆಗೆ ಒಯ್ದು ಬಲವಾಗಿ ಮುದ್ದಿಸಿದಳು. ಅವರ ಪ್ರೇಮೋನ್ಮಾದದಲ್ಲಿ ಅವರನ್ನು ಬಿಟ್ಟು ನಾನು ನನ್ನ ಕೊಠಡಿಗೆ ಮರಳಿದೆನು. ಸಮಸ್ಯೆಯು ಬಗೆಹರಿಯುವ ಲಕ್ಷಣಗಳು ಯಾವವೂ ತೋರುತ್ತಿರಲಿಲ್ಲ. ತಾನು ಆ ಸುದಿನದ ದಾರಿ ಕಾಯುತ್ತ ಇರುತ್ತೇನೆ ಎಂದು ಸುನೇತ್ರೆಯು ಹೇಳಿದರೆ, ಆಕೆಯು ಯೋಚಿಸಿದ್ದಕ್ಕಿಂತ ಬೇಗನೇ ಏನಾದರೂ ಸಂಭವಿಸುವದೆಂದು ನನ್ನ ಅಂತರಾತ್ಮದಲ್ಲಿ ಅನಿಸಹತ್ತಿತು. ತನ್ನ ಸದ್ಯದ ಜೀವನದ ಬಗ್ಗೆ ಆಕೆ ತೆಗೆದ ಉದ್ಗಾರಗಳನ್ನು ಕೇಳಿ ನನಗೆ ಅವಳ ವಿಷಯದಲ್ಲಿ ಕನಿಕರ ಹುಟ್ಟಿತು. ಶ್ರೀಧರನಲ್ಲಿ ಆಕೆಯು ಇಟ್ಟಿರುವ ನಿಸ್ಸೀಮಪ್ರೇಮ, ಅವನನ್ನು ಮದುವೆಯಾಗಬೇಕೆಂಬ ಆಕೆಯ ಧೃಢ ನಿರ್ಧಾರ ಇವುಗಳ ಕುರಿತು ಮನಸ್ಸಿನಲ್ಲಿ ವಿಚಾರ ಮಾಡುವಾಗ ಆಕೆ ದುರಂತನಾಟಕದ ನಾಯಿಕೆಯಾಗುವಳೊ ಎಂಬ ಭೀತಿಯು ತಲೆ ಎತ್ತಲಾರಂಭಿಸಿತು. ಯಾಕಂದರೆ, ಯಾವದಕ್ಕೂ ಅವನ ಮನೆತನದ ಹಿರಿಯಸ್ಥಾನ ಅಡ್ಡಬರುತ್ತಿತ್ತು. ಈ ಅಭೇದ್ಯ ಭಿತ್ತಿಯ ಅರಿವು ಶ್ರೀಧರನಿಗೆ

ಈಗೀಗ ಆಗಹತ್ತಿತು. ಆ ವಿಷಯದಲ್ಲಿ ಹಲವು ಸಾರೆ ನಾವು ಚರ್ಚಿಸಿದ್ದುಂಟು. ಆದರೆ ನಿವಾರಣೆಯ ಯಾವ ದಾರಿಯೂ ಕಾಣಲಿಲ್ಲ. ಶ್ರೀಧರನು ತಂದೆಗೆ ಅಂಜುತ್ತಿದ್ದನು. ತಾಯಿಯ ವಿಷಯದಲ್ಲಿ ಅವನಿಗೆ ಅತ್ಯಂತ ಆದರವಿತ್ತು. ಹಾಗಾಗಿ ಇಬ್ಬರ ಮಾತನ್ನೂ ಮೀರುವ ಮನೋಧೈರ್ಯ ಅವನಲ್ಲಿರಲಿಲ್ಲ. ಅವನ ತಂದೆಯು ಗೋವೆಯ ವೇಶ್ಯೆಯೋರ್ವಳನ್ನು ಇಟ್ಟುಕೊಂಡಿದ್ದರೆಂಬು ದೇನೋ ನಿಜವಿತ್ತು. ಆದರೆ ನಮ್ಮ ಹಳ್ಳಿಗಳ ಸರಂಜಾಮೀ ಸಮಾಜ ವ್ಯವ ಸ್ಥೆಯಲ್ಲಿ ಅದು ಅವರ ಸ್ಥಾನ–ಮಾನಗಳಿಗೆ ಕೊರತೆಯನ್ನು ತರುವಂಥ ಸಂಗ ತಿಯಾಗಿರಲಿಲ್ಲ. ಅವರು ಧಾರ್ಮಿಕ ವಿಧಿಯಿಂದ ತಮ್ಮ ಜಾತಿಯ ಹೆಣ್ಣನ್ನು ಮದುವೆಯಾಗಿದ್ದರು. ಹಾಗೂ ಸಂತಾನಲಾಭವನ್ನು ಪಡೆದಿದ್ದರು. ಸರಕಾರ ದಲ್ಲಿ ಮೇಲಿನ ಹುದ್ದೆಯಲ್ಲಿದ್ದು ನಿವೃತ್ತರಾದ ಬಳಿಕ ಸ್ವಜಾತಿಯ ಧಾರ್ಮಿಕ ಹಾಗೂ ಇತರ ಕಾರ್ಯಕಲಾಪಗಳಲ್ಲಿ ಆಸ್ಥೆಯಿಂದ ಭಾಗವಹಿಸುತ್ತಿದ್ದರು. ಅಂಥವರು ನಡುವಯಸ್ಸು ದಾಟಿದ ಮೇಲೆ ತಮ್ಮ ವೈಯಕ್ತಿಕ ಸುಖಕ್ಕಾಗಿ ಒಬ್ಬ ವೇಶ್ಯಾ ಸ್ತ್ರೀಯನ್ನಿಟ್ಟುಕೊಂಡರೆ, ಅದರಲ್ಲಿ ಯಾರಿಗೂ ದೋಷ ಕಾಣು ತ್ತಿರಲಿಲ್ಲ. ಆದರೆ ನಿವೃತ್ತ ನ್ಯಾಯಾಧೀಶರೂ ಸಮಾಜಧುರೀಣರೂ ಆದ ಅವರ ಏಕಮಾತ್ರ ಪುತ್ರ, ನಾಳೆ ತಂದೆಯಂತೆಯೇ ಉಚ್ಚ ಅಧಿಕಾರ ಸ್ಥಾನ ವನ್ನು ಪಡೆಯುವವನು. ಕಾಲೇಜ ಶಿಕ್ಷಣ ಮುಗಿಸುವಾಗಲೇ ವೇಶ್ಯೆಯವರ ಹುಡುಗಿಯನ್ನು ಮದುವೆಯಾಗುವದೆಂದರೆ!! ಆ ಕಲ್ಪನೆಯು ಕೂಡ ಅವರಿಗೆ ಸಹನವಾಗಲಿಕ್ಕಿಲ್ಲ.

ಶ್ರೀಧರನು ಎಮ್. ಎಸ್‌ಸಿ ಆದ ಬಳಿಕ ಪಿಎಚ್. ಡಿ ಪದವಿ ಗಾಗಿ ತಯಾರಿ ನಡೆಸುವವನಿದ್ದನು. ಹಾಗಿದ್ದರೆ ಇನ್ನೂ ಎರಡು ವರ್ಷಗಳ ಕಾಲ ಅವರಿಬ್ಬರ ಪ್ರಣಯ ಜೀವನ ಈಗಿನಂತೆಯೇ ನಡೆಯಬಹುದು. ಅಲ್ಲದೆ ವಿವಾಹ ಬದ್ಧವಾಗುವ ಮುಂದಿನ ಹೆಜ್ಜೆ ಹೇಗೆ ಸಾಧ್ಯ?

ಮುಂದಿನ ಹೆಜ್ಜೆ ಹಾಗಿರಲಿ, ಇಷ್ಟು ದಿವಸಗಳ ವರೆಗೆ ನಡೆದಂತೆ ಶ್ರೀಧ ರನು ಇನ್ನು ಮುಂದೆ ನಡೆಯುವದು ಸಹ ಕಠಿಣವಾಯಿತು. ದಿವಾಳಿಯ ದಿವಸಗಳಲ್ಲಿ ಮೇಲೆ ಹೇಳಿದಂತೆ ರೂ. ೨೦೦೦ ವೆಚ್ಚ ಮಾಡಿದ ತರುವಾಯ ಬ್ಯಾಂಕಿನಲ್ಲಿ ಹೇಳುವಷ್ಟು ಏನೂ ಹಣ ಉಳಿದಿರಲಿಲ್ಲ. ಮುಂದೆ [illegible] ಏನೂ

ಹೀಗೆಂದು ನಾನು ಹಲವು ಸಾರೆ ಯೋಚಿಸಿದ್ದೇನೆ. ಒಳ್ಳೆಯದೆಲ್ಲವೂ ಒಂದೇ ಕಡೆ ಇರುವದಿಲ್ಲ. ದೈವವು ಐಶ್ವರ್ಯವನ್ನು ಹೆಚ್ಚಾಗಿ ಮೂರ್ಖರಿಗೆ. ಕುರೂಪಿಗಳಿಗೆ ಕೊಡುತ್ತದೆ.

ಸ್ಫುರದ್ರೂಪ ಹಾಗೂ ತೀಕ್ಷ್ಣಬುದ್ಧಿ ದಯಪಾಲಿಸುವಾಗ ಅದರ ಜೊತೆಯಲ್ಲೇ ಯಾವಾಗಲೂ ದಾರಿದ್ರ್ಯವಿದ್ದೇ ಇರುತ್ತದೆ.

ಈ ರೀತಿ ಒಳಿತು, ಕೆಡಕುಗಳ ಹಂಚುವಿಕೆಯು ನಿಸರ್ಗದ ನ್ಯಾಯ ಪದ್ಧತಿಯೋ ಏನೊ! ಲಕ್ಷ್ಮಿ-ಸರಸ್ವತಿಯರು ಒತ್ತಟ್ಟಿಗೆ ಎಂದೂ ಇರುವದಿಲ್ಲವಂತಲ್ಲ.

ಈ ಮಾತುಗಳಿಗೆ ನಾವು ನಗುವಾಗ, ಸುನೇತ್ರೆಯು "ನಗುತ್ತೀರಿ, ಯಾಕೆ? ನಿಜವಲ್ಲವೇನು ನಾನು ಹೇಳಿದ್ದು? ಶ್ರೀಧರನು ನನಗೆ ಲಭಿಸಿದ್ದಕ್ಕಾಗಿ ದೇವರಿಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದ್ದೇನೆ, ಗೊತ್ತೆ? ಎಷ್ಟು ಒಳ್ಳೆಯ ಹುಡುಗ. ಎಂತಹ ನಿರ್ಮಲ ಅಂತಃಕರಣ ಅವನದು. ನಾವು ಜಗತ್ತಿನ ಯಾವ ಮೂಲೆಗೆ ಹೋದರೂ ಎಂತಹ ಬಡತನ ಬಂದರೂ ನಾವಿಬ್ಬರು ಸುಖದಿಂದಲೇ ಇರುವೆವು." ಎಂದು ಹೇಳಿ ಶ್ರೀಧರನ ಕೈ ಹಿಡಿದು ತನ್ನ ಮುಖದೆಡೆಗೆ ಒಯ್ದು ಬಲವಾಗಿ ಮುದ್ದಿಸಿದಳು. ಅವರ ಪ್ರೇಮೋನ್ಮಾದದಲ್ಲಿ ಅವರನ್ನು ಬಿಟ್ಟು ನಾನು ನನ್ನ ಕೊಠಡಿಗೆ ಮರಳಿದೆನು. ಸಮಸ್ಯೆಯು ಬಗೆಹರಿಯುವ ಲಕ್ಷಣಗಳು ಯಾವವೂ ತೋರುತ್ತಿರಲಿಲ್ಲ. ತಾನು ಆ ಸುದಿನದ ದಾರಿ ಕಾಯುತ್ತ ಇರುತ್ತೇನೆ ಎಂದು ಸುನೇತ್ರೆಯು ಹೇಳಿದರೆ, ಆಕೆಯು ಯೋಚಿಸಿದ್ದಕ್ಕಿಂತ ಬೇಗನೇ ಏನಾದರೂ ಸಂಭವಿಸುವದೆಂದು ನನ್ನ ಅಂತರಾತ್ಮದಲ್ಲಿ ಅನಿಸಹತ್ತಿತು. ತನ್ನ ಸದ್ಯದ ಜೀವನದ ಬಗ್ಗೆ ಆಕೆ ತೆಗೆದ ಉದ್ಗಾರಗಳನ್ನು ಕೇಳಿ ನನಗೆ ಅವಳ ವಿಷಯದಲ್ಲಿ ಕನಿಕರ ಹುಟ್ಟಿತು. ಶ್ರೀಧರನಲ್ಲಿ ಆಕೆಯು ಇಟ್ಟಿರುವ ನಿಸ್ಸೀಮಪ್ರೇಮ, ಅವನನ್ನು ಮದುವೆಯಾಗಬೇಕೆಂಬ ಆಕೆಯ ಧೃಢ ನಿರ್ಧಾರ ಇವುಗಳ ಕುರಿತು ಮನಸ್ಸಿನಲ್ಲಿ ವಿಚಾರ ಮಾಡುವಾಗ ಆಕೆ ದುರಂತನಾಟಕದ ನಾಯಿಕೆಯಾಗುವಳೊ ಎಂಬ ಭೀತಿಯು ತಲೆ ಎತ್ತಲಾರಂಭಿಸಿತು. ಯಾಕಂದರೆ, ಯಾವದಕ್ಕೂ ಅವನ ಮನೆತನದ ಹಿರಿಯಸ್ಥಾನ ಅಡ್ಡಬರುತ್ತಿತ್ತು. ಈ ಅಭೇದ್ಯ ಭಿತ್ತಿಯ ಅರಿವು ಶ್ರೀಧರನಿಗೆ

ಈಗೀಗ ಆಗಹತ್ತಿತು. ಆ ವಿಷಯದಲ್ಲಿ ಹಲವು ಸಾರೆ ನಾವು ಚರ್ಚಿಸಿದ್ದುಂಟು. ಆದರೆ ನಿವಾರಣೆಯ ಯಾವ ದಾರಿಯೂ ಕಾಣಲಿಲ್ಲ. ಶ್ರೀಧರನು ತಂದೆಗೆ ಅಂಜುತ್ತಿದ್ದನು. ತಾಯಿಯ ವಿಷಯದಲ್ಲಿ ಅವನಿಗೆ ಅತ್ಯಂತ ಆದರವಿತ್ತು. ಹಾಗಾಗಿ ಇಬ್ಬರ ಮಾತನ್ನೂ ಮೀರುವ ಮನೋಧೈರ್ಯ ಅವನಲ್ಲಿರಲಿಲ್ಲ. ಅವನ ತಂದೆಯು ಗೋವೆಯ ವೇಶ್ಯೆಯೋರ್ವಳನ್ನು ಇಟ್ಟುಕೊಂಡಿದ್ದರೆಂಬು ದೇನೋ ನಿಜವಿತ್ತು. ಆದರೆ ನಮ್ಮ ಹಳ್ಳಿಗಳ ಸರಂಜಾಮೀ ಸಮಾಜ ವ್ಯವ ಸ್ಥೆಯಲ್ಲಿ ಅದು ಅವರ ಸ್ಥಾನ–ಮಾನಗಳಿಗೆ ಕೊರತೆಯನ್ನು ತರುವಂಥ ಸಂಗ ತಿಯಾಗಿರಲಿಲ್ಲ. ಅವರು ಧಾರ್ಮಿಕ ವಿಧಿಯಿಂದ ತಮ್ಮ ಜಾತಿಯ ಹೆಣ್ಣನ್ನು ಮದುವೆಯಾಗಿದ್ದರು. ಹಾಗೂ ಸಂತಾನಲಾಭವನ್ನು ಪಡೆದಿದ್ದರು. ಸರಕಾರ ದಲ್ಲಿ ಮೇಲಿನ ಹುದ್ದೆಯಲ್ಲಿದ್ದು ನಿವೃತ್ತರಾದ ಬಳಿಕ ಸ್ವಜಾತಿಯ ಧಾರ್ಮಿಕ ಹಾಗೂ ಇತರ ಕಾರ್ಯಕಲಾಪಗಳಲ್ಲಿ ಆಸ್ಥೆಯಿಂದ ಭಾಗವಹಿಸುತ್ತಿದ್ದರು. ಅಂಥವರು ನಡುವಯಸ್ಸು ದಾಟಿದ ಮೇಲೆ ತಮ್ಮ ವೈಯಕ್ತಿಕ ಸುಖಕ್ಕಾಗಿ ಒಬ್ಬ ವೇಶ್ಯಾ ಸ್ತ್ರೀಯನ್ನಿಟ್ಟುಕೊಂಡರೆ, ಅದರಲ್ಲಿ ಯಾರಿಗೂ ದೋಷ ಕಾಣು ತ್ತಿರಲಿಲ್ಲ. ಆದರೆ ನಿವೃತ್ತ ನ್ಯಾಯಾಧೀಶರೂ ಸಮಾಜಧುರೀಣರೂ ಆದ ಅವರ ಏಕಮಾತ್ರ ಪುತ್ರ, ನಾಳೆ ತಂದೆಯಂತೆಯೇ ಉಚ್ಚ ಅಧಿಕಾರ ಸ್ಥಾನ ವನ್ನು ಪಡೆಯುವವನು. ಕಾಲೇಜ ಶಿಕ್ಷಣ ಮುಗಿಸುವಾಗಲೇ ವೇಶ್ಯೆಯವರ ಹುಡುಗಿಯನ್ನು ಮದುವೆಯಾಗುವದೆಂದರೆ!! ಆ ಕಲ್ಪನೆಯು ಕೂಡ ಅವರಿಗೆ ಸಹನವಾಗಲಿಕ್ಕಿಲ್ಲ.

ಶ್ರೀಧರನು ಎಮ್. ಎಸ್‌ಸಿ ಆದ ಬಳಿಕ ಪಿಎಚ್. ಡಿ ಪದವಿ ಗಾಗಿ ತಯಾರಿ ನಡೆಸುವವನಿದ್ದನು. ಹಾಗಿದ್ದರೆ ಇನ್ನೂ ಎರಡು ವರ್ಷಗಳ ಕಾಲ ಅವರಿಬ್ಬರ ಪ್ರಣಯ ಜೀವನ ಈಗಿನಂತೆಯೇ ನಡೆಯಬಹುದು. ಅಲ್ಲದೆ ವಿವಾಹ ಬದ್ಧವಾಗುವ ಮುಂದಿನ ಹೆಜ್ಜೆ ಹೇಗೆ ಸಾಧ್ಯ?

ಮುಂದಿನ ಹೆಜ್ಜೆ ಹಾಗಿರಲಿ, ಇಷ್ಟು ದಿವಸಗಳ ವರೆಗೆ ನಡೆದಂತೆ ಶ್ರೀಧ ರನು ಇನ್ನು ಮುಂದೆ ನಡೆಯುವದು ಸಹ ಕಠಿಣವಾಯಿತು. ದಿವಾಳಿಯ ದಿವಸಗಳಲ್ಲಿ ಮೇಲೆ ಹೇಳಿದಂತೆ ರೂ. ೨೦೦೦ ವೆಚ್ಚ ಮಾಡಿದ ತರುವಾಯ ಬ್ಯಾಂಕಿನಲ್ಲಿ ಹೇಳುವಷ್ಟು ಹಣವೂ ಉಳಿದಿರಲಿಲ್ಲ. ಮುಂದೆ ಅವನು ಏನೂ

ವೆಚ್ಚ ಮಾಡದಿದ್ದರೂ ದಿವಾಳಿಯ ದಿವಸಗಳಲ್ಲಿ ಅವನು ಹಣ ವೆಚ್ಚಮಾಡಿದ ವರ್ಚಸ್ಸಿನಿಂದ ಕೆಲವು ದಿನಗಳು ಹಾಗೆಯೇ ಕಳೆದವು. ಆದರೆ ದಿನಹೋದ ಹಾಗೆ ಅವನು ಏನೊಂದೂ ಖರ್ಚುಮಾಡುವ ಸ್ಥಿತಿಯಲ್ಲಿ ಇಲ್ಲವೆಂಬುದು ಮಾತೆಗೆ ಮನವರಿಕೆಯಾಯಿತು.

ಸಂಗತಿ ಅಷ್ಟಕ್ಕೆನೇ ನಿಲ್ಲಲಿಲ್ಲ. ಸುನೇತ್ರಾದೇವಿಯು ತನ್ನ ವ್ಯವಸಾಯದ ಕಡೆಗೆ ದುರ್ಲಕ್ಷಮಾಡಹತ್ತಿದಳು. ಯಾವನಾದರೂ ಶ್ರೀಮಂತನಿಂದ ಆಮಂತ್ರಣ ಬಂದರೆ ಅವಳು ತನ್ನ ದೇಹಪ್ರಕೃತಿ ನೆಟ್ಟಗಿಲ್ಲನೆಂಬ ನೆವನ ಮಾಡುತ್ತಿದ್ದಳು. ಇದಕ್ಕೆಲ್ಲಾ ಶ್ರೀಧರನೇ ಕಾರಣನೆಂದು ಮಾತೆಗೆ ತಿಳಿಯದಿರಲಿಲ್ಲ.

ಪರಿಸ್ಥಿತಿ ಹದಗೆಟ್ಟಿತು. ತೆಗಳಿಕೆಯನ್ನೂ ದೋಷಾರೋಪಣೆಯನ್ನೂ ಕೇಳಿ, ಕೇಳಿ ಬೇಸತ್ತು ಕೊನೆಗೆ ಸುನೇತ್ರೆಯು ತನ್ನ ವ್ಯವಸಾಯದಲ್ಲಿ ಮೊದಲಿನಂತೆ ದುಡಿಯಲು ಆರಂಭಿಸಿದಳು. ಒಬ್ಬ ಲಕ್ಷಾಧೀಶ ವ್ಯಾಪಾರಸ್ಥನು ತನ್ನ ಮಗನ ಹುಟ್ಟುಹಬ್ಬದ ಮೇಜವಾನಿಯ ದಿನ ಗಾನ ನರ್ತನಕ್ಕಾಗಿ ಸುನೇತ್ರೆಯನ್ನು ಕರೆದನು. ಅಂದಿನ ಕಾರ್ಯಕ್ರಮದ ಒತ್ತಡ ಹಾಗೂ ಮಿತಿ ಮೀರಿದ ಮದ್ಯ ಸೇವನೆಯಿಂದಾಗಿ ಆಕೆಯು ಅಸ್ವಸ್ಥದಲ್ಲಿ ಬಿದ್ದಳು. ಎರಡು ವಾರಗಳ ವರೆಗೆ ಪೂರ್ಣವಾಗಿ ಹಾಸಿಗೆ ಹಿಡಿದಳು. ಆದರ ಬಳಿಕ ಆರೋಗ್ಯ ತುಸು ಸುಧಾರಿಸಿದರೂ ಒಂದು ತಿಂಗಳ ತನಕ ಅವಳಿಂದ ಯಾವದೇ "ಉದ್ಯೋಗ" ಸಾಧ್ಯವಾಗಲಿಲ್ಲ. ಅವಳು ಹಾಸಿಗೆ ಹಿಡಿದಾಗ ಶ್ರೀಧರನು ನಿತ್ಯವೂ ಅವಳಲ್ಲಿಗೆ ಹೋಗುತ್ತಿದ್ದನು. ಆದರೆ, ಅವಳು ಹಾಸಿಗೆಯಿಂದ ಎದ್ದ ಮೇಲೆ ಅದು ಪರೀಕ್ಷೆಯ ಕಾಲವಾದುದರಿಂದ ಅವನಿಗೆ ಹೋಗುವದು ಸಾಧ್ಯವಾಗಲಿಲ್ಲ. ಅವನು ಬಾರದಿದ್ದುದರಿಂದ ಅವಳು ಬಹಳವಾಗಿ ನೊಂದುಕೊಂಡಿರಬೇಕು.

ಅವಳ ಈ ಕೆಳಗಿನ ಗೀತವು ಅವಳ ಮನೋವ್ಯಥೆಯನ್ನು ವ್ಯಕ್ತಗೊಳಿಸುತ್ತದೆ.

ಸುದ್ದಿ ಇಲ್ಲದೆ ಐದು ದಿನಗಳು ಸಂದವು.
ಹೃದಯದ ಕಳವಳವು ನಿದ್ದೆಯನ್ನೋಡಿಸುತ್ತದೆ.

ಅವನ ಪ್ರೇಮದ ವಿಷಯದಲ್ಲಿ ನನಗೆ ವಿಶ್ವಾಸವಿದೆ.
ಆದರೆ ಆಗಾಗ ಏಳುವ ಸಂಶಯವು ಮನಸ್ಸನ್ನು
ತಲ್ಲಣಗೊಳಿಸುತ್ತದೆ.
ಅವನ ಪತ್ರವನ್ನು ಕೈಲಿ ಹಿಡಿದು ದೀಪದ
ಬಳಿ ಒಯ್ದು ಓದಹತ್ತಿದೆ.
ಎಂತಹ ಪ್ರೇಮದ ಮಾತುಗಳು
ಪ್ರೀತಿಯ ಉದ್ಗಾರಗಳು.
ಈ ಪ್ರೇಮ ಮಂದಿರದಲ್ಲಿ ಪ್ರೇಮದ ಪಾತ್ರೆಯಿಂದ
ಪಾನಮಾಡಿದ ಪ್ರೇಮರಸದ ಸವಿಯು
ಬಾಯಿಂದ ಅಳಿದಿಲ್ಲ.
ಎಲ್ಲವೂ ಸುಳ್ಳೇ? ಇದೆಲ್ಲಾ ಶೂನ್ಯವೇ?
ಪ್ರಿಯಕರನು ಇಂದು ಬರುವನೇ?
ನಾಳೆಯಾದರೂ ಬರುವನೇ?

ತರಂಗ ೭

ಅವಳ ಅಸ್ವಸ್ಥ್ಯವು ಕೇವಲ ದೈಹಿಕವಾಗಿದ್ದಿಲ್ಲ. ಮಾನಸಿಕ ತಾಪವು ಅವಳ ಆರೋಗ್ಯವನ್ನು ಕೆಡಿಸುವದರಲ್ಲಿ ಬಹು ಭಾಗವನ್ನು ವಹಿಸಿತ್ತು. ಈ ಅಸ್ವಾಸ್ಥ್ಯದ ದಿನಗಳಲ್ಲಿ ಅವಳು ತನ್ನ ಭವಿತವ್ಯದ ವಿಷಯದಲ್ಲಿ ತುಂಬಾ ಯೋಚನೆಮಾಡಿ ಶ್ರೀಧರನನ್ನು ಮದುವೆಯಾಗಿ ಅವನೊಡನೆ ವೈವಾಹಿಕ ಜೀವನವನ್ನು ನಡೆಸುವ ಕುರಿತು ತಾನು ಒಂದು ಯೋಜನೆಯನ್ನು ಯೋಚಿಸಿದ್ದಳು. ನಮಗೆ ಮಾತ್ರ ಅದನ್ನು ಕೊನೆಯವರೆಗೆ ತಿಳಿಯಪಡಿಸಲಿಲ್ಲ.

ಇದನ್ನು ಹೇಳುವಾಗ ಅರವಿಂದ ಕಸಬೇಕರರ ಕಂಠವು ಗದ್ಗದಿತವಾಗಿ ಮಾತು ಹೊರಡದಾಯಿತು. ಕಣ್ಣುಗಳಿಂದ ಒಂದೆರಡು ಹನಿ ಉದುರಿತು. “ವಿಧಿಯ ವೈಚಿತ್ರ್ಯವನ್ನು ಯಾರು ತಾನೇ ತಿಳಿಯಬಲ್ಲರು? ತನ್ನ ಭಾವೀ ಜೀವನದ ಬಗ್ಗೆ ತಾನು ಮಾಡಲಿರುವ ವ್ಯವಸ್ಥೆಯ ಸೂಚನೆಯನ್ನಾದರೂ ನಮಗೆ ಕೊಟ್ಟಿದ್ದರೆ ಮುಂದಿನ ದುರಂತ ನಾಟಕವು ನಡೆಯುತ್ತಿರಲಿಲ್ಲ. ಶ್ರೀಧರ ಸುನೇತ್ರೆಯರು ಪ್ರೇಮದ ಸುಖ ಜೀವನವನ್ನು ಆನಂದದಿಂದ ಕಳೆಯುತ್ತಿದ್ದರೋ ಏನೋ! ಆದರೆ ವಿಧಾತನ ನಿಸರ್ಗನಾಟಕದಲ್ಲಿ ಅಂತಹ ಸುಖಾನು

ಭವವು ಅವರ ಪಾಲಿಗೆ ಇರಲಿಲ್ಲ."

"ಸುನೇತ್ರಾದೇವಿಯು ಭಾವೀ ಜೀವನದ ಬಗ್ಗೆ ತಾನು ಯೋಚಿಸಿದ್ದ ವ್ಯವಸ್ಥೆ ಯಾವದು?" ನಾನು ಆತುರದಿಂದ ಕೇಳಿದೆ.

"ಅದು ಮುಂದೆ ಕಥೆ ಸಾಗಿದಂತೆ ತಿಳಿಯುವದು" ಎಂದು ಹೇಳಿ ತನ್ನ ಕಥೆಯನ್ನು ಮುಂದರಿಸಿದನು.

"ಅಸ್ವಾಸ್ಥ್ಯದಿಂದ ಎದ್ದ ಬಳಿಕ ಸುನೇತ್ರೆಯು ತನ್ನ ಅಪ್ಸರಾಮಂದಿರದ ಕಾರ್ಯಕ್ರಮದಲ್ಲಿ ಭರದಿಂದ ಭಾಗ ವಹಿಸತೊಡಗಿದಳು. ಶ್ರೀಧರನಿಗೆ ಅವಳ ಸಹವಾಸವು ಮೊದಲಿಗಿಂತ ದುರ್ಲಭವಾಯಿತು. ಇದರಿಂದ ಅವನ ವರ್ತನೆಯಲ್ಲಿ ಒಂದು ರೀತಿಯ ಸಿಡುಕಿನ ಸ್ವಭಾವ ತಲೆದೋರಿತು.

ಅವನ ಅಭ್ಯಾಸದ ಮೇಲೂ ಅದರ ಪರಿಣಾಮವಾಗದಿರಲಿಲ್ಲ. ಸುನೇತ್ರೆಯ ಕಡೆಗೆ ಹೋಗದಿರುವಷ್ಟು ಮನೋದಾರ್ಢ್ಯವು ಅವನಲ್ಲಿರಲಿಲ್ಲ. ಅಪ್ಸರಾಮಂದಿರದ ಇತರ ಗಿರಾಕಿಗಳಂತೆ ಹಣ ಸುರಿದು ತನ್ನ ವರ್ಚಸ್ಸನ್ನು ಉಳಿಸಿಕೊಳ್ಳೋಣವೆಂದರೆ ಅವನ ಬೊಕ್ಕಸವು ಬರಿದಾಗಿದ್ದಿತು.

ಅವನ ಪ್ರಣಯ ಕಥೆಯು ಈ ಕಾಲದಲ್ಲಿ ಕಾಲೇಜಿನಲ್ಲೆಲ್ಲಾ ಸರ್ವಶ್ರುತವಾಗಿದ್ದಿತು. ಆದರಿಂದ ಸುನೇತ್ರೆಯ ಸಹವಾಸದ ಸಂದರ್ಭಗಳು ಕಡಿಮೆಯಾದಂತೆ ಅವನು ಎಲ್ಲಾ ವಿಷಯಗಳಲ್ಲಿ ನಿರುತ್ಸಾಹಿಯಾದನು.

ಒಂದು ದಿನ ಅವನು ಒಂಟಿಯಾಗಿ ಕುಳಿತು ಕಣ್ಣೀರಿಡುವದನ್ನು ನೋಡಿ ನಾನು ಕೇಳಿದೆ "ಏನು, ನೀವು ಜಗಳಾಡಿದಿರೇನು?"

"ಇಲ್ಲ."

"ಹಾಗಾದರೆ, ನಿನ್ನ ಅವಸ್ಥೆ ಹೀಗೇಕೆ?"

"ನನಗೆ ಗೊತ್ತಿಲ್ಲ. ಈ ಸ್ತ್ರೀಯರು ...."
ಶ್ರೀಧರನು ದೀರ್ಘಶ್ವಾಸ ಬಿಡುತ್ತಾ ಹೇಳಿದನು.

"ನಾನು ಅವಳನ್ನು ಎಷ್ಟೇ ಪ್ರೀತಿಸಿದರೂ ಮದುವೆಯಾಗುವಷ್ಟು ಶ್ರೀಮಂತನಲ್ಲವೆಂದು ಸುನೇತ್ರೆಗೆ ಈಗ ತಿಳಿಯಹತ್ತಿದೆ."

ಇಷ್ಟು ಹೇಳಿ ಸಣ್ಣ ಮಗುವಿನಂತೆ ಅವನು ಬಿಕ್ಕಿ ಬಿಕ್ಕಿ ಅತ್ತನು. ತುಸು ಹೊತ್ತಿನಮೇಲೆ ಕಣ್ಣನ್ನು ಒರಸಿ "ನನಗೆನೇ ತಿಳಿಯುವದಿಲ್ಲ. ನಾವಿಬ್ಬರೂ

ಕೂಡಿಯೇ ಇರುವಾಗ ನಾವು ಆನಂದದ ಅತಿರೇಕದಲ್ಲೇ ಇರುತ್ತೇವೆ. ಆದರೆ ಕೆಲವೊಂದು ವೇಳೆ ಮಾತ್ರ ನನ್ನನ್ನು ಸಂಶಯವು ಬಾಧಿಸುತ್ತದೆ. ಆಗ ನನ್ನ ಮನಸ್ಸು ಬುದ್ಧಿ ಎಲ್ಲಿಗೊ ಹೊರಟು ಹೋದಂತೆ ಅನಿಸುತ್ತದೆ. ನೋಡು, ತನ್ನ ಬಳಿಗೆ ಬರುವ ಶ್ರೀಮಂತ ಗಿರಾಕಿಗಳನ್ನೆಲ್ಲಾ ಕುನ್ನಿಮಕ್ಕಳು, ಕತ್ತೆಯ ಮರಿಗಳು, ಎಂದು ತಿರಸ್ಕರಿಸುವದನ್ನು ನೀನೇ ಕೇಳಿದ್ದಿಯಲ್ಲಾ. ಆದರೆ, ಅವರೊಡನೆ ಅವಳು ಎಷ್ಟು ಆನಂದದಿಂದ, ಉತ್ಸಾಹದಿಂದ ಸರಸ-ಸಲ್ಲಾಪ ಮಾಡುತ್ತಿರುತ್ತಾಳೆ" ಎಂದನು.

ನಾನು ಅವನನ್ನು ಸಮಾಧಾನಪಡಿಸಿದೆನು. "ಸುಮ್ಮನೆ ದೋಷಾರೋಪಣೆಯನ್ನು ಮಾಡಬೇಡ. ಆಕೆಯು ಅವರಿಗೆ ಮಾಡಿದಂತೆ ಪ್ರೇಮವನ್ನು ನಿನಗೆ ವಿಕ್ರಯಿಸಲಿಲ್ಲ. ಫಲಾಪೇಕ್ಷೆ ಇಲ್ಲದ ಉತ್ಕಟ ಪ್ರೇಮವನ್ನು ನಿನಗೆ ಕೊಟ್ಟದ್ದಕ್ಕಾಗಿ ನೀನು ಕೃತಜ್ಞನಿರಬೇಕು. ನಿನ್ನ ಮನಸ್ಸಿನಲ್ಲಿ ಏನೋ ಕುವಿಚಾರ ಸುಳಿಯುತ್ತದೆ. ನನ್ನಿಂದ ಅಡಗಿಸಬೇಡ, ಏನಿದೆ ಹೇಳು."

ನಾನು ಇಷ್ಟು ಆಗ್ರಹಪಡಿಸಿದ ಮೇಲೆ ಶ್ರೀಧರನು ತನ್ನ ಮನಸ್ಸಿನಲ್ಲಿದ್ದುದನ್ನು ಬಿಚ್ಚಿ ಹೇಳಿದನು. ಒಂದು ದಿನ ಹಾರ್ನಬೀ ರಸ್ತೆಯಲ್ಲಿ ಹೋಗುತ್ತಿದ್ದಾಗ ಸುನೇತ್ರೆಯ ಮೋಟಾರು ಒಂದು ಜವಾಹಿರದ ಅಂಗಡಿಯ ಮುಂದೆ ನಿಂತಿದ್ದನ್ನು ನೋಡಿದನು. ಅವನು ಮೂರು ನಾಲ್ಕು ದಿನಗಳಿಂದ ಅವಳನ್ನು ಕಂಡಿರಲಿಲ್ಲ. ಅವಳ ಮೋಟಾರ ನೋಡಿದೊಡನೆ ಉತ್ಸಾಹದಿಂದ ಹೃದಯವು ಹಾರಾಡಿತು. ವೇಗವಾಗಿ ಹೆಜ್ಜೆ ಇಟ್ಟು ಅಲ್ಲಿಗೆ ಹೋದನು. ಅಂಗಡಿಯ ಒಳಗೆ ಸುನೇತ್ರೆಯೇನೊ ಇದ್ದಳು. ಆದರೆ ಆಕೆಯು ಒಬ್ಬ ಡೊಳ್ಳುಹೊಟ್ಟೆಯ ವರ್ತಕನೊಡನೆ ಹಿತಗೋಷ್ಠಿ ಮಾತಾಡುತ್ತ ಕುಲು ಕುಲು ನಗುತ್ತ ಅಂಗಡಿಯವನು ತೋರಿಸಿದ್ದ ಒಂದು ಮುತ್ತಿನ ಹಾರವನ್ನು ಪರೀಕ್ಷಿಸುತ್ತ ನಿಂತಿದ್ದಳು. ಶ್ರೀಧರನು ಹತ್ತಿರ ಹೋದಾಗ ಕಣ್ಣೆತ್ತಿ ನೋಡಿದರೂ ಅವನ ಗುರುತು ಇದ್ದಂತೆ ಸಹ ವರ್ತಿಸಲಿಲ್ಲ.

ಶ್ರೀಧರನಿಗೆ ಸಿಡಿಲು ಬಡೆದಂತಾಯಿತು. ಅಲ್ಲಿ ಒಂದು ಕ್ಷಣವೂ ನಿಲ್ಲಲಾಗಲಿಲ್ಲ. ಒಡನೆಯೇ ಹೊರಬಿದ್ದನು. ಇದಾದ ಬಳಿಕ ಒಂದು ವಾರದ ವರೆಗೆ ಶ್ರೀಧರನು ಅಪ್ಸರಾ ಮಂದಿರದ ಕಡೆಗೆ ಹಾಯಲಿಲ್ಲ. ಆದರೆ ಅವಳನ್ನು ನೋ

ಡದೆ ಎಷ್ಟುದಿನ ತಾನೇ ಇರಲು ಅವನಿಗೆ ಸಾಧ್ಯ! ಕೊನೆಗೆ ಹೋಗಿಯೇ ಹೋದನು. ಸುನೇತ್ರೆಯು ಅವನನ್ನು ಅತಿಶಯ ಪ್ರೇಮದಿಂದ ಸ್ವಾಗತಿಸಿದಳು. ಅವನ ರೋಷವು ಅವಳ ಒಂದೇ ಸವಿನುಡಿಯಿಂದ ಮಾಯವಾಯಿತು.

ಅಂದಿನ ಅನುಭವವನ್ನು ಶ್ರೀಧರನೇ ವರ್ಣಿಸಿದನು. "ಆ ದಿನ ಜವಾಹಿರದ ಅಂಗಡಿಯಿಂದ ನಾನು ಫಕ್ಕನೆ ಹೊರ ಹೊರಟದ್ದನ್ನು ನೋಡಿ ಆಕೆ ಬಾಗಿಲದ ಬಳಿಬಂದು ನನ್ನನ್ನು ಕರೆದಳಂತೆ. ಆದರೆ ಸಿಟ್ಟಿನ ಉದ್ವೇಗದಲ್ಲಿದ್ದ ನನಗೆ ಅದು ಕೇಳಿಸಲಿಲ್ಲ. ಮೊನ್ನೆ ಅವಳು ಈ ಸಂಗತಿ ಹೇಳಿದಾಗ ನನಗೆ ನನ್ನ ಮೇಲೆಯೇ ತಿರಸ್ಕಾರ ಹುಟ್ಟಿತು. ಅವಳ ವಿಷಯದಲ್ಲಿ ವಿನಾಕಾರಣ ಸಂಶಯ ತಗೊಂಡದ್ದಕ್ಕೆ ನಾನು ಒಂದು ವಾರದ ವರೆಗೆ ಅಲ್ಲಿಗೆ ಹಾಯದೆ ಇದ್ದುದನ್ನು ನೋಡಿ ಅವಳಿಗೆ ಬಹಳ ವ್ಯಥೆಯಾಯಿತಂತೆ. ಆ ದಿನ ಆ ವ್ಯಾಪಾರಿಯು ಅವಳಿಗೆ ಮುತ್ತಿನ ಹಾರವನ್ನು ಪಾರಿತೋಷಕವಾಗಿ ಕೊಡುವವನಿದ್ದನಂತೆ. ಅದರ ಸಲುವಾಗಿ ಅವರು ಜವಾಹಿರ ಅಂಗಡಿಗೆ ಹೋಗಿದ್ದರಂತೆ. ಒಬ್ಬನು ಮುತ್ತಿನಹಾರ ಕೊಡುತ್ತೇನೆನ್ನುವಾಗ ಸ್ವೀಕರಿಸುವದರಲ್ಲಿ ತಪ್ಪೇನು? ಅಷ್ಟು ವಿಚಾರ ಮನಸ್ಸಿನಲ್ಲಿ ತಾರದ ನಾನು ಎಂತಹ ಮೂರ್ಖನು!"

ಕುಮಾರಿ ಸುನೇತ್ರಾದೇವಿಯು ಈ ಸಮಯದಲ್ಲಿ ನಾವು ಅವಳನ್ನು ಮೊದಲಿಗೆ ಕಾನ್ಸ್ಟೇರಿ ಚೈತ್ಯಾಲಯದ ಬಳಿ ನೋಡಿದ್ದಕ್ಕಿಂತಲೂ ಸುಂದರಿಯಾಗಿ ಕಾಣುತ್ತಿದ್ದಳು. ಆಗ ಕೊಂಚ ಕೃಶವಾಗಿದ್ದ ಅವಳ ಶರೀರವು ಈಗ ತುಸು ತುಂಬಿಬಂದಿತ್ತು. ಮೊದಲೇ ವಿಪುಲವಾಗಿದ್ದ ಅವಳ ಕೇಶರಾಶಿಯು ಇನ್ನೂ ಉದ್ದವಾಗಿ ಇಂಗ್ಲೀಷ್ ಕವಿ ಪೋಪನ ವಾಕ್ಯಗಳಲ್ಲಿ ಹೇಳುವದಾದರೆ "ಆ ಗುಂಗುರು ಕೂದಲಿನ ಸೌಂದರ್ಯ ಜಾಲವು ಎಂತಹ ಪುರುಷನನ್ನೂ ಮೋಹದ ಸೆರೆಯಲ್ಲಿ ಸಿಲುಕಿಸುವಂತಿತ್ತು. ಅವಳು ಈಗೀಗ ಹರ್ಷೋತ್ಸಾಹ ಭರಿತಳಾಗಿಯೇ ಇರುತ್ತಿದ್ದುದರಿಂದ ಅವಳ ರೂಪ ಲಾವಣ್ಯಕ್ಕೆ ಇನ್ನಷ್ಟು ಕಳೆ ಏರುತ್ತಿತ್ತು. ಅಪ್ಸರಾಮಂದಿರದ ಆಶ್ರಯದಾತೃಗಳಲ್ಲಿ ಎಲ್ಲರೂ ಆಕೆಯನ್ನು ಬಯಸುವವರೇ. ಹಾಗಾಗಿ ಅವಳು ಗಿರಾಕಿಗಳಿಗೆ ಮೊದಲಿನಷ್ಟು ಪ್ರೇಮಾದರಗಳನ್ನು ತೋರಿಸುತ್ತಿರಲಿಲ್ಲ. ಅಪ್ಸರಾಮಂದಿರಕ್ಕೆ ಬರುವವರೆಲ್ಲರೂ ಅದರ ಚಾಲಕಳಿಗೆ ಹಣ ಕೊಡುವದು ವಾಡಿಕೆಯಿತ್ತು. ಯಾವ ತಾರೆಯನ್ನೂ

ಅಪೇಕ್ಷಿಸುತ್ತಾರೋ ಅವಳಿಗೆ ಏನಾದರೂ ಪಾರಿತೋಷಕ ಕೊಡುವದು ಅವರ ಇಷ್ಟವಾಗಿತ್ತು. ಕೊಡಲೇಬೇಕೆಂಬ ನಿರ್ಬಂಧವಿರಲಿಲ್ಲ. ಆದರೆ ಈ ಕಾಲದಲ್ಲಿ ಸುನೇತ್ರೆಯು ತನ್ನ ಸಂಸರ್ಗ, ಸಮಾಗಮ ಅಪೇಕ್ಷಿಸುವವರು ತನಗಾಗಿ ಅಮೂಲ್ಯ ಆಭರಣಗಳನ್ನು ಕೊಡಲೇಬೇಕೆಂದು ಒತ್ತಾಯಿಸುತ್ತಿದ್ದಳು. ಅದನ್ನು ಕೊಡದವರ ವಿಷಯದಲ್ಲಿ ಅವಳು ಸಂಪೂರ್ಣ ದುರ್ಲಕ್ಷವನ್ನು ವಹಿಸುತ್ತಿದ್ದಳು. ಇದರಿಂದ ಅಪ್ಸರಾಮಂದಿರದ ಚಾಲಕಳಿಗೂ ಅವಳಿಗೂ ಕೆಲವೊಂದು ಸಾರೆ ತೀವ್ರವಾದ ವಿವಾದವೂ ನಡೆಯುತ್ತಿತ್ತು. ಆದರೆ ಆಶ್ರಯದಾತೃಗಳಲ್ಲಿ ಸುನೇತ್ರಾದೇವಿಗಿದ್ದ ವರ್ಚಸ್ಸಿನಿಂದಲೂ ಗಿರಾಕಿಗಳು ಹೆಚ್ಚಾಗಿ ಅವಳನ್ನೇ ಅಪೇಕ್ಷಿಸುತ್ತಿದ್ದುದರಿಂದಲೂ ಕೊನೆಯಲ್ಲಿ ಅವಳ ಹಟವೇ ಮೇಲಾಗುತ್ತಿತ್ತು.

ಇಷ್ಟನ್ನು ಹೇಳುವಾಗ ಅರವಿಂದನ ಮೋರೆಯ ಮೇಲೆ ದುಃಖದ ಛಾಯೆಯು ಮೂಡಿತು. “ಸುನೇತ್ರೆಯು ಈ ರೀತಿ ಧನ ಪಿಶಾಚಿಯಂತೆ ವರ್ತಿಸುವದನ್ನು ನೋಡಿ ನನಗೆ ಅತ್ಯಂತ ಆಶ್ಚರ್ಯವಾಯಿತು. ಇಂಥವಳು ಮುಂದೆ ಶ್ರೀಧರನೊಡನೆ ಹೇಗೆ ಸುಸೂತ್ರವಾಗಿ ಬಾಳ್ವೆ ಮಾಡ್ಯಾಳೆಂಬ ಸಂಶಯವೂ ಬಂದಿತು. ಈ ರೀತಿಯ ಅವಳ ವರ್ತನೆಯ ನಿಜವಾದ ಉದ್ದೇಶ ನಮಗೆ ಅವಳ ಅಲ್ಪಾಯುಷ್ಯದ ಕೊನೆಯ ದಿನಗಳಲ್ಲಿ ಮಾತ್ರವೇ ತಿಳಿದು ಬಂತು. ಶ್ರೀಧರನ ಮಡದಿಯಾಗಿ ತಾನು ನಡೆಸಲಿದ್ದ ಭಾವೀ ಜೀವನವು ಆರ್ಥಿಕ ಅಡಚಣಿಗಳಿಲ್ಲದೆ ಸುಗಮವಾಗಿ ಸಾಗಲು ಅವಳು ಮಾಡಿದ ಯೋಜನೆ, ಏಕಾಗ್ರತೆಯಿಂದ ಅದನ್ನು ಕಾರ್ಯರೂಪದಲ್ಲಿ ಇಳಿಸಿ ಅದರಲ್ಲಿ ಅವಳು ಪಡೆದ ಸಿದ್ಧಿ ಇವುಗಳನ್ನೆಲ್ಲಾ ನಂತರ ನಾವು ಕೇಳಿದಾಗ, ಅವಳ ವಿಷಯದಲ್ಲಿ ಆದರ ಕನಿಕರಗಳು ಮಾತ್ರವೇ ಅಲ್ಲ, ಆ ಸಾಧ್ವಿ ಶಿರೋಮಣಿಯ ವಿಷಯದಲ್ಲಿ ಅತ್ಯಂತ ಪೂಜ್ಯ ಭಾವನೆಯೂ ಮನಸ್ಸಿನಲ್ಲಿ ಹುಟ್ಟದೆ ಇರಲಿಲ್ಲ.

ತರಂಗ ೮

ಅದು ಕ್ರಿಸ್ತಮಸ್ ರಜೆಯ ಕಾಲವಾಗಿತ್ತು. ಆ ದಿವಸಗಳಲ್ಲಿ ಪರಊರುಗಳಿಂದ ಶ್ರೀಮಂತ ವಿಲಾಸೀ ಜನರು ತಂಡ–ತಂಡವಾಗಿ ಮುಂಬಯಿಗೆ

ಬರುತ್ತಿದ್ದರು. ಹಾಗೂ ಮನೋರಂಜನೆಯ ಕಾರ್ಯಕ್ರಮಗಳು ಪ್ರತಿದಿನವೆಂಬಂತೆ ಇರುತ್ತಿದ್ದುದರಿಂದ ಇಡೀ ಮುಂಬಯಿ ಶಹರವೇ ಉತ್ಸವದ ಸ್ವರೂಪವನ್ನು ತಾಳುತ್ತಿತ್ತು.

ಕ್ರಿಸ್ತಮಸದ ವಾರದಲ್ಲಿ ಒಂದು ಗಾಯನ ಹಾಗೂ ನೃತ್ಯದ ಕಾರ್ಯಕ್ರಮವನ್ನು ಏರ್ಪಡಿಸುವದು ಅಪ್ಸರಾಮಂದಿರದವರ ಪ್ರತಿವರ್ಷದ ವಾಡಿಕೆಯಾಗಿತ್ತು. ಅಪ್ಸರಾಮಂದಿರದ ಬಾಲಿಕೆಯರೇ ಅದರಲ್ಲಿ ಭಾಗವಹಿಸುತ್ತಿದ್ದುದರಿಂದಲೂ ವೇಷ-ಭೂಷ, ರಂಗಭೂಮಿಯ ವ್ಯವಸ್ಥೆ ಇತ್ಯಾದಿ ಅತ್ಯಂತ ಆಕರ್ಷಕವಿರುತ್ತಿದ್ದುದರಿಂದಲೂ ಈ ಕಾರ್ಯಕ್ರಮವು ಮುಂಬಯಿಯಲ್ಲಷ್ಟೇ ಅಲ್ಲ, ಹೊರಗಣ ಊರುಗಳಲ್ಲೂ ಸಹ ಅತ್ಯಂತ ಜನಪ್ರಿಯವಾಗಿತ್ತು. ಹತ್ತು ರೂಪಾಯಿಗಳಿಗಿಂತ ಕೆಳಗಿನ ದರದ ಟಿಕೇಟೇ ಇದ್ದಿಲ್ಲವಾದರೂ, ಎಷ್ಟೋ ದಿನಗಳ ಮೊದಲೇ ಟಿಕೇಟುಗಳೆಲ್ಲವೂ ಮಾರಿಹೋಗುತ್ತಿದ್ದುವು.

ಅಪ್ಸರಾಮಂದಿರದಲ್ಲಿ ಅತ್ಯಂತ ಸಂಭ್ರಮದ ದಿನಗಳವು. ಸುನೇತ್ರೆಗಾಗಲಿ ಇತರ ಬಾಲಿಕೆಯರಿಗಾಗಲಿ ಆ ದಿನಗಳಲ್ಲಿ ಎಳ್ಳಷ್ಟು ಬಿಡುವಿರುತ್ತಿದ್ದಿಲ್ಲ. ಪರಸ್ಥಳಗಳಿಂದ ಬರುವ ಅಪ್ಸರಾಮಂದಿರದ ಶ್ರೀಮಂತ ಪೋಷಕರು ಸಂದರ್ಶಿಸುವ ಸಮಯವದು. ಈ ದಿವಸಗಳಲ್ಲಿ ಶ್ರೀಧರನ ಸಹವಾಸವು ಸುನೇತ್ರೆಗೆ ಸಾಧ್ಯವೇ ಇರಲಿಲ್ಲ. ಅಲ್ಲದೆ, ಧನಾಢ್ಯ ಗಿರಾಕಿಗಳ ನಡುವೆ ಈ ನಿರ್ಗತಿಕ ಕಾಲೇಜ ಯುವಕನಿಗೆ ಸ್ಥಾನವೆಲ್ಲಿ?

ಕ್ರಿಸ್ತಮಸದ ರಜಾದಿನಗಳು ಮುಗಿಯುವ ತನಕ ಅಪ್ಸರಾಮಂದಿರಕ್ಕೆ ಬಾರದಂತೆ ಸುನೇತ್ರೆಯು ಶ್ರೀಧರನಿಗೆ ತಿಳಿಸಿದ್ದಳು. ಸುನೇತ್ರೆಯ ಸಂಗತಿಯು ತಪ್ಪಿದ್ದರಿಂದ ಶ್ರೀಧರನು ಅಸಮಾಧಾನದಿಂದ ಚಡಪಡಿಸುತ್ತಿದ್ದನು. ಪ್ರೇಮವು ಅತಿರೇಕವಾದಾಗ ಎಷ್ಟೋ ಸಾರೆ ಮನುಷ್ಯನು ಸದಸದ್ವಿವೇಕ ಬುದ್ಧಿಯನ್ನು ಮರೆಯುತ್ತಾನೆ. ಶ್ರೀಧರನ ಸ್ಥಿತಿಯೂ ಅದೇ ಆಗಿತ್ತು. ಸುನೇತ್ರೆಯ ಸೂಚನೆಯನ್ನು ಮೀರದಂತೆ ಅವನಿಗೆ ಬುದ್ಧಿಹೇಳುವದೇ ರಜೆಯ ದಿನಗಳಲ್ಲಿ ನನ್ನ ಅತಿ ದೊಡ್ಡ ಹೊಣೆಯಾಯಿತು.

ಅಪ್ಸರಾಮಂದಿರದ ಕಾರ್ಯಕ್ರಮದಲ್ಲಿ ಸುನೇತ್ರೆಯ ಗಾನವು ಪ್ರಾಮುಖ್ಯ ಅಂಗವಾಗಿತ್ತು. ಹಾಗಾಗಿ ಅದನ್ನು ನೋಡಲು ನಾವು ಆತುರರಿದ್ದೆವು.

ಆದರೆ, ಕಾರ್ಯಕ್ರಮದ ನಿಶ್ಚಿತ ಸುದ್ದಿ ನಮಗೆ ತಿಳಿದಾಗಲೇ ಟಿಕೇಟುಗಳೆಲ್ಲವೂ ಮಾರಿಹೋಗಿದ್ದವು. ಇದರಿಂದ ಸಹಜವಾಗಿ ನಾವು ನಿರಾಶೆಗೊಂಡೆವು. ಶ್ರೀಧರನ ಮೇಲಂತೂ ಇದರ ಪರಿಣಾಮವು ವಿಶೇಷವಾಯಿತು. ಕಾನ್ಸೇರಿಯಲ್ಲಿ ಸುನೇತ್ರೆಯನ್ನು ಮೊದಲು ನೋಡಿದ ಬಳಿಕ ಪುನಃ ಅವಳ ಭೆಟ್ಟಿಯಾಗುವ ತನಕ ಇದ್ದ ಉನ್ಮಾದವೇ ಅವನನ್ನು ಈಗಲೂ ಆವರಿಸಿತು. ಅಪ್ಸರಾಮಂದಿರದ ಕಾರ್ಯಕ್ರಮದಲ್ಲಿನ ಸುನೇತ್ರೆಯ ಗಾನವಲ್ಲದೆ ಬೇರೆ ಯಾವ ವಿಷಯವೂ ಅವನ ತಲೆಯೊಳಗೆ ಹೋಗುತ್ತಿದ್ದಿಲ್ಲ.

ಸುದೈವದಿಂದ ಕಾರ್ಯಕ್ರಮಕ್ಕೆ ಎರಡೇ ದಿನಗಳಿರುವಾಗ ಸುನೇತ್ರೆಯ ಪತ್ರ ಒಂದು ಬಂತು.

"ನನ್ನ ಸರ್ವಸ್ವ ಶ್ರೀಧರ,

ನಾಡದು ರಾತ್ರಿ ಎಕ್ಸ್‌ಸೆಲ್ಸಯರ್ ಥೀಯೇಟರಕ್ಕೆ ನೀನೂ ಅರವಿಂದನೂ ಜರೂರ ಬನ್ನಿರಿ. ನನ್ನ ಅತ್ಯಂತ ಪ್ರೀತಿಯ ಹಾಡನ್ನು ಹಾಡುವವಳಿದ್ದೇನೆ. ಅಪ್ಸರಾಮಂದಿರದ ರಿಸರ್ವ್ ಬ್ಯಾಂಕಿನಲ್ಲಿ ಇತರ ಗೆಳೆಯರು ಇರುವದರಿಂದ, ನಿಮ್ಮಿಬ್ಬರಿಗೆ ಹತ್ತು ರೂಪಾಯಿಯ ಎರಡು ಟಿಕೇಟು ಕಳಿಸಿದ್ದೇನೆ.

ಸುನೇತ್ರಾ"

ಹತ್ತು ರೂಪಾಯಿಯ ಟಿಕೇಟು ಅತೀ ಕೆಳಗಿನ ದರ್ಜೆಯದಾದ್ದರಿಂದ, ನಾವು ಕಾರ್ಯಕ್ರಮ ಸುರುವಾಗುವ ಒಂದು ತಾಸಿನ ಮೊದಲೇ ಹೋಗಿ ಜಾಗೆ ಹಿಡಿದು ಕುಳಿತೆವು.

ಅಪ್ಸರಾಮಂದಿರದ ಪೋಷಕರಿಗೂ ಆಶ್ರಯದಾತೃಗಳಿಗೂ ಥಿಯೇಟರಿನ ಬಲಗಡೆಗೆ ಇದ್ದ ಒಂದು ಏರಿಸಿದ ವೇದಿಕೆಯ ಮೇಲೆ ಆಸನಗಳನ್ನು ಮಂಡಿಸಿದ್ದರು. ಒಂಬತ್ತು ಘಂಟೆಯ ಸುಮಾರಿಗೆ ಸುನೇತ್ರಾದೇವಿಯು ಒಬ್ಬ ಕರಿಮೋರೆಯ ಡೊಳ್ಳು ಹೊಟ್ಟೆಯ ಸಾಹುಕಾರನೊಡನೆ ಥಿಯೇಟರನ್ನು ಪ್ರವೇಶಿಸಿ ಒಂದು ಆಸನದ ಮೇಲೆ ಅವನನ್ನು ಕುಳ್ಳಿರಿಸಿ ತಾನೂ ಅವನ ಬಳಿಯಲ್ಲಿ ನಗುತ್ತಾ ಸರಸ ಸಲ್ಲಾಪವಾಡುತ್ತಾ ಕುಳಿತಳು. ಅವಳು ಒಳ ಪ್ರವೇಶಿಸುವದನ್ನು ನಾನು ನೋಡಿದ್ದರೂ, ಆ ಪರಿಸ್ಥಿತಿಯಲ್ಲಿ ಅವಳನ್ನು ಕಂಡರೆ ಶ್ರೀಧರನ ಮನಸ್ಸು ಉದ್ವೇಗಗೊಳ್ಳಬಹುದಾದ್ದರಿಂದ ಅವಳು ಬಂದುದನ್ನು ನಾನು

ಅವನಿಗೆ ತಿಳಿಸಲಿಲ್ಲ.

ಎಲ್ಲಾ ಪ್ರೇಕ್ಷಕರ ಲಕ್ಷವು ಬಾಗಿಲಕಡೆಗೆ ಇದ್ದಿಲ್ಲವಾದರೂ, ಅವಳನ್ನು ನೋಡಿದ ಕೆಲವರು ತಮ್ಮ ಬಳಿಯಲ್ಲಿ ಕುಳಿತವರಿಗೆ ಅವಳನ್ನು ತೋರಿಸಹತ್ತಿದರು. ಈ ರೀತಿಯಲ್ಲಿ ಎಲ್ಲರ ದೃಷ್ಟಿಯೂ ಅವಳ ಕಡೆಗೆ ಹೊರಳಿತು. ಶ್ರೀಧರನು ಆ ಕಡೆ ನೋಡಿದನು. ಸುನೇತ್ರೆಯು ಆ ಹಂಡೆ ಹೊಟ್ಟೆಯ ವ್ಯಕ್ತಿಯೊಡನೆ ಸುರಸಂಕಥಾ ವಿನೋದದಲ್ಲಿ ನಿರತಳಾಗಿದ್ದರೂ ಕತ್ತನ್ನು ಎತ್ತಿ ಪ್ರೇಕ್ಷಕರ ಕಡೆಗೆ ಬೀರುತ್ತಿದ್ದ ನೋಟದಿಂದ ಅವಳು ಶ್ರೀಧರನನ್ನು ಹುಡುಕುತ್ತಿದ್ದಳೆಂಬುದು ಗೊತ್ತಾಗುತ್ತಿತ್ತು. ನಾವು ಕುಳಿತಿದ್ದ ಸ್ಥಳವನ್ನು ಕಂಡುಹಿಡಿದು ಅವರಿಬ್ಬರ ದೃಷ್ಟಿ ಮಿಲನವಾದೊಡನೆ ಅವಳು ಗುರ್ತಸೂಚಕವಾದ ಮಂದಸ್ಮಿತ ಮಾಡಿದಳು.

ನಮ್ಮ ಹತ್ತಿರ ಇಬ್ಬರು ಯುವಕರು ಕುಳಿತಿದ್ದರು. ಅವರ ಪರಿಚಯ ನಮಗಿರಲಿಲ್ಲ. ಆದರೂ, ಅವರ ಸಂಭಾಷಣೆಯಿಂದ ಒಬ್ಬನು ಮುಂಬಯಿಗೆ ಇತ್ತೀಚೆಗೆ ಬಂದಿರಬೇಕೆಂದು ಅನಿಸುತ್ತಿತ್ತು. ಅವನಿಗೆ ಸುನೇತ್ರೆಯನ್ನು ತೋರಿಸಿ ಅವನ ಗೆಳೆಯನು "ನೋಡು, ಅವಳೇ ಸುನೇತ್ರಾದೇವಿ. ಅಪ್ಸರಾ ಮಂದಿರದ ಪ್ರಥಮತಾರೆ. ಮುಂಬಯಿಯ ಕಲಾವಂತಿಣಿಯರಲ್ಲೇ ಅಗ್ರಸ್ಥಾನ ಪಡೆದವಳು. ಅವಳ ಬೆಲೆ ಮಾತ್ರ ಅಪರಿಮಿತವಂತೆ. ಅವಳ ಬಳಿ ಕುಳಿತಿದ್ದಾನಲ್ಲಾ, ಅವನು ಒಬ್ಬ ಧನಿಕ ಸಾಹುಕಾರ. ಅವಳ ಈಗಿನ ಗೆಣೆಯ. ಅವನ ಮೊದಲಿನವನು ಮೂರೇ ವಾರಗಳಲ್ಲಿ ಇದ್ದುದೆಲ್ಲವನ್ನೂ ಇವಳಿಗಾಗಿ ಕಳೆದುಕೊಂಡು ದಿವಾಳಿಯಾದ ಬಳಿಕ ಹೊರಗೆ ತಳ್ಳಲ್ಪಟ್ಟನಂತೆ. ಈ ಮನುಷ್ಯ ಎಷ್ಟುದಿನ ಬಾಳುತ್ತಾನೋ ನೋಡಬೇಕು" ಅಂದನು.

"ಆ ದಂಥೆಯವರೆಲ್ಲಾ ಹಾಗೆಯೇ ಅಲ್ಲವೇ? ಮತ್ತೇನು, ಅವರಿಂದ ಒಬ್ಬನಲ್ಲೇ ಅಚಲ ಪ್ರೇಮವನ್ನು ಆಶಿಸುವದು ಹುಚ್ಚತನವಲ್ಲವೇ?"

ಈ ಮಾತನ್ನು ಕೇಳಿ ಶ್ರೀಧರನು ಕೋಪದಿಂದ ಕಿಡಿಕಿಡಿಯಾದನು. ಅದನ್ನು ಉಚ್ಚರಿಸಿದವನಿಗೆ ಏನೋ ಪ್ರತ್ಯುತ್ತರ ಕೊಡಲು ಉದ್ಯುಕ್ತನಾದನು. ನಾನೇ ಅವನನ್ನು ತಡೆಯಬೇಕಾಯಿತು. "ಸುಮ್ಮಗಿರು. ಮೂರ್ಖತನದ ಪ್ರದರ್ಶನ ಮಾಡಬೇಡ. ಏನೆಲ್ಲಾ ಮಾತಾಡಿ ನಿನ್ನ ಹಾಗೂ ಸುನೇತ್ರೆಯ

ಸಂಬಂಧವನ್ನು ಜಗತ್ತಿಗೆ ತೋರಿಸಬೇಕೆಂದಿದ್ದೆಯಾ?" ಎಂದೆನು.

ಮೇಲೆ ಹೇಳಿದ ಆ ಇಬ್ಬರು ತಮ್ಮ ಸಂಭಾಷಣೆಯನ್ನು ಮುಂದರಿಸಿದರು. ಮೊದಲನೆಯವನು "ಅದು ಸರಿ, ವೇಶ್ಯೆಯೆಂದರೆ ವೇಶ್ಯೆಯರೇ. ಬರೇ ರೊಕ್ಕವನ್ನಷ್ಟೇ ನೋಡುವವರು. ಆದರೆ, ಸುನೇತ್ರಾದೇವಿಯ ವಿಷಯದಲ್ಲಿ ಒಂದು ವಿಶೇಷ ಸುದ್ದಿ ಇದೆ. ಅವಳು ಒಬ್ಬ ಕಾಲೇಜ ಹುಡುಗನಲ್ಲಿ ಅನುರಕ್ತಳಾಗಿದ್ದಾಳಂತೆ. ಅವಳ ಹತ್ತಿರ ಬರಬೇಕಾದರೆ ಇತರರು ಸಾವಿರಾರು ರೂಪಾಯಿ ಸುರಿಸಬೇಕಾದರೂ, ಆ ಕಾಲೇಜ ಯುವಕನಿಗೆ ಅವಳೇ ಕೇಳಿದಷ್ಟು ಹಣ ಕೊಡುತ್ತಾಳಂತೆ. ಇದಕ್ಕೆ ಏನು ಅನ್ನುತ್ತೀ?"

ಎರಡನೆಯವನು "ಗಟ್ಟಿ ಮಾತಾಡಬೇಡಪ್ಪಾ. ಆ ಕಾಲೇಜ ಯುವಕನು ಇಲ್ಲೇ ಇರಬಹುದು."

ಮೊದಲನೆಯವನು "ಇದ್ದರೆ, ಇನ್ನೂ ಚಲೋದಾಯಿತು. ಅಂತಹ ಅಪ್ಸರೆಗೆ ಹುಚ್ಚು ಹಿಡಿಸಿದ ಆ ಕಾಮಣ್ಣನನ್ನು ಒಮ್ಮೆ ನೋಡಬಹುದಾಗಿತ್ತು."

ಇಷ್ಟರಲ್ಲಿ ಪರದೆಯು ಮೇಲಕ್ಕೆತ್ತಲ್ಪಟ್ಟು ಕಾರ್ಯಕ್ರಮ ಸುರುವಾಯಿತು. ಇಲ್ಲದಿದ್ದರೆ, ಶ್ರೀಧರನಿಗೂ ಇವರಿಗೂ ಕೈ ಕೈ ಹತ್ತಿ ಏನಾದರೂ ಅವಾಂತರವಾಗುತ್ತಿತ್ತು.

ಕಾರ್ಯಕ್ರಮದ ಸೂಚಿಪತ್ರದಂತೆ ಸ್ವಾಗತಗೀತವಾದೊಡನೆ ಮೊದಲಿಗೆ ವಾದ್ಯಮೇಳವಾಯಿತು. ಅದಾದ ಬಳಿಕ ಎರಡು ಅಂಕಗಳ ಒಂದು ಚಿಕ್ಕ ಪ್ರಹಸನವು ಅಭಿನಯಿಸಲ್ಪಟ್ಟಿತು. ದೃಶ್ಯಗಳ ನಡುವೆ ಎರಡು ಮೂರು ನೃತ್ಯದ ಕಾರ್ಯಕ್ರಮಗಳಾದವು. ಈ ಎಲ್ಲಾ ಕಾರ್ಯಕ್ರಮಗಳು ಸುಂದರವಿದ್ದರೂ ಪ್ರೇಕ್ಷಕರು ಆಗಾಗ ತೋರಿಸುತ್ತಿದ್ದ ಅಸಮಾಧಾನದಿಂದ ಅವರು ಸುನೇತ್ರೆಯ ಬರುವಿಕೆಯನ್ನೇ ಇದಿರು ನೋಡುತ್ತಿರುವಂತೆ ತೋರುತ್ತಿತ್ತು. ಸುನೇತ್ರೆಯು ವಿರಾಮದ ನಂತರ ಹಾಡುವವಳಿದ್ದಳು. ಅದೇ ಅಂದಿನ ಕೊನೆಯ ಕಾರ್ಯಕ್ರಮವಾಗಿತ್ತು.

ಕೊನೆಯ ಕಾರ್ಯಕ್ರಮದ ಪೂರ್ವ ತಯಾರಿಗಾಗಿ ಪರದೆಯು ಕೆಳಗಿಳಿಸಲ್ಪಟ್ಟು "ಈಗ ಕುಮಾರಿ ಸುನೇತ್ರಾದೇವಿಯವರು ಒಂದು ಭಾವಗೀತೆ

ಯನ್ನು ಅಭಿನಯದೊಡನೆ ಹಾಡುವರು." ಎಂದು ದಿಗ್ದರ್ಶಕರು ಜಾಹೀರ ಮಾಡಿದೊಡನೆ ಪ್ರಚಂಡ ಕೈ ಚಪ್ಪಾಳೆ ಪ್ರಾರಂಭವಾಗಿ ಪರದೆಯನ್ನು ಮೇಲಕ್ಕೆತ್ತುವ ವರೆಗೆ ಅದು ನಿಲ್ಲಲಿಲ್ಲ.

ಪರದೆಯು ಮೇಲೆ ಹೋದೊಡನೆ ದೃಷ್ಟಿಗೆ ಬಿದ್ದ ದೃಶ್ಯವು ಶೋಭಾ ಸೌಂದರ್ಯಗಳಿಂದ ಪ್ರೇಕ್ಷಕರ ಕಣ್ಣು ಕುಕ್ಕಿಸುವಂತಹದಿತ್ತು.

ವಿವಿಧ ವರ್ಣದ ಪುಷ್ಪಗಳಿಂದ ರಂಜಿಸುವ ತರುಲತೆಗಳು, ಅವುಗಳ ಮೇಲೆ ರೆಕ್ಕೆಗಳನ್ನು ಬಿಡಿಸಿ ಹಾರಲುದ್ಯುಕ್ತವಾದಂತೆ ತೋರುವ ಶುಕಪಿಕಾದಿ ಪಕ್ಷಿಗಳು, ಇವೆಲ್ಲವುಗಳ ಮೇಲೆ ಬೇರೆ ಬೇರೆ ಬಣ್ಣದ ವಿದ್ಯುತ್ ಪ್ರಕಾಶವನ್ನು ಬೀರುವಾಗ ರಂಗಭೂಮಿಯು ಪ್ರತ್ಯಕ್ಷ ವಸಂತಋತುವಿನ ಪುಷ್ಪವಾಟಿಕೆಯಂತೆ ಭಾಸವಾಗುತ್ತಿತ್ತು. ಸತ್ಯಸೃಷ್ಟಿಯ ಆಭಾಸವನ್ನೇ ಪೂರ್ಣಗೊಳಿಸಲು ರಂಗಭೂಮಿಯ ನಡುವೆ ಒಂದು ಸರೋವರದ ದೃಶ್ಯವೂ ವ್ಯವಸ್ಥೆಗೊಳಿಸಲಾಗಿತ್ತು. ಸಾಕ್ಷಾತ್ ಸರೋವರದಂತೆ ತೋರುವ ಆ ಪರದೆಯು ನಿದಾನವಾಗಿ ಅಲ್ಲಾಡುವಾಗ, ಮೆಲ್ಲನೆ ಬೀಸುವ ಗಾಳಿಗೆ ನೀರಿನಲ್ಲಿ ಏಳುವ ಸಣ್ಣ ತೆರೆಗಳಂತೆ ತೋರುತ್ತಿತ್ತು. ಆ ಸರೋವರದದಲ್ಲಿ ಶ್ವೇತವರ್ಣದ ಸುಂದರ ಹಂಸವು ಕಮನೀಯವಾದ ಗಾಂಭೀರ್ಯದಿಂದ ವಿಹಾರ ಮಾಡುತ್ತಿತ್ತು.

ಆ ಸರೋವರದ ಮುಂಭಾಗದಲ್ಲಿ ವೀಣೆಯನ್ನು ಕೈಯಲ್ಲಿ ಹಿಡಿದು ಹಾಡಲು ಉದ್ಯುಕ್ತಳಾದಂತೆ ತೋರುವ ಓರ್ವ ಸ್ಫುರದ್ರೂಪಿಯಾದ ಅಪ್ಸರೆಯು ಕುಳಿತಿದ್ದಳು. ಜರಿಯ ಹೂಗಳಿಂದ ದೇದೀಪ್ಯಮಾನವಾದ ಅವಳ ಕಡುನೀಲಿ ವರ್ಣದ ಸೀರೆಯು ಸರೋವರದ ಪಾರ್ಶ್ವಭೂಮಿಯ ಮುಂದೆ ಇನ್ನಷ್ಟು ಶೋಭಾಯಮಾನವಾಗಿ ಕಂಗೊಳಿಸುತ್ತಿತ್ತು. ಹಸ್ತಿದಂತವನ್ನೂ ನಾಚಿಸುತ್ತಿದ್ದ ಅವಳ ಶ್ವೇತವರ್ಣದ ಹಣೆಯಮೇಲೆ ಶೋಭಿಸುತ್ತಿದ್ದ ರೇಖಾಕೃತಿಯ ಕುಂಕುಮ ತಿಲಕವು ಹುಬ್ಬುಗಳ ಬಿಲ್ಲಿನಿಂದ ಬಿಟ್ಟ ಮದನನ ಹೂ ಬಾಣವೋ ಎಂಬಂತೆ ಭಾಸವಾಗುತ್ತಿತ್ತು. ಅವಳ ನೀಳವಾದ ಕೇಶರಾಶಿಯಲ್ಲಿ ಧರಿಸಿದ್ದ ವಜ್ರಜಡಿತ ಆಭರಣವು ವಿದ್ಯುದ್ದೀಪಗಳ ಪ್ರಕಾಶದಲ್ಲಿ ಪ್ರಜ್ವಲಿಸುತ್ತಿದ್ದು ಅದರಿಂದ ಹೊರ ಬೀಳುವ ಸಪ್ತರಂಗಗಳ ಕಿರಣಗಳು ಅವಳ ಮುಖದ ಕಾಂತಿಯನ್ನು ಇನ್ನಷ್ಟು ಬೆಳಗಿಸುತ್ತಿದ್ದುವು. ಈ ಲಾವಣ್ಯ ರಾಶಿಯನ್ನು ನೋಡಿ ಪ್ರೇಕ್ಷಕರು ಉಸಿರೆ

ತ್ರದೆ, ಎವೆ ಇಕ್ಕದೆ ನೋಡಹತ್ತಿದರು.

ಜನರು ನೋಡುತ್ತಿದ್ದಂತೆ ಆ ಅಪ್ಸರೆಯು ತನ್ನ ಕೈಯಲ್ಲಿದ್ದ ವೀಣೆಯ ತಂತಿಗಳನ್ನು ಮಿಡಿಯತೊಡಗಿ ಅದರ ಮಂಜುಳನಿನಾದವು ಕರಗತವಾದೊಡನೆ ಮೆಲ್ಲನೆ ತುಟಿಗಳನ್ನು ತೆರೆದಳು. ಒಂದು ಭಾವಗೀತೆಯ ಮಧುರಲಹರಿಯು ಹವೆಯಲ್ಲಿ ತೇಲಿ ಬಂದು ಪ್ರೇಕ್ಷಕರ ಕಿವಿಗಳನ್ನು ಸ್ಪರ್ಶಿಸಿತು. ಎಲ್ಲರೂ ಮುಗ್ಧರಾಗಿ ಮೈಮರೆತರು. ಅದೊಂದು ಮರಾಠಿ ಗೀತವಿತ್ತು.—

"ಜಾ ऽऽ ರೆ ऽऽ ಜಾ ಘೆವುನಿ ಸಂದೇಶ ಪಾಖರಾ
ಮಾನಸಿಚಾ ರಾಜಹಂಸಾ ಜಾ ऽऽ ರೆ ಜಾ ಘೆವುನಿ
ಸಂದೇಶ

(ಹೋಗು, ಹಕ್ಕಿಯೇ ಸಂದೇಶ ತಗೊಂಡು ಹೋಗು. ಮಾನಸದ
ರಾಜಹಂಸವೇ ಹೋಗು, ಸಂದೇಶ ತಗೊಂಡು)

ದಮಯಂತಿಯು ತನ್ನ ಪ್ರೇಮಪತ್ರವನ್ನು ತನ್ನ ಪ್ರಿಯಕರನಾದ ನಳರಾಜನಿಗೆ ಒಯ್ದು ಕೊಡೆಂದು ಹೇಳುವದೇ ಆ ಕವಿತೆಯ ವಿಷಯವಾಗಿತ್ತು.

ಭಾವಪೂರ್ಣವಾಗಿ ಹಾಡಿದ ಆ ಗೀತದಲ್ಲಿ ಅದ್ವಿತೀಯವಾದ ಮಾಧುರ್ಯ ತುಂಬಿತ್ತು. "ಜಾ ऽऽ ಎಂದು ಸ್ವರವನ್ನು ಮೇಲಕ್ಕೆತ್ತುವಾಗ ಏರಿಸಲ್ಪಟ್ಟ ಸ್ವರಾಲಾಪವು ಹಂಸಪಕ್ಷಿಯು ಮೇಲೆ ಅಂತರಿಕ್ಷದಲ್ಲಿ ಹಾರುವದರ ಕಲ್ಪನೆಯನ್ನು ಕಣ್ಣ ಮುಂದೆ ತರುತ್ತಿತ್ತು. ಶ್ರೋತೃಗಳ ಮನಗಳು ಅದೇ ಸ್ವರದಮೇಲೆ ಸವಾರರಾಗಿ ತಾವೂ ಅಂತರಿಕ್ಷದಲ್ಲಿ ವಿಹರಿಸುತ್ತಿದ್ದವು. ಅದೇ ರೀತಿಯಲ್ಲಿ ಸ್ವರಾಲಾಪವು ಕೆಳಗಿಳಿಯುವಾಗ ಪುನಃ ಧರೆಗೆ ಇಳಿಯುತ್ತಿದ್ದವು.

ಅವಳು ಹಾಡನ್ನು ಮುಂದುವರಿಸಿದಳು.—

"ಕಮಲದಲಾವರ ಹೃದಯ ಓತಿಲೆಂ
ನ ಕಳತ ತ್ಯಾಚೆಂ ಅಕ್ಷರರೂಪಾಲೆಂ
ಪ್ರೇಮಪತ್ರ ಹೆಂ ಪಹಿಲೆಂ ವಹಿಲೆಂ
ಮದನಾಚಾ ಆದೇಶ... ಜಾ ऽऽ ಘೆವುನಿ
ಸಂದೇಶ ಪಾಖರಾ"

(ಕಮಲ ದಳದ ಮೇಲೆ ಹೃದಯ ಸುರಿಸಿದೆ. ತಿಳಿಯದೇನೆ ಅದು ಅಕ್ಷರದಲ್ಲಿ ರೂಪಾಂತರ ಹೊಂದಿತು. ಇದು ಮೊಟ್ಟಮೊದಲಿನ ಪ್ರೇಮಪತ್ರ. ಮದನನ

ಆದೇಶ. ಹೋಗು ಹಕ್ಕಿಯೇ, ಸಂದೇಶ ತಗೊಂಡು ಹೋಗು.)

ಇದನ್ನು ಹಾಡುವಾಗ, ಅವಳ ಕಪೋಲಗಳು ಪನ್ನೀರಿನಿಂದ ತೊಳೆದಂತೆ ಗುಲಾಬಿ ವರ್ಣವನ್ನು ತಾಳಿದವು. ಹುಬ್ಬುಗಳು ತುಸು ಅಲ್ಲಾಡಿದವು. ಸ್ವರವು ಕಂಪಾಯಮಾನವಾಯಿತು. ವಿರಹ ಪ್ರೇಮದ ಆನಂದದಾಯಕ ದುಃಖವನ್ನು ಅನುಭವಿಸುವ ದಮಯಂತಿಯಂತೆಯೇ ಅವಳು ಕಂಡಳು.

ನಾನು ಶ್ರೀಧರನ ಗಲ್ಲವನ್ನು ಚಿವುಟುತ್ತ ಹೇಳಿದೆ "ಏನೋ, ನಳನು ಇಲ್ಲೇ ಹತ್ತು ರೂಪಾಯಿ ದರ್ಜೆಯ ಸ್ಥಳದಲ್ಲಿ ಕುಳಿತಿದ್ದಾನೆಂಬುದನ್ನು ನಿನ್ನ ದಮಯಂತಿ ಮರೆತಂತೆ ಕಾಣುತ್ತದೆ. ಹಂಸವನ್ನು ಎಲ್ಲಿ ಹೊಸ್ಟೆಲಿಗೆ ಕಳಿಸುತ್ತಾಳೊ ಏನೊ."

ಆದರೆ, ಶ್ರೀಧರನಿಗೆ ಈ ಮಾತುಗಳು ಕೇಳಿಸಲೇ ಇಲ್ಲ. ಅವನು ಸಂಪೂರ್ಣ ತನ್ಮಯತೆಯಿಂದ ಆ ರಸದೂಟವನ್ನು ಉಣ್ಣುತ್ತಲಿದ್ದನು. ಸಂಗೀತದ ಶಕ್ತಿ ಅಗಾಧವಾದುದು. ಅಂದು ಅಲ್ಲಿ ನೆರೆದಿದ್ದ ಜನರೆಲ್ಲರೂ ತಮ್ಮ ಜೀವನದ ಆಗು–ಹೋಗುಗಳನ್ನು ಮರೆತು ಪ್ರೇಮದ ಸಾಕ್ಷಾತ್ಕಾರವನ್ನು ಸ್ವಪ್ನ ಸೃಷ್ಟಿಯಲ್ಲಿ ಅನುಭವಿಸುತ್ತಲಿದ್ದರು.

ಆ ಭಾವಗೀತದ ಕೊನೆಯ ಚರಣವನ್ನು ಹಾಡುವಾಗಲಂತೂ ತನ್ನ ಅಂತರ್ಯದ ನೈಜ ಚಲನವಲನಗಳನ್ನು ಹಂಸಕ್ಕೆ ವರ್ಣಿಸುತ್ತಾಳೊ ಎಂಬಷ್ಟು ಆ ಗೀತದ ಭಾವದಲ್ಲಿ ಸಮರಸ ಹೊಂದಿದಳು.

ಅಂತ್ಯದಲ್ಲಿ ತನ್ನ ಕೊರಳನ್ನು ಎಡಬದಿಗೆ ಓರೆಯಾಗಿಸಿ ಬಲಗೈಯಿಂದ ಪತ್ರವನ್ನು ಹಂಸಕ್ಕೆ ಒಪ್ಪಿಸುವ ಹಾವಭಾವ ತೋರಿಸಿ ಅದಕ್ಕೆ "ಜಾ ಽ ಽ" ಎಂದು ಆಲಾಪ ತೆಗೆದು ಹೇಳುವಾಗ ಸರೋವರದಲ್ಲಿ ಈಜಾಡುವಂತೆ ಕಾಣುತ್ತಿದ್ದ ಆ ಹಂಸವು ನಿಜವಾಗಿಯೂ ಆ ಪತ್ರವನ್ನು ತಗೊಂಡು ಕ್ಷಣಾರ್ಧದಲ್ಲೇ ಹಾರಿ ಹೋಗುವದೆಂಬ ಆಭಾಸವು ಸಭಿಕರೆಲ್ಲರಲ್ಲಿ ಉಂಟಾಯಿತು.

"ಜಾ ಽ ಽ" ಎಂದು ಸ್ವರಾಲಾಪವನ್ನು ತೆಗೆಯುವಾಗ, ಅವಳ ಕಂಕಣ ಸುಶೋಭಿತ ಕೋಮಲ ಕೈಯೂ ಮೇಲಕ್ಕೆ ಹೋಯಿತು. ಪತ್ರವನ್ನು ಒಯ್ದು ಮುಟ್ಟಿಸಲು ಅಂತರಿಕ್ಷಕ್ಕೆ ಹಾರಿದ ಹಂಸವನ್ನು ನೋಡುತ್ತಾಳೊ

ಎಂಬಂತೆ ಅವಳು ಮುಖವನ್ನು ಮೇಲಕ್ಕೆತ್ತಿದಳು.

"ಜಾss ರೇss ಜಾ ಉಚ್ಚಸ್ವರದಲ್ಲಿ ತೆಗೆದ ಈ ಆಲಾಪದ ಲಹರಿಗಳು ತರಂಗರೂಪದಲ್ಲಿ ನಾಟ್ಯಗ್ರಹದ ನಾಲ್ಕೂದಿಕ್ಕುಗಳಿಗೆ ಪಸರಿಸಿದವು.

ಕೊನೆಗೆ ತನ್ನ ಜಾದೂಗಾರ ನೇತ್ರಗಳ ಮೋಹಿನಿಯನ್ನು ಪ್ರೇಕ್ಷಕರ ಮೇಲೆ ಬೀರಿ ತಿರುಗೊಮ್ಮೆ ಅದೇ ಸ್ವರಾಲಾಪವನ್ನು ತೆಗೆದು "ಜಾss" ಎನ್ನುವಾಗ ಪರದೆಯು ಬಿತ್ತು. ಪ್ರೇಕ್ಷಕರ ವರ್ಗವು ಆನಂದ ಪರವಶತೆಯ ಸ್ವಪ್ನ ಸೃಷ್ಟಿಯಿಂದ ಸಾಮಾನ್ಯ ಅನುಭವದ ಸತ್ಯ ಸೃಷ್ಟಿಗೆ ಇಳಿಯಿತು.

ಕೈಚಪ್ಪಾಳೆಯ ಪ್ರಚಂಡ ಕಡಕಡಾಟದಲ್ಲಿ ಅಂದಿನ ಕಾರ್ಯಕ್ರಮವು ಕೊನೆಗೊಂಡಿತು.

ಗ್ರೀನ ರೂಮಿಗೆ ಹೋಗಿ ಸುನೇತ್ರಾದೇವಿಯನ್ನು ಭೆಟ್ಟಿಯಾಗ ಬರೋಣವೆಂದು ನಾನು ಸೂಚಿಸಿದೆನು. ಶ್ರೀಧರನು ಸಂಕೋಚಪಡಹತ್ತಿದನು. "ಹೇಗಾದರೂ, ನಾವು ಬಂದಿರುವದನ್ನು ಅವಳು ನೋಡಿದ್ದಾಳೆ. ಅವಳನ್ನು ಕಾಣದೆ ಹೋಗುವದು ಸರಿಯಲ್ಲ. ಹೊಗಿ ಅವಳನ್ನು ಅಭಿನಂದಿಸಿ ಬರೋಣ" ಎಂದು ನಾನು ಹೇಳಿದೆನು.

ನಾವು ಒಳಗೆ ಹೋದಾಗ, ಅವಳು ಆ ಹಂಡೆಹೊಟ್ಟೆಯ ಕರಿಯನ ತೊಡೆಯ ಮೇಲೆ ತಲೆಯಿಟ್ಟು ವಿಶ್ರಮಿಸುತ್ತಿದ್ದಳು. ನಮ್ಮನ್ನು ನೋಡಿದೊಡನೆ ನಾಚಿಕೊಂಡು ಗಡಿಬಿಡಿಯಿಂದ ಎದ್ದಳು.

"ಶ್ರೀಧರ, ನೀವು ಬಂದದ್ದು ಬಹಳ ಚಲೋ ಆಯಿತು. ನಿಮ್ಮನ್ನು ನೋಡುವತನಕ ನೀವು ಬಂದಿದ್ದೀರೊ ಇಲ್ಲವೊ ಎಂದು ಸಂಶಯ ಪಡುತ್ತಿದ್ದೆ. ಅದಿರಲಿ, ಕಾರ್ಯಕ್ರಮ ಹೇಗಾಯಿತು ?" ಎಂದಳು.

"ಕಾರ್ಯಕ್ರಮ ಎ ೧. (ವಿದ್ಯಾರ್ಥಿಗಳ ಭಾಷೆಯಲ್ಲಿ ಅತ್ಯುತ್ತಮವೆಂದರ್ಥ) ಅದನ್ನು ಪ್ರತ್ಯೇಕ ಹೇಳುವ ಅವಶ್ಯವೇ ಇಲ್ಲ" ನಾನೆಂದೆ.

"ಶ್ರೀಧರ, ಈಗ ಕ್ರಿಸ್ತಮಾಸದ ಗದ್ದಲ ಮುಗಿಯಿತು. ಭೆಟ್ಟಿಯಾಗುವೆಯಷ್ಟೆ" ಎಂದಳು.

ಅಲ್ಲಿ ಹೆಚ್ಚು ವೇಳೆ ಕಳೆಯಲು ನಾವು ಸಿದ್ಧರಿರಲಿಲ್ಲ. ಅವಳನ್ನು ವಂದಿಸಿ ಹೊರಗೆ ಬಂದೆವು.

ಅಪ್ಸರಾ ಮಂದಿರದ ಪೂಜಾರಿಕೆಯೊಬ್ಬಳು ಹೊರಗೆ ಸಿಕ್ಕಿದ್ದಳು. ಕುತೂಹಲ ಉಂಟಾಗಿ ಆ ಹಂಡೆಹೊಟ್ಟೆಯ ಕರೀ ಮನುಷ್ಯ ಯಾರೆಂದು ಅವಳೊಡನೆ ಕೇಳಿದೆವು. ಅವನು ಹರಿರಾಮ ನಾರ್ವೇಕರನೆಂದೂ ಕಾರವಾರ ಕಡೆಯವನೆಂದೂ ತನಗೆ ಗೊತ್ತಿದ್ದನ್ನು ಅವಳು ತಿಳಿಸಿದಳು.

ತರಂಗ ೯.

ಅರವಿಂದನ ಕಥನವನ್ನು ತಡೆದು ನಾನು ಕೇಳಿದೆನು “ಈ ಹರಿರಾಮ ನಾರ್ವೇಕರರೆಂದರೆ ಯಾರು ? ಸುಪಾದ ಮ್ಯಾಂಗನೀಜ ಖಣಿಗಳ ಮಾಲಕರಾದ ನಾರ್ವೇಕರರ ಪೈಕಿ ಏನು ?”

“ಅಹುದು,” ಅರವಿಂದನು “ಅದೇ ಮನೆತನದವನು ಇವನು. ಅವರ ಸ್ವಂತ ಊರು ಇದೇ ಸದಾಶಿವಗಡ. ಅಲ್ಲಿ ಒಂದು ಸುಂದರ ಬಂಗಲೆಯನ್ನು ಕಟ್ಟಿಸಿದ್ದಾರೆ. ಅಣ್ಣತಮ್ಮರೊಳಗೆ ಹಿಸೆಯಾಗಿ ಇವರ ಪಾಲಿಗೆ ಒಂದು ಮ್ಯಾಂಗನೀಜ ಗಣಿಯೂ ಎರಡು ಲಕ್ಷ ರೋಖ ರೂಪಾಯಿಗಳೂ ದೊರಿತಿವೆ. ವ್ಯಾಪಾರದ ನೆವದಿಂದ ಆಗಾಗ ಮುಂಬೈಗೆ ಹೋಗುತ್ತಿರುತ್ತಾನೆ. ಅಲ್ಲೇನು ? ಕಾಂಚನ ವಿಪುಲವಾಗಿದ್ದ ಮೇಲೆ ಕೇಳಬೇಕೇ ? ಕಾಮಿನಿಯರೊಡನೆ ಮಜಾಮಾಡುವದೇ ಅವನ ಉದ್ಯೋಗ. ಅಪ್ಸರಾಮಂದಿರದ ಹೊಸ ಆಶ್ರಯದಾತೃಗಳಲ್ಲಿ ಅವನು ಪ್ರಮುಖನಾಗಿದ್ದನು. ಆ ಸಲದ ದಿವಾಳಿ ಹಬ್ಬದ ದಿನಗಳಲ್ಲಿ ಸುನೇತ್ರೆಯ ಸಹವಾಸದ ಲಾಭಕ್ಕಾಗಿ ಹಣವನ್ನು ನೀರಿನಂತೆ ಚೆಲ್ಲುತ್ತಿದ್ದನು.

ನಮ್ಮನ್ನು ಸುನೇತ್ರಾದೇವಿಯು ಕರೆಸಿದ್ದನ್ನೂ, ಆದರದಿಂದ ಸ್ವಾಗತಿಸಿದ್ದನ್ನೂ ನೋಡಿ ಅವನ ಮೋರೆಯು ಕಹಿಕಷಾಯ ಕುಡಿದವನ ಮೋರೆಯಂತಾಯಿತು. “ಇವರು ಶ್ರೀಧರ ಹೆಗಡೆಯವರು, ಶಿರಸಿಯವರು ಮತ್ತು ಇವರು ಅರವಿಂದ ಕಸಬೇಕರ, ಕಾಲೇಜ ವಿದ್ಯಾರ್ಥಿಗಳು, ನನ್ನ ಆಪ್ತಮಿತ್ರರು ಎಂದು ಸುನೇತ್ರೆಯು ನಮ್ಮ ಪರಿಚಯಮಾಡಿಕೊಟ್ಟಾಗಲಂತೂ ಅವನು ಅತಿಕ್ರಮ ಪ್ರವೇಶ ಮಾಡಿದ ಆಗಂತುಕರಂತೆ ನಮ್ಮನ್ನು ದುರುದುರನೆ ದಿಟ್ಟಿಸಿ ನೋಡಹತ್ತಿದನು. ಸಾಮಾನ್ಯ ಶಿಷ್ಟಸಂಪ್ರದಾಯದಂತೆ ಹಸ್ತಲಾಘವಕ್ಕಾಗಿ ಕೈಯನ್ನು ಸಹ

ಮುಂದೆ ಮಾಡಲಿಲ್ಲ. ನಮ್ಮಿಬ್ಬರ ಪರಿಚಯ ಮಾಡಿಕೊಟ್ಟ ಮೇಲೆ ಸುನೇತ್ರಾ ದೇವಿಯು "ಇವರು ಹರಿರಾಮ ಸಾರ್ವೇಕರರು ವ್ಯಾಂಗನೀಜದ ರಾಜರು" ಎಂದು ಅವನ ಗುರ್ತು ಹೇಳಿದಾಗ ನನ್ನೊಡನೆ ಹಸ್ತಲಾಘವ ಮಾಡಲು ಅವನು ತಯಾರಿಲ್ಲದುದನ್ನು ಮೊದಲೇ ತಿಳಿದವರಾದುದರಿಂದ ನಾನು ಕೈ ಮುಂದೆ ಮಾಡದೆ ಭಾರತೀಯ ಪದ್ಧತಿಯಂತೆ ನಮಸ್ಕಾರ ಮಾಡಿದೆನು. ಕೈ ಮುಂದೆ ಮಾಡಲು ಉದ್ಯುಕ್ತನಾಗಿದ್ದ ಶ್ರೀಧರನೂ ನನ್ನನ್ನು ನೋಡಿ ತಾನೂ ಹಾಗೆಯೇ ಮಾಡಿದನು. ನಿರುಪಾಯನಾಗಿ ತನ್ನಲ್ಲಿ ಸಾಮಾನ್ಯ ಶಿಷ್ಟಾಚಾರದ ಅಭಾವವಿದೆಯೆಂಬ ಭಾವನೆಯು ಸುನೇತ್ರೆಯಲ್ಲಿ ಹುಟ್ಟಬಾರದೆಂಬದಕ್ಕಾಗಿ ಮಾತ್ರ ಸಾರ್ವೇಕರ ಸಾಹೇಬರು ನಮ್ಮ ಕೈಮುಗಿತಕ್ಕೆ ಪ್ರತಿಯಾಗಿ ಕೈ ಜೋಡಿಸಿದರು. ಇಷ್ಟಾದರೂ ಅವರು ಒಂದು ಮಾತನ್ನೂ ಕೂಡಾ ಆಡಲಿಲ್ಲ. ಹಾಗೂ ಕೈ ಜೋಡಿಸುವಾಗ ಸಹ ದುರದುರನೆ ನೋಡುತ್ತಿದ್ದ ಅವನ ದೃಷ್ಟಿಯಲ್ಲಿ "ನೀವು ಇಲ್ಲಿ ಯಾಕೆ ಬಂದಿರಿ, ಸುನೇತ್ರೆಯಲ್ಲಿ ಗೆಳೆತನ ಮಾಡುವ ಹಕ್ಕು ನಿಮಗಿಲ್ಲ" ಎಂಬ ಭಾವನೆಯು ವ್ಯಕ್ತವಾಗುತ್ತಿತ್ತು.

ಹರಿರಾಮ ಸಾರ್ವೇಕರರು ಆಕರ್ಷಣೆಯ ವ್ಯಕ್ತಿಯಾಗಿರಲಿಲ್ಲ. ಕುಳ್ಳ ಶರೀರ, ಡೊಳ್ಳು ಹೊಟ್ಟೆ, ಉಬ್ಬಿದ ಮುಖ, ಕಗ್ಗಿನ ಮೈಬಣ್ಣ ಇವುಗಳಿಂದ ಅವನು ತಿರಸ್ಕರಣೀಯನಾಗಿಯೇ ಕಾಣುತ್ತಿದ್ದನು. ಸುನೇತ್ರಾದೇವಿಯ ಮಾತಿನಲ್ಲಿ ಅವನು "ಇನ್ನೊಬ್ಬ ಶ್ರೀಮಂತ ಕುನ್ನಿಮಗ." ಅಂಥವನೊಡನೆ ಸುನೇತ್ರಾದೇವಿಯು ಪ್ರೇಮಾತಿಶಯದಿಂದ ವರ್ತಿಸುವದು ನಮಗೆ ಅತ್ಯಂತ ಅಸಹ್ಯಕಾರವಾಗಿತ್ತು. ಈ ಪ್ರೇಮಾದರಗಳ ನಟನೆಯು ಸುನೇತ್ರಾದೇವಿಗೆ ನಮಗಿಂತಲೂ ಸಾವಿರ ಪಾಲು ಅಧಿಕವಾಗಿ ಅಸಹ್ಯವಾಗಿದ್ದಿರಬೇಕು ಎಂಬುದನ್ನು ಅರಿತಿದ್ದ ನನಗೆ ಅವಳ ವಿಷಯದಲ್ಲಿ ಮೊದಲೇ ತೋರುತ್ತಿದ್ದ ಸಹಾನುಭೂತಿಯು ಇನ್ನಷ್ಟು ಹೆಚ್ಚಾಯಿತು.

ಸುನೇತ್ರೆಯು ತನ್ನಲ್ಲಿ ತೋರುತ್ತಿದ್ದ ಪ್ರೇಮಾತಿರೇಕದಿಂದ ಅವನು ಆನಂದ ಪರವಶನಾಗಿ ಮೈಮರೆತಿದ್ದನು. ಹಾಗಿದ್ದರೂ ಸುನೇತ್ರೆಯ ವಿಷಯದಲ್ಲಿ ನಮ್ಮ ಕುರಿತಾದ ಸಂಶಯವು ಅವನ ಮನಸ್ಸಿನಲ್ಲಿ ಹುಟ್ಟಿತೆಂಬುದು ನಮ್ಮ ಕಡೆಗೇನೇ ನೋಡುತ್ತಿದ್ದ ಅವನ ತೀಕ್ಷ್ಣದೃಷ್ಟಿಯಿಂದ ಅವಗತವಾಗುತ್ತಿತ್ತು.

ನಾರ್ವೇಕರನು ಅತ್ಯಂತ ನೀಚ ಸ್ವಭಾವದವನೆಂಬುದೂ ಹಾಗೂ ತನಗೆ ಬೇಕಾದುದನ್ನು ಸಾಧಿಸಲು ಅವನು ಯಾವ ಅನ್ಯಾಯ ಮಾಡುವದಕ್ಕೂ ಹಿಂಜರಿಯುದವನೆಂಬುದೂ ಅವನ ಮುಖಭಾವದಿಂದ ವ್ಯಕ್ತವಾಗುತ್ತಲಿತ್ತು. ಅಂತಹ ಮನುಷ್ಯನ ಆ ತೀಕ್ಷ್ಣದೃಷ್ಟಿಯಲ್ಲಿ ಶ್ರೀಧರ ಸುನೇತ್ರೆಯರ ದುರಂತ ಭವಿತವ್ಯದ ಪೂರ್ವಸೂಚನೆಯು ನನ್ನ ಒಳಗಣ್ಣಿಗೆ ತೋರಹತ್ತಿತು.

ಹಾಗೆಯೇ ಕೆಲವು ದಿವಸಗಳು ಕಳೆದವು. ಬೇಸಗೆಯ ರಜೆ ಬಂದಿತು. ಅಭ್ಯಾಸದ ಒತ್ತಡದಿಂದಾಗಿ ನಾನು ಊರಿಗೆ ಹೋಗುವ ವಿಚಾರವನ್ನು ರದ್ದು ಗೊಳಿಸಿದ್ದೆನು. ಶ್ರೀಧರನೂ ಊರಿಗೆ ಹೋಗಲಿಲ್ಲ. ಊರಿಗೆ ಹೋಗದಿರಲು ಅಭ್ಯಾಸದ ನೆವವನ್ನು ಅವನೂ ಮುಂದೆ ಮಾಡಿದ್ದನು. ಆದರೆ ನಿಜವಾದ ಕಾರಣವೆಂದರೆ ಸುನೇತ್ರೆಯಿಂದ ಒಂದು ದಿವಸದ ವಿರಹ ಕೂಡ ಅವನಿಗೆ ದುಃಸಹವಾಗಿತ್ತು. ಅಲ್ಲದೆ ಹೆತ್ತವರನ್ನು ಕಾಣದಿರಲು ಇನ್ನೊಂದು ಬಲ ವಾದ ಕಾರಣವೂ ಇತ್ತು. ಅವನ ತಂದೆಯ ಪ್ರತಿಯೊಂದು ಪತ್ರದಲ್ಲಿ ಅವನ ವಿವಾಹದ ಪ್ರಸ್ತಾಪವಿಲ್ಲದಿರುತ್ತಿರಲಿಲ್ಲ. ತನ್ನ ಶಿಕ್ಷಣ ಮುಗಿಯದೆ ತಾನು ವಿವಾಹದ ವಿಚಾರ ಮಾಡುವದಿಲ್ಲವೆಂದು ಶ್ರೀಧರನು ಸ್ಪಷ್ಟವಾಗಿ ತಿಳಿಸಿದ್ದರೂ ಊರಿಗೆ ಹೋದೊಡನೆ ವಿವಾಹದ ಪ್ರಶ್ನೆಯು ಏಳುವದೆಂಬುದು ಸ್ವಯಂಸಿದ್ಧವೇ ಇತ್ತು. ಯಾಕಂದರೆ ಶ್ರೀಧರನಂತಹ ಯೋಗ್ಯ ಅಳಿಯ ನನ್ನು ದೊರಕಿಸುವದಕ್ಕಾಗಿ ಎಷ್ಟೋ ಕನ್ಯಾಪಿತೃಗಳು ಹಾತೊರೆಯುತ್ತಿದ್ದರು.

ಈ ಅವಧಿಯಲ್ಲಿ ಹರಿರಾಮ ನಾರ್ವೇಕರರು ಮುಂಬಯಿಯಲ್ಲೇ ಕಾಯಂ ವಾಸ್ತವ್ಯಮಾಡಿದ್ದರು. ವ್ಯಾಪಾರದ ಸಲುವಾಗಿ ಕೆಲವು ದಿವಸಗಳ ಮಟ್ಟಿಗೆ ಮಾತ್ರ ಬಂದಿರುವೆನೆಂದಿದ್ದ ಈ ಮಹಾಶಯರು ಊರಿಗೆ ಮರಳುವ ವಿಚಾರ ವನ್ನೇ ಬಿಟ್ಟಂತೆ ತೋರುತ್ತಿತ್ತು. ನಾರ್ವೇಕರನು ಸುನೇತ್ರೆಗಾಗಿ ಹುಚ್ಚನಾ ಗಿದ್ದನು. ಅವನಿಂದಾಗಿ ಸುನೇತ್ರೆಗೆ ಬಿಡುವೇ ಇರಲಿಲ್ಲ. ಆದರೆ, ಅವಳಿಗಾಗಿ ಅವನು ವ್ಯಯಿಸುವ ರೊಕ್ಕ, ಅವಳಿಗೆ ಕೊಡುವ ಪಾರಿತೋಷಕಗಳು, ಇವು ಗಳಿಂದಾಗಿ ಅವನನ್ನು ತಿರಸ್ಕರಿಸುವದು ಇಲ್ಲವೇ ಅವನಲ್ಲಿ ಅನಾದರ ತೋ ರಿಸುವದು ಸುನೇತ್ರೆಗೆ ಸಾಧ್ಯವಿರಲಿಲ್ಲ. ಅವನಂತಹ ಆಶ್ರಯದಾತರಿಂದ ಅಪ್ಸರಾ ಮಂದಿರಕ್ಕೂ ತುಂಬಾ ಲಾಭವಿದ್ದುದರಿಂದ ಅದರ "ಮಾತೆಯೂ"

ಅವನನ್ನು ಅತ್ಯಂತ ಗೌರವ ಆದರಗಳಿಂದ ಕಾಣುತ್ತಿದ್ದಳು.

ಬೇಸಗೆಯ ರಜೆಯ ಆರಂಭದ ದಿನಗಳು ಶ್ರೀಧರನನ್ನು ಆನಂದಸಾಗರ ದಲ್ಲಿ ತೇಲಿಸಿದವು. ಸಾರ್ವೆಕರನು ಸೂಪಾಕ್ಕೆ ಹೋಗಿದ್ದನು. ಆ ದಿನ ಗಳಲ್ಲಿ ಯಾವಾಗಲೂ ಗಿರಾಕಿಗಳ ಸಂಖ್ಯೆ ಕಡಿಮೆ. ಹಾಗಾಗಿ ಸುನೇತ್ರೆಗೆ ಶ್ರೀಧರನ ಸಹವಾಸದಲ್ಲಿ ವೇಳೆ ಕಳೆಯಲು ತುಂಬಾ ಅವಕಾಶ ದೊರೆಯಿತು. ನಾವು ಮೂವರು ಮುಂಬಯಿಯ ಸುತ್ತಲಿನ ಯಾವತ್ತೂ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ಸುತ್ತಾಡಿದೆವು. ಕಾನ್ಹೇರೀಯ ಭೌದ್ಧ ಗುಹೆಗಳಿಗೆ ಹೋಗಲು ನಾವು ಮರೆಯಲಿಲ್ಲ. ಶ್ರೀಧರ ಸುನೇತ್ರೆಯರ ಪ್ರಥಮ ಮಿಲನದ ಆ ಚೈತ್ಯಾಲಯದ ಬಳಿ ಹೋಗುವಾಗ ಮಾತ್ರ ನಾನು ಹಿಂದೆಯೇ ಉಳಿದೆ. ಮೊದಲ ಭೆಟ್ಟಿಯ ಮಾಧುರ್ಯವನ್ನು ಅವರಿಬ್ಬರೇ ಏಕಾಂತದಲ್ಲಿ ತಿರುಗೊಮ್ಮೆ ಸವಿಯಬೇಕೆಂದು ನನ್ನ ಇಚ್ಛೆ ಇತ್ತು. ಆದ್ದರಿಂದ, ನಾನು ಹೊರಕಡೆಗೆ ಹೋಗುವ ನೆಪವನ್ನು ಹೇಳಿ ಮುಂಬಯಿಗೆ ಮರಳಿದೆನು ಹಾಗೂ ಆ ಸುದ್ದಿಯನ್ನು ಕಾವಲುಗಾರನ ಮೂಲಕ ಅವರಿಗೆ ತಿಳಿಸಿದೆನು.

ನೈಸರ್ಗಿಕ ಸೌಂದರ್ಯಕ್ಕಿಂತಲೂ ಐತಿಹಾಸಿಕ ಸ್ಮಾರಕಗಳನ್ನು ನೋಡುವದರಲ್ಲಿ ಸುನೇತ್ರೆಗೆ ವಿಶೇಷ ಆಸಕ್ತಿ ಇತ್ತು. ಕಾನ್ಹೇರಿಯ ಗುಹೆಗಳನ್ನು ಸಂದರ್ಶಿಸಿದ ನಂತರ ನಾವು ವಸಯಿಯ ಪೋರ್ತುಗೀಸ ಕಿಲ್ಲೆಗೆ ಹೋಗುವ ವಿಚಾರ ಮಾಡಿದೆವು.

ರಾಮ ನವಮಿಯ ನಂತರದ ಒಂದು ಸೋಮವಾರ ನಾವು ಅಲ್ಲಿಗೆ ಹೋಗುವದೆಂದು ನಿಶ್ಚಯಿಸಿದೆವು. ಅಪ್ಸರಾ ಮಂದಿರದ ಎದುರಿಗೇನೇ ಇರುತ್ತಿದ್ದ ನನ್ನ ದೂರದ ಆಪ್ತರೊಬ್ಬರ ಮಗಳಾದ ಮಾಲತಿಯೂ ನಮ್ಮೊಡನೆ ಬರುವವಳಿದ್ದಳು. ನಾವು ಮುಂಜಾನೆ ಎಂಟು ಗಂಟೆಗೆ ಅಪ್ಸರಾ ಮಂದಿರಕ್ಕೆ ಬರುವೆವೆಂದು ಹೇಳಿದ್ದೆವು.

ಅದರಂತೆ ನಾವು ಹೋದಾಗ ಮಾತ್ರ ಅನಪೇಕ್ಷಿತ ಹಾಗೂ ಅನಿಷ್ಟಸೂಚಕ ದೃಶ್ಯವು ನಮ್ಮ ಕಣ್ಣಿಗೆ ಬೀಳುವಂತಾಯಿತು. ಅಪ್ಸರಾ ಮಂದಿರದ ಪ್ರವೇಶ ದ್ವಾರವನ್ನು ನಾವು ತಲಪುವಾಗ ಹರಿರಾಮ ಸಾರ್ವೆಕರನು ಗಡಬಡೆಯಿಂದ ಹೊರಗೆ ಬರುವದನ್ನು ಕಂಡೆವು. ಕೋಪದಿಂದ ಕಿಡಿಕಿಡಿಯಾಗಿ ಅವನ

ಶರೀರವಿಡೀ ಕಂಪಿಸುತ್ತಿತ್ತು. ನಮ್ಮನ್ನು ನೋಡಿ ಸಿಟ್ಟಿನಿಂದ ಕೆಂಪಾಗಿದ್ದ ಅವನ ಕಣ್ಣುಗಳು ಇನ್ನಷ್ಟು ಕೆಂಪಾದವು.

ಒಳಗೆ ಹೋಗಿ ನೋಡುವಾಗ, ಸುನೇತ್ರೆಯು ಅಳುತ್ತಾ ಕುಳಿತಿದ್ದಳು. ಅತ್ತು ಅತ್ತು ಅವಳ ಕಣ್ಣುಗಳು ಕೆಂಪಾಗಿದ್ದವು. ಮುಡಿದಿದ್ದ ಹೂವನ್ನು ಎಸೆದು ಜಡೆಯನ್ನು ಬಿಚ್ಚಿ ಕುಳಿತಿದ್ದ ಅವಳ ಸ್ಥಿತಿಯನ್ನು ಕಂಡು ಅವಳ ಉದ್ವೇಗದ ಕಾರಣವನ್ನು ಕೇಳಲು ಸಹ ನಮಗೆ ಧೈರ್ಯಸಾಲಲಿಲ್ಲ. ಕೊನೆಗೆ ಅವಳ ಆ ದುಃಸ್ಥಿತಿಯ ಕಾರಣವು ಅಪ್ಸರಾಮಂದಿರದ ಇತರ ಬಾಲಿಕೆಯರಿಂದ ತಿಳಿಯಿತು. ಫವ್ಮೊಡನೆ ವಸತಿಗೆ ಹೋಗಲು ಸುನೇತ್ರೆಯು ಸಿದ್ಧವಾಗುತ್ತಿದ್ದಾಗ ಹರಿರಾಮ ನಾರ್ವೇಕರನು ಬಂದು "ಎಲಿಫಂಟಾ ದ್ವೀಪಕ್ಕೆ ವಿಹಾರಕ್ಕಾಗಿ ಇಬ್ಬರೇ ಹೋಗಲು ಸ್ಪೆಶಲ್ ಲಾಂಚಿನ ಏರ್ಪಾಡು ಮಾಡಿದ್ದೇನೆ. ಆದ್ದರಿಂದ ಹೊರಡು" ಎಂದನಂತೆ.

ಶ್ರೀಧರನೊಡನೆ ಒಂದು ದಿನದ ಆನಂದ ಪರವಶತೆಯ ಸ್ವರ್ಗಸುಖವನ್ನು ಇದಿರು ನೋಡುತ್ತಿದ್ದ ಸುನೇತ್ರೆಯು ಅದೇ ದಿನ ವಿಡೀ ನಾರ್ವೇಕರನ ಸಹವಾಸದ ನರಕವಾಸವನ್ನು ಅನುಭವಿಸಲು ಸರ್ವಥಾ ಸಿದ್ಧಳಿರಲಿಲ್ಲ. ನಾರ್ವೆಕರನು ಬಂದ ಕಾಲದಲ್ಲಿ ಹೊರಗೆ ಹೊರಡುವ ತಯಾರಿಯಲ್ಲಿದ್ದುದರಿಂದ, ಅವನ ಆಮಂತ್ರಣವನ್ನು ಸ್ವೀಕರಿಸದಿರಲು ಮೈಯಲ್ಲಿ ಚೆನ್ನಾಗಿಲ್ಲವೆಂಬ ಅನುಕೂಲ ನೆವವನ್ನು ಮುಂದೆ ಮಾಡುವದೂ ಸಾಧ್ಯವಿರಲಿಲ್ಲ. ಈ ಕಾರಣದಿಂದ ಮತ್ತು ನಾರ್ವೆಕರನ ಧೂಮಕೇತು ಸದೃಶ ಏಕಾಏಕಿ ಆಗಮನದಿಂದ ಅತ್ಯಂತ ನಿರಾಶೆಗೊಂಡ ಹಾಗೂ ಕೋಪಾವಿಷ್ಟವಾದ ಮನಃಸ್ಥಿತಿಯಲ್ಲಿ ಸುನೇತ್ರೆಯು ನಿಜಕಾರಣವನ್ನೇ ನುಡಿದುಬಿಟ್ಟಳು. ನಾರ್ವೆಕರನು ಭಯಂಕರ ಸಿಟ್ಟಿಗೆದ್ದನು. ತಾನು ಸುನೇತ್ರೆಗಾಗಿ ಇಷ್ಟೊಂದು ಮಾಡುತ್ತಿದ್ದರೂ ಅವಳು ಈ ಯಃಕಶ್ಚಿತ ಕಾಲೇಜ ಹುಡುಗನಲ್ಲಿ ಅನುರಕ್ತಳಾಗಿದ್ದಾಳೆಂದು ಅವನ ಮನಸ್ಸಿನಲ್ಲಿ ಈ ಮೊದಲೇ ಉಂಟಾಗಿದ್ದ ಸಂಶಯುವು ಈಗ ನಿಸ್ಸಂಶಯವಾಗಿ ನಿಶ್ಚಿತವಾಯಿತು. ಸಿಟ್ಟಿನ ಭರದಲ್ಲಿ ಅವನು ಸುನೇತ್ರೆಯನ್ನೂ ಅಪ್ಸರಾ ಮಂದಿರವನ್ನೂ ಬಾಯಿಗೆ ಬಂದಂತೆ ಬಯ್ದನು. ಅವನಂತಹ ಶ್ರೀಮಂತ ಆಶ್ರಯದಾತನನ್ನು ಕಳಕೊಳ್ಳಲು ತಯಾರಿಲ್ಲದ ಅಪ್ಸರಾಮಂದಿರದ

ಮಾತೆಯೂ ಸುನೇತ್ರೆಯನ್ನು ಬೈದಳಂತೆ. ಆದರೆ ಸುನೇತ್ರಾದೇವಿಯು ಮಾತ್ರ ಯಾವದಕ್ಕೂ ಬಗ್ಗಲಿಲ್ಲ. ಅಪ್ಸರಾಮಂದಿರಕ್ಕಾಗಿ ನಾರ್ವೇಕರನು ಹಣ ವೆಚ್ಚ ಮಾಡಿದರೆ ಅದು ತನ್ನ ಸಲುವಾಗಿ, ಅದನ್ನು ಗಳಿಸಿದವಳು ತಾನು ಎಂದು ಸ್ಪಷ್ಟವಾಗಿ ಮಾತೆಗೆ ಹೇಳಿಬಿಟ್ಟಳು. ಹಾಗೂ ಅಪ್ಸರಾಮಂದಿರದಲ್ಲಿ ಇದ್ದ ಮಾತ್ರಕ್ಕೆ ತಾನು ತನ್ನ ಸ್ವಾತಂತ್ರ್ಯವನ್ನು ಒತ್ತೆ ಇಟ್ಟಿಲ್ಲ. ಬೇಕಾದ ವರೊಡನೆ ಬೇಕಾದ ಕಡೆ ಹೋಗಲು ತನಗೆ ಹಕ್ಕಿದೆ ಎಂದು ಹೇಳಿ ತಾನು ನಾರ್ವೇಕರನೊಡನೆ ಹೋಗುವದಿಲ್ಲವೆಂಬ ತನ್ನ ಧೃಡನಿರ್ಧಾರವನ್ನು ತಿಳಿಸಿಯೇ ಬಿಟ್ಟಳು.

ತನ್ನ ಸಾಮರ್ಥ್ಯವನ್ನು ಬೇಗನೇ ತೋರಿಸುವೆನೆಂದು ಬೆದರಿಕೆ ಹಾಕಿ ನಾರ್ವೇಕರನು ಅಪ್ಸರಾಮಂದಿರದಿಂದ ಹೊರಬಿದ್ದನು.

ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ನಾವು ಅಪ್ಸರಾಮಂದಿರವನ್ನು ಹೊಕ್ಕೆವು. ನಮ್ಮನ್ನು ನೋಡಿ "ಮಾತೆಯು" ರೋಷವು ಇನ್ನಷ್ಟು ಕೆರಳಿತು. ಆವಳು ಹೊರಗೆ ಬಂದು ಈ ಹರಕು ಬುಶ್ ಕೋಟಿನ ಹುಡುಗನಲ್ಲಿ ಹುಚ್ಚಳಾಗಿ ನೀನು ಬೀದಿಯ ಭಿಕಾರಿಯಾಗಬೇಕಾಗಿ ಬರುವದು ಎಂದು ಹೇಳಿದಳು.

ಇದನ್ನು ಕೇಳಿ ಶ್ರೀಧರನಿಗೆ ಅತಿಶಯ ಕಳವಳವಾಯಿತು. ಆದರೆ ಅದಕ್ಕೆ ಯಾವದೇ ಉತ್ತರ ಕೊಡುವ ಶಕ್ತಿ ನಮ್ಮಲ್ಲಿರಲಿಲ್ಲ.

ಅಳುತ್ತಾ ಕುಳಿತಿದ್ದರೂ ಸುನೇತ್ರೆಯ ಮುಖದಲ್ಲಿ ನಮ್ಮನ್ನು ನೋಡಿ ದೊಡನೆ ಮೃದು ಸ್ಮಿತ ಒಂದು ಮೂಡೀತು. ನಡೆದು ಹೋದ ಘಟನೆಯ ಬಳಿಕ "ಮಾತೆ"ಯು ನಮ್ಮನ್ನು ಒಳಗೇನೇ ಬಾರದಂತೆ ಹೊರಗಟ್ಟುವಳೊ ಎಂಬ ಭೀತಿಯು ಅವಳಲ್ಲಿ ಹುಟ್ಟಿರಬೇಕು. ನಮ್ಮ ಬರುವಿಕೆಯಿಂದ ಅವಳ ಆ ಅಂಜಿಕೆಯು ದೂರವಾಗಲು ಅವಳು ಪುನಃ ಹರ್ಷಚಿತ್ತಳಾದಳು. ಹಾಗೂ ಕೆಲನಿಮಿಷಗಳಲ್ಲೇ ಹೊರಡಲು ಸಿದ್ಧಳಾದಳು.

ನಾನು, ಶ್ರೀಧರ, ಮಾಲತಿ ಹಾಗೂ ಸುನೇತ್ರೆ ನಾವು ನಾಲ್ವರು ಒಂದು ಟ್ಯಾಕ್ಸಿ ಹಿಡಿದು ಚರ್ನಿರೋಡ ರೈಲ್ವೇ ನಿದ್ದಾಣಕ್ಕೆ ಬಂದೆವು. ಯಾಕಂದರೆ ಅಂದಿನ ಪರಿಸ್ಥಿತಿಯಲ್ಲಿ ಅಪ್ಸರಾಮಂದಿರದ ಮೋಟಾರ ನಮಗೆ ಸಿಗುವಂತಿರಲಿಲ್ಲ. ಚರ್ನಿರೋಡದಲ್ಲಿ ರೈಲಿನಲ್ಲಿ ಕುಳಿತ ನಾವು ಬೇಸಿನ್ ರೋಡ

ನಿಲ್ದಾಣದಲ್ಲಿ ಇಳಿಯುವತನಕ ಸುನೇತ್ರೆಯ ಬಾಯಿಯಿಂದ ಒಂದಾದರೂ ಶಬ್ದ ಹೊರಡಲಿಲ್ಲ. ಮುಂಜಾನೆ ನಡೆದ ಘಟನೆಗಳಿಂದ ಅವರ ಮನಸ್ಸು ವಿಹ್ವಲ ವಾಗಿತ್ತು. ಬೇಸಿನರೋಡದಲ್ಲಿ ಇಳಿದು ವಸಯಿಗೆ ಹೋಗುವ ಮೋಟಾರನ್ನು ಹತ್ತಿದ ಮೇಲೆ ಮಾತ್ರ ಅಲ್ಲಿನ ಬಯಲು ಹವೆಯಲ್ಲಿ ಅವಳು ತನ್ನ ಎಂದಿನ ಆನಂದೀ ಮನೋವೃತ್ತಿಯನ್ನು ತಾಳಿದಳು.

ವಸಯಿ ಕಿಲ್ಲೆಯ ವಿಸ್ತಾರವಾದ ಕ್ಷೇತ್ರದಲ್ಲಿ ನಾವು ತುಂಬಾ ಅಡ್ಡಾಡಿದೆವು. ಅದರ ಹಾಳುಬಿದ್ದ ಗೋಡೆಗಳು ಭಗ್ನಾವಸ್ಥೆಯಲ್ಲಿದ್ದ ಬುರುಜುಗಳು ಮನುಷ್ಯ ಪ್ರಯತ್ನಗಳ ಮಿತಿಯನ್ನು ಸಾರುತ್ತಿದ್ದುವು. ಕಾನ್ಹೇರಿಯ ಭೌದ್ಧ ಗುಹೆಗಳ ದೃಶ್ಯಕ್ಕೂ ಇದಕ್ಕೂ ಅಂತರವೆಷ್ಟು! ಅಲ್ಲಿ ಭೌದ್ಧ ಬಿಕ್ಷುಗಳು ಶಾಂತಿ ಅಹಿಂಸೆಯ ತತ್ವಗಳನ್ನು, ಕಾಯೇನ ಮನಸಾ ವಾಚಾ ಆಚರಿಸಿ ಜನತೆಯಲ್ಲಿ ನೀತಿ, ಸಹಿಷ್ಣುತೆಯ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆದರೆ, ಇಲ್ಲಿ ಪೋರ್ತುಗೀಸರ ಸತ್ತೆಯಕಾಲದಲ್ಲಿ ಎಂತಹ ಅತ್ಯಾಚಾರಗಳು ನಡೆದವು! ಧರ್ಮದ ಹೆಸರಿನಲ್ಲಿ ಎಂತಹ ಘೋರ ದಬ್ಬಾಳಿಕೆಯನ್ನು ಆಚರಣೆಯಲ್ಲಿ ತಂದರು. ಬಲಾತ್ಕಾರದಿಂದ ಮತಾಂತರವನ್ನೆಷ್ಟು ಮಾಡಿದರು ! ಇಷ್ಟೆಲ್ಲಾ ನಡೆಯುತ್ತಿದ್ದರೂ ಅಟಕ ನದಿಯುವರೆಗೂ ಹೋಗಿ ಅಲ್ಲಿ ಭಗವಾ ಝೆಂಡಾ ನೆಟ್ಟ ಮರಾಠರ ಸೈನ್ಯವು ಬಿಳಿ ಜನರೆದುರು ಸ್ವಹೀನತಾ ಭಾವನೆಯನ್ನು ತಾಳಿದ್ದರಿಂದ ಅವರಿಂದ ಸ್ವಜನರ ಹಾಗೂ ಸ್ವಧರ್ಮದ ಮೇಲೆ ಆಗುತ್ತಿದ್ದ ಆಘಾತವನ್ನು ತಡೆಗಟ್ಟುವದಕ್ಕಾಗಿ ಏನೆಂದೂ ಪ್ರತಿಕಾರ ಮಾಡಲು ಸಮರ್ಥವಾಗಿಲ್ಲ.

ಈ ವಿಚಾರಗಳನ್ನು ಚರ್ಚಿಸುತ್ತ ನಾವು ಕಿಲ್ಲೆಯ ಮೂಲೆ ಮೂಲೆಗಳಲ್ಲಿ ಅಡ್ಡಾಡುತ್ತಿದ್ದಾಗ ಒಂದು ಬದಿಯಲ್ಲಿ ಬೆಳೆದಿದ್ದ ಗಿಡಗಂಟೆಗಳ ನಡುವೆ ನಮಗೆ ಒಂದು ಚಿಕ್ಕ ಗೋರಿಯು ಕಣ್ಣಿಗೆ ಬಿತ್ತು. ಅದರ ಎದುರಿಗೆ ಬಿಳಿ ಕಲ್ಲು ನಿಲ್ಲಿಸಲ್ಪಟ್ಟಿದ್ದು ಅದರಲ್ಲಿ ಪೋರ್ಚುಗೀಸ ಭಾಷೆಯಲ್ಲಿ ಕೆಲವು ಅಕ್ಷರಗಳು ಕೊರೆಯಲ್ಪಟ್ಟಿದ್ದುವು. ಗೋವೆಯವಳಾದುದರಿಂದ ಮಾಲತಿಗೆ ಅಲ್ಪಸಲ್ಪ ಪೋರ್ಚುಗೀಸ ಭಾಷೆ ಬರುತ್ತಿತ್ತು. ಅವಳು ಅಕ್ಷರಗಳನ್ನು ಓದಲು ಪ್ರಯತ್ನಿಸಿದಳು. ಕಲ್ಲಿನ ಮೇಲೆ ಮಣ್ಣು ಬಿದ್ದುದರಿಂದ ಅಕ್ಷರಗಳು ಸ್ಪಷ್ಟ

ವಾಗಿ ಕಾಣುತ್ತಿರಲಿಲ್ಲ. ಓದುವ ಪ್ರಯತ್ನವನ್ನು ಬಿಟ್ಟು ನಾವು ಹಿಂದಿರುಗುವದರಲ್ಲಿದ್ದೆವು. ಆದರೆ ಅವುಗಳನ್ನು ಓದಿ ಅರ್ಥ ಹೇಳಬೇಕೆಂದು ಸುನೇತ್ರೆಯು ಆಗ್ರಹ ಹಿಡಿದಳು. ಹಾಗಾಗಿ ನಾನೂ, ಶ್ರೀಧರನೂ ಎಲ್ಲಿಂದಲೊ ಸ್ವಲ್ಪ ನೀರು ತಂದು ಆ ಕಲ್ಲನ್ನು ತೊಳೆದು ಅದರಲ್ಲಿನ ಅಕ್ಷರಗಳು ಸ್ಪಷ್ಟವಾಗಿ ಕಾಣುವಂತೆ ಮಾಡಿದೆವು. ಅದು ಓರ್ವ ಬಡಲೇಖಕನೊಡನೆ ವಿವಾಹಮಾಡಿಕೊಳ್ಳುವ ತನ್ನ ಇಚ್ಛೆಯು ಸಾಧ್ಯವಾಗುವದಕ್ಕಾಗಿ ಆತ್ಮಹತ್ಯೆಮಾಡಿಕೊಂಡ ಒಬ್ಬ ಗಾಯಕಿಯ ಸಮಾಧಿಯಾಗಿತ್ತು. ಅದನ್ನೇ ಆ ಕಲ್ಲಿನ ಮೇಲೆ ಬರೆಯಲಾಗಿತ್ತು. ಆದರೆ, ಆಕೆಯ ಹೆಸರಾಗಲಿ, ಅವಳ ಕುರಿತಾದ ಇತರ ಯಾವದೇ ವಿವರವಾಗಲಿ ನಮೂದಿಸಲ್ಪಟ್ಟಿರಲಿಲ್ಲ. ಅದರ ಸಮೀಪದಲ್ಲೇ ಇನ್ನೊಂದು ಕಲ್ಲಿನ ಮೇಲೆ ಒಂದು ಕವಿತೆಯು ಕೊರೆಯಲ್ಪಟ್ಟಿತ್ತು. ಅಲ್ಲಿಯೂ ಕವಿಯ ಹೆಸರಾಗಲಿ ಅವನ ಪರಿಚಯವನ್ನು ಹೇಳುವ ಯಾವದೇ ಶಬ್ದಗಳಾಗಲಿ ಇರಲಿಲ್ಲ. ಆದರೆ, ಆ ಕವಿತೆಯಲ್ಲಿ ಗರ್ಭಿತವಾದ ಭಾವಗಳಿಂದ ಅದು ಆ ಗಾಯಕಿಯ ಪ್ರಣಯಿಯಾದ ಬಡ ಲೇಖಕನೇ ಬರೆದದ್ದಿರಬೇಕೆಂದು ಊಹಿಸಬಹುದಾಗಿತ್ತು. ಅದರ ಶಬ್ದಗಳು ಹೀಗಿದ್ದುವು:—

ಜಗತ್ತು ಒಂದು ಶೋಕಸಾಗರ
ಜೀವನವೆಂದರೆ ದುಃಖದ ಪರಂಪರೆ
ಈ ನಮ್ಮ ಭಾವಕವಿತೆಯು ಕೊನೆಗೊಂಡಿತು
ಪ್ರೇಮದ ಪೂರ್ಣಚಂದ್ರನು ಒಡೆದು ಚೂರಾದನು
ಪ್ರೇಮವು ಸಫಲವಾಗದೆ ಅವಳ ಜೀವವು
ಈ ಕೊಳದಲ್ಲಿ ಲೀನವಾಯಿತು
ಆದರೆ, ಅಮರ ಪ್ರೇಮದ ಸುವಾಸನೆಯು ಅಂತರಿಕ್ಷದಲ್ಲಿ
ಇನ್ನೂ ತೇಲಾಡುತ್ತಿದೆ,
ಇದು ಸ್ವಪ್ನವೊ ವಾಸ್ತವವೊ
ಎರಡೂ ಒಂದೇ, ಅಸ್ತಿತ್ವದಲ್ಲಿರುವವರೆಗಷ್ಟೇ
ಅದರ ಸತ್ಯತೆ

ಈ ಲೇಖನಗಳ ವಿಷಯ ನಮಗೆ ತಿಲಮಾತ್ರವಾದರೂ ಮೊದಲೇ ಅರಿವಿದ್ದರೆ, ನಾವು ಅದನ್ನು ಓದಿಸುತ್ತಲೇ ಇರಲಿಲ್ಲ.

ಮಾಲತಿಯು ಆ ಲೇಖನಗಳನ್ನು ಓದಿ ಅರ್ಥ ಹೇಳುತ್ತಿರುವಾಗ, ಸುನೇತ್ರೆಯ ಮುಖವು ಒಮ್ಮೆಗೇಲೆ ಗಂಭೀರವಾಯಿತು. ಅವನ್ನು ಓದಿ ಮುಗಿಸುತ್ತಿರುವದರೊಳಗೆ ಅವಳು ಮೋರೆಗೆ ಕರವಸ್ತ್ರವನ್ನು ಹಿಡಿದು ಬಿಕ್ಕಿ ಬಿಕ್ಕಿಯಾಗಿ ಅಳಹತ್ತಿದಳು. ಶ್ರೀಧರ ಅವಳನ್ನು ಕೈಯಿಂದ ಆಲಿಂಗಿಸಿ ಅವಳನ್ನು ದೂರಕ್ಕೆ ಒಯ್ದನು. ಲತೆಯಂತೆ ಅವನನ್ನು ಅಂಟಿಕೊಂಡು ಅವನು ಒಯ್ದೆಡೆಗೆ ಹೋಗುವಾಗಲೂ ಅವಳು ಪದೇ ಪದೇ ಹಿಂತಿರುಗಿ ಆ ಸಮಾಧಿಯ ಕಡೆಗೆ ನೋಡುತ್ತಲಿದ್ದಳು.

ಆ ಅಜ್ಞಾತ ಗಾಯಕಿಯ ವೃತ್ತಾಂತ ಹಾಗೂ ಮುಖ್ಯವಾಗಿ ಆ ಕವಿತೆ ಇವುಗಳು ನಮ್ಮೆಲ್ಲರ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮವನ್ನು ಮಾಡಿದವು. ತನ್ನ ಹಾಗೂ ಅವಳ ಜೀವನದ ಏಕರೂಪತೆಯ ಕಾರಣದಿಂದ ಸುನೇತ್ರೆಯಮೇಲೆ ವಿಶೇಷ ಪರಿಣಾಮವಾಗಿದ್ದಿರಬೇಕು. ಶ್ರೀಧರನೊಡನೆ ವಿವಾಹದ ದಾರಿಯಲ್ಲಿ ಇರುವ ಅಡ್ಡಿ, ಆತಂಕಗಳ ನೆನಪಾಗಿ ತನ್ನ ಅಂತ್ಯವೂ ಆ ಗಾಯಕಿಯ ಅಂತ್ಯದಂತಾಗುವದೊ ಎಂಬ ಅಜ್ಞಾತ ಭೀತಿಯು ಅವಳ ಮನಸ್ಸನ್ನು ಆವರಿಸಿತು.

ವಸಯಿಯಿಂದ ಅಂದು ಹಿಂತಿರುಗುವಾಗ ನಾವು ಯಾರೂ ಬಾಯಿ ತೆರೆಯಲಿಲ್ಲ. ಬಾಯಿಯಿಂದ ಮಾತು ಹೊರಡದಷ್ಟು ನಮ್ಮ ಮನಃಸ್ಥಿತಿಯು ಗಂಭೀರವಾಗಿತ್ತು.

ಮುಂಬಯಿಯನ್ನು ಸಮೀಪಿಸಿದಾಗ ಮಾತ್ರ ಸುನೇತ್ರೆಯ ಮಾನಸಿಕ ಅಂತರಿಕ್ಷವನ್ನು ವ್ಯಾಪಿಸಿದ್ದ ಚಿಂತೆಯ ಮೋಡವು ಮಾಯವಾಗಿ ಅವಳು ಪುನಃ ಎಂದಿನಂತೆ ಮುಗುಳ್ನಗೆ ಸೂಸುತ್ತ ಮಾತಾಡಲು ಪ್ರಾರಂಭಿಸಿದಳು.

ಮಾಲತಿಯ ಸೂಚನೆಯಂತೆ ತುಸು ಹೊತ್ತಾದರೂ ಮಜಾ ಮಾಡಬೇಕೆಂಬ ವಿಚಾರದಿಂದ ನಾವು ಚರ್ಚಗೇಟದಲ್ಲಿರುವ ಚೀನೀ ಉಪಹಾರ ಗೃಹಕ್ಕೆ ಹೋದೆವು. ವಿಚಿತ್ರ ಹೆಸರಿನ ಚೀನಾ ದೇಶದ ತಿಂಡಿಗಳನ್ನು ಸೇವಿಸುವದರಲ್ಲಿ ವಸಯಿಯ ದೃಶ್ಯವನ್ನು ಮರೆತು ಕೆಲಕಾಲ ಆನಂದದಿಂದ ಕಳೆದೆವು. ಆದರೆ ಅಂದು ದೈವವು ಕೈ ತೊಳೆದು ನಮ್ಮನ್ನು ಹಿಂಬಾಲಿಸಿತ್ತು. ಉಪಹಾರ ಗೃಹದಿಂದ ಹೊರಬೀಳುವಾಗ ನಾರ್ವೇಕರ ಸಾಹುಕಾರನು ಒಳಗೆ ಪ್ರವೇಶಿಸು

ತ್ತಿದ್ದನು. ಅವರು ನಮ್ಮನ್ನು ನೋಡಿದರು. ನಾವೂ ಅವರನ್ನು ನೋಡಿದೆವು. ಸ್ವಚ್ಛ ಬೆಳದಿಂಗಳು ಬಿದ್ದಿರುವಾಗ ಒಮ್ಮಿಂಗಲೆ ಮೋಡವು ಚಂದ್ರನನ್ನು ಮುಸುಕಿದಂತೆ ನಮ್ಮ ಸ್ಥಿತಿಯಾಯಿತು.

ದುರಂತ ಭವಿತವ್ಯವು ತನ್ನ ಕರಾಳ ನೆರಳನ್ನು ಅಂದೇ ಚಾಚಿದಂತೆ ನನಗೆ ಭಾಸವಾಯಿತು.

ತರಂಗ ೧೦.

ಅಂದು ತನ್ನೊಡನೆ ಎಲಿಫೆಂಟಾ ದ್ವೀಪಕ್ಕೆ ಬರಲು ನಿರಾಕರಿಸಿದಂದಿನಿಂದ ನಾರ್ವೆಕರನು ಅಪ್ಸರಾಮಂದಿರಕ್ಕೆ ಹೋಗುವದನ್ನು ನಿಲ್ಲಿಸಿಬಿಟ್ಟನು. ಆದರೆ ಬಹಿಷ್ಕಾರವು ಬರೇ ತೋರಿಕೆಯ ಮಟ್ಟಿಗೆ ಮಾತ್ರವಿದ್ದಿತು. ಯಾಕಂದರೆ ಅವನು ಸುನೇತ್ರೆಯಲ್ಲಿ ಸಂಪೂರ್ಣ ಮೋಹಿತನಾಗಿಹೋಗಿದ್ದನು. ಹಾಗೂ ಅವನು ಬೇಕೆನಿಸಿದ ಬೇಟೆಯನ್ನು ಎಂದಿಗೂ ಬಿಡುವ ಸ್ವಭಾವದವನಾಗಿರಲಿಲ್ಲ. ಹಾಗಾಗಿ ಸುನೇತ್ರೆಯನ್ನು ದೊರಕಿಸುವ ಹಂಚಿಕೆಯನ್ನು ಅವನು ಹೂಡುತ್ತಲೇ ಇದ್ದನು.

ಒಂದು ದಿನ ನಾರ್ವೆಕರನು ಸುನೇತ್ರೆಯನ್ನು ತನ್ನ "ಅಂಗವಸ್ತ್ರ" ವಾಗಿ ಕಳಿಸುವದಾದರೆ "ಮಾತೆಗೆ" ತಾನು ಐದು ಸಾವಿರ ರೂಪಾಯಿ ಕೊಡುವೆನೆಂದು ತನ್ನ ಕಾರ್ಯದರ್ಶಿಯ ಮುಖಾಂತರ ಹೇಳಿ ಕಳಿಸಿದನು. ಆ ಸೀಡಿಕೆಯು ಸ್ವೀಕೃತವಾಗದಿದ್ದಾಗ ಅವನು ಅದನ್ನು ಹತ್ತುಸಾವಿರಕ್ಕೆ ಏರಿಸಿದನು. ಅದನ್ನು ಸ್ವೀಕರಿಸಬೇಕೆಂದು ಮಾತೆಯು ಹಟಹಿಡಿದಳು. ಸುನೇತ್ರೆಯು ಅದನ್ನು ಧಿಃಕ್ಕಾರದಿಂದ ತಿರಿಸ್ಕರಿಸಿದ್ದನ್ನು ನೋಡಿ ಅವಳಿಗೆ ಅತಿ ಸಿಟ್ಟಾಯಿತು. ಸುನೇತ್ರೆಯು ಸ್ವಾತಂತ್ರ್ಯದ ಭಾಷೆಯನ್ನು ಆಡುತ್ತಿದ್ದಳು. ಆದರೆ, ಅನಾಥೆಯಾಗಿದ್ದ ಅವಳಿಗೆ ಮಾತೆಯು ಊಟ, ಉಡಿಗೆ ಕೊಟ್ಟು ಗಾಯನ, ನರ್ತನ ಕಲಿಸಿ ಈ ಸ್ಥಿತಿಗೆ ತರದಿದ್ದರೆ, ಇಂದು ಅವಳ ಗತಿ ಏನಾಗುತ್ತಿತ್ತು! ತಾನು ಇಷ್ಟು ಮಾಡಿದುದಕ್ಕಾಗಿ ಕೃತಜ್ಞತಾಭಾವವಾದರೂ ಅವಳಲ್ಲಿ ಇರಬೇಡವೆ? ತಾನು ಈಗ ಮುದುಕಿಯಾದೆ. ಅಪ್ಸರಾಮಂದಿರವನ್ನು ನಡೆಸಿಕೊಂಡು ಹೋಗುವದು ಇನ್ನು ಮುಂದೆ ತನ್ನಿಂದ ಸಾಧ್ಯವಾಗಲಿಕ್ಕಿಲ್ಲ.

ಹತ್ತು ಸಾವಿರ ರೂಪಾಯಿ ಸಿಕ್ಕಿದರೆ ತಾನು ತನ್ನ ವೃದ್ಧಾಪ್ಯದ ದಿನಗಳನ್ನು ಹೊಟ್ಟೆಯ ಚಿಂತೆ ಇಲ್ಲದೆ ದೇವ ಧ್ಯಾನದಲ್ಲಿ ಕಳೆಯಬಹುದು. ಅಷ್ಟು ಹಣ ಅನಾಯಾಸವಾಗಿ ಸಿಗುತ್ತಿರುವಾಗ, ಅದನ್ನು ತಿರಸ್ಕರಿಸುವದೆಂದರೆ ಅದು ಯೋಗ್ಯವೇ? ಅಲ್ಲದೆ, ತಾನೇನು ತನ್ನ ಸ್ವಾರ್ಥಕ್ಕಾಗಿ ಸುನೇತ್ರೆಯನ್ನು ದುಃಖದಲ್ಲಿ ಧುಮುಕಲು ಹೇಳುತ್ತೇನೇ? ನಾರ್ವೆಕರನಂತಹ ಆಗರ್ಭ ಶ್ರೀಮಂತನ ನಚ್ಚಿನ ಅಂಗವಸ್ತ್ರವಾದರೆ, ಸುನೇತ್ರೆಗೆ ಸುಖಸಾಧನಗಳಿಗೇನು ಕಡಿಮೆ ಉಂಟೇ? ಈಗಿನ ಜೀವನಕ್ಕಿಂತ ಅದು ಯಾವ ವಿಧದಲ್ಲಿ ಕೆಳಗಿನದು? ಈ ರೀತಿ ಮಾತೆಯು ಸುನೇತ್ರೆಗೆ ಪರಿಪರಿಯಾಗಿ ಭೋಧಿಸಿದಳು. ಆದರೆ ಸುನೇತ್ರೆಯ ಮನಸ್ಸಿನ ಮೇಲೆ ಇದರಿಂದ ಯಾವದೇ ಪರಿಣಾಮವಾಗಲಿಲ್ಲ. ಬಲತ್ಕಾರದಿಂದಲಾದರೂ ನಾರ್ವೆಕರನೊಡನೆ ಕಳಿಸಿಯೇ ತೀರುವೆನೆಂದು ಮಾತೆಯು ಬೆದರಿಕೆ ಹಾಕಿದಳು. ಹಾಗೇನಾದರೂ ಪ್ರಯತ್ನಪಟ್ಟರೆ, ನೀನು ಹೊರಗೆ ಕಳಿಸುವದು ನನ್ನನ್ನಲ್ಲ. ನನ್ನ ಹೆಣವನ್ನು ಎಂದು ಹೇಳಿ ಸುನೇತ್ರೆಯು ನಾರ್ವೆಕರನು ಎಷ್ಟು ಹಣ ಸುರಿದರೂ ಅವನೊಡನೆ ಹೋಗಲಾರೆನೆಂಬ ತನ್ನ ಧೃಡನಿರ್ಧಾರವನ್ನು ವ್ಯಕ್ತಮಾಡಿದಳು.

ನಾರ್ವೆಕರ ಪ್ರಕರಣವು ಇಲ್ಲಿಗೆ ಮುಗಿಯಿತೆಂದು ಶ್ರೀಧರನು ಆಶಿಸಿದ್ದನು. ಆದರೆ, ವಿಧಾತನು ಅವನ ಹಣೆಯಲ್ಲಿ ಬರೆದದ್ದೇ ಬೇರೆಯೇ.

ನಾರ್ವೆಕರನನ್ನು ನಿರಾಕರಿಸಿದ್ದರಿಂದ ಅಪ್ಸರಾಮಂದಿರದ ಇತರ ಗಿರಾಕಿಗಳ ದೃಷ್ಟಿಯಲ್ಲಿ ಸುನೇತ್ರೆಯ ವರ್ಚಸ್ಸು ಬೆಳೆದರೂ, ಹತ್ತು ಸಾವಿರ ರೂಪಾಯಿಗಳ ನಾರ್ವೆಕರರ, ನೀಡಿಕೆಯನ್ನು ತಿರಸ್ಕರಿಸಿದುದರ ಪರಿಣಾಮವಾಗಿ ಮಾತೆಯ ಮನಸ್ಸು ಸುನೇತ್ರೆಯ ವಿಷಯದಲ್ಲೂ ಸಹ ಪ್ರತಿಕೂಲವಾಯಿತು. ಸುನೇತ್ರೆಯ ವರ್ತನೆಗೆ ಕಾರಣೀಭೂತನಾದ ಶ್ರೀಧರನ ಮೇಲಂತೂ ಅವಳು ವಿಷವನ್ನೇ ಕಾರಲು ತೊಡಗಿದಳು. ಶ್ರೀಧರನನ್ನು ಕಂಡಾಗಲೆಲ್ಲಾ ಬೈಗಳ ಸುರಿಮಳೆಯ ಸ್ವಾಗತವೇ ಅವಳಿಂದ ಆತನಿಗೆ ಸಿಗಹತ್ತಿತು. ಹಾಗಾಗಿ ಅವನು ಸುನೇತ್ರೆಯ ಬಳಿಗೆ ಹೋಗುವಾಗಲೂ ಮಾತೆಯ ಕಣ್ಣು ತಪ್ಪಿಸಿ ಹೋಗಬೇಕಾಯಿತು.

ಈ ಪರಿಸ್ಥಿತಿಯೂ ಬಹಳ ದಿವಸ ಬಾಳಲಿಲ್ಲ. ಒಂದು ದಿನ ಮಾತೆಯು

ಸುನೇತ್ರೆಯನ್ನು ಕರೆದು "ಪ್ರಣಯವೂ ಅಪ್ಸರಾಮಂದಿರದ ಜೀವಿತವೂ ಒತ್ತಟ್ಟಿಗೆ ಸಾಗುವದು ಸಾಧ್ಯವಿಲ್ಲ. ಶ್ರೀಧರನನ್ನು ಮದುವೆಯಾಗುವ ನಿರ್ಧಾರವನ್ನು ನೀನಂತೂ ಈ ಮೊದಲೇ ಮಾಡಿರುವೆ. ನಿನ್ನ ಇಚ್ಛೆಗೆ ನಾನು ಅಡ್ಡ ಬರುವದಿಲ್ಲ. ನೀನು ಅವನನ್ನೇ ಮದುವೆಯಾಗು. ಆದರೆ, ಒಂದು ಶರ್ತದ ಮೇಲೆ ನಾರ್ವೇಕರರು ಹತ್ತುಸಾವಿರ ರೂಪಾಯಿ ಕೊಡಲು ತಯಾರಿದ್ದನು. ಅದರ ಅರ್ಧವನ್ನು ನಾನು ಬಿಡುತ್ತೇನೆ. ಶ್ರೀಧರನು ಐದು ಸಾವಿರ ರೂಪಾಯಿ ಕೊಡಲಿ. ಅಷ್ಟು ರಕಮನ್ನು ಕೊಡುವದಾದರೆ ಮಾತ್ರ ಅವನು ಇಲ್ಲಿಗೆ ಬರಲಿ. ಅಪ್ಸರಾ ಮಂದಿರಕ್ಕೆ ಸಮಾಜದ ಉಚ್ಚವರ್ಗಗಳಲ್ಲಿ ಒಂದು ಸ್ಥಾನವಿದೆ. ಇಲ್ಲಿ ನಿರ್ಗತಿಕರಿಗೆ ಪ್ರವೇಶ ಕೊಡುವದು ಸಾಧ್ಯವಿಲ್ಲ.

ಮಾತೆಯ ಈ ಮಾತುಗಳನ್ನು ಕೇಳಿ ಸುನೇತ್ರೆಗೆ ಒಂದು ರೀತಿಯಿಂದ ಆನಂದವೇ ಆಯಿತು. ಆದರೆ ಮಾತೆಯು ಇದನ್ನು ಮನಃಪೂರ್ವಕವಾಗಿಯೇ ಹೇಳುತ್ತಾಳೊ ಅಥವಾ ತನ್ನನ್ನು ಪರಿಹಾಸ್ಯ ಮಾಡುವದಕ್ಕಾಗಿಯೊ ಎಂಬ ವಿಷಯದಲ್ಲಿ ಮಾತ್ರ ಅವಳಿಗೆ ತುಸು ಸಂಶಯ ತೋರಿತು.

"ಮಾತೆ ನೀವು ಇದನ್ನು ನಿಜವಾಗಿ ಹೇಳುತ್ತೀರಾ?" ಎಂದು ಕೇಳಿದಳು.

"ನಿಜವಾಗಿಯೇ ಹೇಳುತ್ತೇನೆ. ನಿನಗೆ ಸಂಶಯವಿದ್ದರೆ ಶ್ರೀಧರನನ್ನು ಕರೆಸು. ಸಾಕ್ಷಿ ಬೇಕಿದ್ದರೆ ಅವನ ಗೆಳೆಯನೂ ಬರಲಿ. ಅವರಿಗೇನೇ ಇದನ್ನು ಹೇಳುತ್ತೇನೆ." ಎಂದಳು ಮಾತೆ.

"ಒಳ್ಳೇದು, ಹಾಗಾದರೆ ನಾನು ಅವನನ್ನು ಕರೆಸುತ್ತೇನೆ. ಆದರೆ ಮಾತೆ, ಐದು ಸಾವಿರವೆಂದರೆ ದೊಡ್ಡ ರಕಮು. ಒಮ್ಮಿಗೆಲೆ ಅವನು ಅಷ್ಟನ್ನು ಎಲ್ಲಿಂದ ತರಲು ಸಾಧ್ಯ?" ಎಂದಳು. "ಒಮ್ಮಿಗಲೆ ಬೇಡ. ಒಂದು ಇಡೀ ತಿಂಗಳ ಅವಧಿ ಕೊಡುತ್ತೇನೆ. ಅಷ್ಟರೊಳಗೆ ತಂದು ಕೊಡಲಿ"

ಇದನ್ನು ಕೇಳಿ ಸುನೇತ್ರೆಯ ಸಂತೋಷವು ಮೇರೆ ಮೀರಿ ಹರಿಯಿತು. ಆನಂದ ಪರವಶತೆಯಿಂದ ಕುಣಿದಾಡುತ್ತಾ ಮಾತೆಯನ್ನು ಆಲಂಗಿಸಿ "ನೀನು ಎಷ್ಟು ಒಳ್ಳೇಯವಳಮ್ಮಾ. ನಿಜವಾಗಿಯೂ ನೀನು ನನ್ನ ಮಾತೆ" ಎಂದು ಹೇಳಿ ಅವಳನ್ನು ಬಲವಾಗಿ ಚುಂಬಿಸಿದಳು.

ಪ್ರೇಮಪಥದಲ್ಲಿ ಇನ್ನೂ ಮುಂದೆ ಸಾಗುವದು ಸುಗಮವಾಯಿತೆಂದು ಸುನೇತ್ರೆಯು ಪ್ರೇಮನೌಕೆಯನ್ನು ಸಂತೋಷಸಾಗರದಲ್ಲಿ ತೇಲಿಸಿಬಿಟ್ಟಳು. ಆದರೆ ಮುಂದಿನ ದಾರಿಯನ್ನು ಸುಗಮ ಮಾಡಿದ್ದೆಂದು ಭಾವಿಸಿದ ಸೂಚನೆಯೇ ಅವಳ ಪ್ರೇಮನೌಕೆಯನ್ನು ಒಡೆಯುವ ಒಂಡೆಕಲ್ಲಾಗಿ ಪರಿಣಮಿಸಿತು.

ಮರುದಿನವೇ ಸುನೇತ್ರೆಯು ನಮ್ಮನ್ನು ಕರೆಸಿ ಮಾತೆಯ ಸೂಚನೆಯನ್ನು ನಮಗೆ ತಿಳಿಸಿದಳು. ಸುನೇತ್ರೆಯು ಯೋಚಿಸಿದಂತೆ ಈ ಸುದ್ದಿ ಕೇಳಿ ಶ್ರೀಧರನು ಆನಂದಪರವಶನಾಗಲಿಲ್ಲ.

"ಐದು ಸಾವಿರ ರೂಪಾಯಿ, ಅದೂ ಒಂದು ತಿಂಗಳ ಒಳಗೆ" ಈ ಮಾತನ್ನು ಕೇಳಿ ಅವನು ಗಾಬರಿಗೊಂಡನು. ಇದು ಶಕ್ಯತೆಯನ್ನು ಮೀರಿದ ವಿಷಯವೆಂದು ಅವನಿಗೆ ಮನವರಿಕೆಯಾಗಿ ಸುನೇತ್ರೆಯನ್ನು ತಾನು ಅಗಲಬೇಕಾಗುವದೆಂಬ ಭೀತಿಯು ಅವನನ್ನು ಶೋಕಸಾಗರದಲ್ಲಿ ಮುಳುಗಿಸಿತು. ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ.

ಅವನ ಮೌನವನ್ನು ನೋಡಿ ಸುನೇತ್ರೆಯು ತುಸು ನಿರಾಶೆಗೊಂಡಳು. "ಏನು ಶ್ರೀಧರ, ನನಗಾಗಿ ಜನರು ಹತ್ತು ಸಾವಿರ ರೂಪಾಯಿ ಚೆಲ್ಲಲು ತಯಾರಿದ್ದಾರೆ. ನೀನು ಅದರ ಅರ್ಧ ಕೊಟ್ಟರೆ ನನ್ನನ್ನು ಆ ಜನ್ಮ ನಿನ್ನವಳಾಗಿ ಮಾಡಿಕೊಳ್ಳಬಹುದು. ನಾನು ನಿನಗೆ ಬೇಕೊ ಹೇಳು" ಎಂದಳು.

ಈ ಆಹ್ವಾನಕ್ಕೆ ಶ್ರೀಧರನು ಏನೆಂದೂ ಉತ್ತರ ಕೊಡಲಿಲ್ಲ. ಸುನೇತ್ರೆಯು ಮುಂದರಿಸಿದಳು "ನೋಡು, ಶ್ರೀಧರ, ವಿಧಿಯು ನಮ್ಮನ್ನು ಈಗ ಒಂದೆಡೆ ತಂದಿದೆ. ಮುಂದಿನ ಜೀವನದಲ್ಲಿ ಭವಿತವ್ಯವು ನಮಗಾಗಿ ಏನನ್ನು ಇಟ್ಟಿರುವದೊ ನಾನರಿಯೆ. ಮಾತೆಯ ಸೂಚನೆಯು ನನಗೆ ಯೋಗ್ಯವೆಂದು ತೋರುತ್ತದೆ. ಯಾಕಂದರೆ, ನಾವಿಬ್ಬರು ಈ ರೀತಿ ಕದ್ದು ಕಟ್ಟೆಂಬಂತೆ ಪ್ರೇಮಿಸುವದು ಯಾವಾಗಲು ಸಾಧ್ಯವಿಲ್ಲ. ಮಾತೆಯ ಸೂಚನೆಯನ್ನು ಪಾಲಿಸುವದು ಅಸಾಧ್ಯವೆಂದು ನಿನಗೆ ಅನಿಸಿದರೆ, ಅವಳು ಹೇಳುವಂತೆ ನಾವು ಒಬ್ಬರನ್ನೊಬ್ಬರು ಪೂರ್ಣವಾಗಿ ಮರೆತು ಬಿಡಬೇಕು. ನಾನು ಇಷ್ಟು ದಿನಗಳಲ್ಲಿದ್ದಂತೆ ಇನ್ನು ಮುಂದೆಯೂ ಸಿಕ್ಕಿದವರು ಸುವಾಸನೆ ಅನುಭವಿಸಬಹುದಾದ ಹಾದಿಯ ಹೂವಾಗುವೆ."

ಈ ಮಾತುಗಳನ್ನು ಕೇಳಿ ಶ್ರೀಧರನಿಗೆ ಅಳು ತಡೆಯಲಾಗಲಿಲ್ಲ. "ಸುನೇತ್ರಾ, ನಿನ್ನನ್ನಗಲಿ ನಾನು ಜೀವಿಸುವದು ಸಾಧ್ಯವೆ? ನಿನ್ನನ್ನಲ್ಲದೆ ಬೇರೆಯವರನ್ನು ವಿವಾಹವಾಗುವ ವಿಚಾರವನ್ನು ಸಹ ನಾನು ಮಾಡಲಾರೆನು. ನನ್ನನ್ನು ಹೊರಗಟ್ಟಬೇಡ" ಎಂದು ಕಣ್ಣೀರಿನಿಂದ ತೊಯ್ದ ಕೈಗಳಿಂದ ಅವಳ ಕೈಯನ್ನು ಗಟ್ಟಿಯಾಗಿ ಹಿಡಿದು ಬೇಡಿಕೊಂಡನು.

ಈ ದೃಶ್ಯವನ್ನು ನೋಡಿ ನನ್ನ ಕಣ್ಣುಗಳೂ ಒದ್ದೆಯಾದವು. ಶ್ರೀಧರ ಸುನೇತ್ರೆಯರ ಈ ನಿರ್ಮಲ ಪವಿತ್ರ ಪ್ರೇಮವು ಯಶಸ್ವಿಯಾಗಲು ನನ್ನ ಕೈಲಾದಷ್ಟು ಸಹಾಯ ಮಾಡಬೇಕೆಂದು ನಾನು ಮನಸ್ಸಿನಲ್ಲೇ ನಿರ್ಧರಿಸಿದೆನು. ಹಿಂಜರಿಯುತ್ತಿದ್ದ ಶ್ರೀಧರನಿಗೆ ಧೈರ್ಯಕೊಟ್ಟು ಹೇಳಿದೆ "ಶ್ರೀಧರ, ಅನುಮಾನಿಸುತ್ತ ಕೂಡ್ರಲು ಸಮಯವಿಲ್ಲ. ನಿನಗೆ ಸುನೇತ್ರೆಯು ಬೇಕೊ ಬೇಡವೊ ಬೇಗನೆ ನಿರ್ಣಯಿಸಬೇಕು"

ಶ್ರೀಧರನು ತುಸು ಹೊತ್ತು ವಿಚಾರದಲ್ಲಿ ಮಗ್ನನಾದನು. ಕೊನೆಗೆ ನಿರ್ಧಾರದ ಗಾಂಭೀರ್ಯವು ಅವನ ಮೋರೆಯ ಮೇಲೆ ಮೂಡಿತು. ಸುನೇತ್ರಾ, ಮಾತೆಗೆ ಹೇಳು. ಒಂದು ತಿಂಗಳಲ್ಲಿ ಹೇಗಾದರೂ ಮಾಡಿ ಕದ್ದು, ಕೊಳ್ಳೆ ಹೊಡೆದಾದರೂ ಐದು ಸಾವಿರ ರೂಪಾಯಿ ತಂದು ಕೊಡುವೆ" ಎಂದು ಹೇಳಿದನು.

"ಹೃದಯೇಶ್ವರಾ, ನೀನು ಹಿಂಜರಿಯಲಿಕ್ಕಿಲ್ಲವೆಂದು ನನಗೆ ವಿಶ್ವಾಸವಿತ್ತು. ಪ್ರಯತ್ನ ಮಾಡಿ ನೋಡು. ಕಡಿಮೆ ಬಿದ್ದರೆ, ನನ್ನ ಒಡವೆಗಳನ್ನು ಕೊಡುವೆ. ಅವುಗಳನ್ನು ಮಾರಿ ಭರ್ತಿಮಾಡು" ಎಂದಳು.

ಧೃಡನಿರ್ಧಾರದ ಹಗುರ ಮನಸ್ಸಿನಿಂದ ನಾವು ಅಂದು ಹಿಂತಿರುಗಿದೆವು. ವಸತಿಗೃಹಕ್ಕೆ ಬಂದ ಬಳಿಕ ವಿಚಾರ ಮಾಡುವಾಗ ನಾವು ಹೊತ್ತಿರುವ ಹೊಣೆಯ ಭಾರದ ಅರಿವಾಗಹತ್ತಿತು. ಐದು ಸಾವಿರ ರೂಪಾಯಿ ಕೂಡಿಸುವದು ಹೇಗೆ? ಶ್ರೀಧರನಿಗೆ ಮುಂಬೈಯಲ್ಲಿ ಯಾರೊಬ್ಬನ ಪರಿಚಯವೂ ಇರಲಿಲ್ಲ. ಅವನ ತಂದೆ ನಿವೃತ್ತ ನ್ಯಾಯಾಧೀಶರೂ ಶ್ರೀಮಂತರೂ ಎಂಬುದೇನೋ ನಿಜ. ಆದರೆ ಅವರ ಮಗನೆಂಬ ಮಾತ್ರಕ್ಕೆ ಇವನಿಗೆ ಯಾವ ಜವಾಬದಾರಿಯೂ ಇಲ್ಲದೆ ಸಾಲ ಕೊಡುವವರಾರು.?

ಶ್ರೀಧರನ ತಂದೆಯು ಮಗನಿಗೆ ತುಂಬಾ ಹಣ ಕಳಿಸುತ್ತಿದ್ದರು. ವರ್ಷಾಂತ್ಯಕ್ಕೆ ಅದರಲ್ಲಿ ಸುಮಾರು ಮುನ್ನೂರು ರೂಪಾಯಿ ಉಳಿದಿತ್ತು. ಇನ್ನೂರು ರೂಪಾಯಿ ನಾನು ಕೊಡುವೆನೆಂದೆ. ಆದರೆ ಉಳಿದ ನಾಲ್ಕು ಸಾವಿರದ ಐನೂರನ್ನು ತರುವದೆಲ್ಲಿಂದ !

ನಾಲ್ಕೈದು ದಿನಗಳ ನಂತರ ಶ್ರೀಧರನು ಸುನೇತ್ರೆಯನ್ನು ಭೆಟ್ಟಿಯಾಗಿ ಐನೂರು ರೂಪಾಯಿ ಜಮೆ ಆದ ವೃತ್ತಾಂತವನ್ನು ತಿಳಿಸಿದನು. ಅವಳು ತನ್ನ ಒಂದು ಮುತ್ತಿನ ಹಾರವನ್ನು ಕೊಟ್ಟಳು. ಅದನ್ನು ತಕ್ಕೊಳ್ಳಲು ಶ್ರೀಧರನು ನಾಚಿದನು.

"ನಿನ್ನ ಸಲುವಾಗಿ ನಾನು ಕೊಡಬೇಕಾದ ಹಣವನ್ನು ನಿನ್ನಿಂದಲೇ ತಕೊಳ್ಳುವದೇ? ಛೀ! ಇದು ಸರ್ವಥಾ ಸರಿಯಲ್ಲ" ಎಂದು ಅನುಮಾನಿಸ ಹತ್ತಿದನು.

"ಸುನೇತ್ರೆಯು ಅವನಿಗೆ ಸಮಾಧಾನ ಹೇಳಿದಳು." ಇದು ನಮ್ಮಿಬ್ಬ ರೊಳಗಣ ವ್ಯವಹಾರವಲ್ಲವೇ, ಪ್ರಣಯ ಪ್ರೇಮದಲ್ಲಿ ರೀತಿ, ರೂಢಿಗಳ ನಿರ್ಬಂಧ ಬೇಡ. ನಿನ್ನ ಪ್ರಯತ್ನಕ್ಕೆ ಇದು ನನ್ನದೊಂದು ಅಲ್ಪ ಸಹಾಯ"

"ಶ್ರೀಧರನು ಆ ಮುತ್ತಿನ ಹಾರವನ್ನು ತಕ್ಕೊಂಡು ವಸತಿಗೃಹಕ್ಕೆ ಮರಳಿದನು. ಅದನ್ನು ಸ್ವೀಕರಿಸಿದ್ದು ಸರಿಯೊ ಅಲ್ಲವೊ ಎಂಬ ವಿಷಯದಲ್ಲಿ ಅವನಿಗೆ ಇನ್ನೂ ಸಂಶಯವಿತ್ತು. ಒಡನೇ ನಡೆದ ಸಂಗತಿಯನ್ನೂ ತನ್ನ ಮನಸ್ಸಿನ ಸಂಶಯವನ್ನೂ ನನ್ನೊಡನೆ ಹೇಳಿದನು.

ಅವನ ಬೆನ್ನು ತಟ್ಟುತ್ತಾ ನಾನೂ ಹೇಳಿದೆ " ಶ್ರೀಧರ ನಿನ್ನಷ್ಟು ಭಾಗ್ಯ ಶಾಲಿ ಇಡೀ ಮುಂಬಯಿ ಶಹರದಲ್ಲಿ ಯಾರು ಇಲ್ಲ. ಸುನೇತ್ರಾದೇವಿಯ ಒಂದು ರಾತ್ರಿಯ ಸಹವಾಸಕ್ಕಾಗಿ ಜನರು ಸಾವಿರ ರೂಪಾಯಿ ಕೊಡಲು ಸಿದ್ಧರಿರುವಾಗ ಆಜನ್ಮ ನಿನ್ನ ಸಹಧರ್ಮಿಣಿಯಾಗಲು ಅವಳೆ ಹಣ ಕೊಡಲು ತಯಾರಿದ್ದಾಳೆ ನೋಡು" ಎಂದೆ. ಈ ಮಾತು ಕೇಳಿ ಶ್ರೀಧರ ಆನಂದ, ಅಭಿ ಮಾನಗಳಿಂದ ಉಬ್ಬಿಹೋದನು.

ಅದು ಬೆಲೆಯುಳ್ಳ ಮುತ್ತಿನ ಹಾರವಾಗಿತ್ತು. ಅದನ್ನು ಮಾರಿ ಹದಿನೈದು ನೂರು ರೂಪಾಯಿ ಬಂದವು. ಒಟ್ಟು ಎರಡು ಸಾವಿರ ರೂಪಾಯಿ ಕೂಡಿ

ದಂತಾಯಿತು. "ಮಾತೆ"ಯು ಇಷ್ಟು ಹಣ ಕೊಟ್ಟರೆ ಸಮ್ಮತಿಸುವಳೇ? ಅದಿಲ್ಲದಿದ್ದರೆ ಉಳಿದ ಹಣಕ್ಕಾಗಿ ಒಂದೆರಡು ವರ್ಷದ ವಾಯಿದೆಯನ್ನಾದರೂ ಕೊಡೆಂದು ಅವಳನ್ನು ವಿನಂತಿಸಿಬಹುದೇ? ಕೇವಲ ಹುಚ್ಚು ವಿಚಾರಗಳವು. ವೇಶ್ಯಾಗೃಹವನ್ನು ನಡಿಸುವ ಆ ಮುದುಕಿಗೆ ಶ್ರೀಧರನ ವಿಷಯದಲ್ಲಿ ಸಹಾನುಭೂತಿ ಎಲ್ಲಿಂದ ಬರಬೇಕು? ಶ್ರೀಧರನಿಂದ ಐದು ಸಾವಿರ ರೂಪಾಯಿ ಒಂದು ತಿಂಗಳೊಳಗೆ ಕೂಡಿಸುವದು ಸಾಧ್ಯವಿಲ್ಲವೆಂದೇ ಅವಳು ಆ ಸೂಚನೆಯನ್ನು ಮುಂದಿಟ್ಟಿದ್ದಳು. ಶ್ರೀಧರ ಯಶಸ್ವಿಯಾಗಬಾರದೆಂಬುದೇ ಅವಳ ಉದ್ದೇಶವಿರುವಾಗ ಅವಳು ಅವನಿಗೆ ಸವಲತ್ತು ಕೊಡಬಹುದೆಂದು ಆಶಿಸುವದೆಂದರೆ ಮೂರ್ಖತನದ ಪರಮಾವಧಿಯೇ ಆಗಿತ್ತು.

ಆಶೆಯಕಿರಣಗಳು ತೋರುತ್ತಿದ್ದ ಆಕಾಶದಲ್ಲಿ ಪುನಃ ನಿರಾಶೆಯ ಕಾರ್ಮೋಡಗಳು ಕವಿದವು. ಮೂರು ಸಾವಿರ ರೂಪಾಯಿ ಕೊಡಿಸುವ ಬಗೆ ಹೇಗೆ? ಶ್ರೀಧರನು ಇಂತಹ ವಿಷಯಗಳಲ್ಲಿ ತೀರಾ ನಿರುಪಯೋಗಿಯಾಗಿದ್ದನು.

ಭಾವನಾಜೀವಿಯಾದ ಅವನಲ್ಲಿ ವ್ಯವಹಾರ ಚಾತುರ್ಯದ ಲವಲೇಶವೂ ಇರಲಿಲ್ಲ. ಹಾಗಾಗಿ ಸಮಸ್ಯೆಯನ್ನು ಬಿಡಿಸುವ ಹೊಣೆಯೆಲ್ಲವೂ ನನ್ನಮೇಲೆಯೇ ಬಿತ್ತು. ಬಿಡಿಸಲು ನಾನು ಸಿದ್ಧನಿದ್ದೆ. ಆದರೆ ಬಿಡಿಸುವ ಬಗೆ ಹೇಗೆ?

ವಿಚಾರ ಮಾಡುತ್ತಾ ಆರಾಮಖುರ್ಚಿಯಲ್ಲಿ ಬಿದ್ದುಕೊಂಡಿದ್ದಂತೆ ನಾಲ್ಕೈದು ಸಿಗರೇಟುಗಳು ಹೊಗೆಯಾಗಿ ಅನಂತದಲ್ಲಿ ಲೀನವಾದವು. ಆದರೆ, ವಿಚಾರವೇನೂ ಮುಂದರಿಯಲಿಲ್ಲ. ಅಷ್ಟರಲ್ಲಿ ವರ್ತಮಾನಪತ್ರ ಮಾರುವ ಹುಡುಗನು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯನ್ನು ಎಸೆದು ಹೋದನು. ಅದನ್ನು ಕೈಲಿ ತೆಗೆದು ಹಾಳೆಗಳನ್ನು ತಿರುವುತ್ತಿರುವಾಗ ಮೊದಲ ದಿನ ನಡೆದ ಸಭೆಯೊಂದರ ವರದಿಯು ಕಣ್ಣಿಗೆ ಬಿತ್ತು. ಗೋವೆಯ ಕಲಾವಂತ ಸಮಾಜದವರು ಸಭೆಸೇರಿ ತಮ್ಮ ಸಮಾಜದ ಹುಡುಗಿಯರು ಜಾತಿಯ ಉದ್ಯೋಗವಾದ ವೇಶ್ಯಾ ವ್ಯವಸಾಯವನ್ನು ತ್ಯಜಿಸಿ ವಿವಾಹ ಮಾಡಿಕೊಳ್ಳುವಂತೆ ಪ್ರಚಾರ ಮಾಡಬೇಕೆಂದೂ ವಿವಾಹ ಮಾಡಿಕೊಳ್ಳಲಿಚ್ಛಿಸುವವರಿಗೆ ಎಲ್ಲಾ ತರದ ಸಹಾಯ ಮಾಡಬೇಕೆಂದೂ ನಿರ್ಧರಿಸಿದ್ದರು. ಸಭೆಯ ಅಧ್ಯಕ್ಷ

ಸ್ಥಾನವನ್ನು ಪ್ರಸಿದ್ಧ ಸಮಾಜ ಸುಧಾರಕರಾದ ಜಗದೀಶ ಗಾಯತೊಂಡೆಯ ವರು ಅಲಂಕರಿಸಿದ್ದರೆಂದೂ ಅವರು ತಮ್ಮ ಭಾಷಣದಲ್ಲಿ ಕಲಾವಂತ ಸಮಾಜದ ಈ ಸ್ತುತ್ಯ ಉಪಕ್ರಮದಲ್ಲಿ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತ ಮಾಡಿದರಲ್ಲದೆ ತಾನು ಕಾರ್ಯತಃ ಸಹಾಯಮಾಡಲು ಸಿದ್ಧಸಿದ್ದನೆಂದು ಹೇಳಿದರೆಂದೂ ಆ ವರದಿಯಲ್ಲಿ ಹೇಳಿತ್ತು.

ಇದನ್ನು ಓದಿ ಥಟ್ಟನೆ ತಲೆಯೊಳಗೆ ಒಂದು ಯೋಚನೆ ಹೊಳೆಯಿತು. ಸುನೇತ್ರೆಯೂ ಕಲಾವಂತ ಸಮಾಜಕ್ಕೆ ಸೇರಿದವಳು. ಅಲ್ಲದೆ ಮುಂಬಯಿ ಶಹರದ ಪ್ರಥಮ ಶ್ರೇಣಿಯ ವೇಶ್ಯೆ. ಅಂಥವಳು ಆ ವ್ಯವಸಾಯವನ್ನು ಬಿಟ್ಟು ವಿವಾಹಬದ್ಧಳಾಗುವದೆಂದರೆ ಸಮಾಜ ಸುಧಾರಣೆಯ ದಾರಿಯಲ್ಲಿ ಒಂದು ದೊಡ್ಡ ಹೆಜ್ಜೆ. ಸಕ್ರಿಯ ಸಹಾನುಭೂತಿಯ ಆಶ್ವಾಸನವಿತ್ತ ಶ್ರೀ ಗಾಯತೊಂಡೆಯವರು ಈ ಸಂಬಂಧದಲ್ಲಿ ನೆರವಾಗಬಹುದು. ಅಂತೂ ಪ್ರಯತ್ನ ಮಾಡಿ ನೋಡಲಿಕ್ಕೆ ಅಡ್ಡಿ ಇರಲಿಲ್ಲ.

ಜಗದೀಶ ಗಾಯತೊಂಡೆಯವರು ಗೋವೆಯವರಾದುದರಿಂದ ನನಗೆ ಅವರ ಪರಿಚಯವಿರಲಿಲ್ಲದಿದ್ದರೂ ಮಾಲತಿಯ ತಾಯಿಗೂ ಅವರಿಗೂ ದೂರದ ಸಂಬಂಧವಿದೆಯೆಂದು ನನಗೆ ಗೊತ್ತಿತ್ತು. ಟೈಮ್ಸ್‌ದಲ್ಲಿ ಬಂದ ಈ ಸಭೆಯ ಸುದ್ದಿಯನ್ನು ಓದಿದೊಡನೆ ನೇರವಾಗಿ ಮಾಲತಿಯ ಮನೆಗೆ ಹೋದೆನು.

ಮಾಲತಿಯು ನನ್ನ ವಿಚಾರವನ್ನು ಸಂಪೂರ್ಣವಾಗಿ ಪುಷ್ಟೀಕರಿಸಿದಳು. ಶ್ರೀ ಗಾಯತೊಂಡೆಯವರು ಶ್ರೀಮಂತ ವ್ಯಾಪಾರಿಗಳೆಂದೂ ಉದಾರ ಹೃದಯರೆಂದೂ ಅವಳಿಂದ ತಿಳಿಯಿತು.

ಕಾರ್ಮೋಡಕವಿದ ಆಕಾಶದಲ್ಲಿ ಪುನಃ ಆಶೆಯ ಕಿರಣವು ಮೂಡಿತು. ಅಂದೇ ಗಾಯತೊಂಡೆಯವರಲ್ಲಿ ಹೋದೆನು. ಅವರು ಮನೆಯೊಳಗಿದ್ದಿಲ್ಲ. ಮುಂಜಾನೆ ಮನೆಯಲ್ಲಿರುತ್ತಾರೆಂದು ತಿಳಿದು ಮರುದಿನ ಮುಂಜಾನೆ ಮಾಲತಿಯನ್ನು ಕರಕೊಂಡು ಪುನಃ ಅವರಲ್ಲಿಗೆ ಹೋದೆನು.

ಗಾಯತೊಂಡೆಯವರು ನನ್ನನ್ನು ಆದರದಿಂದ ಬರಮಾಡಿಕೊಂಡರು. ನಾನು ಹಕೀಕತನ್ನೆಲ್ಲಾ ಸಾದ್ಯಂತವಾಗಿ ವಿವರಿಸಿದೆನು. ಸುನೇತ್ರಾದೇವಿಯಂತಹ ಪ್ರಥಮ ಶ್ರೇಣಿಯ ವೇಶ್ಯೆಯು ಶ್ರೀಮಂತ ಗಿರಾಕಿಗಳನ್ನು ತಿರಸ್ಕ

ರಿಸಿ ಅವರಿಂದ ಬರುವ ಸಾವಿರಾರು ರೂಪಾಯಿಗಳ ಗಳಿಕೆಯನ್ನು ತೊರೆದು ಸಾಮಾನ್ಯ ಯುವಕನೊಡನೆ ವಿವಾಹಬದ್ಧಳಾಗುವದು ವೇಶ್ಯಾ ವ್ಯವಸಾಯವನ್ನು ನಿಲ್ಲಿಸುವ ಕಲಾವಂತ ಸಮಾಜದ ಸುಧಾರಣೆಯಲ್ಲಿ ಬಹು ದೊಡ್ಡ ಹೆಜ್ಜೆಯೆಂಬುದನ್ನು ಅವರಿಗೆ ಮುಂದಟ್ಟು ಮಾಡಿಕೊಟ್ಟನು. ಶ್ರೀಧರನ ಮನೆಯ ಸ್ಥಿತಿಯನ್ನು ವರ್ಣಿಸಿ ಹಳೆ ಸಂಪ್ರದಾಯದ ಹವ್ಯಕ ಬ್ರಾಹ್ಮಣರಾದ ಅವರಿಂದ ಅವನ ಪ್ರಣಯದ ಸಮಾಚಾರವನ್ನು ಗುಪ್ತವಾಗಿಡುವ ಅವಶ್ಯಕತೆಯನ್ನೂ ತಿಳಿಸಿದೆನು. ನಮ್ಮ ಉದ್ದೇಶ ಕೈಗೂಡಲು ನಮಗೆ ಮೂರು ಸಾವಿರ ರೂಪಾಯಿ ಮಾತ್ರ ಬೇಕಾಗಿವೆಯೆಂಬದನ್ನು ಹೇಳಿ ಅದನ್ನು ಸಾಲವಾಗಿ ಕೊಟ್ಟರೆ ನಾನು ಪ್ರೊಮಿಸರಿನೋಟು ಬರಕೊಡುವದಾಗಿ ತಿಳಿಸಿದೆನು. ನಮಗೆ ಕಾರವಾರದಲ್ಲಿ ತುಸು ಜಮೀನಿದೆಯೆಂದು ಅಲ್ಲದೆ ನಾನು ಪಿ. ಎಚ್. ಡಿಗೆ ಕೂಡ್ರುವವನಿರುವದರಿಂದ ಯೋಗ್ಯ ನೌಕರಿ ಸಿಗುವ ಖಾತ್ರಿ ಇದ್ದು ಹಣ ತಿರುಗಿ ಸಿಗಲಾರದೆಂಬ ಅಂಜಿಕೆಗೆ ಎಡೆ ಇಲ್ಲವೆಂಬುದನ್ನು ಸ್ಪಷ್ಟಮಾಡಿದೆನು.

ಗಾಯತೊಂಡೆಯವರು ಸಾವಧಾನದಿಂದ ಎಲ್ಲಾ ಸಂಗತಿ ಕೇಳಿಕೊಂಡರು. ಆದರೆ ಮೂರು ಸಾವಿರ ರೂಪಾಯಿ ಕೊಡಲು ಅವರು ತುಸು ಅನುಮಾನಿಸುವಂತೆ ತೋರಿತು.

“ ನಿಮ್ಮ ಸಮಸ್ಯೆಯನ್ನು ಕಲಾವಂತ ಸಮಾಜದ ಮುಂದಾಳುಗಳ ಎದುರಿಗಿಟ್ಟು ಅವರಿಂದ ಈ ಕಾರ್ಯಕ್ಕಾಗಿ ಧನ ಸಂಗ್ರಹ ಮಾಡಿಸೋಣ. ನಿಮ್ಮ ಕೆಲಸವೂ ಆಗುವದಲ್ಲದೆ ಈ ಸ್ತುತ್ಯ ಕಾರ್ಯದ ಪ್ರಚಾರವೂ ಆಗುವದು” ಎಂದರು.

“ ಕಲ್ಪನೆ ಯೋಗ್ಯವೆ” ನಾನೆಂದೆ “ ಆದರೆ ಯಾವದೇ ತರದ ಪ್ರಚಾರವೇ ನಮಗೆ ಬೇಡವಾಗಿದೆ. ಯಾಕಂದರೆ, ಈ ಪ್ರಣಯದ ಸುದ್ದಿಯು ಶ್ರೀಧರನ ಹೆತ್ತವರಿಗೆ ತಿಳಿದರೆ ಕಾರ್ಯವೇ ಕೆಡುವದು. ಅದಕ್ಕಾಗಿಯೇ ಸಾಲಪಡೆಯಲು ನಿಮ್ಮಲ್ಲಿಗೆ ಶ್ರೀಧರನು ಬಾರದೆ ನಾನು ಬಂದದ್ದು ”

“ ವಿಚಾರ ಮಾಡಿ ಹೇಳುತ್ತೇನೆ. ನೀವು ಎರಡು ದಿನಗಳ ನಂತರ ಬನ್ನಿರಿ” ಅಂದರು. ಗಾಯತೊಂಡೆಯವರು ಕೊನೆಗೆ ಎರಡು ದಿನಗಳ ನಂತರ

ಪುನಃ ಹೋದೆನು. ?

“ ನೋಡಿರಿ ಕಸಬೇಕರ, ಯೋಗ್ಯ ಕಾರ್ಯವಾದುದರಿಂದ ನಾನು ಸಾಲ ಕೊಡಲು ಒಪ್ಪುತ್ತೇನೆ. ಆದರೆ ಶ್ರೀಧರನೇ ಪ್ರಾಮಿಸರಿ ನೋಟು ಬರಕೊಡಲಿ. ನಿನ್ನ ಮೇಲೆ ವಿಶ್ವಾಸವಿಲ್ಲವೆಂದಲ್ಲ. ಆದರೆ, ಸಾಲ ಅವನ ಸಲುವಾಗಿ ಮಾಡು ವದರಿಂದ ಅವನೇ ದಸ್ತವೇಜು ಮಾಡಿಕೊಡುವದು ವಿಹಿತವಲ್ಲವೇ ” ಎಂದರು.

ಬಾಯಿಯಿಂದ ವಿಸ್ವಾಸವಿದೆ ಎಂದರೂ ಅವರಿಗೆ ನನ್ನ ವಿಷಯದಲ್ಲಿ ತುಸು ಸಂಶಯ ಹುಟ್ಟಿರಬೇಕು. ಅಥವಾ ನಿವೃತ್ತ ನ್ಯಾಯಾಧೀಶರ ಒಬ್ಬನೇ ಮಗನಾಗಿದ್ದ ಶ್ರೀಧರನು ದಸ್ತೇವೇಜು ಮಾಡಿಕೊಟ್ಟರೆ ನಾಳೆ ಸಾಲದ ರಕ ಮಿನ ವಸೂಲಿಯು ಸುಲಭವಾಗುವದೆಂದು ಅವರು ಎಣಿಸಿರಲೂ ಬಹುದು.

“ ದಸ್ತೆವೇಜು ಶ್ರೀಧರನು ಮಾಡಿಕೊಡಲು ಬೇರೆ ಅಡ್ಡಿ ಏನೂ ಇಲ್ಲ. ಶ್ರೀಧರನು ದಸ್ತವೇಜು ಮಾಡಿಕೊಟ್ಟರೆ ಆ ಸಂಗತಿ ಹೇಗಾದರೂ ಹೊರಬಿದ್ದು ಅವನ ಹೆತ್ತವರ ಕಿವಿತನಕ ಹೋಗುವದೊ ಎಂಬ ಹೆದರಿಕೆ ಮಾತ್ರ ” ಎಂದು ಮನಸ್ಸಿನ ಭೀತಿಯನ್ನು ವ್ಯಕ್ತಮಾಡಿದೆ.

ಒಂದು ತಾಸಿನ ಚರ್ಚೆಯ ನಂತರ ನಾನು ಪ್ರೊಮಿಸರಿ ನೋಟನ್ನು ಬರಕೊಡುವದೆಂಬ ಹಾಗೂ ಶ್ರೀಧರನು ಪ್ರೊಮಿಸರಿ ನೋಟಿನ ಸಾಲಕ್ಕೆ ಜಾಮೀನು ಪತ್ರವನ್ನು ಬರಕೊಡುವದೆಂಬ ನಿರ್ಧಾರಕ್ಕೆ ಬಂದೆವು. ಗಾಯ ತೊಂಡೆಯವರ ಸೂಚನೆಯ ಮೇರೆಗೆ ಶ್ರೀಧರನ ಜಾಮೀನು ಪತ್ರವನ್ನು ಬರೆಸಿ ಅದಕ್ಕೆ ಸಹಿ, ಸಾಕ್ಷಿಮಾಡಿಸಿ ಅವರಲ್ಲಿಗೆ ಮರುದಿವಸ ಹೋದೆನು. ಪ್ರೊಮಿ ಸರಿ ನೋಟನ್ನು ಅವರ ಆಫೀಸಿನಲ್ಲಿ ಬರೆಸಿ ನಾನು ಅಲ್ಲೇ ಸಹಿ ಮಾಡಿ ರಕಮು ಪಡೆಯುವದೆಂದು ಗೊತ್ತಾಗಿತ್ತು.

ಹನ್ನೊಂದು ಗಂಟೆಗೆ ನಾನು ಗಾಯತೊಂಡೆಯವರ ಆಫೀಸಿಗೆ ಹೋ ದೆನು. ಆ ದಿನ ಬ್ಯಾಂಕುಗಳಿಗೆ ರಜೆ ಇತ್ತು. ಇದನ್ನು ಗಾಯತೊಂಡೆಯ ವರೂ ಮರೆತಿದ್ದರು. ಕಾರಕೂನನಿಂದ ಪ್ರೊಮಿಸರಿ ನೋಟು ಬರೆಸಿ ಅದಕ್ಕೆ ಸ್ಟಾಂಪು ಹಚ್ಚಿ ಸಹಿ ಮಾಡಿಸಿ ಹಣಕ್ಕಾಗಿ ಕಾರಕೂನನ ಕೈಲಿ ಚಕ್ಕನ್ನು ಕೊಡವಾಗ ಅಂದು ಬ್ಯಾಂಕಿಗೆ ರಜೆ ಎಂಬುದನ್ನು ಅವನು ಹೇಳಿದನು.

“ ಬ್ಯಾಂಕಿಗೆ ಈ ಹೊತ್ತು ರಜೆ ಎಂಬುದನ್ನು ನಾನು ಮರೆತಿದ್ದೆ.

ಕಿಸಬೇಕರ, ನೀವು ನಾಳೆ ಬರುತ್ತೀರಾ" ಎಂದರು ಗಾಯತೊಂಡೆಯವರು. ನನಗೆ ತುಸು ನಿರಾಶೆಯೇ ಆಯಿತು. ಯಾಕಂದರೆ ಆ ದಿನ ಹಣ ತಂದೇ ತೀರುವೆನೆಂದು ನಾನು ಶ್ರೀಧರನಿಗೆ ಭರವಸೆ ಹೇಳಿದ್ದೆನು. ಅದೂ ಅಲ್ಲದೆ ಈ ವ್ಯವಹಾರವನ್ನು ಮುಂದೆ ದೂಡುವದು ನನಗೂ ಬೇಡವೆನಿಸಿತ್ತು. ಹಾಗಾಗಿ ನಾನು "ರಾಯರೇ, ಅಪ್ಸರಾಮಂದಿರಕ್ಕೆ ರಕಮು ಈಹೊತ್ತೇ ಕೊಡಬೇಕು. ಎಲ್ಲಿಂದಾದರೂ ನೀವು ಅದನ್ನು ಈ ಹೊತ್ತೇ ದೊರಕಿಸಿದರೆ ಬಹಳ ಉಪಕಾರ ವಾಗುತ್ತಿತ್ತು" ಎಂದೆನು.

ಈ ಮಾತುಗಳನ್ನು ಹೇಳುವಾಗ, ಅರವಿಂದನ ಕಣ್ಣುಗಳು ಅಶ್ರುಪೂರಿತವಾದವು. ಹೃದಯವು ಉಕ್ಕೇರಿ ಬಂದು ಅವನ ಬಾಯಿಯಿಂದ ಮಾತೇ ಹೊರಡದಾಯಿತು. ಗದ್ಗದಿತ ಕಂಠದಿಂದ ಅವನು ಮುಂದರಿಸಿದನು "ನೋಡಿರಿ, ದೈವೇಚ್ಛೆ ಇದ್ದರೆ ವಿಷವು ಅಮೃತವಾಗುತ್ತದೆ, ಹಾಗೂ ಅಮೃತವು ವಿಷವಾಗುತ್ತದೆ ಎಂದು ಕಾಳಿದಾಸನು ರಘುವಂಶದಲ್ಲಿ ಒಂದೆಡೆ ಹೇಳಿದ್ದಾನೆ. ದೈವವು ನಮಗೆ ಪ್ರತಿಕೂಲವಿತ್ತು. ಶ್ರೀಧರ ಸುನೇತ್ರೆಯರ ಹಿತಕ್ಕಾಗಿ ನಾವು ಇಟ್ಟ ಪ್ರತಿಯೊಂದು ಹೆಜ್ಜೆಯೂ ನಮಗೆ ತಿಳಿಯದಂತೆಯೇ ವಿಷಪ್ರಾಯವಾಗಿ ಪರಿಣಮಿಸುತ್ತಿತ್ತು ಭವಿತವ್ಯದ ಪೂರ್ವಸೂಚನೆಯು ಎಳ್ಳಷ್ಟಾದರೂ ನನಗೆ ಇದ್ದಿದ್ದರೆ ನಾನು ಗಾಯತೋಂಡೆಯವರಿಂದ ಸಾಲಪಡೆಯುವ ಹವ್ಯಾಸಕ್ಕೇನೇ ಹೋಗುತ್ತಿರಲಿಲ್ಲ. ಹಣ ದೊರಕಿಸದಿದ್ದರೆ ಹೆಚ್ಚೇನು, ಸುನೇತ್ರಾದೇವಿಯು ಅಪ್ಸರಾಮಂದಿರದಲ್ಲೇ ಉಳಿಯುತ್ತಿದ್ದಳು. ಶ್ರೀಧರನು ಕೆಲವು ಕಾಲ ಅವಳಿಗಾಗಿ ಕೊರಗಿ ಕೊನೆಗೆ ತನ್ನ ಪುಸ್ತಕಗಳಲ್ಲೂ ಹೆತ್ತವರು ಗೊತ್ತು ಮಾಡಲಿದ್ದ ವಧುವಿನ ಸಹವಾಸದಲ್ಲೂ ತನ್ನ ನಿರಾಶೆಯನ್ನು ಕ್ರಮೇಣ ಮರೆಯುತ್ತಿದ್ದನು. ಈಗ ಸಂಭವಿಸಿದ ದುರಂತವು ತಪ್ಪುತ್ತಿತ್ತು. ಆದರೆ, ಪಾಮರ ಮಾನವರಿಗೆ ಭವಿತವ್ಯದ ಮಡಿಲಲ್ಲಿ ಏನಿದೆಯೆಂಬುದು ತಿಳಿಯುವದು ಹೇಗೆ? ವಿಧಿಯು ಶ್ರೀಧರ ಸುನೇತ್ರೆಯರ ಹಣೆಯಲ್ಲಿ ದುರಂತವನ್ನೇ ಬರೆದಿದ್ದಿತು. ಅವರಿಬ್ಬರು ವಿವಾಹವಾಗಿ ಪ್ರಣಯಸುಖವನ್ನು ಅನುಭವಿಸಬೇಕೆಂಬುದರ ಸಲುವಾಗಿ ಮಾಡಿದ ಪ್ರಯತ್ನಗಳೆಲ್ಲವೂ ಸಫಲವಾಗುವ ಬದಲು ಆ ದುರಂತಕ್ಕೇನೇ ಪೋಷಕವಾದವು.

ಇಷ್ಟನ್ನು ಹೇಳಿ ಅರವಿಂದನು ಎಳೇ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳ ತೊಡಗಿದನು. "ನೋಡಿರಿ, ವಿಧಾತನ ಆಟದಲ್ಲಿ ನಾವು ಬರೇ ನಿಮಿತ್ತ ಮಾತ್ರವಾದ ಕೈಗೊಂಬೆಗಳೆಂಬುದೇನೋ ನಿಜ. ಆದರೂ ನಾನು ನನ್ನ ಗೆಳೆ ಯನ ಈ ಶೋಚನೀಯ ದುರಂತದ ಸಸಿಯನ್ನು ನನ್ನ ಕೈಯಿಂದಲೇ ನೆಟ್ಟೆ ನೆಂಬ ವಿಚಾರವು ಮನಸ್ಸಿಗೆ ಬಂದಾಗ ಜೀವವೇ ಬೇಡವೆನಿಸುತ್ತದೆ. ನನ್ನ ಮೇಲೆ ನನಗೆ ಸಿಟ್ಟು ಬರುತ್ತದೆ. ಆ ದಿನ ಗಾಯತೊಂಡೆಯವರಲ್ಲಿ ನಡೆದ ಸಂಗತಿಗಳನ್ನು ನಾನು ಅವನಿಗೆ ಹೇಳಲಿಲ್ಲ. ಹೇಳಿದ್ದರೆ ಅವನಲ್ಲದಿದ್ದರೂ ಸುನೇತ್ರೆಯು ಖಂಡಿತವಾಗಿ ಆ ಹಣ ಬೇಡವೆಂದು ಹಿಂದೆ ಕೊಡುತ್ತಿದ್ದಳು. ಹಾಗೂ ಮುಂದಿನ ದುರಂತವು ಸಂಭವಿಸುತ್ತಿರಲಿಲ್ಲ. ಅರವಿಂದನು ಈಗ ಎಲ್ಲಿ ರುವನೊ ಗೊತ್ತಿಲ್ಲ. ಜೀವದಿಂದಿರುವನೋ ಎಂಬುದನ್ನು ಕೂಡ ತಿಳಿಯಲು ಮಾರ್ಗವಿಲ್ಲ. ಅವನು ಜೀವದಿಂದಿದ್ದು ಎಂದಾದರೂ ನನಗೆ ಭೆಟ್ಟಿಯಾದರೆ ಆ ದಿನ ನನ್ನ ಕೈಯಿಂದ ನಡೆದುಹೋದ ಪ್ರಮಾದವನ್ನು ಅವನ ಮುಂದೆ ಒಪ್ಪಿಕೊಂಡು ನನ್ನ ಕಣ್ಣೀರಿನಿಂದ ಅವನ ಕಾಲು ತೊಳೆದು ಕ್ಷಮೆ ಬೇಡು ತ್ತಿದ್ದೆ.

"ಆ ದಿನ ನಡೆದದ್ದಾದರೂ ಏನು" ನಾನು ಅರವಿಂದನೊಡನೆ ಕೇಳಿದೆ. "ಪ್ರೊಮಿಸರಿ ನೋಟಿನ ಮೂರು ಸಾವಿರ ರೂಪಾಯಿಗಳನ್ನು ಎಲ್ಲಿಂದಾದರೂ ದೊರಕಿಸಿ ಅಂದೇ ಕೊಡಬೇಕೆಂದು ನಾನು ಗಾಯತೊಂಡೆಯವರಲ್ಲಿ ಆಗ್ರಹ ಹಿಡಿದೆನೆಂದು ಈ ಮೊದಲೇ ಹೇಳಿದ್ದೆನಲ್ಲವೇ? ಅದೇ ನಮಗೆ ವಿಷಪ್ರಾಯ ವಾಯಿತು. ಅವರು ಅಷ್ಟು ರಕಮು ಯಾರಲ್ಲಿಯಾದರೂ ಸಿಗುವದು ಕಠಿಣ. ಸಿಗಬಹುದೊ ಪ್ರಯತ್ನಮಾಡಿ ನೋಡೋಣ ಎಂದು ಹೇಳಿ ನೋಡಲು ತನ್ನ ಕಾರಕೂನನನ್ನು ಬೇರೆ ಎರಡು ವ್ಯಾಪಾರಸ್ತರ ಕಡೆ ಕಳಿಸಿದರು. ಅವನು ಬರುವ ತನಕ ನಾನು ಅಲ್ಲಿ ಕೂಡ್ರಬೇಕಾಯಿತು. ನಾನು ಹಾಗೆ ಕೂತಿರು ವಾಗ ಓರ್ವ ಉಬ್ಬಿದ ಮುಖದ ಡೊಳ್ಳು ಹೊಟ್ಟೆಯ ಗೃಹಸ್ಥರು ಅಲ್ಲಿಗೆ ಬಂದರು. ಅವರನ್ನು ನೋಡಿ ದಿಗಿಲಿನಿಂದ ನನ್ನ ಹೃದಯವು ಹಾರಿ ಬಾಯಿ ಯಲ್ಲಿ ಬಂದಂತಾಯಿತು. ಬಂದ ಗೃಹಸ್ಥರು ಬೇರೆ ಯಾರೂ ಇರದೆ ಸಾಕ್ಷಾತ್ ಹರಿರಾಮ ನಾರ್ವೇಕರರೇ ಆಗಿದ್ದರು. ಗಾಯತೊಂಡೆಯವರೂ ಮ್ಯಾಂಗ

ನೀಜದ ಅಡತ ದಲಾಲ (ಕಮಿಶನ್ ಏಜಂಟ)ರಿದ್ದರು. ಹಾಗಾಗಿ ಅವರಿಗೂ ಹರಿರಾಮ ನಾರ್ವೇಕರರಿಗೂ ಲೇವಾದೇವಿ ಇತ್ತು. ಅಷ್ಟು ಮಾತ್ರವೇ ಅಲ್ಲದೆ ಹರಿರಾಮ ನಾರ್ವೇಕರರು ಅವರಿಗೆ ತುಂಬಾ ಸಾಲಕೊಟ್ಟಿದ್ದರಂತೆ. ಇದರಿಂದಾಗಿ ಅವರು ಹರಿರಾಮ ನಾರ್ವೇಕರರ ಮಾತಿಗೆ ಅಧೀನರಿದ್ದರು. ಈ ಸಂಗತಿ ನಮಗೆ ಆಗ ಗೊತ್ತಿರಲಿಲ್ಲ.

ನಾರ್ವೇಕರರನ್ನು ನೋಡಿದೊಡನೆ ನಮ್ಮ ಗೌಪ್ಯವು ಎಲ್ಲಿಯಾದರೂ ಅವರ ಕಿವಿಗೆ ಬೀಳುವದೊ ಎಂದು ನಾನು ಅತಿಯಾಗಿ ಅಂಜಿದೆನು. ಯಾಕಂದರೆ ಅವರಿಗೆ ತಿಳಿದರೆ ಸುನೇತ್ರೆಯನ್ನು ತನಗಾಗಿ ದೊರಕಿಸಿಕೊಳ್ಳುವ ಉದ್ದೇಶದಿಂದಲಾಗಲಿ ಅಥವಾ ಪ್ರತೀಕಾರ ಬುದ್ಧಿಯಿಂದಾಗಲಿ ಅವರು ಆ ವಿಷಯವನ್ನು ಶ್ರೀಧರನ ಹೆತ್ತವರಿಗೆ ತಿಳಿಸದಿರುತ್ತಿದ್ದಿಲ್ಲ.

ಅವರಿಗೆ ಅದನ್ನು ತಿಳಿಸುವ ಸಂದರ್ಭ ಬರುವದನ್ನು ತಪ್ಪಿಸಲು ನಾನು ಅವರನ್ನು ನೋಡಿದರೂ ಅವರ ಪರಿಚಯವಿಲ್ಲದವನಂತೆ ನಟಿಸಿದೆನು. ಯಾವ ಉದ್ದೇಶದಿಂದಲೊ ಏನೊ ನಾರ್ವೇಕರನೂ ಅದೇ ರೀತಿ ವರ್ತಿಸಿದನು. ಪರಿಸ್ಥಿತಿಯು ಸರಿ ಹೋಗುತ್ತಿತ್ತು. ಆದರೆ, ದೈವವು ಗಾಯತೊಂಡೆಯವರ ಮುಖಾಂತರ ನಮ್ಮ ಕಾರ್ಯವನ್ನು ಮಣ್ಣುಗೂಡಿಸಿತು. ಒಂದೆಡೆ ಕೂಡಿದ ಅಪರಿಚಿತರ ಪರಸ್ಪರ ಪರಿಚಯವನ್ನು ಮಾಡಿಕೊಡುವ ಶಿಷ್ಟ ಸಂಪ್ರದಾಯಕ್ಕನುಸರಿಸಿ ಗಾಯತೊಂಡೆಯವರು ಒಬ್ಬರಿಗೊಬ್ಬರ ಪರಿಚಯ ಮಾಡಿಕೊಟ್ಟರು.

ನನ್ನ ಹೆಸರು, ಊರು, ಇವುಗಳನ್ನು ಕೇಳಿದೊಡನೆ "ಓಹೊ, ನೀವು ಕಾರವಾರದವರೇನು? ಅಂದರೆ ನಮ್ಮೂರವರೇ ಎನ್ನಲು ಅಡ್ಡಿ ಇಲ್ಲ. ನಮ್ಮ ನಡುವೆ ಕಾಳಿ ನದಿ ಮಾತ್ರ" ಅಂದರು. ಅಷ್ಟರಲ್ಲಿ ಗಾಯತೊಂಡೆಯವರು "ಸಾವುಕಾರ, ರೋಖ ಮೂರು ಸಾವಿರ ರೂಪಾಯಿ ಇದೆಯೇನು" ಎಂದು ನಾರ್ವೇಕರನು ಕೇಳಿದನು. "ಯಾಕೆ? ಎಂಬ ನಾರ್ವೇಕರರ ಪ್ರಶ್ನೆಗೆ ಗಾಯತೊಂಡೆಯವರು ನನ್ನನ್ನು ತೋರಿಸಿ "ಇವರಿಗೆ ಕೊಡುವದಿದೆ. ಈಗಲೇ ಬೇಕಂತೆ" ಅಂದರು.

ನಾರ್ವೇಕರರೆಂದರೆ ತಯಾರ ರೊಕ್ಕದವರು. ಕೂಡಲೇ ಹ್ಯಾಂಡ ಬ್ಯಾಗಿ

ನಿಂದ ನೋಟುಗಳ ಕಟ್ಟನ್ನು ಬಿಚ್ಚಿ ಎಣಿಸುತ್ತಿರುವಾಗ ಫಕ್ಕನೆ ತಲೆಯಲ್ಲಿ ವಿಚಾರ ಬಂದು "ಗಾಯತೊಂಡೆಯವರೆ, ನಿಮ್ಮ ಸಮಾಜ ಸುಧಾರಣೆ ಹೇಗೆ ನಡೆದದೆ.? ಮೊನ್ನೆ ಕಲಾವಂತ ಸಮಾಜದ ಸಭೆಗೆ ಅಧ್ಯಕ್ಷರಾಗಿದ್ದಿರಂತಲ್ಲಾ. ವೇಶ್ಯೆಯರಿಗೆ ವಿವಾಹ ಮಾಡಿಸುವದರಲ್ಲಿ ಸಹಾಯ ಮಾಡುತ್ತೇನೆಂದು ಆಶ್ವಾಸನ ಕೊಟ್ಟರಂತೆ. ಏನು ಮಾಡುವವರಿದ್ದೀರಿ? ಎಂದರು.

"ಅದು ಸ್ತುತ್ಯ ಉಪಕ್ರಮವಲ್ಲವೇ? ಎಲ್ಲರೂ ಸಹಾಯ ಮಾಡಲೇ ಬೇಕು. ನಾನು ನನ್ನಿಂದ ಸಾಧ್ಯವಾದಷ್ಟು ಮಾಡುತ್ತೇನೆ" ಎಂದು ಹೇಳಿ ಗಾಯತೊಂಡೆಯವರು "ಈ ಮೂರು ಸಾವಿರವು ಅದೇ ಕೆಲಸಕ್ಕಾಗಿ" ಎಂದು ಒಮ್ಮೆಗೆಲೆ ಅಂದು ಬಿಟ್ಟರು. ನನಗೆ ಸಿಡಿಲು ಬಡೆದಂತಾಯಿತು. ಆದರೆ, ಮಾಡುವದೇನು? ಮಿಂಚಿ ಹೋದ ಮಾತಿಗೆ ಏನು ತಾನೇ ಮಾಡಲು ಬಂದೀತು. "ಅದೇ ಕೆಲಸಕ್ಕೆ ಅಂದರೆ?" ನಾರ್ವೇಕರರು ಸಹಜ ಪ್ರಶ್ನೆ ಕೇಳಿದರು. ಸಂಗತಿ ಅಲ್ಲಿಯ ವರೆಗೆ ತಲಪಿದ ಬಳಿಕ ಗಾಯತೊಂಡೆಯವರಿಗೆ ಹೇಳದೆ ಗತ್ಯಂತರವಿರಲಿಲ್ಲ. ಎಲ್ಲಾ ವಿವರಗಳನ್ನು ಹೇಳಿಬಿಟ್ಟರು. ಬೇಡವೆಂದು ನಾನು ಕೈಸನ್ನೆ ಮಾಡಿದೆನು. ಆದರೆ, ನಾರ್ವೇಕರರ ಮತ್ತು ನಮ್ಮೊಳಗಿನ ಹಿಂದಿನ, ಸಂಪರ್ಕದ ಕುರಿತು ಏನೂ ತಿಳಿಯದಿದ್ದ ಅವರು ಗುಪ್ತವಾಗಿಡಬೇಕೆಂದು ನಾನು ಹೇಳಿದ್ದರ ಕಾರಣ ಬೇರೆಯೇ ತಿಳಿದುಕೊಂಡು "ಕಸಬೇಕರ, ನೀವು ಗಾಬರಿಯಾಗುವ ಕಾರಣವಿಲ್ಲ ನಾರ್ವೇಕರರು ನಮ್ಮವರೆ. ಈ ಸುಧಾರಣೆಯ ಬಗ್ಗೆ ಅವರು ಸಹಾನುಭೂತಿ ಇದ್ದವರು. ನೀವು ಅಂಜುವ ಕಾರಣವಿಲ್ಲ" ಎಂದು ನನಗೆ ಹೇಳಿ ನಾರ್ವೇಕರರ ಕಡೆಗೆ ಹೊರಳಿ "ಸಾಹುಕಾರ ಈ ಸಂಗತಿ ಗುಪ್ತವಾಗಿಡಬೇಕೆಂದು ಇವರ ಸೂಚನೆ. ಯಾಕಂದರೆ ಆ ಹುಡುಗನ ಹೆತ್ತವರಿಗೆ ಗೊತ್ತಾದರೆ, ಕೆಲಸವೇ ಕೆಡುವದಂತೆ ಎಂದಗು. ಒಹೋ! ಅಷ್ಟೇ ಏನು? ನನ್ನ ಬಾಯಿಯಿಂದ ಈ ವಿಷಯದಲ್ಲಿ ಒಂದು ಮಾತು ಹೊರಡಲಾರದು, ಯೋಚನೆಯೇ ಬೇಡ" ಎಂದು ಒಂದು ಹುಸಿನಗೆ ನಗುತ್ತಾ ಹೇಳಿದರು ಹಾಗೂ "ಈಗ ಅವಳನ್ನು ಮದುವೆಯಾಗಲು ಮುಂದೆ ಬಂದ ಯುವಕನು ನಿವೃತ್ತ ನ್ಯಾಯಾಧೀಶ ಹೆಗಡೆಯವರ ಮಗನೊ? ಬಹಳ ಸಂತೋಷ. ಇಂತಹ ಉಚ್ಚ ಬ್ರಾಹ್ಮಣ ಮನೆತನದ ಯುವಕರು ಮುಂದೆ ಬಂದರೇನೇ ಈ ಸುಧಾರಣೆ ಬೇಗನೆ ಕೈ

ಗೊಡುವದು ಮಾತ್ರವಲ್ಲದೆ ಜಾತಿಭೇದವೂ ಮಾಯವಾಗುವದು." ಎಂದು ಹೇಳಿ ಕೊನೆಗೆ ನನ್ನನ್ನುದ್ದೇಶಿಸಿ "ನಿಮ್ಮ ಮಿತ್ರನಿಗೆ ನನ್ನ ಅಭಿನಂದನೆ ತಿಳಿಸಿರಿ. ಅವನ ತಂದೆಯ ಪ್ರತ್ಯಕ್ಷ ಪರಿಚಯ ನನಗಿಲ್ಲದಿದ್ದರೂ ಅವನ ಸೋದರಮಾವ ತಿಮ್ಮಣ್ಣಭಟ್ಟರು ನನ್ನ ಪರಮ ಸ್ನೇಹಿತರು" ಅಂದರು.

ಶ್ರೀಧರ, ಸುನೇತ್ರೆಯ ಭಾವೀ ಜೀವನದ ಅಂತರಿಕ್ಷದಲ್ಲಿ ಪುನಃ ಕಾರ್ಮೋಡಗಳು ಕವಿದವು. ಆದರೂ, ಒಮ್ಮೆ "ಮಾತೆಗೆ ಹಣ ಕೊಟ್ಟು ಸುನೇತ್ರೆಯು ಅಪ್ಸರಾಮಂದಿರದಿಂದ ಹೊರಬಿದ್ದು ಶ್ರೀಧರನನ್ನು ಕೂಡಿಕೊಂಡ ಳೆಂದರೆ ಆ ಬಳಿಕ ನಾರ್ವೇಕರನಾದರೂ ಏನು ಮಾಡಬಲ್ಲನು? ಅದರ ನಂತರ ಅವರ ಪ್ರೇಮಭಂಗ ಅವನಿಂದಲೂ ಸಾಧ್ಯವಿಲ್ಲವೆಂಬ ಧೈರ್ಯದಿಂದ ನಾನು ಗಾಯತೊಂಡೆಯವರಲ್ಲಿ ನಡೆದುದನ್ನು ದುರ್ಲಕ್ಷಿಸಿ ಅವರು ಕೊಟ್ಟ ಮೂರು ಸಾವಿರ ರೂಪಾಯಿ ತಗೊಂಡು ಅಲ್ಲಿಂದ ಹೊರಬಿದ್ದೆನು.

ಶ್ರೀಧರನು ನನ್ನ ದಾರಿ ನೋಡುತ್ತಾ ಕುಳಿತಿದ್ದನು. ನಾನು ಬರುವ ದನ್ನು ನೋಡಿ ರಸ್ತೆಗೇನೇ ಓಡಿಬಂದು "ತಂದೆಯೇನು ಹಣ" ಎಂದು ಕೇಳಿ ದನು. ಹೌದೆಂದೊಡನೆ ಆನಂದದ ಅತಿರೇಕದಲ್ಲಿ ತಾನು ಎಲ್ಲಿದ್ದೇನೆಂಬು ದನ್ನು ಮರೆತು ರಸ್ತೆಯ ಮೇಲೆಯೇ ಕುಣಿಯಹತ್ತಿದನು.

ಅಂದು ಮಂಗಳವಾರವಾಗಿತ್ತು. ಶುಭಕಾರ್ಯ ಮಂಗಳವಾರ ಪ್ರಾರಂ ಭಿಸಬಾರದೆನ್ನುತ್ತಾರೆ. ಅದನ್ನು ನಾನು ಮರೆತಿದ್ದೆ. ಆದರೆ ಈ ವರೆಗೆ ನಡೆ ದದ್ದು ಶುಭಕಾರ್ಯದ ಪ್ರಾರಂಭವಲ್ಲ, ತಯಾರಿ ಮಾತ್ರ ಎಂದು ಸಮಾ ಧಾನಪಟ್ಟುಕೊಂಡು ಶುಭಕಾರ್ಯದ ಪ್ರಾರಂಭದ, ಮಾತೆಗೆ ಹಣ ಕೊಡುವ ಕೆಲಸವನ್ನು ಮರುದಿನ ಮಾಡುವದೆಂದು ನಿರ್ಣಯಿಸಿದೆವು.

ಬುಧವಾರ ಐದು ಸಾವಿರ ರೂಪಾಯಿ ತಗೊಂಡು ಅಪ್ಸರಾಮಂದಿರಕ್ಕೆ ಹೋದೆವು. ನಮ್ಮಿಂದ ಒಂದು ತಿಂಗಳಿನೊಳಗೆ ಅಷ್ಟು ಹಣ ಕೂಡಿಸಲು ಸಾಧ್ಯ ವಿಲ್ಲವೆಂದು ಧೃಡವಾಗಿ ನಂಬಿದ್ದ "ಮಾತೆಗೆ" ನಾವು ಆ ಅವಧಿ ಮುಗಿಯು ವ ಮೊದಲೇ ಪೂರಾ ರಕಮನ್ನು ತಂದದ್ದು ನೋಡಿ ಆಶ್ಚರ್ಯವಾಯಿತು. ಕೊಟ್ಟ ಮಾತನ್ನು ಹಿಂತೆಗೆಯಲು ಸಾಧ್ಯವಿಲ್ಲದೆ ಇದ್ದುದರಿಂದ ಸುನೇತ್ರೆ ಯನ್ನು ವಿಮೋಚನೆಗೊಳಿಸಲು ಅವಳು ಒಪ್ಪಲೇ ಬೇಕಾಯಿತು.

ಸುನೇತ್ರೆಯ ಹುಟ್ಟೂರು ಸಾಂಖಲಿ. ಇದೇ ಗೋವೆಯಲ್ಲೇ ಪ್ರಸಿದ್ಧವಾದ ದತ್ತಮಂದಿರವಿದ್ದ ಊರದು. ಶ್ರೀ ದತ್ತಾತ್ರೇಯನಿಗೆ ಪ್ರಿಯವಾದ ಗುರುವಾರವೇ ಅಪ್ಸರಾಮಂದಿರದಿಂದ ಹೊರಗೆ ಬರುವದೆಂದು ಸುನೇತ್ರೆಯು ನಿಶ್ಚಯಿಸಿದಳು.

ಅಪ್ಸರಾಮಂದಿರದ ಎಲ್ಲಾ ಹುಡುಗಿಯರು ಸುನೇತ್ರಾದೇವಿಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಅವಳು ಅಲ್ಲಿಂದ ಹೊರಡುವ ದಿನ ದೊಡ್ಡ ಮೇಜವಾನಿಯನ್ನು ಅವರೆಲ್ಲರೂ ಏರ್ಪಡಿಸಿದರು. ಶ್ರೀಧರನಿಗಷ್ಟೇ ಅಲ್ಲ, ನನಗೂ ಮಾಲತಿಗೂ ಸಹ ಆಮಂತ್ರಣವಿತ್ತು. ವಸಯಿಗೆ ಅಂದು ಹೋಗಿ ಬಂದನಂತರ ಮಾಲತಿಗೂ ಸುನೇತ್ರೆಗೂ ಬಹಳ ಗೆಳೆತನ ಬೆಳೆದಿತ್ತು. ತನ್ನ ಗುಪ್ತ ವಿಚಾರಗಳನ್ನು ಸುನೇತ್ರೆಯು ಮಾಲತಿಯೊಡನೆ ಮಾತ್ರ ಹೇಳುತ್ತಿದ್ದಳು.

ಮಾಲತಿಯು ಗುಟ್ಟನ್ನು ರಟ್ಟು ಮಾಡುವ ಸ್ತ್ರೀ ಸಹಜಸ್ವಭಾವದವಳಾಗಿರಲಿಲ್ಲ. ಹಾಗಾಗಿ ಸುನೇತ್ರೆಯು ಅವಳಲ್ಲಿ ಹೇಳಿದ ಯಾವ ಗುಪ್ತ ಸಂಗತಿಯೂ ಇತರರ ಮಾತಂತಿರಲಿ, ನನಗಾಗಲಿ ಶ್ರೀಧರನಿಗಾಗಲಿ ಸಹ ಗೊತ್ತಾಗುವ ಸಂಭವವಿರಲಿಲ್ಲ. ಮಾಲತಿಯ ಈ ಸುಗುಣವೇ ಶ್ರೀಧರ, ಸುನೇತ್ರೆಯರ ಪ್ರಣಯ ಜೀವನಕ್ಕೆ ಅನಿಷ್ಟಕಾರಿಯಾಗಿ ಪರಿಣಮಿಸಿತು.

ತನ್ನ ಹಾಗೂ ಶ್ರೀಧರನ ಮುಂದಿನ ಜೀವನದಲ್ಲಿ ಆರ್ಥಿಕ ಅಡಚಣೆ ಬಾರದಂತೆ ಸುನೇತ್ರೆಯು ವ್ಯವಸ್ಥೆಮಾಡಿದ್ದಳು ಎಂದು ನಾನು ಮೊದಲೇ ಹೇಳಿದ್ದೆನಷ್ಟೆ. ಹಾಗೆ ವ್ಯವಸ್ಥೆ ಮಾಡಿದ್ದು ಮಾಲತಿಗೊಬ್ಬಳಿಗೆ ಮಾತ್ರ ತಿಳಿದಿತ್ತು. ಅದರ ಸೂಚನೆ ಸಹ ನಮಗೆ ಗೊತ್ತಿರಲಿಲ್ಲ. ಆ ವಿಷಯದಲ್ಲಿ ಅಲ್ಪ ಇಂಗಿತವನ್ನಾದರೂ ಮಾಲತಿಯು ನಮಗೆ ಕೊಟ್ಟಿದ್ದರೆ ಈಗ ನಡೆದುಹೋದ ದುರಂತವನ್ನು ನಿಜವಾಗಿಯೂ ತಪ್ಪಿಸಬಹುದಾಗಿತ್ತು.

ಅರವಿಂದನು ಕಣ್ಣೀರನ್ನೊರಸುತ್ತ ಮುಂದೆ ಸಾಗಿದನು "ನೋಡಿರಿ, ಎಷ್ಟೋ ಸಾರೆ ನಮ್ಮ ಜೀವನಕ್ಕೆ ಸಂಬಂಧವಿದ್ದವರು, ನಮ್ಮ ಗೆಳೆಯರು, ಆಪ್ತರು ನಮ್ಮನ್ನು ಸಂಕಷ್ಟದಲ್ಲಿ ತಳ್ಳುವಂತೆ ವರ್ತಿಸುತ್ತಾರೆ. ಅಂತಹ ವರ್ತನೆಯಿಂದ ನಮಗೆ ಆಶ್ಚರ್ಯವಾಗುತ್ತದೆ. ಯಾಕೆಂದರೆ, ಅದು ತೀರಾ

ಅನಪೇಕ್ಷಿತವಿರುತ್ತದೆ ಹಾಗೂ ವ್ಯಾವಹಾರಿಕ ಅಥವಾ ಸಮಂಜಸತನದ ದೃಷ್ಟಿಯಿಂದ ಅದನ್ನು ಸಮರ್ಥಿಸುವದು ಸಾಧ್ಯವೇ ಇರುವದಿಲ್ಲ. ಅದರ ಕಾರಣ ನಮ್ಮ ವಿಧಿಲಿಖಿತವೇ ಎನ್ನಬೇಕು. ನಮ್ಮ ಜೀವನ ಹೇಗೆ ಸಾಗಬೇಕೆಂದು ವಿಧಾತನು ಮೊದಲೇ ನಿರ್ಣಯಿಸಿದ್ದಾನೋ ಅದಕ್ಕೆ ಪೋಷಕವಾಗುವಂತೆ ವರ್ತಿಸುವ ಬುದ್ಧಿಯನ್ನು ಅವನು ನಮ್ಮ ಜೀವನದ ಸಂಬಂಧವಿರುವವರಿಗೆ ಕೊಡುತ್ತಾನೆ. ಇದರಿಂದ, ನಾವು ಒಂದು ರೀತಿಯ ನಿರಾಶಾಯುಕ್ತ ಸಮಾಧಾನವನ್ನು ಹೊಂದಲು ಕಲಿಯಬೇಕಲ್ಲದೆ ಅನ್ಯರನ್ನು ದೂರಿ ಫಲವಿಲ್ಲ."

× × ×

ಗುರುವಾರ ಗೋಧೂಳಿ ಮುಹೂರ್ತದಲ್ಲಿ ಸುನೇತ್ರೆಯು ಮಾತೆಯನ್ನೂ ಅಪ್ಸರಾಮಂದಿರದ ಇತರ ಬಾಲಿಕೆಯರನ್ನೂ ಬೀಳ್ಕೊಟ್ಟು ಶ್ರೀಧರನ ವಸತಿಯನ್ನು ಸೇರಿದಳು. ಅವರು ಒಂದೇ ಕಡೆ ವಾಸಿಸಲು ಅನುಕೂಲವಾಗುವಂತೆ ಶ್ರೀಧರನು ವಸತಿಗೃಹವನ್ನು ಬಿಟ್ಟು ಸಮೀಪದಲ್ಲೇ ಒಂದು ಖೋಲಿಯನ್ನು ಭಾಡಿಗೆಗೆ ಹಿಡಿದಿದ್ದನು.

ತರಂಗ ೧೧.

ದಿವಾಳಿಯ ರಜೆ ಆಗಲೇ ಸುರುವಾಗಿತ್ತು. ಆ ಒಂದು ತಿಂಗಳಲ್ಲಿ ಶ್ರೀಧರ ಸುನೇತ್ರೆಯರು ಇಹಲೋಕವನ್ನು ಮರೆತು ಸದಾಪ್ರೇಮದ ಅಂತರಿಕ್ಷದಲ್ಲೇ ವಿಹರಿಸುತ್ತಿದ್ದರು. ಅವರ ದಿನಗಳು ಪ್ರೇಮಮಂದಿರದಲ್ಲಿ ಪ್ರೇಮದ ಗಾಳಿಯನ್ನು ಸೇವಿಸುತ್ತ ಪ್ರೇಮದ ಬಟ್ಟಲಿನಲ್ಲಿ ಪ್ರೇಮದ ಅನ್ನವನ್ನುಣ್ಣುತ್ತ ಪ್ರೇಮದ ತೋಟದಲ್ಲಿ ಪ್ರೇಮದ ಚಹವನ್ನು ಕುಡಿಯುತ್ತ ಪ್ರೇಮದ ಕನಸನ್ನು ಕಾಣುತ್ತ ಪ್ರೇಮದ ಟ್ಯಾಕ್ಸಿಗಳಲ್ಲಿ ಪ್ರೇಮಮಯ ದೃಶ್ಯಗಳನ್ನು ಕಾಣುತ್ತ ಸಾಗಿದ್ದವು.

ಸುನೇತ್ರಾ, ಶ್ರೀಧರರು ಯಾವದೇ ಚಿಂತೆ, ಯೋಚನೆಗಳಿಲ್ಲದೆ ಸುಖದ ಉನ್ಮಾದದಲ್ಲಿ ಕಳೆದ ದಿನಗಳೆಂದರೆ ಇವು ಮಾತ್ರ. ಮುಂದೆ ದುರಂತದಲ್ಲಿ ನೂಕಲ್ಪಡುವ ಈ ಪ್ರೇಮಜೀವಿಗಳ ವಿಷಯದಲ್ಲಿ ವಿಧಾತನಿಗೂ ತುಸು ಕನಿಕರ

ಹುಟ್ಟಿರಬೇಕು. ಅಂತೆಯೇ ವಿವಾಹೋತ್ತರದ ಮಧುಚಂದ್ರದ ಸುಖವು ಅವಗೆ ಲಲಾಟದಲ್ಲಿ ಬರೆದಿಲ್ಲದಿದ್ದರೂ ಅದರ ಆನಂದವನ್ನು ವಿವಾಹ ಪೂರ್ವದಲ್ಲೇ ಕೆಲವು ದಿವಸವಾದರೂ ಅನುಭವಿಸುವ ಅವಕಾಶವನ್ನು ಅವರಿಗೆ ಕಲ್ಪಿಸಿ ಕೊಟ್ಟಿತು.

ಈ ಸ್ವರ್ಗಸುಖವು ಬಹಳ ದಿವಸ ಬಾಳಲಿಲ್ಲ. ಒಂದು ದಿನ ಅಂಚೆ ಜವಾನನು ಒಂದು ರಿಜಿಸ್ಟರ್ಡ್ ಪತ್ರ ತಂದುಕೊಟ್ಟನು. ಒಡೆದು ನೋಡಲಾಗಿ ಅದು ವಿದ್ಯಾಭ್ಯಾಸವನ್ನು ನಿಲ್ಲಿಸಿ ಕೂಡಲೇ ಮನೆಗೆ ಬರಬೇಕೆಂದು ಸಿಟ್ಟಿನಿಂದ ಬರೆದ ತಂದೆಯ ಪತ್ರವಾಗಿತ್ತು. ಇದರ ನಾಲ್ಕು ದಿವಸಗಳಲ್ಲಿ ಇನ್ನೊಂದು ಪತ್ರವನ್ನು ತಗೊಂಡು ಅವನ ತಂದೆಯ ಕಾರಭಾರಿಯೇ ಮುಂಬಯಿಗೆ ಬಂದನು.

ಆ ಪತ್ರವನ್ನು ಓದಿ ಶ್ರೀಧರನಿಗೆ ವಜ್ರಾಘಾತವಾದಂತಾಯಿತು. ಆ ಪತ್ರದಲ್ಲಿ ಅವನ ತಂದೆ ಹೀಗೆ ಬರೆದಿದ್ದರು "ಮುಂಬಯಿಯಲ್ಲಿ ನೀನು ಏನೆಲ್ಲಾ ಮಾಡುತ್ತಿರುವಿ, ಇದೆಲ್ಲಾ ನನಗೆ ಗೊತ್ತಾಗಿದೆ. ನೀನು ಈ ರೀತಿ ವಿಷಯಲಂಪಟನಾಗುವಿಯೆಂದು ನಾನಾಗಲಿ ನಿನ್ನ ತಾಯಿಯಾಗಲಿ ಕನಸಿನಲ್ಲಿಯೂ ಎಣಿಸಿರಲಿಲ್ಲ. ನೀನು ಈಗ ಒಬ್ಬ ವೇಶ್ಯೆಯ ವಿಟನಾಗಿ ಅವಳ ಆಶ್ರಯದಲ್ಲಿರುವಿಯೆಂಬುದು ನಿಜವೇ? ನಿನ್ನ ಸ್ವಂತದ ಮರ್ಯಾದೆಯ ಪರಿವೆ ಇಲ್ಲದಿದ್ದರೂ, ಮನೆತನದ ಗೌರವಕ್ಕಾದರೂ ನೀನು ಸ್ವಲ್ಪ ಬೆಲೆಕೊಡಬೇಕಾಗಿತ್ತು.

ಏನೇ ಇರಲಿ, ನಿನ್ನ ಭವಿತವ್ಯವು ಒಬ್ಬ ಬಜಾರೀ ಸೂಳೆಯಿಂದ ಹಾಳಾಗಿಹೋಗಲು ನಾವೆಂದಿಗೂ ಬಿಡಲಾರೆವು. ನಿನ್ನನ್ನು ಕರೆತರಲು ಕಾರಭಾರಿಯನ್ನು ಕಳಿಸಿದ್ದೇನೆ. ಕೂಡಲೇ ಅವನೊಡನೆ ಹೊರಟುಬಾ. ನೀನು ಇಲ್ಲಿಗೆ ಬಂದಬಳಿಕ ನಿನ್ನ ಮದುವೆಯ ವ್ಯವಸ್ಥೆಯನ್ನು ಮಾಡುತ್ತೇವೆ."

ಶ್ರೀಧರನು ಒಂದುಕಡೆ ಕಡಲು, ಇನ್ನೊಂದುಕಡೆ ಕಂದರ, ಈ ಉಭಯ ಸಂಕಟದಲ್ಲಿ ಬಿದ್ದನು. ಸುನೇತ್ರೆಯು ಅವನ ಜೀವನ ಸರ್ವಸ್ವವಾಗಿದ್ದಳೆಂಬುದೇನೋ ನಿಜವಿತ್ತು. ಆದರೆ, ಹೆತ್ತವರ ಆಜ್ಞೆಯನ್ನು ಮೀರಿ ಅವರ ಇಚ್ಛೆಯನ್ನು ತಿರಸ್ಕರಿಸಲು ಅವನು ಸಿದ್ಧನಿರಲಿಲ್ಲ. ಹಾಗಾಗಿ ಈ ಸಮಸ್ಯೆಯನ್ನು ಬಗೆಹರಿಸುವದು ಸಾಧ್ಯವಾಗುವಂತೆ ತೋರುತ್ತಿದ್ದಿಲ್ಲ.

ಶ್ರೀಧರನು ಯಾವದೇ ನಿರ್ಧಾರಕ್ಕೆ ಬರಲು ಅಸಮರ್ಥನಾಗಿದ್ದನು. ಈ ಪರಿಸ್ಥಿತಿಯಲ್ಲಿ ಏನುಮಾಡಬೇಕೆಂಬುದನ್ನು ನಾನು ಹಾಗೂ ಸುನೇತ್ರಾ ದೇವಿಯೇ ನಿರ್ಧರಿಸಬೇಕಾಯಿತು. ಸುನೇತ್ರಾದೇವಿಯು ಅವಳ ಗೆಳತಿಯಾದ ಮಾಲತಿಯ ಸಲಹೆ ಕೇಳಿದಳು. ಚಾಣಾಕ್ಷಳಾದ ಮಾಲತಿಯು ಶ್ರೀಧರನ ಹೃದಯ ದೌರ್ಬಲ್ಯವನ್ನು ಚೆನ್ನಾಗಿ ಅರಿತಿದ್ದರಿಂದ, ಅವನೊಬ್ಬನೇ ಊರಿಗೆ ಹೋದರೆ ಹೆತ್ತವರ ಆಗ್ರಹಕ್ಕೆ ಬಲಿಬಿದ್ದು ಅವರು ಆರಿಸಿದ ಹುಡುಗಿಯೊಡನೆ ವಿವಾಹಬದ್ಧನಾಗುವ ಸಂಭವವಿರುವದನ್ನು ಮನಗಂಡು ಸುನೇತ್ರೆಯು ಅವನ ಜೊತೆಯಲ್ಲಿ ಹೋಗಬೇಕೆಂದೂ ಒಂದುವೇಳೆ ಒಮ್ಮೆಗೆಲೆ ಅವನೊಡನೆ ಶಿರಸಿಗೆ ಹೋಗುವದು ಸರಿಯಲ್ಲವೆಂದಾದಲ್ಲಿ, ಯಾವದಾದರೂ ಸಮೀಪದ ಊರಿನಲ್ಲಿ ಉಳಿಯಬೇಕೆಂದೂ ಸಲಹೆ ಇತ್ತಳು. ಸುನೇತ್ರೆಗೂ ಈ ಸೂಚನೆಯು ಸಮ್ಮತವಾಯಿತು. ಯಾಕಂದರೆ, ಶ್ರೀಧರನನ್ನು ಅಗಲಿರಲು ಅವಳ ಮನಸ್ಸು ಎಂದಿಗೂ ಒಡಂಬಡುತ್ತಿರಲಿಲ್ಲ.

"ನೋಡು, ಶ್ರೀಧರ, ನಿನಗಾಗಿ ನಾನು ಎಲ್ಲವನ್ನೂ ಬಿಟ್ಟುಬಂದೆ. ನಿನಗೆ ನನ್ನಲ್ಲಿ ಅಚಲಪ್ರೇಮವಿರುವವರೆಗೆ ನಾನು ಏನು ಬಂದರೂ ಸಹಿಸಲು ಸಿದ್ಧಳಿರುವೆ. ನಿನ್ನ ಹೆತ್ತವರಿಗೆ ನಿನ್ನಮೇಲೆ ಅತಿಶಯವಾದ ಪ್ರೀತಿ ಇದೆಯೆಂದು ನೀನು ಹೇಳುತ್ತಿರುವಿಯಲ್ಲಾ. ಯಾವದೇ ಪರಿಸ್ಥಿತಿಯಲ್ಲಿ ಏನೇ ಪರಿಣಾಮವಾದರೂ ನೀನು ನನ್ನನ್ನು ತ್ಯಜಿಸುವಹಾಗಿಲ್ಲವೆಂಬುದು ಅವರಿಗೆ ಖಾತ್ರಿಯಾದರೆ ನಿನ್ನಮೇಲೆ ಅವರಿಗಿರುವ ಪ್ರೀತಿಯಿಂದಾಗಿ ನಿನ್ನ ಹೆತ್ತವರು ಈಗಲ್ಲದಿದ್ದರೆ ಇನ್ನು ಮುಂದಾದರೂ ನಮ್ಮಿಬ್ಬರ ಮದುವೆಗೆ ಸಮ್ಮತಿಸಬಹುದು. ಆ ಸುಯೋಗ ಒದಗುವವರೆಗೆ ನಾನು ಎಷ್ಟೇ ದೀರ್ಘಕಾಲವಾದರೂ ಕಾಯಲು ಸಿದ್ಧಳಿರುವೆನು. ನಿಜವಾಗಿಯೂ ಸಂಪೂರ್ಣ ಆಜ್ಞಾಧಾರಕ ಸೊಸೆಯಾಗುವೆನೆಂದು ನಾನು ಆಶ್ವಾಸನಕೊಡುತ್ತೇನೆ. ಹಾಗೂ ನಿನ್ನ ತಂದೆ ತಾಯಿಗಳ ಮನ ಒಲಿಸಲು ನಾನು ಎಲ್ಲರೀತಿಯಿಂದಲೂ ಯತ್ನಿಸುತ್ತೇನೆ. ನಮ್ಮಿಬ್ಬರೊಳಗಿನ ಪ್ರೇಮವನ್ನು ಪ್ರತ್ಯಕ್ಷ ನೋಡಿ ಕೊನೆಗಾದರೂ ನಿನ್ನ ಹೆತ್ತವರ ಮನಸ್ಸು ಕರಗಿ ಅವರು ನಮ್ಮ ವಿವಾಹಕ್ಕೆ ಸಮ್ಮತಿಯನ್ನು ಕೊಡುವರೆಂದು ನನಗೆ ಧೈರ್ಯವೆನಿಸುತ್ತದೆ." ಎಂದು ಶ್ರೀಧರನಿಗೆ ಸುನೇತ್ರೆಯು

ಹೇಳಹತ್ತಿದಳು.

ಸುನೇತ್ರೆಯೂ ಶ್ರೀಧರನೂ ನನ್ನ ಖೋಲಿಗೆ ಬಂದರು. ಮೇಲಿನ ಮಾತುಗಳನ್ನೇ ಸುನೇತ್ರೆಯು ನನ್ನ ಮುಂದೆಯೂ ಉಚ್ಚರಿಸಿದಳು. "ಏನು ಮಾಡಬೇಕು, ಅರವಿಂದ ನೀನೇ ಹೇಳು" ಎಂದು ಶ್ರೀಧರನು ನನ್ನನ್ನು ಕೇಳಿದನು. ನನ್ನದೂ ಅನಿಶ್ಚಿತ ಮನಃಸ್ಥಿತಿಯಾಗಿತ್ತು. ಹಾಗಾಗಿ ನಾನು ಏನನ್ನೂ ಸೂಚಿಸಲಾರದಾದೆನು. ಮುಂದಿನ ಮಾರ್ಗವನ್ನು ತಾನೇ ನಿರ್ಧರಿಸುವ ಮನೋದಾರ್ಢ್ಯವಿಲ್ಲದ ಶ್ರೀಧರನು ಅದರ ಹೊಣೆಯನ್ನು ನನ್ನಮೇಲೆಯೇ ಹಾಕಿ ನಾನು ಹೇಳಿದಂತೆ ನಡೆದುಕೊಳ್ಳುವದೆಂದು ಅವನ ವಿಚಾರವಿತ್ತು.

ನಾನು ಏನೂ ಸೂಚಿಸದಿದ್ದುದನ್ನು ನೋಡಿ ಅವನ ಮನಸ್ಸಿಗೆ ಆಘಾತವಾದಂತಾಯಿತು. ತಲೆಬಗ್ಗಿಸಿ ಶೂನ್ಯ ಮನಸ್ಸಿನಿಂದ ಸುನೇತ್ರೆಯನ್ನು ನೋಡುತ್ತಾ ನಿಂತನು. ಸುನೇತ್ರೆಯೂ ಅವನನ್ನೇ ನೋಡಹತ್ತಿದಳು. ಅವರಿಬ್ಬರನ್ನೇ ನೋಡುತ್ತಿದ್ದ ನನಗೆ ಅವಳ ಮುಖದಲ್ಲಿ ನಿರಾಶೆಯ ಛಾಯೆಯು ಮೂಡಿದಂತೆ ಭಾಸವಾಯಿತು. ಮೂರು ನಾಲ್ಕು ನಿಮಿಷ ಹೀಗೆಯೇ ಮೌನದಲ್ಲಿ ಕಳೆದ ಬಳಿಕ ಅವಳು "ಶ್ರೀಧರ, ಏನು ಮಾಡುವೆ ಈಗ?" ಎಂದು ಕೇಳಿದಳು.

ಶ್ರೀಧರನು ಫಕ್ಕನೆ ತಲೆ ಎತ್ತಿ "ನೀನು ಹೇಳಿದಂತೆ ಮಾಡುತ್ತೇನೆ. ನನಗೆ ಬೇರೆ ಇಚ್ಛೆ ಇಲ್ಲ" ಎಂದನು.

ಅಂತೂ ಶ್ರೀಧರ, ಸುನೇತ್ರೆಯರಿಬ್ಬರೂ ಹೊರಡುವ ಠರಾವು ಅವಿರೋಧವಾಗಿ ಸ್ವೀಕೃತವಾಯಿತು. ಇಬ್ಬರೂ ಅದನ್ನು ಕಾರ್ಯಾಚರಣೆಯಲ್ಲಿ ತರುವ ಪ್ರಯತ್ನದಲ್ಲಿ ತೊಡಗಿದರು. ಅಂದು ಸೋಮವಾರವಿತ್ತು. ಕಾರವಾರಕ್ಕೆ ಪ್ರತಿ ಗುರುವಾರ ಸ್ಟೀಮರು ಹೊರಡುತ್ತಿತ್ತು. ಸ್ಟೀಮರಿನಲ್ಲಿ ಕಾರವಾರಕ್ಕೆ ಹೋಗುವದೆಂದೂ ಅಲ್ಲಿಂದ ಅಂಕೋಲೆಗೆ ಹೋಗಿ ಸುನೇತ್ರೆಯು ಅಲ್ಲಿ ನಿಂತು ಶ್ರೀಧರನೊಬ್ಬನೇ ಮುಂದೆ ಶಿರಸಿಗೆ ಹೋಗುವದೆಂದೂ ಮಾಲತಿಯು ಮೊದಲು ಕೊಟ್ಟ ಸೂಚನೆಯಂತೆ ಅವರಿಬ್ಬರೂ ನಿರ್ಧರಿಸಿದರು. ಅಂಕೋಲೆಯಲ್ಲಿ ಅಪ್ಸರಾ ಮಂದಿರದಲ್ಲಿನ ಓರ್ವ ತಾರೆಯ ತಾಯಿಯಾಗಿದ್ದ ಒಬ್ಬ ನಿವೃತ್ತ ವೇಶ್ಯೆಯು ಮನೆ ಕಟ್ಟಿಸಿ ಅಲ್ಲೇ ವೃದ್ಧಾಪ್ಯದ ವಿರಾಮ

ಕಾಲವನ್ನು ಕಳೆಯುತ್ತಿದ್ದಳು. ಹಾಗಾಗಿ ಸುನೇತ್ರೆಗೆ ಕೆಲವು ದಿನ ಅಂಕೋಲೆಯಲ್ಲಿರಲು ಅನುಕೂಲವಿತ್ತು.

ನಾನು ಕಾರವಾರದವರೆಗಾದರೂ ಬರಬೇಕೆಂದು ಶ್ರೀಧರನು ಹಟ ಹಿಡಿದನು.

ನವದಂಪತಿಗಳ ಜೊತೆಯಲ್ಲಿ ನಾನು ಬರುವದೆಂದರೆ ನಮ್ಮ ಮಾತಿನಲ್ಲಿ ಹೇಳುವಂತೆ "ವ್ಹಾರಾಮಧಿಂ ಪೋರಕಸಲ್ಯಾಕ" ನಾನು ಸುನೇತ್ರಾಳಿಗೆ ಹೇಳಿದೆ.

ನಾನು ಅವರೊಡನೆ ಬರಬೇಕೆಂದು ಶ್ರೀಧರನು ಆಗ್ರಹಪಡಿಸಿದ್ದು ಸೋಜಿಗವೆನಿಸಿದರೂ, ಹಾಗೆ ಮಾಡಲು ಅವನಿಗೆ ಕಾರಣವಿಲ್ಲದಿರಲಿಲ್ಲ. ಮುಂಬಯಿಯಂತಹ ಸುಧಾರಿಸಿದ ಆಧುನಿಕ ವಾತಾವರಣದಲ್ಲಿ ಸುನೇತ್ರೆಯೊಡನೆ ಎಷ್ಟೇ ಪ್ರೇಮ ಜೀವನದ ದಿನಗಳನ್ನು ಕಳೆದರೂ ಜಾತಿ ಹಾಗೂ ಸಂಪ್ರದಾಯಬದ್ಧವಾದ ತನ್ನ ನಾಡಿಗೆ ಸುನೇತ್ರೆಯೊಡನೆ ತಾನೊಬ್ಬನೇ ಹೋಗಲು ಮನೋದುರ್ಬಲನಾದ ಶ್ರೀಧರನಿಗೆ ಧೈರ್ಯ ಸಾಲಲಿಲ್ಲ. ಅವರ ಪ್ರಣಯ ಕಥೆಯಲ್ಲಿ ನಾನು ಈ ವರೆಗೆ ಪ್ರಾಮುಖ್ಯ ಪಾತ್ರವಹಿಸಿದ್ದರಿಂದ, ಅದರ ಪರ್ವಕಾಲದಲ್ಲಿ ನಾನು ಅವರ ಸಮೀಪವಿರುವದು ಯುಕ್ತವೆಂದು ನನಗೆ ಅನಿಸಿತು. ಹಾಗಾಗಿ ನಾನು ಮೊದ ಮೊದಲಿಗೆ ಹಿಂಜರಿದರೂ ಕಡೆಗೆ ಸುನೇತ್ರೆಯು ಆಗ್ರಹ ಪಡಿಸಿದಾಗ ಕಾರವಾರದ ವರೆಗಿನ ಕಡಲಪಯಣದಲ್ಲಿ ಅವರ ಸಹಭಾಗಿಯಾಗಲು ಒಪ್ಪಿಕೊಂಡೆ.

ಬುಧವಾರ ದಿವಸ ನಮಗೆಲ್ಲರಿಗೆ ಮಾತೆಯ ಮನೆಯಲ್ಲಿ ಬೀಳ್ಕೊಳ್ಳುವ ಮೇಜವಾನಿ ಇತ್ತು. ಊಟವಾದ ಬಳಿಕ ನಾವು ರಸ್ತೆಯವರೆಗೆ ಬರುವಷ್ಟರಲ್ಲಿ ಮಾಲತಿಯು ಫಕ್ಕನೆ ಏನೊ ನೆನಪಾದವಳಂತೆ ನನ್ನನ್ನು ಒಳಗೆ ಕರೆದು ಹಸ್ತಿದಂತದ ಕೆತ್ತನೆ ಇರುವ ಶ್ರೀಗಂಧದ ಪೆಟ್ಟಿಗೆಯೊಂದನ್ನು ನನ್ನ ಕೈಲಿ, ಕೊಟ್ಟು "ಇದರಲ್ಲಿ ಸುನೇತ್ರೆಯ ಗೆಳತಿಯರು ಅವಳಿಗೆ ಕೊಟ್ಟ ಪಾರಿತೋಷಕಗಳಿವೆ, ಇದನ್ನು ಅವಳಿಗೆ ಕೊಡು" ಎಂದು ಹೇಳಿದಳು. ಸುನೇತ್ರಾ ಶ್ರೀಧರರನ್ನು ಅವರ ಜೋಲಿಗೆ ತಲಪಿಸುವಾಗ ನಾನು ಆ ಪೆಟ್ಟಿಗೆಯನ್ನು ಸುನೇತ್ರಾದೇವಿಗೆ ಕೊಟ್ಟೆನು. ಅವಳ ಕೂಡ ಎಷ್ಟೇ ಸಲಿಗೆ ಇದ್ದರೂ ಅವಳ ಗತ

ಜೀವನಕ್ಕೆ ಸಂಬಂಧಿಸಿದ ಸಂಗತಿಗಳ ವಿಷಯದಲ್ಲಿ ನಾನು ಏನನ್ನೂ ಕೇಳಲು ಹಿಂಜರಿಯುತ್ತಿದ್ದೆ. ಹಾಗಾಗಿ ನಾನು ಆ ಪೆಟ್ಟಿಗೆಯಲ್ಲಿನ ವಸ್ತುಗಳ ಕುರಿತು ಏನನ್ನೂ ಕೇಳಲಿಲ್ಲ. ಮುಂದಿನ ವಿಚಾರಗಳಲ್ಲೇ ಮಗ್ನನಾದ ಕಾರಣ ದಿಂದಲೊ ಏನೋ ಶ್ರೀಧರನು ಅವಳೊಡನೆ ಆ ವಿಷಯದಲ್ಲಿ ಏನೂ ಕೇಳಲಿಲ್ಲ.

ಅರವಿಂದ ಕಸಬೇಕರನು ತನ್ನ ಕಥನವನ್ನು ಮುಂದರಿಸಿದನು. "ನೋಡಿರಿ, ನಾನು ನಿಮಗೆ ಹೇಳಿದೆನಲ್ಲಾ, ನಮ್ಮ ಭವಿತವ್ಯಕ್ಕೆ ತಕ್ಕಂತೆ ವಿಧಾತನು ನಮಗೆ ಬುದ್ಧಿ ಕೊಡುತ್ತಾನೆ. ಆ ಪೆಟ್ಟಿಗೆಯ ಗುಟ್ಟನ್ನು ಮಾಲತಿ ನನಗೆ ಹೇಳಲಿಲ್ಲ. ಆದರೆ, ಆಶ್ಚರ್ಯದ ಸಂಗತಿಯೆಂದರೆ ಸುನೇತ್ರೆಯ ಹತ್ತಿರ ಕೇಳಿ ಆ ಪೆಟ್ಟಿಗೆಯೊಳಗಿನ ವಸ್ತುಗಳನ್ನು ನೋಡುವ ಅಥವಾ ಅವುಗಳ ಕುರಿತು ಕೇಳುವ ವಿಚಾರ ನನಗೂ ಹೊಳೆಯಲಿಲ್ಲ. ಶ್ರೀಧರನಿಗೆ ಸಹ ಹೊಳೆಯಲಿಲ್ಲ. ಆ ಪೆಟ್ಟಿಗೆಯೊಳಗಿನ ವಸ್ತುಗಳ ಸಂಗತಿ ನಮಗೆ ಗೊತ್ತಾಗಿದ್ದರೆ ಶ್ರೀಧರ, ಸುನೇತ್ರೆಯರ ದುರಂತ ಸಂಭವಿಸುತ್ತಲೇ ಇರಲಿಲ್ಲ. ಈಗ ಅದನ್ನು ಹೇಳಿ ಏನು ಉಪಯೋಗ? ವಿಧಾತನ ಯೋಜನೆಯಂತೆ ಆಗಿ ಹೋಗಲೇ ಬೇಕಾದುದನ್ನು ತಪ್ಪಿಸುವ ಶಕ್ತಿ ಹುಲ್ಲು ಮಾನವರಿಗೆಲ್ಲಿಂದ ಬರಬೇಕು?

ಮುಂಬಯಿಯಿಂದ ಕಾರವಾರದ ವರೆಗಿನ ಇಪ್ಪತ್ತನಾಲ್ಕು ತಾಸುಗಳ ಕಡಲಪಯಣದಲ್ಲಿ ವಿಶೇಷ ಘಟನೆಯೇನೂ ಸಂಭವಿಸಲಿಲ್ಲ. ಆದರೆ ಸುನೆತ್ರಾದೇವಿಯು ಅಪ್ಸರಾಮಂದಿರದಿಂದ ಹೊರಗೆ ಬಂದ ಬಳಿಕ ಶ್ರೀಧರನ ಮುಖದಲ್ಲಿ ತೋರುತ್ತಿದ್ದ ಉಲ್ಲಾಸ, ಉತ್ಸಾಹಗಳು ಈಗ ಇರಲಿಲ್ಲ. ಮುಂದಿನ ಪರಿಸ್ಥಿತಿಯನ್ನು ಹೇಗೆ ಎದುರಿಸಬಹುದೆಂಬ ಚಿಂತೆಯು ಅವುಗಳನ್ನು ಓಡಿಸಿ ಬಿಟ್ಟಿತು. ಚಿಂತಾಕ್ರಾಂತವಾದ ಅವನ ಮನಸ್ಸಿನಲ್ಲಿ ಅದರ ಪರಿಣಾಮವಾಗಿ ಕೋಪವು ಪ್ರವೇಶ ಮಾಡಿತು. ಕ್ಷುಲ್ಲಕ ಕಾರಣಗಳಿಗಾಗಿ ಸುನೇತ್ರೆಯ ಮೇಲೆ ಸಿಟ್ಟಿಗೇಳಲು ತೊಡಗಿದನು. ಸುನೇತ್ರೆಯು ಅದನ್ನೆಲ್ಲಾ ಶಾಂತಚಿತ್ತದಿಂದ ಸಹಿಸಿ ಅವನನ್ನು ಸಂತಯಿಸುವದನ್ನು ನೋಡುವಾಗ ಪ್ರೇಮವು ಮಾನವನಲ್ಲಿ ಎಂತಹ ಪರಿವರ್ತನೆಯನ್ನು ಮಾಡಬಲ್ಲದು ಎಂಬುದು ಗೊತ್ತಾಗಿ ಪರಮಾಶ್ಚರ್ಯವಾಗುತ್ತಿತ್ತು. ತಮ್ಮ ಮೇಲೆ ಅವಳು ಬೀರುವ

ಒಂದು ನಗುವಿಗಾಗಿ ಅಥವಾ ಅವಳ ಒಂದು ಚುಂಬನಕ್ಕಾಗಿ ಸಮಾಜದೊಳಗಿನ ಶ್ರೀಮಂತರು ಕೇಳಿದಷ್ಟು ರೊಕ್ಕ ಸುರಿಸಲು ಸಿದ್ಧರಿದ್ದರು. ಅವಳ ಸಣ್ಣ ಇಚ್ಛೆಯನ್ನು ಪೂರೈಸಲು ಮುಂದೆ ಹಾತೊರೆಯುತ್ತಿದ್ದರು. ಅಪ್ಸರಾ ಮಂದಿರದ ಆ ವಿಖ್ಯಾತ ತಾರೆಯೇ ತನಗಾಗಿ ಒಂದು ಕವಡಿಯನ್ನೂ ಖರ್ಚು ಮಾಡುವ ಸಾಮರ್ಥ್ಯವಿಲ್ಲದ ಶ್ರೀಧರ ನಿಷ್ಕಾರಣವಾದ ಸಿಟ್ಟನ್ನು ಸಹಿಸಿ ಅವನ ಸಣ್ಣ ಪುಟ್ಟ ಕೇಳಿಕೆಗಳನ್ನು ಸಹ ಅತ್ಯಂತ ದಕ್ಷತೆಯಿಂದ ಪಾಲಿಸುತ್ತಿದ್ದಳು.

ತನ್ನ ಭಾವೀ ದುರ್ಮರಣದ ಪೂರ್ವ ಸೂಚನೆಯು ಸುನೇತ್ರೆಗೆ ಆಗಲೇ ಆಗಿದ್ದಿರಬೇಕು ಎಂದು ಅನಿಸುತ್ತದೆ. ಅಂದು ಹಡಗದಲ್ಲಿ ನಾವು ರಾತ್ರಿಯ ಉಪಹಾರ ತೀರಿಸಿ ಡೆಕ್ಕಿನ (deck) ಬದಿಯ ಬೆಂಚಿನಲ್ಲಿ ಕುಳಿತಿದ್ದೆವು. ಕಡಲು ಶಾಂತವಾಗಿದ್ದು ದೊಡ್ಡ ಕೆರೆಯಂತೆ ಕಾಣಿಸುತ್ತಿತ್ತು. ಹೇಮಂತ ಋತುವಿನ ತಿಳಿಯಾಗಿದ್ದ ಅಂತರಿಕ್ಷವು ಮೇಘದ ಚುಕ್ಕೆ ಸಹ ಇಲ್ಲದೆ ಶುಭ್ರವಾಗಿ ಕಂಗೊಳಿಸುತ್ತಿತ್ತು. ಅಂದು ಹುಣ್ಣಿಮೆ. ಪೂರ್ಣ ಚಂದ್ರನ ಶೀತಲ ಪ್ರಕಾಶವು ನಿಸರ್ಗಕ್ಕೆ ಒಂದು ರೀತಿಯ ಸೌಂದರ್ಯದ ಮುಸುಕನ್ನು ಮುಚ್ಚಿ ಸಮುದ್ರತೀರದ ಹೊಯಿಗೆ, ಕಲ್ಲುಗಳಂತಹ ಒರಟು ದೃಶ್ಯಗಳಿಗೂ ಅತೀವ ಶೋಭೆಯನ್ನು ಕೊಟ್ಟಿತ್ತು. ಬೆಳದಿಂಗಳ ಕಿರಣಗಳು ನೀರಿನಲ್ಲಿ ಬಿದ್ದೆಡೆಗಳಲ್ಲೆಲ್ಲ ರೌಪ್ಯದ್ರಾವಕದಂತೆ ಮಿರುಗುತ್ತಿದ್ದ ಪ್ರಕಾಶವು ಮನಸ್ಸನ್ನು ಸೂರೆಗೊಳ್ಳುತ್ತಿತ್ತು. ಈ ಮುಗ್ಧಮಯ ಪ್ರಶಾಂತ ವಾತಾವರಣದಲ್ಲಿ ಮಾನವನು ತನ್ನ ಯಃಕಶ್ಚಿತ ದುಃಖವನ್ನು ಮರೆತು ಸೃಷ್ಟಿಯ ಶಾಂತಿಯೊಡನೆ ಸಮರಸವಾಗುತ್ತಿದ್ದನು.

ಸುನೇತ್ರೆಯು ತನ್ನ ಕೊಳಲನ್ನು ಹೊರಗೆ ತೆಗೆದು ಅದನ್ನು ಸಣ್ಣದಾಗಿ ಬಾರಿಸುತ್ತಾ ತನ್ನ ಮಂಜುಳ ಸ್ವರದಿಂದ ಒಂದು ಮರಾಠಿ ಭಾವಗೀತೆಯನ್ನು ಹಾಡಲು ತೊಡಗಿದಳು. ಆ ಗೀತೆಯನ್ನು ಕೇಳುತ್ತಲಿದ್ದಾಗ, ಅದರಲ್ಲಿ ವ್ಯಕ್ತವಾಗಿದ್ದ ಭಾವನೆಗಳು ನನ್ನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿದವು. ನನ್ನ ಮೋರೆಯಲ್ಲಿನ ಆಶ್ಚರ್ಯದ ಭಾವವನ್ನು ನೋಡಿ ಸುನೇತ್ರೆಯು "ಯಾವ ದರದಾದರೂ ನೆನಪಾಗುತ್ತದೆಯೇನು?" ಎಂದು ಕೇಳಿದಳು.

"ಹೌದು ವಸಯಿ ಕಿಲ್ಲೆಯಲ್ಲಿ ನಾವು ನೋಡಿದ ಸಮಾಧಿ ಕಲ್ಲಿನಲ್ಲಿ

ಕೊರೆದ ಪೋರ್ತುಗೀಸ ಕವಿತೆಯ ಭಾವನೆಗಳೇ ಇದರಲ್ಲಿಯೂ ಇವೆ" ಎಂದೆನು.

"ಸರಿ, ಆ ಭಾವನೆಗಳು ಅತ್ಯಂತ ಹೃದಯಸ್ಪರ್ಶಿಯಾಗಿದ್ದುವು. ಆದ್ದರಿಂದ ಅಪ್ಸರಾ ಮಂದಿರಕ್ಕೆ ಬರುತ್ತಿದ್ದ ಒಬ್ಬ ಕವಿಗೆ ಹೇಳಿ ಅದೇ ಭಾವನೆಗಳನ್ನೊಳ ಗೊಂಡ ಒಂದು ಭಾವಗೀತೆಯನ್ನು ರಚಿಸಿಕೊಂಡೆ

ಅವಳು ಪುನಃ ಹಾಡತೊಡಗಿದಳು.

ಜಗತ್ತು ಒಂದು ಶೋಕಸಾಗರ
ಜೀವನವೆಂದರೆ ದುಃಖದ ಪರಂಪರೆ
ಈ ನಮ್ಮ ಭಾವಕವಿತೆ ಕೊನೆಗೊಂಡಿತು
ಪ್ರೇಮದ ಪೂರ್ಣಚಂದ್ರನು ಒಡೆದುಚೂರಾದನು
ಪ್ರೇಮವು ಸಫಲವಾಗದ ಅವಳ ಜೀವ
ಈ ಕೊಳದಲ್ಲಿ ಲೀನವಾಯಿತು

ನಾನು ಏಕಾಗ್ರಚಿತ್ತದಿಂದ ಕೇಳುತ್ತಲಿದ್ದೆ. ಹಾಡು ಮುಗಿದಬಳಿಕ "ಸುಂದರವಾಗಿದೆಯಲ್ಲವೇ" ಅಂದಳು.

"ಹೌದು, ಆದರೆ ಶೋಕರಸದಿಂದ ತುಂಬಿದ್ದು. ಅಂತಹ ಹಾಡು ಇಲ್ಲಿ, ಈಗ ಯಾಕೆ?" ಅಂದೆನು.

"ಶೋಕರಸದಿಂದ ತುಂಬಿದ್ದಾದರೂ, ಅದರಲ್ಲಿನ ಭಾವಗಳು ಸತ್ಯವೇ ಅಲ್ಲವೇ?" ಎಂದು ಹೇಳಿ ಅದೇ ಗೀತವನ್ನು ತಿರುಗೊಮ್ಮೆ ಹಾಡಲು ಸುರು ಮಾಡಿದಳು.

ಅಶುಭದ ಅಸ್ಪಷ್ಟ ಪೂರ್ವ ಸೂಚನೆಯನ್ನು ಮೊದಲೇ ಕಂಡಿದ್ದ ನಾನು ಆಮೇಲೆ ಹೆಚ್ಚೇನೂ ಮಾತನಾಡಲಿಲ್ಲ.

× × × × ×

ಮರುದಿನ ಮಧ್ಯಾಹ್ನದ ಸುಮಾರಿಗೆ ಹಡಗು ಕಾರವಾರ ಬಂದರಕ್ಕೆ ತಲುಪಿತು. ಹಡಗದಿಂದ ಇಳಿದು ಡೋಣಿಯಲ್ಲಿ ದಡವನ್ನು ಸೇರಿದ ಬಳಿಕ ಅಂಕೋಲೆಗೆ ಹೋಗುವ ಬಸ್ಸಿನಲ್ಲಿ ಅವರನ್ನು ಕೂಡ್ರಿಸಿ ನಾನು ಮನೆಗೆ ಹೋದೆನು.

ಶ್ರೀಧರನ ತಂದೆಯು ಕಾರಭಾರಿ ಹಯಾತಖಾನನು ಭೂಮಾರ್ಗದಿಂದ

ಅಂಕೋಲೆಗೆ ಬಂದು ಅಲ್ಲಿಂದ ಅವನೂ ಶ್ರೀಧರನೂ ಕೂಡಿಯೇ ಶಿರಸಿಗೆ ಹೋಗುವನೆಂದು ಗೊತ್ತಾಗಿತ್ತು.

ಶ್ರೀಧರನು ಅಂಕೋಲೆಯಲ್ಲಿ ಓರ್ವ ಮಿತ್ರನ ಮನೆಯಲ್ಲಿ ಒಂದೆರಡು ದಿನ ಕಳೆದು ತನ್ನೊಡನೆಯೇ ಶಿರಸಿಗೆ ಬರುವವನಿದ್ದಾನೆಂದು ಹಯಾತ ಖಾನನು ಶ್ರೀಧರನ ತಂದೆ ರಾಮಚಂದ್ರ ಹೆಗಡೆಯವರಿಗೆ ತಿಳಿಸಿಯೂ ಆಗಿತ್ತು.

ತರಂಗ ೧೨.

"ದುರಂತ ನಾಟಕದ ಕೊನೆಯ ಅಂಕದ ಪರದೆಯು ಅಂಕೋಲೆಯಲ್ಲಿ ಮೇಲಕ್ಕೆತ್ತಲ್ಪಟ್ಟಿತು." ಅರವಿಂದನು ವೃತ್ತಾಂತವನ್ನು ಮುಂದರಿಸಿದನು. "ನನಗೆ ಹೆಚ್ಚು ದಿವಸ ನಿಲ್ಲುವದಾಗಲಿಲ್ಲ. ಕಾರವಾರಕ್ಕೆ ಬಂದ ಮರು ದಿವಸವೇ ನಾನು ಆ ಮೊದಲು ದೊರಕಿಸಲು ಪ್ರಯತ್ನಿಸಿದ್ದ ಒಂದು ವಿದ್ಯಾರ್ಥಿ ವೇತನದ ಸಂಬಂಧವಲ್ಲಿ ಕೂಡಲೇ ಹೊರಟು ಬರಬೇಕೆಂದು ಮುಂಬಯಿ ಯಿಂದ ತಂತಿ ಬಂದಿತು. ಹೊರಡುವ ಮೊದಲು ಅಂಕೋಲೆಗೆ ಹೋಗಿ ಬರಲು ಸಮಯವಿರಲಿಲ್ಲ. ನಾನು ಹೋಗುವ ಸುದ್ದಿಯನ್ನು ಪತ್ರದಿಂದ ಶ್ರೀಧರನಿಗೆ ತಿಳಿಸಿ ಮುಂಬಯಿಗೆ ಹೊರಟೆನು, ಇಷ್ಟನ್ನು ಹೇಳಿ ಅರವಿಂದನು ಎಳೇಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತನು. "ನೋಡಿರಿ, ನಾನು ಅವರೊಡನೆ ಕಾರವಾರಕ್ಕೆ ಬರುವಾಗ ಎಣಿಸಿದಂತೆ ನಾನು ಅಲ್ಲಿ ಒಂದು ವಾರದ ವರೆಗಾದರೂ ನಿಂತಿದ್ದರೆ, ಈ ದುರಂತವನ್ನು ತಪ್ಪಿಸಬಹುದಾಗಿತ್ತು." ಅರವಿಂದನ ಬಾಯಿಯಿಂದ ಮುಂದೆ ಮಾತೇ ಹೊರಡದಾಯಿತು. "ತಲೆ ಭಾರವಾಗಿದೆ. ತುಸು ವಿಶ್ರಮಿಸುತ್ತೇನೆ." ಎಂದು ಹೇಳಿ ಅಲ್ಲೇ ಅಡ್ಡಾದನು.

ಆಗ ಹೊತ್ತು ನಡುನೆತ್ತಿಗೆ ಬಂದಿತು. ಸೂರಿ ಪಾರ್ಕಿನಲ್ಲಿನ ಚಬುಕಿನ ಗಿಡಗಳ ನೆರಳಿನ ನಡುವಿನಿಂದಲೂ ಸಹ ಬಿಸಿಲಿನ ತಾಪದ ಅನುಭವವಾಗುತ್ತಿತ್ತು. ಅರವಿಂದನು ಮಲಗಿದ್ದನ್ನು ನೋಡಿ ನಾನೂ ಕೊಂಚ ನಿದ್ದೆಹೋದೆನು. ನನಗೆ ಎಚ್ಚರವಾಗುವಾಗ ಗಂಟೆ ಮೂರು ಹೊಡೆದು ಹೋಗಿತ್ತು. ಅರವಿಂದನು ಬೇಡವೆಂದರೂ ನಾನು ಆಗ್ರಹ ಮಾಡಿ ಅವನನ್ನು ಉಪಹಾರ ಗೃಹಕ್ಕೆ ಕರೆದುಕೊಂಡು ಹೋದೆನು. ಅಲ್ಲಿ ಚಹಾ ಕುಡಿದು ಪುನಃ ಸೂರಿ

ಪಾರ್ಕಿಗೆ ಬಂದೆವು. ಕೆಲಕಾಲದ ವಿಶ್ರಾಂತಿ ಹಾಗೂ ಚಹಾಪಾನದಿಂದ ನಾವು ಪುನಃ ಚೇತರಿಸಿಕೊಂಡೆವು.

ಅರವಿಂದನು ಪ್ರಾರಂಭಿಸಿದನು "ಈ ವರೆಗೆ ನಾನು ಹೇಳಿದ ಸಂಗತಿ ಗಳೆಲ್ಲಾ ನಾನು ಪ್ರತ್ಯಕ್ಷವಾಗಿ ಕಂಡವುಗಳು. ಮುಂದೆ ನಡೆದುದನ್ನು ನಾನು ನನ್ನ ಕಣ್ಣಿನಿಂದೇನು ನೋಡಲಿಲ್ಲ. ಅದನ್ನೆಲ್ಲಾ ನೀವು ಕೇಳಿರಬಹುದು "

"ಇಲ್ಲ, ಅರವಿಂದರಾಯರೆ. ಸುನೇತ್ರೆಯ ಬಲಿದಾನವನ್ನು ಇಲ್ಲಿ ಬಹಳ ಮಂದಿ ನೋಡಿದ್ದಾರೆ. ಆ ವಿಷಯದಲ್ಲಿ ಹಲವು ಕತೆಗಳು ಪ್ರಚಾರದಲ್ಲಿವೆ. ಸರಿಯಾದ ಕಾರಣ ಯಾರಿಗೂ ಗೊತ್ತಿಲ್ಲ. ಆದ್ದರಿಂದಲೇ ಸತ್ಯ ಸಂಗತಿಯನ್ನು ನಿಮ್ಮಿಂದ ತಿಳಿಯಲು ನಾನು ಅಷ್ಟು ಆತುರನಾಗಿದ್ದುದು" ಎಂದೆ.

"ಮುಂದಿನ ವೃತ್ತಾಂತವನ್ನು ಕೇಳುವಾಗ, ಮನುಷ್ಯ ಸ್ವಭಾವದ ವಿಷ ಯದಲ್ಲೇ ತಿರಸ್ಕಾರ ಹುಟ್ಟುತ್ತದೆ. ಅಷ್ಟು ಹೇಯವಾದ ಕೃತ್ಯಗಳು ನಡೆದವು.

ಗಾಯತೊಂಡೆಯುವರಿಂದ ನಾನು ಮೂರು ಸಾವಿರ ರೂಪಾಯಿ ಸಾಲ ಪಡೆಯುವಾಗ ಹರಿರಾಮ ನಾರ್ವೆಕರರು ಅಲ್ಲಿಗೆ ಬಂದುದನ್ನೂ, ಗಾಯ ತೊಂಡೆಯುವರು ಮೂರು ಸಾವಿರ ರೂಪಾಯಿ ಅವರಿಂದಲೆ ತಕ್ಕೊಂಡು ನನಗೆ ಕೊಟ್ಟ ಸಂಗತಿಯನ್ನೂ ಈ ಮೊದಲೇ ನಾನು ನಿಮಗೆ ಹೇಳಿದ್ದೇನೆ. ಹತ್ತು ಸಾವಿರ ರೂಪಾಯಿ ಕೊಟ್ಟರೂ ತನಗೆ ದೊರೆಯದಿದ್ದ ಸುನೇತ್ರೆಯು ಸುಲಭ ವಾಗಿ ಶ್ರೀಧರನಿಗೆ ಸಿಕ್ಕಿದ್ದನ್ನು ನೋಡಿ ನಾರ್ವೆಕರನಿಗೆ ಅವನ ಬಗ್ಗೆ ಇದ್ದ ಮಾತ್ಸರ್ಯವೂ ಸುನೇತ್ರೆಯ ಮೇಲಿನ ವ್ಯಾಮೋಹವೂ ಪುನಃ ಮೇಲಕ್ಕೆದ್ದವು. ತನ್ನ ಇಚ್ಛೆಯನ್ನು ಕೈಗೂಡಿಸುವದರಲ್ಲಿ ಯಾವದಕ್ಕೂ ಹೇಸದ ಆ ನೀಚನು ಸುನೇತ್ರೆಯನ್ನು ದೊರಕಿಸುವದಕ್ಕೂ, ಶ್ರೀಧರನ ಮೇಲಿನ ಸೇಡು ತೀರಿಸಿ ಕೊಳ್ಳುವದಕ್ಕೂ ಒಂದು ಒಳ್ಳೆಯ ಹಂಚಿಕೆ ಹೂಡಿದನು.

ಆ ದಿನ ಅವನು ಗಾಯತೊಂಡೆಯುವರಲ್ಲಿ ಬಂದದ್ದು ಅಕಸ್ಮಾತ್ತಾಗಿ ಅಲ್ಲ. ಅವನಿಗೂ ಗಾಯತೊಂಡೆಯುವರಿಗೂ ಲೇವಾದೇವಿ ಇತ್ತು. ಅಷ್ಟೇ ಅಲ್ಲ. ಗಾಯತೊಂಡೆಯುವರು ಅವನಿಂದ ತುಂಬಾ ಸಾಲ ಪಡೆದವರಿದ್ದುದ ರಿಂದ ಅವನ ಮಾತನ್ನು ಮೀರುವದು ಅವರಿಗೆ ಸಾಧ್ಯವಿರಲಿಲ.

ಈ ಪರಿಸ್ಥಿತಿಯ ಅಕ್ರಮ ಲಾಭಪಡೆದು ನಾರ್ವೇಕರರು ನಮ್ಮ ಸಾಲದ ದಸ್ತಾವೇಜುಗಳನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡರು. ಶ್ರೀಧರನ ಮಾವ ಬಯಲುವಾನೆ ತಿಮ್ಮಣ್ಣ ಭಟ್ಟರೆಂಬುವವರೂ ನಾರ್ವೇಕರರ ಆರ್ಥಿಕ ಆಧೀನತೆ ಯಲ್ಲಿರುವವರ ಪೈಕಿ ಒಬ್ಬರಾಗಿದ್ದರು. ಶ್ರೀಧರ ಸುನೇತ್ರೆಯರ ಪ್ರಣಯ ಕಥೆಯ ಸುದ್ದಿಯನ್ನು ಬೇಕಾದಂತೆ ಬಣ್ಣಹಚ್ಚಿ ಅವನ ಹೆತ್ತವರಿಗೆ ನಾರ್ವೇ ಕರರೇ ಈ ತಿಮ್ಮಣ್ಣ ಭಟ್ಟರ ಮುಖಾಂತರ ತಿಳಿಸಿದ್ದಿರಬೇಕು.

ತಿಮ್ಮಣ್ಣ ಭಟ್ಟರಿಗೆ ಈಗ ಪಶ್ಚಾತ್ತಾಪವಾಗಿದೆ. ಹೀಗೆಲ್ಲಾ ಆಗಬಹು ದೆಂದು ತಾನು ಕನಸಿನಲ್ಲಿ ಕೂಡ ಯೋಚಿಸಿರಲಿಲ್ಲವೆಂದು ಪದೇ ಪದೇ ಹೇಳು ತ್ತಿರುತ್ತಾರೆ. ಹಾಗೂ ತಾನು ಮಾಡಿದುದನ್ನು ಇತರರ ಮುಂದೆ ಸಮರ್ಥಿಸಲು ಪ್ರಯತ್ನಿಸುತ್ತಾರೆ. ಆದರೆ ಒಳಗಿಂದೊಳಗೆ ಅವರ ಮನಸ್ಸೇ ಈಗ ಅವರ ಕೃತ್ಯಗಳಿಗಾಗಿ ಅವರನ್ನು ತಿನ್ನುತ್ತಿದೆ.

ಹರಿರಾಮ ನಾರ್ವೇಕರರು ಈ ತಿಮ್ಮಣ್ಣ ಭಟ್ಟರನ್ನು ತನ್ನ ದುರಾಶೆ ಯನ್ನು ಪೂರ್ತಿಗೊಳಿಸುವ ಸಾಧನವನ್ನಾಗಿ ಉಪಯೋಗಿಸಿದರು.

ಶ್ರೀಧರನು ಅಂಕೋಲೆಗೆ ಹೋದ ಎರಡನೇ ದಿನವೇ, ತಿಮ್ಮಣ್ಣ ಭಟ್ಟರು ಅಲ್ಲಿಗೆ ಬಂದರು. ಬಂದವರೇ ಶ್ರೀಧರ ಸುನೇತ್ರೆಯರೊಡನೆ ಅತ್ಯಂತ ಆತ್ಮೀಯತೆಯಿಂದಲೂ, ಸಹಾನುಭೂತಿಯಿಂದಲೂ ವರ್ತಿಸಿ ಅವರಿಬ್ಬರ ವಿಶ್ವಾ ಸವನ್ನು ಸಂಪಾದಿಸಿದರು. ವ್ಯಾವಹಾರಿಕ ಜ್ಞಾನವೇನೂ ಇಲ್ಲದ ಶ್ರೀಧರನು ಅವರ ವರ್ತನೆಯಲ್ಲಿನ ವಂಚಕತನವನ್ನು ಅರಿಯದೆ ಯಾವತ್ತೂ ಸಂಗತಿಗ ಳನ್ನು ಅವರಿಗೆ ನಿವೇದಿಸಿದನು. ಶ್ರೀಧರನ ಮಾನಸಿಕ ದುರ್ಬಲತೆ ಹಾಗೂ ಸುನೇತ್ರೆಯ ಸಂಬಂಧದ ವಿಷಯದಲ್ಲಿ ಅವನಿಗಿದ್ದ ಅಂಜಿಕೆ ಇದನ್ನು ಸರಿ ಯಾಗಿ ತಿಳಿದುಕೊಂಡ ತಿಮ್ಮಣ್ಣ ಭಟ್ಟರು ಅದರ ಉಪಯೋಗವನ್ನು ಚನ್ನಾಗಿ ಮಾಡಿಕೊಂಡರು. ಶ್ರೀಧರನೊಡನೆ ಮಹತ್ವದ ಕೆಲಸವಿದೆಯೆಂದು ಸುನೇತ್ರೆಗೆ ಹೇಳಿ ಒಂದು ದಿನದ ಮಟ್ಟಿಗೆ ಅವನನ್ನು ಕರೆದುಕೊಂಡು ಹೋಗುವ ಅನು ಮತಿಯನ್ನು ಅವಳಿಂದ ಪಡೆದು ತಿಮ್ಮಣ್ಣ ಭಟ್ಟರು ಶ್ರೀಧರನನ್ನು ಅಂಕೋ ಲೆಯಿಂದ ಸ್ವಲ್ಪ ದೂರ ಸಮುದ್ರತೀರದಲ್ಲಿ ಜನವಸತಿ ಹೆಚ್ಚಿಲ್ಲದ ಜಾಗೆ ಯಲ್ಲಿರುವ ಜೆಳಕೆರೆ ಬಂಗಲೆಗೆ ಕರೆದುಕೊಂಡು ಹೋಗಿ ಅಲ್ಲಿ ತನ್ನ ಅಸ್ತ್ರಗ

ಳನ್ನು ಒಂದೊಂದಾಗಿ ಬಿಚ್ಚಿದರು.

"ಶ್ರೀಧರ, ನೀನು ಮಾಡುತ್ತಿರುವದೇನೆಂಬುದನ್ನು ಸ್ವಲ್ಪವಾದರೂ ವಿಚಾರಿಸುವಿಯೇನು? ಹವ್ಯಕ ಬ್ರಾಹ್ಮಣ ಸಮಾಜದಲ್ಲಿ ನಿಮ್ಮ ಮನೆತನಕ್ಕೆ ಎಂತಹ ಪೂಜ್ಯಸ್ಥಾನವಿದೆ! ನಿನ್ನ ತಂದೆಗೆ ನಮ್ಮ ಜಾತಿಯಲ್ಲಿ ಇರುವ ಗೌರವವೆಷ್ಟು! ರಾಮಚಂದ್ರ ಹೆಗಡೆಯವರೆಂದರೆ ಬ್ರಾಹ್ಮಣ್ಯದ ಆದರ್ಶವ್ಯಕ್ತಿಯೆಂದು ಹವ್ಯಕರೆಲ್ಲರೂ ಅವರನ್ನು ಅತ್ಯಂತ ಪೂಜ್ಯಬುದ್ಧಿಯಿಂದ ಕಾಣುತ್ತಾರೆ. ಅವರ ಒಬ್ಬನೇ ಮಗನಾದ ನೀನು ಓರ್ವ ವೇಶ್ಯಾಬಾಲಿಕೆಯೊಡನೆ ವಿವಾಹವಾಗುವದೆಂದರೆ ಅವರ ಉಚ್ಚ ಹೆಸರನ್ನೂ ಮನೆತನದ ಶ್ರೇಷ್ಠ ಪರಂಪರೆಯನ್ನೂ ಕೆಸರಿನಲ್ಲಿ ಎಸೆದಂತೆ? ನಿನ್ನ ತಂದೆಯು ಎಂದೆಂದಿಗೂ ಇದನ್ನು ಸಹಿಸಲಿಕ್ಕಿಲ್ಲ. ಈ ವೃದ್ಧಾಪ್ಯದಲ್ಲಿ ಅವರನ್ನು ದುಃಖದಲ್ಲಿ ನೂಕುವೆಯಾ? ನಿನ್ನನ್ನು ಅಕ್ಕರೆಯಿಂದ ಸಾಕಿದ ನಿನ್ನ ತಾಯಿಯ ಕಡೆಗೆ ನೋಡು. ಸೂಳೆಯು ತನ್ನ ಸೊಸೆಯಾಗುವ ಕಲ್ಪನೆಯಿಂದಲೇ ಅವಳ ಹೃದಯ ಒಡೆದು ಚೂರಾಗಬಹುದು. ಮಾತೃಹತ್ಯಾ ದೋಷವು ನಿನ್ನಮೇಲೆ ಬರುವದು. ನಿನ್ನ ಇಂದ್ರಿಯ ಸುಖಕ್ಕಾಗಿ ನಿನ್ನ ಮಾತೆಯ ಸಾವಿಗೆ ಕಾರಣನಾಗುವೆಯಾ? ವಿಚಾರ ಮಾಡು"

ಈ ಒಂದೊಂದು ಮಾತೂ ಶ್ರೀಧರನ ಮನೋನಿರ್ಧಾರದ ವೃಕ್ಷಕ್ಕೆ ಕೊಟ್ಟ ಕೊಡಲಿಯ ಏಟುಗಳಾಗಿದ್ದುವು. ಆದರೆ, ಅವುಗಳಿಂದ ಅಲುಗಾಡಿದರೂ ನಿರ್ಧಾರವು ಒಮ್ಮೆಲೆ ಕುಸಿದು ಬೀಳಲಿಲ್ಲ. "ನೀನು ಹೇಳುವದೆಲ್ಲಾ ನನಗೆ ಗೊತ್ತಿದೆ, ಮಾಮಾ. ಆದರೆ ನೋಡು, ಸುನೇತ್ರೆಯನ್ನು ಬಿಟ್ಟು ನಾನು ಎಂದಿಗೂ ಇರಲಾರೆ. ವಿವಾಹವಾಗುವೆವೆಂದು ನಾವು ದೇವರ ಹೆಸರಿನಲ್ಲಿ ಪ್ರತಿಜ್ಞೆ ಮಾಡಿದ್ದೇವೆ. ಎಲ್ಲವನ್ನೂ ತ್ಯಜಿಸಿ ಅವಳು ನನ್ನೊಡನೆ ಬಂದಿದ್ದಾಳೆ. ಅವಳದು ಎಷ್ಟು ವಿನಯಶೀಲ ಹಾಗೂ ಎಲ್ಲರೊಡನೆ ಕೂಡಿಕೊಳ್ಳುವ ಸ್ವಭಾವವೆಂಬುದನ್ನು ನೀನೇ ನೋಡಿರುವೆ. ನನ್ನ ಹೆತ್ತವರು ನನ್ನನ್ನು ಬಹಳವಾಗಿ ಪ್ರೀತಿಸುವದರಿಂದ ಅವಳ ಸ್ವಭಾವವು ಅವರ ಮನಸ್ಸನ್ನು ಪರಿವರ್ತಿಸುವದೆಂದು ನನಗೆ ನಂಬಿಕೆ ಇದೆ. ಅದಾಗುವ ವರೆಗೆ ಕಾಯಲು ನಾವಿಬ್ಬರೂ ಸಿದ್ಧರಿದ್ದೇವೆ.

ಕಾಲವು ನಮಗೆ ತಿಳಿಯದಷ್ಟು ವೇಗದಿಂದ ಬದಲಾಗುತ್ತದೆ. ಹಳೇ

ಸಂಪ್ರದಾಯ ಶರಣತ್ವಕ್ಕೂ ಜಾತೀಯತೆಗೂ ಆಧುನಿಕ ಸುಧಾರಕ ಯುಗದಲ್ಲಿ ಸ್ಥಾನವಿಲ್ಲ" ಎಂದು ಹೇಳಿ ಶ್ರೀಧರನು ತನ್ನ ಧೋರಣವನ್ನು ಸಮರ್ಥಿಸುವ ಪ್ರಯತ್ನ ಮಾಡಿದನು. "ಅಂತರ್ಜಾತೀಯ ವಿವಾಹಕ್ಕೆ ನನ್ನ ಸಂಪೂರ್ಣ ಸಮ್ಮತಿ ಇದೆ, ಶ್ರೀಧರ. ನಿನ್ನ ಪ್ರೇಯಸಿಯು ಬೇರೆ ಜಾತಿಯವಳಾದರೂ ಯೋಗ್ಯ ಕುಲದವಳಾಗಿದ್ದರೆ ಅವಳನ್ನು ನೀನು ವಿವಾಹವಾಗುವ ವಿಷಯದಲ್ಲಿ ನಿನ್ನ ಹೆತ್ತವರ ಮನ ಒಲಿಸುವ ಕೆಲಸ ನಾನೇ ಮಾಡುತ್ತಿದ್ದೆ. ಆದರೆ ಸುನೇತ್ರೆಯು ಸೂಳೆಯ ಮಗಳಷ್ಟೇ ಅಲ್ಲ; ಅದೇ ವ್ಯವಸಾಯವನ್ನು ಈ ವರೆಗೆ ಮಾಡಿದವಳು. ಅವಳನ್ನು ಸೊಸೆಯಾಗಿ ನಿನ್ನ ಹೆತ್ತವರು ಎಂದಾದರೂ ಸ್ವೀಕರಿಸುವದು ಸಾಧ್ಯವೇ ಇಲ್ಲ. ಅವರ ಹೃದಯ ಪರಿವರ್ತನೆ ಮುಂದೆ ಎಂದಾದರೂ ಆದೀತೆಂಬ ಆಸೆಯನ್ನು ಬಿಟ್ಟುಬಿಡು. ನಿನಗಾಗಿ ಅವರು ಒಂದು ಸುಲಕ್ಷಣವಾದ ಹೆಣ್ಣನ್ನು ಗೊತ್ತುಮಾಡಿದ್ದಾರೆ. ಅವಳನ್ನು ಈಗ ನೀನು ಒಲ್ಲೆನೆಂದರೆ ಪರಿಣಾಮವೇನಾಗುವದೆಂದು ಯೋಚಿಸು. ಮೊದಲೇ ಅನಾರೋಗ್ಯದಲ್ಲಿದ್ದ ನಿನ್ನ ತಾಯಿಯು ಮನಸ್ಸಿಗಾದ ಆಘಾತದಿಂದ ಇಹವ್ಯಾಪಾರವನ್ನು ಮುಗಿಸುವಳು. ದುಃಖ ನಿರಾಶೆಗಳಿಂದ ನಿನ್ನ ತಂದೆಯ ಸ್ಥಿತಿ ಏನಾಗುವದೊ? ಸೂಳೆಯ ಹುಡುಗಿಗೆ ಎಂದಾದರೂ ಅವರು ತಮ್ಮ ಮನೆಯಲ್ಲಿ ಪ್ರವೇಶಕೊಡುವರೆಂದು ಭಾವಿಸಿದೆಯಾ? ಎಂದೆಂದಿಗೂ ಆಗದ ಮಾತದು. ಅಂದಬಳಿಕ ಹೃದಯಪರಿವರ್ತನೆಯೆಂಬ ಬರೇ ಕಲ್ಪನಾ ಸಾಮ್ರಾಜ್ಯದ ಒಣ ಮಾತುಗಳನ್ನು ಉಚ್ಚರಿಸುವದರಲ್ಲಿ ಏನೂ ಅರ್ಥವಿಲ್ಲ."

ಈವರೆಗೆ ಅಚಲವಾಗಿದ್ದ ಶ್ರೀಧರನ ಮನೋನಿರ್ಧಾರದ ಮರವು ಈ ಮಾತುಗಳಿಂದ ಅಲುಗಾಡಹತ್ತಿತು.

"ಶ್ರೀಧರ, ಬರೇ ನಿನ್ನ ಕರ್ತವ್ಯದ ದೃಷ್ಟಿಯಿಂದ ಮಾತ್ರವೇ ನಾನು ಇದನ್ನು ಹೇಳುತ್ತಿಲ್ಲ. ನಿನಗೆ ಜಗತ್ತಿನ ಜ್ಞಾನವೇನೇನೂ ಇಲ್ಲ. ನಾನು ನಿನಗಿಂತ ಬುದ್ಧಿವಂತನಲ್ಲದಿದ್ದರೂ ತುಸು ಹೆಚ್ಚು ಜಗತ್ತಿನ ಅನುಭವವಿದ್ದವನು.

ಸುನೇತ್ರೆಯು ಒಳ್ಳೆಯ ಹುಡುಗಿ, ಸುಸಂಸ್ಕೃತಳು. ನಿನ್ನಮೇಲೆ ನಿಸ್ಸೀಮ ಪ್ರೇಮವಿದ್ದವಳು, ಎಲ್ಲಾ ಸರಿ. ಆದರೆ ಶ್ರೀಮಂತಿಕೆಯ ಐಹಿಕ ಸುಖದಲ್ಲಿ ಬೆಳೆದವಳು. ಅವಳು ನಿನಗಾಗಿ ಭೌತಿಕ ಸುಖವನ್ನು ತ್ಯಾಗಮಾಡಲು

ಸಿದ್ಧಳಿರಬಹುದು. ಆದರೆ ತ್ಯಾಗಕ್ಕೂ ಮಿತಿ ಇದೆ. ನಿನ್ನೊಡನೆ ಒಂದು ಕವಡಿ ಕಾಸೂ ಇಲ್ಲ. ನಿನ್ನ ವಿದ್ಯಾಭ್ಯಾಸವೂ ಪೂರ್ಣವಾಗಿಲ್ಲ. ನಿನ್ನ ತಂದೆಯು ನಿನಗೆ ಒಂದು ಪುಡಿ ಕಾಸನ್ನೂ ಕೊಡಲಿಕ್ಕಿಲ್ಲವೆಂಬುದನ್ನು ಮರೆಯಬೇಡ. ಈ ಪರಿಸ್ಥಿತಿಯಲ್ಲಿ ನೀನು ಅವಳನ್ನು ವಿವಾಹವಾದರೆ, ಅವಳಿಗೆ ದಿನಕ್ಕೆ ಒಂದು ಊಟವನ್ನಾದರೂ ಕೊಡುವ ಶಕ್ತಿ ನಿನ್ನಲ್ಲಿದೆಯೇ ? ಅವಳು ಐಷ-ಆರಾಮದಲ್ಲಿ ಬೆಳೆದ ಕೋಮಲ ಶರೀರದ ಹೆಣ್ಣು. ಅವಳಿಂದ ಯಾವದೇ ಕೆಲಸ ಮಾಡುವದಂತೂ ಸಾಧ್ಯವೇ ಇಲ್ಲ. ಅವಳು ಎಷ್ಟು ದಿನ ನಿನ್ನೊಡನೆ ಉಪವಾಸ ಸಹಿಸಿಯಾಳು? ಗೋವಾದ ಕಲಾವಂತಿಣಿಯರನ್ನು ನಾನು ಚನ್ನಾಗಿ ಬಲ್ಲೆ. ತ್ಯಾಗದ ದಾರಿಯಲ್ಲೇ ನಿನ್ನೊಡನೆ ಸುನೇತ್ರೆಯು ಬಹು ದೂರ ಬರಬಹುದು. ಆದರೆ ಉಪವಾಸ ಬಿದ್ದು ಸಾಯುವತನಕ ನಿನ್ನೊಡನೆ ಬರಲಾರಳು, ಹಾಗಾಗಿ ನಾಳೆ ಅಲ್ಲ ನಾಡದು ನಿಮ್ಮ ಪ್ರಣಯದ ಇತಿಶ್ರೀ ಆಗಿಯೇ ತೀರುವದು. ಪರಿಸ್ಥಿತಿಯನ್ನು ಅಲ್ಲಿನ ತನಕ ಕೊಂಡುಹೋಗಿ ಕೊನೆಗೆ ಅವಳಿಂದ ತಿರಸ್ಕೃತನಾಗಿ ಮರ್ಯಾದೆ, ಗೌರವ ಎರಡನ್ನೂ ಕಳೆಕೊಳ್ಳುವದಕ್ಕಿಂತ ಈಗಲೇ ಈ ಬಿಕ್ಕಟ್ಟಿನಿಂದ ಹೊರಗೆ ಬರುವದು ಉತ್ತಮವಲ್ಲವೇ ?"

"ಬಿಕ್ಕಟ್ಟಿನಿಂದ ಹೊರಗೆಬರುವದೆಂದರೆ ಹೇಗೆ?" ಉದ್ವೇಗವನ್ನು ತಡೆಯಲಾರದೆ ಶ್ರೀಧರನು ಕೇಳಿದನು.

"ಹೇಳುತ್ತೇನೆ ನಿಲ್ಲು" ತನ್ನ ಮಾತುಗಳು ಅಪೇಕ್ಷಿಸಿದ್ದ ಗುರಿಯನ್ನು ಮುಟ್ಟುವ ಲಕ್ಷಣಗಳನ್ನು ಕಂಡು ತಿಮ್ಮಣ್ಣ ಭಟ್ಟರು ಮುಂದರಿಸಿದರು. "ಇನ್ನೊಂದು ಮಹತ್ವದ ಸಂಗತಿ ಇದೆ. ಅದನ್ನು ನಾನು ಈವರೆಗೆ ನಿನ್ನ ಮನ ನೊಯಿಸಬಾರದೆಂದು ಹೇಳಲಿಲ್ಲ. ಈಗ ಹೇಳದೆ ಗತ್ಯಂತರವಿಲ್ಲ. ನೀನು ಸುನೇತ್ರೆಯನ್ನು ವಿಮೋಚನೆಗೊಳಿಸುವದಕ್ಕಾಗಿ ಕೊಟ್ಟ ಹಣದಲ್ಲಿ ಮೂರು ಸಾವಿರ ರೂಪಾಯಿ ಗಾಯತೊಂಡೆ ಸಾವಕಾರರಿಂದ ನಿನ್ನ ಮಿತ್ರ ಅರವಿಂದ ಕಸಬೇಕರರು ಸಾಲ ತಗೊಂಡಿದ್ದಾರೆಂಬುದು ನಿನಗೆ ಗೊತ್ತಿದೆಯಲ್ಲಾ. ಆ ಹಣದ ಬಗ್ಗೆ ಪ್ರೊನಿಸರಿ ನೋಟನ್ನು ಕಸಬೇಕರರು ಬರೆದು ಕೊಟ್ಟಿದ್ದರೂ ನೀನು ಆ ಹಣವು ಯಾವದಕ್ಕೆ ಬೇಕೆಂಬುದನ್ನು ತೋರಿಸಿ

ಜಾಮೀನುಪತ್ರ ಬರಕೊಟ್ಟಿದ್ದಿ.

ಆ ಹಣ ಗಾಯತೊಂಡೆಯವರು ಸಾರ್ವೆಕರರಿಂದ ಪಡೆದು ನಿನ್ನ ಗೆಳೆಯನಿಗೆ ಕೊಟ್ಟಿದ್ದು. ಈಗ ಸಾರ್ವೆಕರರು ಆ ದಸ್ತಾವೇಜುಗಳನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡಿದ್ದಾರೆ. ಸುನೇತ್ರೆಯ ಪ್ರಕರಣದಿಂದಾಗಿ ಅವರು ನಿನ್ನಮೇಲೆ ತುಂಬಾ ಸಿಟ್ಟಿನಲ್ಲಿದ್ದಾರೆಂದು ಅವರ ಕಾರಕೂನ ಹೇಳುತ್ತಾನೆ. ಆ ಹಣಕ್ಕಾಗಿ ಅವರು ನಿನ್ನ ಹಾಗೂ ಕಸಬೇಕರನ ಮೇಲೆ ದಾವೆಮಾಡುವವರಿದ್ದಾರೆ. ನೀವಿಬ್ಬರೂ ವಿದ್ಯಾರ್ಥಿಗಳು. ದಾವೆಮಾಡಿದರೆ ನಿಮ್ಮ ಗತಿ ಏನಾದೀತು ? ”

ಈ ಮಾತುಗಳನ್ನು ಅರವಿಂದನು ಮೊದಲಿಗೆ ನಂಬಲಿಲ್ಲ. ಅವನ ಸಾಶಂಕ ದೃಷ್ಟಿಯನ್ನು ನೋಡಿ ತಿಮ್ಮಣ್ಣ ಭಟ್ಟರು “ಇದು ಸುಳ್ಳೆಂದು ನಿನಗೆ ಅನಿಸಿದರೆ ನೋಡು, ಅವರ ಕಾರಕೂನ ಇಲ್ಲೇ ಇದ್ದಾನೆ. ದಸ್ತಾವೇಜು ಅವರ ಕಡೆಗೆನೇ ಇವೆ. ನಿನಗೆ ಇನ್ನೂ ಅನುಮಾನವಿದ್ದರೆ ತೋರಿಸುತ್ತೇನೆ.” ಎಂದು ಹೇಳಿ ಹೊರಗೆ ಇದ್ದ ಸಾರ್ವೆಕರರ ಕಾರಕೂನನ್ನು ಕರೆದು ಅವನ ಕೈಲಿ ಇದ್ದ ಪ್ರಾಮಿಸರಿನೋಟು ಹಾಗೂ ಜಾಮೀನುಪತ್ರಗಳನ್ನು ತೋರಿಸಿದರು.

ಅವುಗಳನ್ನು ನೋಡಿ ಶ್ರೀಧರನು ಮುಗ್ಗರಿಸಿಯೇ ಬಿದ್ದನು. ಅವನ ನಿರ್ಧಾರ, ಧೈರ್ಯ ಎಲ್ಲಾ ಮಾಯವಾಯಿತು.

ತನ್ನ ಹಂಚಿಕೆಯು ಕೊನೆಮುಟ್ಟುವ ಲಕ್ಷಣಗಳನ್ನು ನೋಡಿ ತಿಮ್ಮಣ್ಣ ಭಟ್ಟರು ತನ್ನ ಬತ್ತಳಿಕೆಯೊಳಗಿದ್ದ ಆಖೈರೆಯ ಅಣು ಬಾಂಬನ್ನು ಎಸೆದರು.

ಅಷ್ಟುಮಾತ್ರವೇ ಆದರೆ ಹೊರಪಡಲು ಏನಾದರೂ ದಾರಿ ಕಂಡುಹಿಡಿಯಬಹುದಾಗಿತ್ತು. ಆದರೆ, ನೀನು ನಿನ್ನ ಹಸ್ತಾಕ್ಷರದಲ್ಲೇ ಈ ಹಣವು ಸುನೇತ್ರೆಯನ್ನು ಪಡೆಯುವ ಸಲುವಾಗಿ ಅಪ್ಸರಾ ಮಂದಿರದ ಚಾಲಕರಿಗೆ ಕೊಡುವದಕ್ಕೆ ಎಂದು ಬರೆದುಕೊಟ್ಟಿದ್ದಿ. ಈ ರೀತಿ ಹಣಕೊಟ್ಟು ಹುಡುಗಿಯರನ್ನು ಪಡೆಯುವದು ಅಪರಾಧವಾಗುತ್ತದಂತೆ. ಪೆನಲ್ ಕೋಡ್‌ನಲ್ಲಿ ಅದಕ್ಕೆ ಏಳು ವರ್ಷಗಳ ಶಿಕ್ಷೆ ಹೇಳಲ್ಪಟ್ಟಿದೆಯಂತೆ. ನೀನು ಎಂತಹ ಹುಚ್ಚು ಕೆಲಸಮಾಡಿದೆ? ಹಾಗೆ ಬರೆದುಕೊಡುವ ಮೊದಲು ಯಾರಾದರೂ ಬಲ್ಲವರ ಸಲಹೆ ಕೇಳಬಾರದಿತ್ತೇ? ಈಗ ಪರಿಣಾಮ ಸಾರ್ವೆಕರರು ಆ ಜಾಮೀನುಪತ್ರದ ಆಧಾರದ

ಮೇಲೆ ಫಿರ್ಯಾದಿ ಹೂಡಿದರೆ ನೀನು, ನಿನ್ನ ಗೆಳೆಯ ಇಬ್ಬರೂ ಜೇಲಿಗೆ ಹೋಗಬೇಕಾಗುವದು. ನೀವು ಕೊರಳನ್ನೇ ಅವರ ಕೈಯಲ್ಲಿ ಕೊಟ್ಟದ್ದೀರಿ. ಅವರು ಅದನ್ನು ಹಿಸುಕದೆ ಬಿಡುವರೇ? ಜೇಲಿಗೆ ಹೋದಿಯೆಂದರೆ ನಿನ್ನ ಪ್ರಣಯ ಮತ್ತೆಲ್ಲಿ ಉಳಿಯುವದು? ನೀನೊಬ್ಬನೇ ಅಲ್ಲ. ನಿನಗೆ ಸಹಾಯ ಮಾಡಿದ ನಿನ್ನ ಗೆಳೆಯ ಕಸಬೇಕರನೂ ನಿನ್ನಿಂದಾಗಿ ಶಿಕ್ಷೆ ಹೊಂದಿ ತನ್ನ ಭವಿಷ್ಯವನ್ನೇ ಕಳೆದುಕೊಳ್ಳಬೇಕಾಗುವದು."

ಈ ಕೊನೆಯ ಅಣುಬಾಂಬು ತಿಮ್ಮಣ್ಣ ಭಟ್ಟರ ಉದ್ದೇಶವನ್ನು ಸಾಧಿಸಿಯೇ ಬಿಟ್ಟಿತು. ತಾನೂ, ತನಗಾಗಿ ಇಷ್ಟೆಲ್ಲಾ ಮಾಡಿದ ತನ್ನ ಗೆಳೆಯನೂ ಕಾರಾಗೃಹಕ್ಕೆ ಹೋಗುವ ಭೀಕರ ದೃಶ್ಯವು ಶ್ರೀಧರನ ನಿರ್ಧಾರವನ್ನು ನುಚ್ಚುನೂರು ಮಾಡಿ ಚೆಲ್ಲಿತು. ವ್ಯಾವಹಾರಿಕ ಜ್ಞಾನದಲ್ಲಿ ತೀರಾ ಮಗುವಿನಂತಿದ್ದ ಶ್ರೀಧರನಿಗೆ ತನ್ನ ಮಾವನು ಹೇಳಿದ್ದರ ಸತ್ಯಾಸತ್ಯತೆಯನ್ನು ಕುರಿತು ಯಾರಾದರೂ ತಿಳಿದವರೊಡನೆ ಕೇಳಬೇಕೆಂಬ ವಿಚಾರವು ಸಹ ಹೊಳೆಯಲಿಲ್ಲ. ನಾನು ಆಗ ಕಾರವಾರದಲ್ಲಿದ್ದರೆ, ಅವನು ನನ್ನ ಅಭಿಪ್ರಾಯ ಕೇಳದೆ ಯಾವದರಮೇಲೂ ಒಮ್ಮೆಲೇ ವಿಶ್ವಾಸವಿಡುತ್ತಿರಲಿಲ್ಲ. ಆದರೆ, ನಾನು ಅಲ್ಲಿ ಇಲ್ಲದ್ದರಿಂದ, ಆಧಾರವಿಲ್ಲದ ಲತೆಯಂತೆ ಅವನು ಕುಸಿದುಬಿದ್ದನು.

ತಿಮ್ಮಣ್ಣ ಭಟ್ಟರು ಹುಟ್ಟಿಸಿದ ಭೀತಿಯಿಂದ ದಿಗಿಲುಗೊಂಡು ಶ್ರೀಧರನು "ಮುಂದೇನು ಗತಿ" ಎಂದು ಒಂದೇಸವನೆ ರೋದಿಸಹತ್ತಿದನು.

"ಅಳಬೇಡ ಶ್ರೀಧರ, ನಿನ್ನನ್ನು ಜೇಲಿಗೆ ಹಾಕುವದನ್ನು ನೋಡಲಿಕ್ಕೆ ನಿನ್ನ ಮಾವನು ಏನು ಸತ್ತಿಲ್ಲ. ನಿನ್ನಮೇಲೆ ಕೈಮಾಡಲಿರುವ ಸಂಕಟದ ನಿವಾರಣೆಯ ಉಪಾಯಗಳನ್ನು ನಾನು ಮೊದಲೇ ಹುಡುಕಿರುವೆನು. ಈಗ ಹೊರಗಿರುವ ನಾರ್ವೇಕರರ ವಿಶ್ವಾಸೀ ಕಾರಕೂನನು ನನ್ನ ಮಿತ್ರನು. ಅವನಿಂದ ನಾರ್ವೇಕರರೊಡನೆ ಮಾತಾಡಿಸಿರುವೆನು. ನೀನು ಸುನೇತ್ರೆಯನ್ನು ಅವರಿಗೆ ಒಪ್ಪಿಸುವದಾದರೆ ಅವರು ನಿನ್ನ ವಿರುದ್ಧ ಯಾವದೇ ಕ್ರಮ ತಕ್ಕೊಳ್ಳುವದಿಲ್ಲವೆಂದು ಆಶ್ವಾಸನಕೊಟ್ಟಿದ್ದಾರೆ.

ಇಷ್ಟೇ ಅಲ್ಲ. ಜಾಮೀನುಪತ್ರ, ಪ್ರಾಮಿಸರಿ ನೋಟನ್ನು ಸಹ ನಿನಗೇನೇ ತಿರುಗಿಕೊಡುತ್ತಾರೆ. ಶ್ರೀಧರ, ವಿಚಾರಮಾಡು; ಎಲ್ಲರಮೇಲೂ ಬರಲಿ

ರುವ ಈ ಮಹಾನ್ ಸಂಕಟದಿಂದ ಪಾರಾಗುವ ಸುಲಭ ಸಂಧಿ ಇದು. ಇದನ್ನು ಬಿಟ್ಟರೆ ಪರಿಣಾಮವೇನಾದೀತೆಂಬುದನ್ನು ನೀನೇ ಯೋಚಿಸಿ ನೋಡು. ಇಷ್ಟೆಲ್ಲಾ ಮಾತುಮುಗಿಯುವಾಗ ಸಂಜೆಯಾಗಿತ್ತು. ಶ್ರೀಧರನೂ ತಿಮ್ಮಣ್ಣ ಭಟ್ಟರೂ ಅಂದು ರಾತ್ರಿ ಅಲ್ಲೀ ಉಳಿದರು. ಶ್ರೀಧರನು ರಾತ್ರೆಇಡೀ ಕಣ್ಣೀರು ಸುರಿಸುತ್ತಾ ಕಳೆದನು. ಮರುದಿನ ಎದ್ದವನು ಮೋರೆ ತೊಳೆಯುವ ಮೊದಲೇ ತಿಮ್ಮಣ್ಣ ಭಟ್ಟರು ಸಂಬೋಧಿಸಿದರು. "ಶ್ರೀಧರ, ನಿನ್ನ ನಿರ್ಣಯವೇನೆಂಬುದನ್ನು ನಾರ್ವೆಕರರಿಗೆ ಈಗಲೇ ತಿಳಿಸಬೇಕು. ಅವರ ಕಾರಕೂನನು ಅದಕ್ಕಾಗಿ ಕಾಯುತ್ತಿದ್ದಾನೆ. ಆದ್ದರಿಂದ ವಿಳಂಬ ಮಾಡಬೇಡ" ಎಂದರು.

ನಿರ್ಣಯವೇನೆಂದು ಬಾಯಿಯಿಂದ ಹೇಳುವ ಅವಶ್ಯಕತೆಯೇ ಇರಲಿಲ್ಲ. ಶ್ರೀಧರನ ಮಾನಸಿಕ ಅಧಃಪಾತವು ಸಂಪೂರ್ಣವಾಗಿತ್ತು. ತಿಮ್ಮಣ್ಣ ಭಟ್ಟರು ಹಾಕಿದ ಹೆದರಿಕೆ, ಅವರ ಮಾತುಗಳ ಪ್ರಭಾವ, ಇವುಗಳ ಪರಿಣಾಮವಾಗಿ ಅಲ್ಲೀ ಇದ್ದ ನಾರ್ವೆಕರರ ಕಾರಕೂನನನ್ನು ತಿಮ್ಮಣ್ಣ ಭಟ್ಟರು ತಮ್ಮ ಪ್ರಯತ್ನಗಳು ಯಶಸ್ವಿಯಾದುದನ್ನು ನಾರ್ವೆಕರರಿಗೆ ತಿಳಿಸಲು ಕೂಡಲೇ ಕಾರವಾರಕ್ಕೆ ಕಳಿಸಿದರು.

ಮಧ್ಯಾಹ್ನದೊಳಗಾಗಿ ನಾರ್ವೆಕರರೇ ಬೇಲೇಕೇರಿಗೆ ಬಂದರು. ಹಾಗೂ ಅವರ ಮೋಟಾರದಲ್ಲಿಯೇ ಶ್ರೀಧರನೂ ತಿಮ್ಮಣ್ಣ ಭಟ್ಟರೂ ಆ ದಿನ ಸಂಜೆ ಅಂಕೋಲೆಗೆ ಹೋದರು.

"ನಾನು ಆಗಲೇ ಹೇಳಿದಂತೆ ತಿಮ್ಮಣ್ಣ ಭಟ್ಟರಿಗೆ ತಾನು ಮಾಡಿದ ಹೇಯಕೃತ್ಯದ ವಿಷಯದಲ್ಲಿ ಪಶ್ಚಾತ್ತಾಪವಾಗಿದೆ. ಅವರ ವಿವರೆಗಳನ್ನು ಅವರು ಮರೆಮಾಡಲು ಪ್ರಯತ್ನಿಸುತ್ತಾರೆ." ಅರವಿಂದನು ಮುಂದುವರಿಸಿದನು "ಆ ದಿನ ಬೆಲೆಕೆರಿಯಲ್ಲಿ ನಡೆದ ಯಾವತ್ತೂ ಸಂಗತಿಗಳು ನನಗೆ ನಾರ್ವೆಕರರ ಕಾರಕೂನನಿಂದ ತಿಳಿದು ಬಂದವು. ಅವನು ಒಳ್ಳೆಯ ಮನುಷ್ಯ. ನಾರ್ವೆಕರರ ಉಪ್ಪನ್ನುಂಡವನಾದರೂ ಅವರ ನೀಚತನಕ್ಕಾಗಿ ಹೇಸುತ್ತಿದ್ದನು."

"ಇಲ್ಲಿ ನಾನು ಶ್ರೀಧರನ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ವಿವಾಹವಾಗುವೆನೆಂದು ಸುನೇತ್ರೆಗೆ ಆಶ್ವಾಸನ ಕೊಟ್ಟು ಅವಳನ್ನು ಅಪ್ಸರಾ ಮಂದಿರದಿಂದ ಬಿಡಿಸಿ ಕೊನೆಗೆ ವಿಶ್ವಾಸಘಾತಮಾಡಿ ಅವಳನ್ನು ನಾರ್ವೆಕರರಿಗೆ

ವಿಕ್ರಯಿಸಿದನೆಂದು ಅವನ ಮೇಲೆ ಎಲ್ಲರೂ ಆರೋಪಹೊರಿಸುತ್ತಾರೆ.

ಈ ಕಾರಣಕ್ಕಾಗಿಯೇ ಅವನು ನಾಚಿಕೊಂಡು ಮೋರೆ ತೋರಿಸಲಾರದೆ ಎಲ್ಲೋ ಅಡಗಿಕೊಂಡಿರಬೇಕು. ಆದರೆ, ಅವನ ಸ್ವಭಾವವನ್ನು ತಿಳಿದವರು ಎಂದಿಗೂ ಅವನಮೇಲೆ ಈ ರೀತಿಯ ಆರೋಪವನ್ನು ಹೊರಿಸಲಿಕ್ಕಿಲ್ಲ.

ಅವನು ಮಾಡಿದ ಕೆಲಸವು ಅತ್ಯಂತ ಹೇಯವಾದುದೆಂದು ತೋರಿದರೂ ಬುದ್ಧಿಪೂರ್ವಕವಾಗಿ ಅದನ್ನು ಅವನು ಮಾಡಿದ್ದಲ್ಲವೆಂಬುದರಲ್ಲಿ ಅವನನ್ನು ತಿಳಿದವರು ಯಾರೂ ಸಂದೇಹಪಡಲಾರರು. ಅವನ ಸ್ವಭಾವದಲ್ಲಿನ ದೋಷವೆಂದರೆ, ಅವನ ಮಾನಸಿಕ ದುರ್ಬಲತೆ. ತನ್ನ ಪ್ರೇಯಸಿಗಾಗಿ ತನ್ನ ಹೆತ್ತವರ ವಿರುದ್ಧ ಹೋಗುವ ಧೈರ್ಯವು ಅವನಲ್ಲಿರಲಿಲ್ಲ. ಈ ಮಾನಸಿಕ ದುರ್ಬಲತೆಯಿಂದಾಗಿ ಅವನು ಪ್ರತಿಯೊಂದು ಸಣ್ಣ ಸಂಗತಿಯನ್ನು ಕೂಡ ಮನಸ್ಸಿಗೆ ಹಚ್ಚಿಕೊಳ್ಳುತ್ತಿದ್ದನು. ಅವನ ಸ್ವಭಾವವನ್ನು ಅರಿತಿದ್ದ ಅವನ ಸೋದರ ಮಾವನು ಆದರ ಪೂರ್ಣ ಉಪಯೋಗಮಾಡಿಕೊಂಡನು.

ಮನುಷ್ಯನಲ್ಲಿ ಎಷ್ಟೇ ಸದ್ಗುಣಗಳಿದ್ದರೂ ಅವುಗಳ ಪ್ರೇರಣೆಯಂತೆ ನಡೆಯುವ ಮಾನಸಿಕ ಧೈರ್ಯವಿಲ್ಲವಿದ್ದರೆ ಯಾವದೇ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಾಗ ಅವನು ನೈತಿಕ ಅಧಃಪಾತಕ್ಕೆ ಇಳಿಯುವನೆಂಬುದು ಶ್ರೀಧರನ ಜೀವನದಿಂದ ನಾವು ಕಲಿಯಬೇಕಾದ ಪಾಠ.

ಅಂಕೋಲೆಗೆ ಮರಳಿದ ಬಳಿಕ ಶ್ರೀಧರನು ತನಗೆ ತಲೆ ನೋಯುತ್ತದೆಂದು ಹೇಳಿ ಸುನೇತ್ರೆಯೊಡನೆ ಬೇರೆ ಏನೂ ಮಾತಾಡದೆ ನೆಟ್ಟಗೆ ಹೋಗಿ ಮಲಗಿದನು. ತನ್ನ ವಿಷಯದಲ್ಲಿ ಅವನ ಕುಟುಂಬದವರೊಡನೆ ಜೋರಿನ ಕಲಹವಾಗಿರಬೇಕೆಂದು ಊಹಿಸಿ ಸುನೇತ್ರೆಯೂ ಅವನೊಡನೆ ಹೆಚ್ಚೇನೂ ಕೇಳಲಿಲ್ಲ.

ಆದರೆ ಶ್ರೀಧರನು ಆ ರಾತ್ರಿ ಊಟ ಸಹ ಮಾಡದೆ ಒಂದೇಸವನೆ ಅಳುತ್ತಾ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದನ್ನು ಕಂಡು ಸುನೇತ್ರೆಯು ಏನಾಯಿತೆಂಬುದನ್ನು ಹೇಳಲು ಆಗ್ರಹಪಡಿಸಿದಳು. ಎಷ್ಟೋ ಹೊತ್ತಿನ ವರೆಗೆ ಅವನು ಏನೂ ಮಾತಾಡಲಿಲ್ಲ. ಕೊನೆಗೆ ಬಹಳವಾಗಿ ಬಲವಂತಪಡಿಸಿದ ಮೇಲೆ "ಏನು ಹೇಳಲಿ, ಸುನೇತ್ರಾ, ಆಸೆ ಏನೂ ಉಳಿದಿಲ್ಲ" ಎಂದನು.

ಸುನೇತ್ರೆಯು ಮನೋದಾರ್ಢ್ಯವನ್ನು ತಾಳಬೇಕೆಂದು ಸೂಚಿಸಲು ಅವುಡು ಕಚ್ಚಿದಳು "ನೋಡು, ಶ್ರೀಧರ ಇಂತಹ ಪರಿಸ್ಥಿತಿಯು ಬರಬಹುದೆಂದು ಮೊದಲೇ ಗೊತ್ತಿತ್ತಲ್ಲನೇ ? ಈಗ ಅದು ಪ್ರಾಪ್ತವಾದಾಗ, ಆಸೆ ಏನೂ ಉಳಿದಿಲ್ಲವೆಂದು ಕೈಕಟ್ಟಿ ಕೂಡ್ರುವದರಲ್ಲಿ ಏನರ್ಥ? ನಾನು ಕೆಲಕಾಲ ಕಾಯಲು ಸಿದ್ಧಳಿದ್ದೇನೆ. ಬೇಕಾದರೆ ಸಲ್ಪ ದಿವಸ ದೂರವಿರುತ್ತೇನೆ. ಆದರೆ, ನಿನ್ನ ಹೆತ್ತವರೊಡನೆ ನನ್ನ ಸಲುವಾಗಿ ನೀನು ಹೋರಾಡಲೇಬೇಕು. ಇಲ್ಲದಿದ್ದರೆ ನಾನು ಯಾವದನ್ನು ಕಾಯುತ್ತ ಇರಲಿ ? "

"ಏನೂ ಉಪಯೋಗವಾಗುವದಿಲ್ಲ, ಸುನೇತ್ರಾ. ನನ್ನ ಹೆತ್ತವರು ಎಂದಿಗೂ ಒಪ್ಪಲಿಕ್ಕಿಲ್ಲ. "

"ಹಾಗಾದರೆ, ಏನು ಮಾಡಬೇಕೆಂದಿರುವಿ ?"

ಶ್ರೀಧರನು ಇದಕ್ಕೆ ಉತ್ತರವನ್ನೇ ಕೊಡಲಿಲ್ಲ. ಕಣ್ಣೀರು ಸುರಿಸುತ್ತಾ ಸುನೇತ್ರೆಯ ಮುಖವನ್ನು ನೋಡುತ್ತಾನಿಂತನು.

ಸುನೇತ್ರೆಯೇ ಮಾತನ್ನು ಎತ್ತಿದಳು. "ನನ್ನ ಪ್ರಸ್ತಾಪವನ್ನು ನೀನು ನಿನ್ನ ಹೆತ್ತವರ ಮುಂದೆ ತೆಗೆಯುವದಿಲ್ಲವೆಂದ ಬಳಿಕ ಅವರು ಮರ್ಯಾದಸ್ಥ ಮನೆತನದ ಒಂದು ಹೆಣ್ಣನ್ನು ಮದುವೆಯಾಗಲು ನಿನ್ನನ್ನು ಒತ್ತಾಯ ಪಡಿಸುವರು. "

"ನಿನ್ನನ್ನಲ್ಲದೆ ಬೇರೆ ಯಾವ ಹೆಣ್ಣನ್ನೂ ನಾನು ಮದುವೆಯಾಗಲಾರೆ. "

"ಸರಿ, ಹಾಗಿದ್ದರೆ ನಿನ್ನ ವಿಚಾರವೇನು ? ನೀನು ಬೇರೆ ಯಾರನ್ನೂ ಮದುವೆಯಾಗಲಾರೆ, ನನ್ನೊಡನೆ ಮದುವೆಯಾಗಲು ನಿನ್ನ ಹೆತ್ತವರು ಒಪ್ಪುವದಿಲ್ಲ. ಅವರ ವಿರುದ್ಧ ಹೋಗಲು ನೀನು ತಯಾರಿಲ್ಲ. ಈ ಬಿಕ್ಕಟ್ಟಿನೊಳಗಿಂದ ದಾರಿಯಾವದು. ?

"ಏನು ಹೇಳಲಿ, ಸುನೇತ್ರಾ. ನನ್ನ ತಂದೆ, ತಾಯಿಗಳು ನಮ್ಮಿಬ್ಬರ ವಿವಾಹಕ್ಕೆ ಎಂದೂ ಒಪ್ಪಿಗೆ ಕೊಡಲಿಕ್ಕಿಲ್ಲ. ಬಿಕ್ಕಟ್ಟಿನೊಳಗಿನಿಂದ ದಾರಿಯೇ ಇಲ್ಲ"

"ಅಂದರೆ, ನಾವು ಏನುಮಾಡಬೇಕೆಂದು ನಿನ್ನ ಅಂಬೋಣ ? "

ಶ್ರೀಧರನು ಪುನಃ ನಿರುತ್ತರನಾದನು.

ಅವನ ನಿಸ್ಸಹಾಯ ಮನಃಸ್ಥಿತಿಯನ್ನು ನೋಡಿ ಸುನೇತ್ರೆಗೆ ಕನಿಕರ ಹುಟ್ಟಿರಬೇಕು. ದಯಾಪೂರ್ಣ ಪ್ರೇಮ ದೃಷ್ಟಿಯಿಂದ ಅವನ ಕಡೆ ನೋಡುತ್ತಾ ಅವನ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಮೃದುವಾಗಿ ಚುಂಬಿಸುತ್ತಾ "ನಿನ್ನ ಮನಸ್ಸಿನಲ್ಲಿದ್ದುದನ್ನು ಪೂರಾ ಹೇಳು, ಅನುಮಾನಿಸಬೇಡ" ಎಂದಳು.

ಅದು ಶ್ರೀಧರ ಸುನೇತ್ರೆಯರ ಪ್ರೇಮ ಜೀವನದ ಕೊನೆಯಕ್ಷಣವಾಗಿತ್ತು. ಬಿಕ್ಕಿ ಬಿಕ್ಕಿ ಅಳುತ್ತಾ ಶ್ರೀಧರನು ಹೇಳಲು ತೊಡಗಿದನು. "ನನಗೆ ಹೇಳಲು ಬಾಯಿಬರುವದಿಲ್ಲ, ಸುನೇತ್ರಾ ನನ್ನ ಸೋದರಮಾವನು ಒಂದು ದಾರಿಯನ್ನು ಸೂಚಿಸಿದ್ದಾನೆ. ಅವನು ಹರಿರಾಮ ನಾರ್ವೇಕರರನ್ನು ಚೆನ್ನಾಗಿ ಬಲ್ಲನು"

"ಒಹೊ ಪುನಃ ಆ ಕತ್ತೇಮಗ, ಅವನು ಏನು ಮಾಡುತ್ತಾನಂತೆ?

"ಅವನು ನಿನ್ನನ್ನು ಸ್ವೀಕರಿಸಲು ಸಮ್ಮತಿಸಿದ್ದಾನೆ"

ಸುನೇತ್ರೆಯ ಕಣ್ಣುಗಳು ಕೋಪಾತಿರೇಕದಿಂದ ಕೆಂಪಗಾದವು. ಶ್ರೀಧರನನ್ನು ದಿಟ್ಟಿಸಿ ನೋಡುತ್ತಾ ಅವಳು ಅಂದಳು. "ನೀನೂ ಅದಕ್ಕೆ ಒಪ್ಪಿಗೆ ಕೊಟ್ಟೆಯೇನು?

ಶ್ರೀಧರನು ತಲೆ ತಗ್ಗಿಸಿ ತೊದಲುತ್ತ ಹೇಳಿದನು ಆ....ಆ....ಇ...ಇ ....ಇಲ್ಲ. ಮೊದಲು ನಿನ್ನನ್ನು ಕೇಳಬೇಕೆಂದು ಹೇಳಿದೆ"

"ಬೇರೆ ಯಾವ ಮಾರ್ಗವೂ ಇಲ್ಲೇನು"

"ಯಾವದಿದೆ? ಯಾವದೂ ಇಲ್ಲ"

ಸುನೇತ್ರೆಗೆ ವಜ್ರಾಘಾತವಾಯಿತು. ಅವಳ ಹೃದಯ ವೀಣೆಯ ತಂತಿಗಳು ತುಂಡರಿಸಿಬಿದ್ದವು. ಒಂದೆರಡು ನಿಮಿಷ ಹೊರಗಿನ ಅಂಧಃಕಾರವನ್ನು ನೋಡುತ್ತ ನಿಂತಳು. ಕೊನೆಗೆ ಒಂದು ರೀತಿಯ ಮನೋದಾರ್ಢ್ಯದ ಶಾಂತತೆಯನ್ನು ಮೋರೆಯ ಮೇಲೆ ತಾಳಿ "ಸರಿ, ಹಾಗಾದರೆ" ಎಂದಳು.

ಶ್ರೀಧರನು ಬಿಡುಗಡೆಯ ಅಲ್ಪ ನಿಟ್ಟುಸಿರನ್ನು ಬಿಟ್ಟನು. ಸುನೇತ್ರೆಯು ತನ್ನ ಸಮ್ಮತಿಯ ಪ್ರತಿಕ್ರಿಯೆಯು ಶ್ರೀಧರನ ಮೇಲೆ ಏನಾಗುವ

ದೆಂಬುದನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಲಿದ್ದಳು. ಶ್ರೀಧರನ ಈ ನಿಟ್ಟುಸಿರು ಅವಳ ಹೃದಯುವನ್ನೇ ಒಡೆದಿರಬೇಕು. ಪ್ರಿಯುಕರನಿಗಾಗಿ ಸರ್ವಸ್ವವನ್ನು ತೃಣೀಕರಿಸಿ ಬಂದ, ಆ ಪ್ರೇಮ ಜೀವಿಯು ಮನಸ್ಸಿನಲ್ಲಿ ಅವನ ಈ ವಿಶ್ವಾಸ ಘಾತವು ಯಾವ ಭಾವನೆಗಳನ್ನು ಉದ್ರೇಕಿಸಿತೊ ಆ ವಿಧಾತನೇ ಬಲ್ಲನು.

"ನನ್ನ ಹೃದಯುದ ರಾಣಿ, ನನ್ನನ್ನು ಕ್ಷಮಿಸು. ಇದಕ್ಕೆ ನಾನು ನಿರುಪಾಯುನಾಗಿ ಒಪ್ಪಬೇಕಾಯಿತು" ಎಂದು ಹೇಳಿ ಶ್ರೀಧರನು ಅವಳನ್ನು ಚುಂಬಿಸಲು ಬಳಿಗೆ ಬಂದನು. ಆದರೆ, ಅವನ ತುಟಿಗಳ ಸ್ಪರ್ಶವಾಗುವ ಮೊದಲೇ ಸುನೇತ್ರೆಯು ಅವನನ್ನು ದೂರಕ್ಕೆ ದೂಡಿದಳು.

"ಪ್ರೇಮದ ಪ್ರದರ್ಶನ ಇನ್ನು ಬೇಡ. ಒಮ್ಮೆ ಆ ಕತ್ತೆಗೆ ಮಾರುವ ದೆಂದು ಒಪ್ಪಿಗೆಯಾದ ಬಳಿಕ ತೀರಿತು."

ಶ್ರೀಧರನ ತಂದೆಯ ಕಾರಭಾರಿ ಹಯಾತಖಾನ ಆ ದಿನ ಶಿರಸಿ ಯಿಂದ ಅಂಕೋಲೆಗೆ ಬಂದಿದ್ದನು. ಹಾಗೂ ಶ್ರೀಧರ ತಿಮ್ಮಣ್ಣ ಭಟ್ಟ ರೊಡನೆ ಬೆಲೆಕೇರಿಯಿಂದ ಬಂದಿದ್ದ ನಾರ್ವೇಕರರ ಕಾರಕೂನನಿಂದ ಆ ವರೆಗೆ ನಡೆದ ಎಲ್ಲಾ ಸಂಗತಿಗಳನ್ನು ತಿಳಿದಿದ್ದನು. ಇವೆಲ್ಲಾ ನಡೆಯುವಾಗ ಅವನು ಸುನೇತ್ರೆ ಶ್ರೀಧರರಿದ್ದ ಮನೆಯಲ್ಲೇ ಇದ್ದನು.

ಶ್ರೀಧರನು ಹಿಂದಕ್ಕೆ ಸರಿದಬಳಿಕ ಸುನೇತ್ರೆಯು ಕೇಳಿದಳು. "ಅದಿ "ರಲಿ, ನಾರ್ವೇಕರ ಕತ್ತೆಮಗನಿಗೆ ನನ್ನನ್ನು ಮಾರಿದ್ದಕ್ಕಾಗಿ ಅವನು ಏನು ಪ್ರತಿಫಲ ಕೊಡುತ್ತಾನೆ"

ಶ್ರೀಧರನು ಮಾತೇ ಆಡಲಿಲ್ಲ. ಇದನ್ನು ನೋಡಿ ಸುನೇತ್ರೆಯು ಹಯಾ ತಖಾನನ ಕಡೆಗೆ ತಿರುಗಿ "ನಿಮಗೆ ಗೊತ್ತಿರಬೇಕಲ್ಲಾ ಖಾನಸಾಹೇಬ, ನೀವು ಹೇಳಿರಿ" ಎಂದಳು.

ಸರಳ ಮನಸ್ಸಿನ ಹಯಾತಖಾನನು "ಮೂರು ಸಾವಿರ ರೂಪಾಯಿ" ಎಂದು ಹೇಳಿಯೇ ಬಿಟ್ಟನು.

ಶ್ರೀಧರನಿಗೆ ವ್ಯಥೆ ಹಾಗೂ ನಿರಾಶೆಯಿಂದ ಹೃದಯುವೇ ನಿಂತು ಹೋದಂತಾಗಿತ್ತು. ಕಾರಭಾರಿಯ ಈ ಮಾತುಗಳನ್ನು ಕೇಳಿ ಉಸಿರೇ ಕಟ್ಟಿ ದಂತಾಯಿತು. "ಇಲ್ಲ, ಇಲ್ಲ ಅವನು ಕೊಡಮಾಡಿದ್ದರೂ, ನಾನು ಆ ವಿಷ

ಯದಲ್ಲಿ ವಿಚಾರ ಕೂಡ ಮಾಡಿಲ್ಲ" ಎಂದನು.

"ಏನಿದ್ದರೂ, ನಾನು ಅವನೊಡನೆ ಹೋಗುವದಕ್ಕೆ ನೀನು ಒಪ್ಪಿದ್ದಿಯಲ್ಲಾ" ಸುನೇತ್ರೆಯು ನಿರಾಶೆಯ ಕಹಿ ಮೋರೆಯಿಂದ ಹೇಳಿ ಕಾರಭಾರಿಯ ಕಡೆಗೆ ಹೊರಳಿ "ಮೂರು ಸಾವಿರ ರೂಪಾಯಿ ಎಲ್ಲಿದೆ?" ಎಂದು ಕೇಳಿದಳು.

"ಇಲ್ಲ, ಇಲ್ಲ" ಶ್ರೀಧರನು ಒದರಿದನು.

"ಅವನು ಕೊಡುತ್ತೇನೆಂದರೂ ನಾನು ಆ ಹಣವನ್ನು ಮುಟ್ಟಲಿಲ್ಲ"

"ಯಾಕೆ?" ಸುನೇತ್ರೆ ಕೇಳಿದಳು "ನನ್ನನ್ನು ಧರ್ಮಾರ್ಥವಾಗಿ ಅವನಿಗೆ ಬಕ್ಷೀಸ ಕೊಡಬೇಕೆಂದು ಮಾಡಿರುವಿಯಾ? ಹೇಗಿದ್ದರೂ ಇದು ವಿಕ್ರಯ. ಮಾರಿದ ವಸ್ತುವಿನ ಮೂಲ್ಯ, ಮಾರಾಟ ಮಾಡಿದವನಿಗೆ ಸಿಗುವದು ವ್ಯವಹಾರದ ನೀತಿ. ನೀನು ಅವುಗಳನ್ನು ತಕ್ಕೊಳ್ಳಬೇಕೆಂದು ನನ್ನಿಚ್ಛೆ, ಇಚ್ಛೆ ಅಷ್ಟಲ್ಲಾ, ಆಗ್ರಹ.

ಶ್ರೀಧರನು ಮೆಲ್ಲಗೆ ಕತ್ತನ್ನು ಮೇಲಕ್ಕೆತ್ತಿದನು "ಮೂರು ಸಾವಿರ ಅವನು ರೋಖ ಕೊಡುವದಿಲ್ಲ. ಅಪ್ಸರಾ ಮಂದಿರದ ಮಾತೆಗೆ ಕೊಡುವದಕ್ಕಾಗಿ ಮೂರು ಸಾವಿರ ರೂಪಾಯಿ ನಾನೂ ಅರವಿಂದನೂ ಸಾಲ ತಕ್ಕೊಂಡಿದ್ದೆವು. ಆ ಸಾಲದ ಬಗ್ಗೆ ನಾನೂ ಅವನೂ ಮಾಡಿಕೊಟ್ಟ ದಸ್ತಾವೇಜು ಈಗ ನಾರ್ವೆಕರರ ಕೈಗೆ ಬಂದಿವೆ. ಆ ರೂಪಾಯಿ ಕೊಟ್ಟವರು ಅವರೇ ಅಂತೆ. ಅದು ನನಗೆ ನಿನ್ನೆಯ ತನಕ ಗೊತ್ತಿರಲಿಲ್ಲ. ಆ ಹಣ ತರಲು ಅಂದು ಅರವಿಂದನೊಬ್ಬನೇ ಹೋಗಿದ್ದನು. ಆ ರೂಪಾಯಿ ನಾರ್ವೆಕರರು ಕೊಟ್ಟದ್ದೆಂದು ಅವನು ನನಗೆ ಹೇಳಿರಲೇ ಇಲ್ಲ. ನಾರ್ವೆಕರರು ಆ ದಸ್ತಾವೇಜುಗಳನ್ನು ಹರಿದು ಹಾಕಿ ಸಾಲದ ಹೊರೆಯಿಂದ ನಮ್ಮನ್ನು ವಿಮೋಚನೆಗೊಳಿಸುತ್ತಾರೆ. "ಓಹೊ, ಅಂದರೆ, ಈ ವ್ಯವಹಾರದಲ್ಲಿ ಮುಂಗಡ ಹಣ ಅವನು ಮೊದಲೇ ಕೊಟ್ಟಾಗಿದೆ. ಸರಿ, ನಾನು ಯಾವಾಗ ಅವನೆಡೆಗೆ ಹೋಗಬೇಕು?" ವಿಲಕ್ಷಣವಾಗಿ ನಗುತ್ತಾ ಸುನೇತ್ರೆಯು ಕೇಳಿದಳು.

ಆ ವಿಲಕ್ಷಣ ನಗು ಅವಳು ಮಾಡಿದ ನಿರ್ಧಾರದ ಸೂಚಕವಾಗಿತ್ತು. ಆದರೆ ಶ್ರೀಧರನಿಗಾಗಲಿ, ಆ ಕಾರಭಾರಿಗಾಗಲಿ ಅದರ ಸಂಕೇತ

ತಿಳಿಯಲಿಲ್ಲ.

"ನೀನು ಹೇಳಿದಾಗ" ಎಂದನು ಶ್ರೀಧರ. ಹಾಗೂ ಪುನಃ ರೋದಿಸಿ ತೊಡಗಿದನು.

"ಅಳಬೇಡ ಶ್ರೀಧರ, ಆದದ್ದೆಲ್ಲಾ ನೆಟ್ಟಗೇನೇ ಆಯಿತು. ಯಾವದಕ್ಕಾದರೂ ಚಿಂತೆಪಡುವ ಕಾರಣವಿಲ್ಲ. ಆದರೆ ನಾರ್ವೇಕರನನ್ನು ಕೂಡಿಕೊಳ್ಳಬೇಕಾದರೆ ನನ್ನ ಕೆಲವು ಶರ್ತುಗಳಿವೆ. ಅವುಗಳನ್ನು ಅವನು ಪಾಲಿಸಬೇಕು. ನನ್ನನ್ನು ಅಪ್ಸರಾ ಮಂದಿರದಿಂದ ವಿಮೋಚನೆಗೊಳಿಸಲು ಐದು ಸಾವಿರ ರೂಪಾಯಿ ನೀನು ಕೊಟ್ಟಿದ್ದಿಯಷ್ಟೆ. ಆ ಹಣ ನಿನಗೆ ಅವರು ಕೊಡಬೇಕು. ಅಂದರೆ ಸಾಲದ ಮೂರು ಸಾವಿರ ವಜಾ ಮಾಡಿ ಬಾಕಿ ಎರಡು ಸಾವಿರ ಅವರು ರೋಖ ನಿನಗೆ ಕೊಡಬೇಕು. ಇದು ಮೊದಲನೇ ಶರ್ತ. ಎರಡನೇದೆಂದರೆ ನಾರ್ವೇಕರನು ಲಕ್ಷಾಧೀಶನು. ಅವರ ನಚ್ಚಿನ ಉಪಪತ್ನಿಯಾಗಿ ನಾನು ಅವರಲ್ಲಿಗೆ ಹೋಗುವಾಗ ನವವಧುವಿನಂತೆ ನನ್ನನ್ನು ಸಂಭ್ರಮದ ಮೆರವಣಿಗೆಯಲ್ಲಿ ಒಯ್ಯಬೇಕು. ನಾನು ನಾಳೆ ನನ್ನ ಹುಟ್ಟೂರಾದ ಸಾಂಖಲಿಗೆ ಹೋಗಿ ದತ್ತದರ್ಶನ ಮಾಡಿಕೊಂಡು ಮುಂದಿನ ಶುಕ್ರವಾರದ ಸ್ಟೀಮರಿನಲ್ಲಿ ಕಾರವಾರಕ್ಕೆ ಬರುತ್ತೇನೆ. ನಾರ್ವೇಕರನು ನನ್ನನ್ನು ಸ್ಟೀಮರಿನಲ್ಲಿ ಎದುರುಗೊಂಡು ಸಾಲಂಕೃತವಾದ ಸುಂದರ ದೋಣಿಯಲ್ಲಿ ನನ್ನನ್ನು ಸದಾಶಿವಗಡಕ್ಕೆ ಒಯ್ಯಬೇಕು. ಇನ್ನೊಂದು ಅದೇ ರೀತಿ ಸಜ್ಜುಗೊಳಿಸಿದ ದೋಣಿಯಲ್ಲಿ ನನ್ನ ದೋಣಿಯ ಮುಂದೆ ಅವನು ಹೋಗಬೇಕು. ಈ ಶರ್ತುಗಳನ್ನು ಅವನಿಗೆ ತಿಳಿಸಿ ಒಪ್ಪಿಗೆ ಇದೆಯೊ ಇಲ್ಲವೊ ಎಂಬುದನ್ನು ಕೇಳಿಕೊಂಡು ಬರಲು ನಿನ್ನ ಸೋದರ ಮಾವನಿಗೆ ಹೇಳು"

ಆಗ ಕಾರಭಾರಿಯು "ಅವನನ್ನು ಕೇಳುವ ಅವಶ್ಯಕತೆ ಇಲ್ಲ. ಅವರ ಕಾರಕೂನ ಇಲ್ಲೇ ಇದ್ದಾನೆ. ನಿಮ್ಮ ಮಾವ ಶರ್ತಗಳಿಗೂ ತನ್ನ ಒಪ್ಪಿಗೆ ಇದೆಯೆಂದು ನಾರ್ವೇಕರನು ಮೊದಲೇ ತಿಳಿಸಿದನಂತೆ. ನಿಮ್ಮ ಶರ್ತುಗಳನ್ನು ಅವನು ಈಗಲೇ ಹೋಗಿ ಅವರಿಗೆ ತಿಳಿಸುತ್ತಾನೆ. ಅಷ್ಟಾದರೆ ಸಾಕು" ಎಂದನು.

"ಹಾಗಾದರೆ ಸರಿ, ನಾನು ನಾಳೆಯೇ ಸಾಂಖಳಿಗೆ ಹೊರಡುತ್ತೇನೆ.

ಅಲ್ಲಿಗೆ ಹೋಗಿ ಬರಲು ಮೋಟಾರ ಕಳಿಸಬೇಕೆಂದು ನಾರ್ವೇಕರನಿಗೆ ತಿಳಿಸು. ಇನ್ನೊಂದು ಸಣ್ಣ ಶರ್ತು. ನನ್ನೊಡನೆ ಶ್ರೀಧರ, ನೀನು ಬರಬೇಕು. ನಮ್ಮ ಪ್ರಥಮ ಭೆಟ್ಟಿಯು ಕಾನ್ಹೇರಿಯ ಬೌದ್ಧ ವಿಹಾರದಲ್ಲಿ ಆಗಿತ್ತೆಂಬುದು ನಿನಗೆ ನೆನಪಿದೆಯೇ ? ನಮ್ಮ ಪರಿಚಯದ ಅಂತ್ಯವನ್ನು ನನ್ನ ತಾಯ್ನಾಡಿನ ದೇವಸ್ಥಾನಗಳಲ್ಲಿ ಮಾಡೋಣ. " ಕಾರಭಾರಿಯ ಕಡೆಗೆ ತಿರುಗಿ "ಖಾನ ಸಾಹೇಬ, ನೀವೂ ನಮ್ಮೊಡನೆ ಬನ್ನಿರಿ. ನಮಗೂ ಧೈರ್ಯ ತಪ್ಪದಂತೆ ಆಯಿತು. ಅಲ್ಲದೆ ನೀವು ಬಂದರೆ ಶ್ರೀಧರನ ಸೋದರ ಮಾವನಿಗೂ ಅಂಜಿಕೆ ತಪ್ಪಿತು."

ತರಂಗ ೧೩.

ಸುನೇತ್ರೆ, ಶ್ರೀಧರ ಹಾಗೂ ಅವನ ತಂದೆಯ ಕಾರಭಾರಿ, ಈ ಮೂರು ಜನರು ಮರುದಿನ ಗೋವೆಗೆ ಹೊರಟರು. ಮೊದಲು ಸಾಂಖಳಿಗೆ ಹೋಗಿ ಅಲ್ಲಿನ ದತ್ತಮಂದಿರದಲ್ಲಿ ಸುನೇತ್ರಾದೇವಿಯು ಪೂಜಾದಿಗಳನ್ನು ಮಾಡಿಸಿ ತ್ರಿಮೂರ್ತಿಯಾದ ದತ್ತಾತ್ರೇಯನಿಗೆ ಪ್ರಾರ್ಥನೆ ಮಾಡಿ ಪ್ರಸಾದ ಸ್ವೀಕರಿಸಿ ಆ ನಂತರ ಗೋವೆಯ ಇತರ ಮುಖ್ಯ ದೇವಸ್ಥಾನಗಳನ್ನು ಸಂದರ್ಶಿಸಿ ದೇವರಿಗೆ ಕೈಮುಗಿದು ಗೋವೆಯಿಂದ ಮರುಳವಾಗ ಪುನಃ ಸಾಂಖಳಿಗೆ ಹೋಗಿ ದತ್ತ ದರ್ಶನ ಮಾಡಿದರು. ಅಂದು ಗುರುವಾರವಿತ್ತು.

ಸುನೇತ್ರೆಯು ದೇವಸ್ಥಾನದಲ್ಲಿ ಒಂದು ಭಾರೀ ಔತಣವನ್ನು ಮಾಡಿಸಿದಳು "ನೋಡು, ಶ್ರೀಧರ, ಇದು ನನ್ನ ಕೊನೆಯ ದಿನ, ಅಂದರೆ ನಿನ್ನೊಡನೆ, ಅದನ್ನು ನನ್ನ ಜನ್ಮಸ್ಥಾನದಲ್ಲೇ ಕಳೆಯಬೇಕೆಂದು ನಾನು ನಿನ್ನನ್ನು ಇಲ್ಲಿಗೆ ಕರೆತಂದೆ " ಎಂದಳು.

"ಗೋವೆಗೆ ಹೋದ ಹಾಗೂ ಅಲ್ಲಿ ನಡೆದ ಎಲ್ಲಾ ಸಂಗತಿಗಳನ್ನು ನನಗೆ ಆ ಕಾರಭಾರಿಯು ಹೇಳಿದನು." ಅರವಿಂದನಂದನು "ಅವನು ಇದನ್ನೆಲ್ಲಾ ವರ್ಣಿಸುವಾಗ ಅವನ ಕಂಠವು ದುಃಖದಿಂದ ತುಂಬಿ ಬಂದು ಗದ್ಗದಿತವಾಗುತ್ತಿತ್ತು."

"ನೋಡಿರಿ, ಕಸಬೇಕರ ರಾಯರೇ " ಅವನು ಅನ್ನುತ್ತಿದ್ದನು "ಗೋವೆ

ಯಿಂದ ಹಿಂತಿರುಗಿದ ದಿನವೇ ಅವಳು ಆತ್ಮಸಮರ್ಪಣೆ ಮಾಡಿದ್ದನ್ನು ಯೋಚಿಸಿದರೆ, ಗೋವೆಯಲ್ಲಿ ನಾವು ಇದ್ದ ಆ ಎರಡು, ಮೂರು ದಿನಗಳಲ್ಲಿ ಅವಳ ವರ್ತನೆಯ ಬಗ್ಗೆ ನಮಗೆ ಆಶ್ಚರ್ಯವೆನಿಸುತ್ತದೆ. ಶ್ರೀಧರನು ಅಪರಾಧಿಯಂತೆ ಯಾವಾಗಲೂ ಕೆಳಮೋರೆಯಿಂದಿದ್ದರೂ ಅವಳು ಅಲ್ಲಿ ಸದಾ ಪ್ರಸನ್ನ ಚಿತ್ತಳಾಗಿಯೇ ಇರುತ್ತಿದ್ದಳು. ಇದನ್ನು ನೋಡಿ ನನಗೆ ಶ್ರೀಧರನನ್ನು ಬಿಟ್ಟು ನಾರ್ವೆಕರನನ್ನು ಸೇರುವದರಲ್ಲಿ ಅವಳಿಗೆ ಏನೂ ದುಃಖವಿಲ್ಲವೊ ಎಂಬ ಸಂಶಯು ಕೂಡ ಬಂದಿತ್ತು. ಅಲ್ಲಿನ ಅವಳ ಉಲ್ಲಾಸವನ್ನು ನೋಡುವಾಗ ಅವಳು ಇನ್ನೆರಡು ದಿನಗಳಲ್ಲೇ ಪ್ರಾಣತ್ಯಾಗ ಮಾಡಲು ನಿಶ್ಚಯಿದ್ದಾಳೆಂಬ ಅನುಮಾನವು ಕನಸಿನಲ್ಲೂ ಕೂಡ ಬರುತ್ತಿದ್ದಿಲ್ಲ."

ಗುರುವಾರ ಸಂಜೆಯೊಳಗಾಗಿ ಮುರಗಾಂವಕ್ಕೆ ತಲುಪಿ ಮೋಟಾರ ವಾಪಸು ಕಾರವಾರಕ್ಕೆ ಕಳಿಸಲಾಯಿತು. ಮೂವರೂ ಮುರಗಾಂವ ಬಂದರದಲ್ಲಿ ಕಾರವಾರಕ್ಕೆ ಹೋಗಲು ಹಡಗು ಹತ್ತಿದರು.

ಕೆಲವು ದಿನಗಳ ಹಿಂದೆ ಅದೇ ಹಡಗದಲ್ಲಿ ಶ್ರೀಧರ, ಸುನೇತ್ರೆಯರು ಕಾರವಾರಕ್ಕೆ ಬಂದಿದ್ದರು. ಆದರೆ ಆ ದಿನದ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಎಷ್ಟು ಅಂತರ ! ಅಂದು ಅಪ್ಸರಾಮಂದಿರದ ಭೌತಿಕ ಸುಖೋಪಭೋಗಗಳನ್ನು ತ್ಯಜಿಸಿ ಶ್ರೀಧರನ ಪ್ರೇಮದ ಮಡದಿಯಾಗಲು ಬಂದಿದ್ದಳು. ಇಂದು ಅದೇ ಶ್ರೀಧರನಿಂದ ತ್ಯಜಿಸಲ್ಪಟ್ಟು ನಾರ್ವೆಕರನೊಡನೆ ಭೌತಿಕ ಸುಖೋಪಭೋಗಗಳು ವಿಪುಲವಿದ್ದರೂ ಪ್ರೇಮರಹಿತ ಜೀವನದಲ್ಲಿ ಭಾಗಿಯಾಗಲು ಹೋಗುತ್ತಿದ್ದಳು !

ಹಡಗು ಮುಂಜಾನೆ ಕಾರವಾರ ಬಂದರಕ್ಕೆ ತಲುಪಿತು. ಸುನೇತ್ರೆಯು ಮೊದಲೇ ಹೇಳಿಕಳಿಸಿದಂತೆ ನಾರ್ವೆಕರನ ಕಾರಕೂನನು ಎರಡು ಸಾವಿರ ರೂಪಾಯಿ ತಕ್ಕೊಂಡು ಹಡಗದಮೇಲೆ ಬಂದನು. ಅವುಗಳನ್ನು ಎಣಿಸಿ ಶ್ರೀಧರನ ಕೈಯಲ್ಲಿ ಕೊಟ್ಟದ್ದಾಯಿತು. ಹಡಗು ಮುರಗಾಂವ ಬಿಟ್ಟೊಡನೆ ಸುನೇತ್ರೆಯು ಹಯಾತಖಾನನ್ನು ಬಳಿಗೆ ಕರೆದು "ನೋಡಿರಿ, ಖಾನ ಸಾಹೇಬ, ನಾಳಿನಿಂದ ನಾನು ನಿನ್ನ ಚಿಕ್ಕ ಧನಿಗಳನ್ನು ಅಗಲಿ ಹೋಗುವೆ. ದೊಡ್ಡ ಧನಿ

ಗಳ ಸೇವೆಯನ್ನು ಮನಃಪೂರ್ವಕವಾಗಿ ಮಾಡಿದಂತೆ ಚಿಕ್ಕ ಧನಿಗಳ ಸೇವೆಯನ್ನೂ ಮಾಡು. ಇಕೊಳ್ಳಿ, ಇದು ನನ್ನ ನೆನಪಿಗಾಗಿ, ಮುಸಲ್ಮಾನರಿಗೆ ಪವಿತ್ರವಾದ ಹಸರು ಬಣ್ಣದ ವಸ್ತು" ಎಂದು ಹೇಳಿ ಒಂದು ಅಮೂಲ್ಯವಾದ ಪಚ್ಚೆಕಲ್ಲಿನ ಉಂಗುರವನ್ನು ಅವನು ತನಗೆ ಬೇಡವೆಂದರೂ ಆಗ್ರಹಪಡಿಸಿ ಅವನಿಗೆ ಕೊಟ್ಟಳು.

ಸ್ಟೀಮರು ಕಾರವಾರವನ್ನು ತಲುಪಿತು. ಸುನೇತ್ರೆಯು ನವ ವಧುವಿಗೆ ಒಪ್ಪುವ ರೀತಿಯಲ್ಲಿ ತನ್ನ ನೈಸರ್ಗಿಕ ಸೌಂದರ್ಯವನ್ನು ವರ್ಧಿಸುವ ಅಮೂಲ್ಯ ಒಡವೆಗಳನ್ನು ಧರಿಸಿ ಮಿರುಗುವ ಜರತಾರಿಯ ಕೆಂಪು ರೇಶ್ಮೆಯ ಸೀರೆಯನ್ನುಟ್ಟು ತನ್ನ ಸ್ವಾಗತಕ್ಕೆ ಸಿದ್ಧಳಾದಳು. ನಾವಿಕರನು ಹಡಗಿನ ಮೇಲೆ ಬರಬಾರದೆಂದೂ ಡೋಣಿಯಲ್ಲೇ ತನ್ನನ್ನು ಸ್ವಾಗತಿಸಬೇಕೆಂದೂ ಅವಳು ಮೊದಲೇ ಹೇಳಿಕಳಿಸಿದ್ದಳು.

ಕಾರವಾರ ಬಂದರದ ದೃಶ್ಯಗಳು ದೃಷ್ಟಿಗೆ ಬೀಳಲು ಸುರುವಾದಾಗ ಶ್ರೀಧರನನ್ನು ಕರೆದು "ನೋಡು, ಶ್ರೀಧರ, ನಾನು ನನ್ನ ಹೃದಯ, ಆತ್ಮ ಎಲ್ಲವನ್ನೂ ನಿನಗೆ ಅರ್ಪಣೆ ಮಾಡಿದೆ. ನಮ್ಮಿಬ್ಬರ ಪ್ರೇಮಕ್ಕಾಗಿ ಎಲ್ಲವನ್ನೂ ತ್ಯಜಿಸಿ ನಿನ್ನೊಡನೆ ಬಂದೆ. ನಮ್ಮ ಅಗಾಧಪ್ರೇಮ ಹಾಗೂ ನನ್ನ ವಿನಯಶೀಲತೆಯನ್ನು ನೋಡಿ ಇಂದಲ್ಲ, ಮುಂದಾದರೂ ನಿನ್ನ ಹೆತ್ತವರು ನನ್ನ ಮೇಲೆ ಕನಿಕರ ಪಟ್ಟು, ನನ್ನನ್ನು ಸೊಸೆಯೆಂದು ಸ್ವೀಕರಿಸುವರೆಂದು ನನಗೆ ಆಸೆ ಇತ್ತು. ನಿನ್ನ ತಂದೆಯು ನಿನಗೆ ಧನ ಸಹಾಯ ಮಾಡದಿದ್ದರೆ ನೀನು ನಿರ್ಗತಿಕನಾಗುವಿಯೆಂದು ನನಗೆ ಗೊತ್ತಿಲ್ಲದಿರಲಿಲ್ಲ. ನನ್ನನ್ನು ಮದುವೆಯಾಗಿ ನೀನು ಬಡತನದ ಬೆಂಕಿಯಲ್ಲಿ ಬೇಯದಂತೆ ನಾನು ತಕ್ಕ ವ್ಯವಸ್ಥೆಯನ್ನು ಮಾಡಿದ್ದೆನು. ಅದಕ್ಕಾಗಿಯೇ ನಾನು ನನ್ನ ಸಮಾಗಮಕ್ಕಾಗಿ ಹಾತೊರೆಯುತ್ತಿದ್ದ ಶ್ರೀಮಂತ ಕುನ್ನಿ ಮಕ್ಕಳನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದೆನು. ಹಾಗೂ ಅವರೆಲ್ಲರಿಂದ ಅಮೂಲ್ಯ ಆಭರಣಗಳನ್ನು "ಮಾತೆಗೆ" ತಿಳಿಯದಂತೆ ವಸೂಲ ಮಾಡುತ್ತಿದ್ದೆನು" ಇಷ್ಟು ಹೇಳಿ ಮಾಲತಿಯು ನಾವು ಮುಂಬಯಿಯಿಂದ ಹೊರಡುವ ಮುನ್ನ ಅವಳ ಮನೆಯಲ್ಲಿ ಮೇಜವಾನಿಯ ದಿವಸ ಸುನೇತ್ರೆಗೆ ಕೊಡಲು ನನ್ನ ಕೈಯಲ್ಲಿ ಕೊಟ್ಟಿದ್ದ ಶ್ರೀಗಂಧದ ಪೆಟ್ಟಿಗೆಯನ್ನು ಹೊರತೆಗೆದು

ಆದರ ಒಳಗಿದ್ದುದನ್ನು ತೋರಿಸಿದಳು "ನೋಡು, ಇವೇ ಈ ಆಭರಣಗಳು. ಇವುಗಳ ಬೆಲೆ ಇಪ್ಪತ್ತೈದು ಸಾವಿರಕ್ಕೆ ಮಿಕ್ಕೀತು. ಯಾರಿಗೂ ಗೊತ್ತಾಗಬಾರದೆಂದು ಇವುಗಳನ್ನು ಮಾಲತಿಯ ಹತ್ತರ ಇಡಲಿಕ್ಕೆ ಕೊಟ್ಟಿದ್ದೆನು. ನನ್ನ ಮೇಲಿನ ನಿನ್ನ ಪ್ರೇಮವು ಅಚಲವಾಗಿದ್ದರೆ, ಇದು ನಮಗೆ ಎಷ್ಟೋ ವರ್ಷಗಳ ವರೆಗೆ ಸುಖದಲ್ಲಿರಲು ಸಾಕಾಗುತ್ತಿತ್ತು.

ನಿನ್ನಲ್ಲಿ ಈ ಮೊದಲೇ ಯಾಕೆ ಹೇಳಲಿಲ್ಲವೆಂದು ನೀನು ಕೇಳಬಹುದು. ನಾನು ನಿನ್ನ ಸತ್ವಪರೀಕ್ಷೆ ಮಾಡಬೇಕೆಂದಿದ್ದೆನು. ನಾನು ನಿನ್ನಲ್ಲಿ ಅಚಲ ಪ್ರೇಮ, ವಿಶ್ವಾಸಗನ್ನಿಟ್ಟೆ. ನಮ್ಮ ಪ್ರೇಮಕ್ಕಾಗಿ ಯಾವದೇ ಗಂಡಾಂತರವನ್ನು ಎದುರಿಸಲೂ, ಯಾವದೇ ಸಂಕಷ್ಟವನ್ನು ಸಹಿಸಲು ನಾನು ಸಿದ್ಧಳಿದ್ದೆ. ಆದರೆ ಸತ್ವ ಪರೀಕ್ಷೆಯ ಸಂಧಿಗ್ಧ ಸಮಯ ಬಂದಾಗ, ನೀನು ಕುನ್ನಿಯಂತೆ ಬಾಲ ಮಡಚಿ ಹಿಂಜರಿದೆ. ಯಾರನ್ನು ವಿವಾಹವಾಗುತ್ತೇನೆಂದು ದೈವ ಸಾಕ್ಷಿಯಾಗಿ ಶಪಥ ತೆಗೆದುಕೊಂಡಿದ್ದಿಯೋ ಅಂತಹ, ನಿನ್ನನ್ನೇ ಸರ್ವಸ್ವವಾಗಿ ಎಣಿಸಿದ ಒಬ್ಬ ಮುಗ್ಧ ಬಾಲಿಕೆಯನ್ನು ಆ ನೀಚ ನಾರ್ವೇಕರನಿಗೆ ಮಾರಲು ತಯಾರಾದೆ.

ವಿಶ್ವಾಸಕ್ಕೆ ಅಯೋಗ್ಯವಾದ ನಿನ್ನಲ್ಲಿ ವಿಶ್ವಾಸವಿಟ್ಟದ್ದರ ಪ್ರಾಯಶ್ಚಿತ್ತವನ್ನು ನಾನು ಅನುಭವಿಸಲೇ ಬೇಕಾಗಿದೆ. "ಇಷ್ಟುಹೇಳಿ ಶ್ರೀಧರನು ಏನಾದರೂ ಹೇಳುವ ಮೊದಲೇ ಅವುಗಳ ಸಮೇತ ಆ ಶ್ರೀಗಂಧದ ಪೆಟ್ಟಿಗೆಯನ್ನು ಮೇಲಕ್ಕೆ ಎತ್ತಿ "ಇನ್ನು ಈ ಅಭರಣಗಳ ಅವಶ್ಯಕತೆ ಇಲ್ಲ." ಎಂದು ಹೇಳಿ ಅದನ್ನು ಸಮುದ್ರದಲ್ಲಿ ಎಸೆದಳು.

× × × + ×

ಕಾರವಾರವು ಜಿಲ್ಲೆಯ ಕೇಂದ್ರವಾದರೂ ಚಿಕ್ಕ ಊರು. ಇಲ್ಲಿ ವಿಶೇಷ ಘಟನೆಗಳು ಸಂಭವಿಸುವದು ಇಂಗ್ರೇಜಿಯಲ್ಲಿ ಹೇಳುವಂತೆ ಚಂದ್ರನು ನೀಲಿ ಬಣ್ಣವನ್ನು ತಳೆದಾಗ ಮಾತ್ರ. ಹರಿರಾಮ ನಾರ್ವೇಕರನು ಮುಂಬಯಿಯ ಪ್ರಥಮ ಶ್ರೇಣಿಯ ಕಲಾವಂತಿಣಿಯನ್ನು ತರುವವರಿದ್ದಾರೆಂದೂ ಅವಳ ಸ್ವಾಗತಕ್ಕೆ ಸಾಲಂಕೃತ ದೋಣಿಗಳೇ ಮುಂತಾದ ಅಪೂರ್ವ ಸಿದ್ಧತೆ

ನಡೆದಿರುವದೆಂದೂ ಊರೆಲ್ಲಾ ಸುದ್ದಿ ಹಬ್ಬಿತ್ತು. ಈ ವಿಶೇಷ ಸಮಾರಂಭ ವನ್ನು ನೋಡಲು ಆ ದಿನ ಮುಂಜಾನೆ ಜಾತ್ರೆಯಂತೆ ಜನರು ಸಮುದ್ರ ತೀರದಲ್ಲಿ ಕಿಕ್ಕಿರಿದು ನೆರೆದಿದ್ದರು.

ಹಾರಿ ಹೋದ ಹಕ್ಕಿಯು ಸುಲಭವಾಗಿ ತನ್ನ ಬಲೆಯಲ್ಲಿ ಬಿದ್ದುದನ್ನು ನೋಡಿ ತುಂಬಾ ಆನಂದಿತನಾದ ಹರಿರಾಮ ಸಾರ್ವೆಕರನು ತನ್ನ ಮಿತ್ರರ ನ್ನೆಲ್ಲಾ ಅಂದಿನ ಸಮಾರಂಭಕ್ಕೆ ಆಮಂತ್ರಿಸಿದ್ದನು. ಸುಂದರವಾಗಿ ಸಿಂಗರಿ ಸಲ್ಪಟ್ಟ ಮೂರು ದೋಣಿಗಳು ಹಡಗದ ಬದಿಗೆ ಬಂದು ಲಂಗರ ಹಾಕಿದವು. ಹರಿರಾಮ ಸಾರ್ವೆಕರನು ಹಡಗದಲ್ಲೇ ಸುನೇತ್ರಾದೇವಿಗೆ ಸ್ವಾಗತವನ್ನು ನೀಡಿ, ಶುಭವರ್ಣವಾದ ಶುಭ್ರ ಕೆಂಪು ಬಣ್ಣದ ರೇಶಿಮೆಯ ಅಂವೆಯಿಂದ ಆಚ್ಛಾದಿತವಾದ ಆಸನವಿರುವ ಹಾಗೂ ವಿವಿಧ ವರ್ಣಗಳ ನಾನಾ ಅಲಂಕಾ ರಗಳಿಂದ ಸೊಬಗಿನ ಸುಗ್ಗಿಯೇ ಬೀರಿದಂತಿದ್ದ ದೋಣಿಯಲ್ಲಿ ಕುಳ್ಳಿರಿಸಿ ದನು. ಅದೇ ರೀತಿಯಲ್ಲಿ ಸಿಂಗರಿಸಲ್ಪಟ್ಟ ಹಳದಿ ರೇಶಿಮೆಯಿಂದ ಮುಚ್ಚಿದ ಆಸನಗಳಿದ್ದ ದೋಣಿಯಲ್ಲಿ ಸಾರ್ವೆಕರನೂ ಅವನ ಗೆಳೆಯರೂ ಕುಳಿತರು. ಎಲ್ಲಕ್ಕೂ ಮುಂದೆ ಬಂದು ದೋಣಿಯಲ್ಲಿ ಬೇಂಡ ವಾದ್ಯ ಹಾಗೂ ವಾಲಗ (ದೇಶಿಯ ವಾದ್ಯ) ದವರು ಇದ್ದರು. ಮಂಜುಳ ವಾದ್ಯಗಳ ಸಿನಾದದ ಸಂಭ್ರಮದಲ್ಲಿ ಈ ಅಪೂರ್ವ ನೌಕಾ ಮೆರವಣಿಗೆಯು ಹೊರಟಿತು.

ಅರವಿಂದನು ಮುಂದುವರಿಸಿದನು "ನಾನೇನೂ ಇದನ್ನು ನನ್ನ ಕಣ್ಣಿ ನಿಂದ ನೋಡಲಿಲ್ಲ. ನೋಡಿದ ಎಷ್ಟೋ ಮಂದಿ ನಿಮಗೆ ಇಲ್ಲಿ ಭೆಟ್ಟಿಯಾಗಿ ರಬಹುದು. ಹಾಗೂ ಅವರಿಂದ ನೀವು ಪ್ರತ್ಯಕ್ಷದರ್ಶಿ ವೃತ್ತಾಂತವನ್ನು ಕೇಳಿರಬಹುದು. ಸುನೇತ್ರೆಯನ್ನು ಆ ದಿನ ನೋಡಿದವರು ಅಂತಹ ಸೌಂದರ್ಯ ರಾಶಿಯನ್ನು ಪ್ರತ್ಯಕ್ಷ ಕಣ್ಣಿನಿಂದ ಕಾಣುವ ಸುಯೋಗವು ಕಾಲತ್ರಯದಲ್ಲೂ ಸಿಗಲಿಕ್ಕಿಲ್ಲವೆಂದು ಹೇಳುತ್ತಾರೆ. ಅಂದು ಅವಳು ದೋಣಿಯ ನಡುಭಾಗದಲ್ಲಿ ಒಂದು ಎತ್ತರವಾದ ಆಸನದ ಮೇಲೆ ನಿಂತು ದಡದ ಮೇಲೆ ನೆರೆದವರೆಲ್ಲ ರಿಗೆ ವಿನಯದಿಂದ ತಲೆಬಾಗಿಸುತ್ತಿದ್ದಳಂತೆ. ಅವಳು ಆಗ ಉಟ್ಟ ಸೀರೆ, ತೊಟ್ಟ ರವಿಕೆ, ಧರಿಸಿದ ಆಭರಣಗಳು ಇವುಗಳ ನಾನಾ ವಿಧದ ವರ್ಣನೆಯು ಕಾರವಾರದ ಸ್ತ್ರೀಯರ ಬಾಯಿಯಲ್ಲಿ ಈಗ ನಿತ್ಯದ ಮಾತಾಗಿದೆ.

ನವವಧುವಿನ ನೌಕಾ ಮೆರವಣಿಗೆಯು ತುಸು ದೂರ ಮುಂದೆ ಹೋದ ಮೇಲೆ ಸುನೇತ್ರಾದೇವಿಯು ವಾದ್ಯವನ್ನು ನಿಲ್ಲಿಸುವಂತೆ ಹೇಳಿದ್ದಳಂತೆ. ಹಾಗೂ ತಾನೂ ಕೊಳಲನ್ನು ಬಾರಿಸುತ್ತಾ ಸುಶ್ರಾವ್ಯಸ್ವರದಲ್ಲಿ ಒಂದು ಮರಾಠಿ ಭಾವಗೀತೆಯನ್ನು ಹಾಡಿದಳಂತೆ. ನಾವು ಕಾರವಾರಕ್ಕೆ ಬರುವಾಗ ರಾತ್ರಿ ಹಡಗದಲ್ಲಿ ಹಾಡಿದ ಗೀತೆಯೇ ಅದು.

ಜಗತ್ತು ಒಂದು ಶೋಕಸಾಗರ
ಜೀವನವೆಂದರೆ ದುಃಖದ ಪರಂಪರೆ
ಈ ನಮ್ಮ ಭಾವಗೀತೆಯು ಕೊನೆಗೊಂಡಿತು
ಪ್ರೇಮದ ಪೂರ್ಣಚಂದ್ರನು ಒಡೆದು ಚೂರಾದನು
ಪ್ರೇಮವು ಸಫಲವಾಗದೆ ಅವಳ ಜೀವವು ಈ ಕೊಳದಲ್ಲಿ
ಲೀನವಾಯಿತು.

ಗೀತವು ಮುಗಿಯುವಾಗ ದೋಣಿಗಳು ಕಾಳೀನದಿಯ ಸಂಗಮವನ್ನು ಸಮೀಪಿಸಿದ್ದುವು. ಪುನಃ ಜೋರಿನಿಂದ ವಾದ್ಯಗಳು ಮೊಳಗಿದವು. ಜನರ ಲಕ್ಷವು ಒಮ್ಮೆಲೆ ಪ್ರಾರಂಭವಾದ ವಿವಿಧ ವಾದ್ಯಗಳ ಸ್ವರ ಸಮುಚ್ಚಯದ ಕಡೆಗೆ ತಿರುಗಿ ಲಕ್ಷವು ಇಬ್ಭಾಗವಾದ ಕ್ಷಣದಲ್ಲೇ ಸುನೇತ್ರಾದೇವಿಯು ತನ್ನ ಆಭರಣಗಳನ್ನು ಸಮುದ್ರದಲ್ಲಿ ಬಿಸುಟು ತಾನೂ ಸಮುದ್ರದಲ್ಲಿ ಧುಮುಕಿದಳು. ವಾದ್ಯಗಳ ಮಂಜುಳ ಘೋಷದಿಂದಾಗಿಯೂ ಹಾಗೂ ಕನಸಿನಲ್ಲಿ ಕೂಡ ಯಾರೂ ಅಪೇಕ್ಷಿಸದಂತಹ ಘಟನೆಯಾದುದರಿಂದಲೂ ಕೂಡಿದ ಮಂದಿಯ ಮನಸ್ಸಿಗೆ ಫಕ್ಕನೆ ಇದು ಗೋಚರವಾಗಲಿಲ್ಲ. ನಿಮಿಷಾರ್ಧದಲ್ಲಿ ನಡೆದು ಹೋದ ಈ ದುರಂತ ಘಟನೆಯು ಇತರರಿಗೆ ತಿಳಿಯುವ ಮೊದಲೇ ಸಂಗಮದಲ್ಲಿ ಯಾವಾಗಲೂ ಪ್ರಭಲವಾಗಿರುವ ಪ್ರವಾಹವು ಅವಳನ್ನು ಬಹು ದೂರ ಎಳೆದು ಕೊಂಡು ಹೋಯಿತು. ನಾವಿಕರಿಬ್ಬರು ನೀರಿನಲ್ಲಿ ಹಾರಿದರು. ಅವರಿಂದ ಅವಳನ್ನು ಬದುಕಿಸುವದು ಸಾಧ್ಯವಾಗಲಿಲ್ಲ. ದೂರದಲ್ಲಿ ಅವಳು ಒಮ್ಮೆ ಮೇಲೆ ಬಂದಂತೆ ಕಂಡರೂ ಅವರು ಆ ಸ್ಥಳವನ್ನು ತಲಪುವ ಮೊದಲೇ ಅವಳು ಪುನಃ ಅಡಿಗೇ ಹೋದಳು. ಶಾಂತ ಕಾಳೀ ನದಿಯು ಅನಂತವಾದ ಶರಧಿಯನ್ನು ಸೇರುವಂತೆ, ಸುನೇತ್ರಾದೇವಿಯು ಕ್ಷಣಿಕವಾದ ಇಹಲೋಕ ಜೀವನವನ್ನು ಅಂತ್ಯಗೊಳಿಸಿ ಅಮರತ್ವದ ಅನಂತತೆ

ಯಲ್ಲಿ ಲೀನವಾದಳು. ನೀರಿನಲ್ಲಿ ಹಾರುವ ಮೊದಲು ಅನೇಕ ಗುಲಾಬಿ ವರ್ಣದ ಸುಂದರ ಲಕೋಟೆಗಳನ್ನು ದಡದಲ್ಲಿ ನಿಂತಿದ್ದ ಪ್ರೇಕ್ಷಕರ ಕಡೆಗೆ ಎಸೆದಳಂತೆ. ಅಂತಹ ಒಂದು ಲಕೋಟೆಯನ್ನು ಹರಿರಾಮ ನಾರ್ವೇಕರನ ದೋಣಿಗೂ ಅವನ ಕೈಗೆ ಸಿಗುವಂತೆ ಎಸೆದಳು. ಎಲ್ಲಾ ಪಾಕೀಟುಗಳಲ್ಲಿ ಅವಳದೇ ಆದ ಅಂದವಾದ ಅಕ್ಷರದಲ್ಲಿ ನಾರ್ವೇಕರರನ್ನು ಸಂಭೋಧಿಸಿ ಬರೆದ ಪತ್ರವಿತ್ತು. ಅದರಲ್ಲಿ ಈ ರೀತಿ ಬರೆದಿತ್ತಂತೆ "ಶ್ರೀಮಂತ ಕತ್ತೆಯ ಮಗನೇ, ನಿನ್ನ ಕೊಳಕು ರೊಕ್ಕದಿಂದ ನನ್ನನ್ನು ಖರೀದಿ ಮಾಡುವೆನೆಂದು ಬಗೆದೆಯಾ? ನನ್ನ ಹಾಗೂ ಶ್ರೀಧರನ ಪವಿತ್ರ ಪ್ರೇಮವನ್ನು ಹಾಳುಗೆಡಹಿ ನನ್ನನ್ನು ದೊರಕಿಸುವ ನಿನ್ನ ಮಹತ್ವಾಕಾಂಕ್ಷೆಯು ಕೈಗೂಡಿತೆಂದು ಕುಣಿಯುತ್ತಿರುವೆ. ಸುನೇತ್ರಾದೇವಿಯು ನಿನ್ನ ಹೊಲಸು ಹಣಕ್ಕೆ ಹಾತೊರೆಯುವವಳಲ್ಲ. ನೀನು ರಚಿಸಿದ ಕೃಷ್ಣಕಾರಸ್ಥಾನದಿಂದ ನಿನ್ನ ಮೋರೆಗೇನೇ ಮಸಿಬಳೆಯಲ್ಪಡುವದು. ನಿನ್ನ ಕುಬೇರಸಂಪತ್ತಿಗೆ ನಾನು ಕಡಲ ತೀರದ ಉಸುಬಿನ ಕಣದಷ್ಟು ಬೆಲೆ ಕೊಡುವದಿಲ್ಲವೆಂಬುದನ್ನು ಅರಿತುಕೋ.

ಇಂದು ಸೋತವನು ನೀನು, ನಾನಲ್ಲ. ನನ್ನ ಆತ್ಮ ಸಮರ್ಪಣೆಯಿಂದ ಪವಿತ್ರ ಪ್ರೇಮದ ವಿಜಯವನ್ನು ಜಗತ್ತಿಗೆ ಸಾರುವೆ."

"ಇದು ಸುನೇತ್ರಾದೇವಿಯ ಹಾಗೂ ನಾನು ಹೇಳಲು ಹೊರಟಿದ್ದ ಕಥೆಯ ಅಂತ್ಯ" ಅರವಿಂದನು ಉಕ್ಕಿ ಬರುತ್ತಿದ್ದ ದುಖಃದ ಆವೇಗದಲ್ಲಿ ಈ ಮಾತುಗಳನ್ನು ಹೇಳಿದನು.

ಆಮೇಲೆ ಸುಮಾರು ಐದು ನಿಮಿಷಗಳ ವರೆಗೆ ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ. ಸುನೇತ್ರೆಯು ಇಹಲೋಕ ಯಾತ್ರೆಯನ್ನು ಮುಗಿಸಿದ ಸಂಗಮದ ಕಡೆಗೆ ಎವೆ ಇಕ್ಕದೆ ನೋಡಹತ್ತಿದನು.

ಕೊನೆಗೆ ಈ ಕೆಳಗಿನ ಉದ್ಗಾರಗಳು ಅವನ ಬಾಯಿಯಿಂದ ಬಂದವು.

"ಸುನೇತ್ರೆಯ ಪ್ರೇಮವು ಅಮರವಾದುದು. ನಿಷ್ಕಳಂಕ ಹಾಗೂ ನಿಸ್ಸೀಮ ಪ್ರಣಯ ಪ್ರೇಮವು ಬರೀ ಇಂದ್ರಿಯಗಳ ಆಕರ್ಷಣೆಯಲ್ಲ. ಅದು ಸ್ವಾರ್ಥವನ್ನು ಮೀರಿ ಐಹಿಕ ಸುಖೋಪಭೋಗಗಳನ್ನು ತೃಣೀಕರಿಸುವ ದಿವ್ಯ ಶಕ್ತಿ. ತನ್ನ ಆತ್ಮ ಬಲಿದಾನದಿಂದ ಸುನೇತ್ರಾದೇವಿಯು ಇದನ್ನು ಜಗತ್ತಿಗೆ

ತೋರಿಸಿಕೊಟ್ಟಳು."

ರವಿಯು ಪಶ್ಚಿಮ ದಿಗಂತವನ್ನು ಸಮೀಪಿಸಿದ್ದನು. ಆಕಾಶದಲ್ಲಿ ಪಸರಿಸಿದ್ದ ಸೂರ್ಯಾಸ್ತದ ಕೆಂಪು ವರ್ಣವು ಸುನೇತ್ರೆಯು ಅವಳ ಜೀವನದ ಅಸ್ತಕಾಲದಲ್ಲಿ ಉಟ್ಟಿದ್ದ ಅದೇ ವರ್ಣದ ಸೀರೆಯಿಂದ ಪ್ರತಿಬಿಂಬಿತವಾದ ಪ್ರಕಾಶ ಕಿರಣಗಳು ಅಂತರಿಕ್ಷವನ್ನು ಸೇರಿದ್ದರ ಪರಿಣಾಮವೋ ಎಂಬ ಭಾವನೆಯನ್ನುಂಟುಮಾಡುತ್ತಿದ್ದುವು.

ಸೂರಿ ಪಾರ್ಕಿನಿಂದ ಹಿಂತಿರುಗುವಾಗ ನಾನು ಹೇಳಿದೆ "ಕೆಸರಿನಲ್ಲಿ ಕಮಲವು ಹುಟ್ಟುವಂತೆ ಪಾಪದಲ್ಲಿ ಪ್ರಾರಂಭವಾದದ್ದು ಕೊನೆಗೆ ಸೌಂದರ್ಯದಲ್ಲಿ ಅಂತ್ಯವಾಯಿತು."

ಆ ಸಾಧ್ವೀಮಣಿಯನ್ನು ಪ್ರತ್ಯಕ್ಷ ನೋಡುವ ಸೌಭಾಗ್ಯ ನನಗೆ ಲಭಿಸಿರಲಿಲ್ಲ. ಅವಳ ಫೋಟೋವನ್ನಾದರೂ ನೋಡಿ ಸಮಾಧಾನ ಹೊಂದಬೇಕೆಂಬ ಇಚ್ಛೆಯಿಂದ ನಾನು ಶ್ರೀಧರನನ್ನು ಅವನ ಮನೆಯಲ್ಲಿ ಬಿಡುವಾಗ "ಅವಳ ಫೋಟೋ ಎಲ್ಲಿಯಾದರೂ ಇದೆಯೇನು" ಎಂತ ಕೇಳಿದೆ. "ಇವೆ. ಶ್ರೀಧರನ ತಂದೆಯು ಅವಳ ಒಂದು ದೊಡ್ಡ ಭಾವಚಿತ್ರವನ್ನು ಬರೆಸಿ ತಾನು ಅವಳ ನೆನಪಿಗಾಗಿ ಕಟ್ಟಿಸಲಿರುವ ಸ್ಮಾರಕ ಮಂದಿರದಲ್ಲಿ ಇಡುವವರಿದ್ದಾರೆ. ಚಿತ್ರವನ್ನು ಬರೆಸುವದಕ್ಕಾಗಿ ಅವಳ ಫೋಟೋ ಇದ್ದರೆ ಅದನ್ನು ತರಬೇಕೆಂದು ಅವರ ಕಾರಭಾರಿಯು ನನಗೆ ತಿಳಿಸಿದ್ದನು. ಸುದೈವದಿಂದ, ಅವಳು ತಾನೂ ಶ್ರೀಧರನೂ ವಿವಾಹ ಮಾಡಿಕೊಳ್ಳುವೆವೆಂದು ಶಪತ ತೆಗೆದುಕೊಂಡ ಮರುದಿನವೇ ತೆಗೆಯಿಸಿದ್ದ ಒಂದು ಸುಂದರ ರಂಗೀತ ಫೋಟೋ ಇತ್ತು. ಪೂರ್ವ ಸಂಕೇತವೋ ಎಂಬಂತೆ ಅದರಲ್ಲಿ ಅವಳು ಕೆಂಪು ಸೀರೆಯನ್ನೇ ಉಟ್ಟಿದ್ದಳು. ಅದರ ಒಂದು ಪ್ರತಿಯನ್ನು ಅದರಲ್ಲಿ ಸಾಕ್ಷರಗಳಿಂದಲೇ ತನ್ನ ಹೆಸರು ಬರೆದು ನನಗೆ ಕೊಟ್ಟಿದ್ದಳು. ನಾಳೆ ಮುಂಜಾನೆ ಬನ್ನಿರಿ, ಅದನ್ನು ತೋರಿಸುತ್ತೇನೆ" ಎಂದು ಹೇಳಿದನು.

ಅಂದು ರಾತ್ರಿ ನನಗೆ ಊಟ ರುಚಿಸಲಿಲ್ಲ. ನಿದ್ದೆಯಂತೂ ನನ್ನ ಬಳಿಯೇ ಹಾಯಲಿಲ್ಲ. ಸುನೇತ್ರೆಯ ಜೀವನ ಹಾಗೂ ಅಂತ್ಯದ ಕುರಿತಾದ ಗಂಭೀರ ವಿಚಾರಗಳೇ ಮನಸ್ಸಿನಲ್ಲಿ ತಾಂಡವವಾಡುತ್ತಿದ್ದುವು. ನಮ್ಮ ಇಹಲೋಕ

ಯಾತ್ರೆಯ ಅಂತ್ಯಕಾಲದಲ್ಲಿ ಇಡಿಯ ಜೀವನದಲ್ಲಿ ನಾವು ಮಾಡಿದ, ಇಲ್ಲವೇ ಮಾಡದಿದ್ದ ಕೃತ್ಯಗಳ ಸಿಂಹಾವಲೋಕನವನ್ನು ಮಾಡುವಾಗ, ನಮ್ಮ ಕೈಯಿಂದ ಆಗಿಹೋದ ತಪ್ಪುಗಳು ಹಾಗೂ ಪಾಪಕೃತ್ಯಗಳು ಗುಂಪುಕಟ್ಟಿ ನೆನಪಿನ ಪರದೆಯ ಮುಂದೆ ಬರುವವು. ಆದರೆ, ಯಾವದರ ಸ್ಮರಣೆಯಿಂದ ಜೀವನದ ಸಂಜೆಯಲ್ಲಿ ತುಸುವಾದರೂ ಆನಂದ ಅಥವಾ ಸಮಾಧಾನ ಆಗಬಹುದೊ, ಅಂತಹ ಸ್ವಾರ್ಥತ್ಯಾಗದ ಅಥವಾ ಆತ್ಮನಿವೇದನದ ಒಂದು ನಿದರ್ಶನವಾದರೂ ನಮ್ಮ ಜೀವನದಲ್ಲಿ ನಡೆಯಬಹುದೇ ಎಂಬ ವಿಚಾರವು ಪದೇ ಪದೇ ಮನಸ್ಸಿನಲ್ಲಿ ಏಳುತ್ತಿತ್ತು.

ಮಳುದಿನ ಎದ್ದವನೇ ಅರವಿಂದನ ಮನೆಗೆ ಧಾವಿಸಿದೆ. ಅವನು ಆಗ ತಾನೇ ಎದ್ದಿದ್ದನು. ನನ್ನನ್ನು ತನ್ನ ಕೋಣೆಯಲ್ಲಿ ಕೂಡ್ರಿಸಿ ಸುನೇತ್ರೆಯ ಫೋಟೊ ನನ್ನ ಕೈಲಿ ಕೊಟ್ಟು ಪ್ರಾತಃರ್ವಿಧಿ ಮುಗಿಸಿಕೊಂಡು ಬರುತ್ತೇನೆಂದು ಹೇಳಿ ಹೊರಗೆ ಹೋದನು.

ಆ ಫೋಟೋದೊಳಗಿನ ಆಕೃತಿಯ ರೂಪಲಾವಣ್ಯಗಳನ್ನು ನೋಡುತ್ತಲಿದ್ದ ಹಾಗೆ ನಾನು ನನ್ನ ಐಹಿಕ ಅಸ್ತಿತ್ವವನ್ನು ಮರೆತೆನು. ಹೊಟ್ಟೆಯಲ್ಲಿ ಕಾ ಕಾ ಗೈಯ್ಯುತ್ತಿದ್ದ ಹಸಿವೆಯ ಕಾಗೆಗಳು ಮೌನವಾದವು. ಬಾಯಿಯೊಳಗಿನ ಬಾಯಾರಿಕೆಯು ಅದೃಶ್ಯವಾಯಿತು. ಮೈಯ ಆಯಾಸ ಮಾಯವಾಯಿತು. ಫೋಟೋದಲ್ಲಿನ ಅವಳ ನಿಷ್ಪಾಪ ಸಾತ್ವಿಕ ಮಂದಹಾಸವನ್ನು ೀರುತ್ತಿದ್ದ ಮೋರೆಯನ್ನು ನೋಡುತ್ತಿದ್ದಂತೆ ಅವಳ ಅನುಪಮ ಸೌಂದರ್ಯದ ಆಕರ್ಷಣೆಯು ಕ್ರಮೇಣ ಪವಿತ್ರ ಹಾಗೂ ಪೂಜ್ಯ ಭಾವನೆಯಲ್ಲಿ ರೂಪಾಂತರ ಹೊಂದಿತು. ಇದನ್ನು ಚುಂಬಿಸಬೇಕೆಂಬ ಮೊದಲ ಪ್ರೇರಣೆಯ ಬದಲಾಗಿ ಅದಕ್ಕೆ ತಲೆಬಾಗಿ ನಮಸ್ಕರಿಸಿದೆನು.

ನನ್ನಾಕೆಯ ಸೋದರ ಮಾವನ ಸಹಾಯದಿಂದ ಶ್ರೀಧರನೂ ರಾಮಚಂದ್ರ ಹೆಗಡೆಯವರ ಕಾರಭಾರಿಯೂ ಸ್ಮಾರಕ ಮಂದಿರಕ್ಕಾಗಿ ಸ್ಥಳ ದೊರಕಿಸುವದಕ್ಕಾಗಿ ಕಲೆಕ್ಟರರನ್ನು ಭೆಟ್ಟಿಯಾದರು. ಸುನೇತ್ರೆಯ ಬಲಿದಾನದ ಎಲ್ಲಾ ವಿವರಗಳನ್ನು ಕೇಳಿದ ಬಳಿಕ ಅವರು ಸಂಪೂರ್ಣ ಸಹಾನುಭೂತಿಯನ್ನು ತೋರಿಸಿ ಸಂಗಮದ ಸಮೀಪದಲ್ಲೇ ಸ್ಥಳ ಕೊಡಿಸುವದಾಗಿ

ಆಶ್ವಾಸನವಿತ್ತರು. ಇದಾದ ಒಂದು ವರ್ಷದಲ್ಲಿ ಅ ೦ ದ ರೆ ಸುನೇತ್ರೆಯ ಬಲಿದಾನದ ವಾರ್ಷಿಕ ತಿ ಥಿ ಯು ದಿವಸ ಸ್ಮಾರಕ ಮಂದಿರದ ಕೆಲಸವು ಪೂರ್ಣವಾಗಿ ಸುನೇತ್ರೆಯ ಭಾವಚಿತ್ರದ ಅನಾವರಣವೂ ನಡೆಯಿತು.

ತರಂಗ ೧೪.

ಹತ್ತು ವರ್ಷಗಳ ಹಿಂದಿನ ಮಾತಿದು. ಜೀವನಸಂಗ್ರಾಮದ ವಿವಿಧ ಕ್ಷೇತ್ರಗಳಲ್ಲಿ ದುಡಿಯುತಿದ್ದ ನನಗೆ ಈ ಅವಧಿಯಲ್ಲಿ ಒಮ್ಮೆಯೂ ಕಾರವಾರಕ್ಕೆ ಹೋಗಲು ಬಿಡುವು ದೊರೆಯಲಿಲ್ಲ.

ಕಳೆದ ತಿಂಗಳಲ್ಲಿ ಅಲ್ಲಿ ಹೋದಾಗ, ಸುನೇತ್ರೆಯ ಸ್ಮಾರಕ ಮಂದಿರವು ಬರಿದಾಗಿದ್ದುದನ್ನು ನೋಡಿದೆ. ಆದರ ಕುರಿತು ಜನರಿಗೆ ವಿಚಾರಿಸಿದಾಗ ಈ ಕೆಳಗಿನ ಸಂಗತಿಗಳು ತಿಳಿದು ಬಂದವು.

ಸ್ಮಾರಕ ಮಂದಿರವು ಸುಟ್ಟು ಹೋಗುವ ಒಂದು ವರ್ಷದ ಮೊದಲು ಒಬ್ಬ ಸನ್ಯಾಸಿಯು ಅಕಸ್ಮಾತ್ ಕಾರವಾರಕ್ಕೆ ಬಂದು ಆ ಮಂದಿರದಲ್ಲೇ ಇರಹತ್ತಿದನು. ಅವನು ಯಾರು ? ಎಲ್ಲಿಂದ ಬಂದನು ಎಂಬುದು ಯಾರಿಗೂ ಗೊತ್ತಾಗಲಿಲ್ಲ. ಯಾಕಂದರೆ ಅವನು ಅರೆ ಹುಚ್ಚನಂತಿದ್ದು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡುತ್ತಿರಲಿಲ್ಲ. ಯಾರಾದರೂ ಬಹಳ ತ್ರಾಸ ಕೊಟ್ಟರೆ "ಹೋಗಿರಿ ಕತ್ತೆ ಮಕ್ಕಳೇ" ಎಂದಿಷ್ಟೇ ಅನ್ನುತ್ತಿದ್ದನು. ಅವನು ಮೊದಲು ಬಂದಾಗ ಯಾರೋ ದಾರಿಹೋಕ ಬೈರಾಗಿ ಇರಬಹುದೆಂದು ಯಾರೂ ಅವನ ಕಡೆ ಲಕ್ಷ ಕೊಡಲಿಲ್ಲ. ಆದರೆ ದಿನಗಳು ದಾಟಿ, ವಾರಗಳು ಸರಿದು ತಿಂಗಳುಗಳು ಕಳೆದರೂ ಅವನು ಅಲ್ಲೇ ಇದ್ದನು. ಅವನನ್ನು ಅಲ್ಲಿಂದ ಹೊರಪಡಿಸಲು ಎಷ್ಟು ಪ್ರಯತ್ನಪಟ್ಟರೂ ಅವನು ಹೋಗಲಿಲ್ಲ. ಅವನು ಮಂದಿರವನ್ನು ಯಾವ ರೀತಿಯಲ್ಲೂ ಹಾಳು ಮಾಡುತ್ತಿದ್ದಿಲ್ಲವಾದುದರಿಂದ, ಕೊನೆಗೆ ಅವನ ಗೋಜಿಗೆ ಹೋಗದೆ ಅವನನ್ನು ಅಲ್ಲೇ ಇರಲು ಬಿಟ್ಟರು. ಪ್ರತಿ ದಿನವೂ ಮುಂಜಾನೆ ಅವನು ಮಂದಿರವನ್ನೂ ಗುಡಿಸುತ್ತಿದ್ದನು. ಊರೊಳಗೆ ಅಡ್ಡಾಡುವಾಗ ಹುಚ್ಚನಂತೆ ವರ್ತಿಸುತ್ತಿದ್ದುದರಿಂದ, ಅವನಿಗೆ ಹುಚ್ಚ ಬೈರಾಗಿ ಎಂಬ ಹೆಸರೇ ಬಿದ್ದಿತು. ಹಣಕೊಟ್ಟರೆ ಅವನು ಎಂದೂ

ತೆಗೆದುಕೊಳ್ಳುತ್ತಿದ್ದಿಲ್ಲ. ಗೊತ್ತಿಲ್ಲದೆ ಯಾರಾದರೂ ಕೊಟ್ಟರೆ ದೂರ ಎಸೆದುಬಿಡುತ್ತಿದ್ದನು. ಅವನು ದಿನಕ್ಕೊಂದು ಮನೆಗೆ ಬೇಡಲು ಹೋಗುತ್ತಿದ್ದನು. ಬೇಡುತ್ತಿದ್ದುದು ಎರಡು ತುತ್ತು ಅನ್ನ ಮಾತ್ರ. ಬೇರೆ ತಿಂಡಿ ಏನಾದರೂ ಕೊಟ್ಟರೆ ಸಣ್ಣ ಮಕ್ಕಳನ್ನು ಕರೆದು ಅವರಿಗೆ ಕೊಡುತ್ತಿದ್ದನು. ಅವನು ಸ್ವೀಕರಿಸುತ್ತಿದ್ದ ಬೇರೆ ವಸ್ತುಗಳೆಂದರೆ, ಹೂಗಳು ಮತ್ತು ಊದಬತ್ತಿ. ಪ್ರತಿದಿನವೂ ಹೂಗಳನ್ನು ಒಟ್ಟುಗೂಡಿಸಿ ಅವುಗಳ ಮಾಲೆ ಮಾಡಿ ಸುನೇತ್ರಾ ದೇವಿಯ ಭಾವಚಿತ್ರಕ್ಕೆ ಹಾಕುತ್ತಿದ್ದನು. ಹಾಗೂ ಊದಬತ್ತಿಗಳನ್ನು ಅದರ ಎದುರು ಹಚ್ಚುತ್ತಿದ್ದನು.

ಅವನು ಯಾವದೇ ಧರ್ಮಗ್ರಂಥವನ್ನು ಓದುವದನ್ನಾಗಲಿ ದೇವರಿಗೆ ಪೂಜೆ ಅಥವಾ ಪ್ರಾರ್ಥನೆಯನ್ನು ಮಾಡುವದಾಗಲಿ ಯಾರೂ ನೋಡಿದ್ದಿಲ್ಲ. ಹಾಗೂ ಮಂದಿರದಲ್ಲಿ ಏನು ಮಾಡುತ್ತಿದ್ದನೆಂಬುದು ಸ್ಪಷ್ಟವಾಗಿ ಯಾರಿಗೂ ತಿಳಿದುಬರಲಿಲ್ಲ. ಆದರೆ, ಯಾರೂ ಹತ್ತರವಿಲ್ಲದಿದ್ದ ಸಮಯದಲ್ಲಿ ಸುನೇತ್ರೆಯ ಭಾವ ಚಿತ್ರವನ್ನು ಮುದ್ದಿಡುತ್ತಿದ್ದನೆಂದೂ ಸಜೀವ ವ್ಯಕ್ತಿಗಳ ಹತ್ತರ ಮಾತಾಡುವಂತೆ ಅದರ ಹತ್ತರ ಮಾತಾಡುತ್ತಿದ್ದನೆಂದೂ ಕಡಲ ದಂಡೆಯಲ್ಲಿ ಅಡ್ಡಾಡುವ ಮೀನುಗಾರ ಹರಕಂತರ ಮಕ್ಕಳು ಹೇಳುತ್ತಿದ್ದರು. ಅದು ನಿಜವೊ ಸುಳ್ಳೊ ಎಂದು ಯಾರೂ ಪರೀಕ್ಷೆ ಮಾಡಿ ನೋಡಿದ್ದಿಲ್ಲ.

ಆ ಹುಚ್ಚು ಬೈರಾಗಿಯ ವಯಸ್ಸು ಎಂಷ್ಟೆಂದು ಊಹಿಸುವದು ಕೂಡಾ ಕಠಿಣವಿತ್ತು. ಯಾಕಂದರೆ, ಅವನ ಗಡ್ಡವು ನರೆತಿದ್ದರೂ, ಮೋರೆಯ ಮೇಲೆ ವೃದ್ಧಾಪ್ಯದ ಸುಕ್ಕುನೆರಿಗೆಗಳು ಕಾಣಿಸುತ್ತಿದ್ದಿಲ್ಲ. ಆದರೆ ಹಣೆಯ ಹಾಗೂ ಕೆನ್ನೆಗಳ ಮೇಲೆ ಕಾಸಿದ ದೊಡ್ಡ ಕಲೆಗಳು ಇದ್ದವು. ಅವನೇ ಸುನೇತ್ರೆಯ ಪ್ರಿಯಕರನಿರಬೇಕೆಂಬ ಸುದ್ದಿಯು ಒಮ್ಮೆ ಊರಿನಲ್ಲಿ ಹಬ್ಬಿತು. ಆದರೆ, ಅದನ್ನು ಸಿದ್ಧಗೊಳಿಸುವದಾಗಲಿ ಸುಳ್ಳೆಂದು ನಿರ್ಣಯಿಸುವದಾಗಲಿ ಸಾಧ್ಯವೇ ಇರಲಿಲ್ಲ. ಅರವಿಂದ ಕಸಬೇಕರನು ಉಚ್ಚ ಶಿಕ್ಷಣಕ್ಕಾಗಿ ಅಮೇರಿಕಾಗೆ ಹೋದವನು ಅಲ್ಲೇ ಉದ್ಯೋಗ ದೊರಕಿಸಿಕೊಂಡು ಅಲ್ಲೇ ಇದ್ದನು. ಶ್ರೀಧರನ ತಾಯಿಯು ಅವನ ತಲೆತಪ್ಪಿಸಿಕೊಂಡ ಒಂದು ವರ್ಷದೊಳಗೇನೇ ಪುತ್ರಶೋಕದಿಂದ ಪ್ರಾಣಬಿಟ್ಟಿದ್ದಳು. ಅವನ

ತಂದೆ ರಾಮಚಂದ್ರ ಹೆಗಡೆಯವರು ತೀರಾ ಮುದುಕರಾಗಿ ಪಕ್ಷವಾತದಿಂದ ಹಾಸಿಗೆ ಹಿಡಿದಿದ್ದರು. ಆದರೂ ಈ ಸುದ್ದಿ ಕೇಳಿ ಅವರು ಆ ಸನ್ಯಾಸಿಯು ತನ್ನ ಮಗನಿರಬಹುದು ಎಂಬ ಆಸೆಯಿಂದ ಕಾರವಾರಕ್ಕೆ ಬಂದರು. ಅವರಿಗೆ ಅವನ ಗುರುತು ಹತ್ತಲಿಲ್ಲ. ತಾನು ಯಾರೆಂದು ಹೇಳಿ ಅವನನ್ನು ಮಾತಾಡಿಸುವ ಪ್ರಯತ್ನ ಮಾಡಿದರು. ಆದರೆ ಆ ಹುಚ್ಚ ಬೈರಾಗಿಯು ಅವರೊಡನೆ ಏನೂ ಮಾತಾಡಲಿಲ್ಲ. ಎಂದಿನಂತೆ "ಹೋಗಿರಿ, ಕತ್ತೆ ಮಕ್ಕಳೇ" ಎಂದಿಷ್ಟೇ ಅಂದನು.

ರಾಮಚಂದ್ರ ಹೆಗಡೆಯರು ಎರಡು ದಿನ ಅವನನ್ನು ಮಾತಾಡಿಸಲು ಹಲವು ವಿಧದಿಂದ ಪ್ರಯತ್ನ ಮಾಡಿದರು. ಆದರೆ "ಹೋಗಿರಿ ಕತ್ತೇಮಕ್ಕಳೆ" ಎಂಬ ಮಾತಲ್ಲದೆ ಬೇರೆ ಯಾವ ಶಬ್ದವೂ ಆ ಹುಚ್ಚ ಬೈರಾಗಿಯ ಬಾಯಿಯಿಂದ ಹೊರಬೀಳಲಿಲ್ಲ.

ಮೂರನೇಯ ದಿನ ಕೊನೆಯ ಪ್ರಯತ್ನ ಮಾಡಬೇಕೆಂದಿದ್ದರು. ಆದರೆ ಅಂದು ಮುಂಜಾನೆ ನೋಡುವಾಗ ಆ ಹುಚ್ಚ ಬೈರಾಗಿಯು ಮಾಯವಾಗಿದ್ದನು. ಸ್ಮಾರಕ ಮಂದಿರದೊಳಗಿನ ಸುನೇತ್ರೆಯ ಭಾವಚಿತ್ರವೂ ಕಾಣೆಯಾಗಿತ್ತು.

ಹುಚ್ಚ ಬೈರಾಗಿಯು ಎಲ್ಲಿಗೆ ಹೋದನೆಂದಾಗಲಿ ಆ ಭಾವ ಚಿತ್ರವು ಏನಾಯಿತೆಂದಾಗಲಿ ತಿಳಿಯಲು ದಾರಿಯೇ ಇರಲಿಲ್ಲ.

ಆ ದಿನ ಸಂಜೆ ಸಂಗಮದ ಹತ್ತರ ಮೀನು ಹಿಡಿಯುತ್ತಿದ್ದ ಒಂದು ದೋಣಿಯವರಿಗೆ ಸುನೇತ್ರಾದೇವಿಯ ಭಾವಚಿತ್ರವನ್ನು ಗಟ್ಟಿಯಾಗಿ ಎದೆಗೆ ಅಪ್ಪಿಕೊಂಡಿದ್ದ ಹುಚ್ಚ ಬೈರಾಗಿಯ ಮೃತಕಳೇಬರವು ಸಿಕ್ಕಿತು. ದಡಕ್ಕೆ ತಂದ ಬಳಿಕ ಅದನ್ನು ನೋಡಿದ ಕಾರವಾರದ ನಾಗರಿಕರು ಜೀವಂತನಿದ್ದಾಗ ಅವನ ಮೋರೆಯಲ್ಲಿ ಎಂದೂ ಕಂಡು ಬರದಿದ್ದ ಶಾಂತಿಯು ಅವನು ಸತ್ತ ಬಳಿಕ ಅವನ ಮೋರೆಯ ಮೇಲೆ ಕಾಣುತ್ತಿತ್ತು ಎಂದು ಹೇಳುತ್ತಿದ್ದರು.

ಕುಮಟಾ ಗ್ರೂಪ
ವಿವಿಧೋದ್ದೇಶಗಳ ಸಹಕಾರಿ ಸಂಘ
ನಿಯಮಿತ. ಕುಮಟಾ.

ಹೊನ್ನೆ ಎಣ್ಣೆ, ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿ,

ಬೆತ್ತ-ಬಿದುರುಗಳ ಸಾಮಾನುಗಳು,

ಅಖಾದ್ಯ ಎಣ್ಣೆಯ ಸಾಬೂನು

ಮುಂತಾದ ಗ್ರಾಮೋದ್ಯೋಗದ ಹುಟ್ಟುವಳಿಗಳ

ವ್ಯವಹಾರ ನಡೆಸುವ ಸಹಕಾರಿ ಸಂಸ್ಥೆ

ಸುಲಭ ಸಾಹಿತ್ಯ ಪ್ರಕಾಶನ
ಕುಮಟಾ

ನಮ್ಮ ಕೈ ಹೊತ್ತಿಗೆಗಳು

ಗಗನಚಂದ್ರ — ಸಾಡಿಗೇರ ಕೃಷ್ಣರಾಯ

ಒಂದು ವಿಡಂಬನಾತ್ಮಕ ಕಾದಂಬರಿ. ಸಾಮಾಜಿಕ ಕುಂದು-ಕೊರತೆ
ಗಳ ಒಂದು ಟಲಿಸ್ಕೊ ಚಿತ್ರಣ. ೦—೮—೦

ಮುಂದೇನು? –

ಪ್ರತಿಭಾವಂತ ಬರಹ ಮನೋವಿಶ್ಲೇಷಣಾತ್ಮಕ ಕಾದಂಬರಿ.
೦—೮—೦

ದೆವ್ವದ ಕಥೆ — ಎಂ. ಗೋಪಾಲಕೃಷ್ಣ ಅಡಿಗ

ರಹಸ್ಯಕಥೆಗಳಲ್ಲಿ ಈ ವರೆಗೆ ಕನ್ನಡದಲ್ಲಿ ಪ್ರಕಟವಾಗದಂಥ, ಎದೆ
ನಡುಗಿಸುವ ಎರಡು ಇಂಗ್ಲಿಷ ಕಥೆಗಳ ಅನುವಾದ. ೦—೮—೦.